ವಿಶ್ವವಾಣಿ
ವಿಶ್ವಾಸವೇ ವಿಶ್ವ

ಪುಟ ತೆರೆದಂತೆ...

ಹಿಂದಕ್ಕೆ ಬರಲಾಗದ, ಮುಂದಕ್ಕೆ ಹೋಗಲಾಗದ, ಇದ್ದಲ್ಲಿ ಇರಲಾಗದ ಸ್ಥಿತಿ
ನೂರೆಂಟು ವಿಶ್ವ
ವಿಶ್ವೇಶ್ವರ ಭಟ್
ಸಂ.ಪುಟ | 6

ತೋಳಗಳ ನರಬಲಿ ಮತ್ತು ಹರಿವಂಶದ ಒಂದು ಕತೆ
ಕಾಡುದಾರಿ
ಹರೀಶ್ ಕೇರ
ಸಂ.ಗಮ | 7

ದಾರಿದೀಪೋಕ್ತಿ

ನಿಮ್ಮ ಬೆನ್ನ ಹಿಂದೆ ಅಥವಾ ಅನುಪಸ್ಥಿತಿಯಲ್ಲಿ ಸ್ನೇಹಿತರು ನಿಮ್ಮ ಕುರಿತು ಹೇಳಿದ ಮಾತುಗಳನ್ನು ಕೇಳಿಸಿಕೊಂಡರೆ, ನಿಮಗಿರುವ ಸ್ನೇಹಿತರ ಪಟ್ಟಿಯಲ್ಲಿ ಅರ್ಧಕ್ಕರ್ಧ ಜನ ಖಾಲಿಯಾಗುತ್ತಾರೆ. ಕೆಲವರ ಸ್ವಭಾವ ಗೊತ್ತಿದ್ದೂ ಸಹಿಸಿಕೊಳ್ಳಬೇಕಾಗುತ್ತದೆ. ಆದರೆ ಅಂಥವರ ಬಗ್ಗೆ ಎಚ್ಚರದಿಂದ ಇರಬೇಕು.

ವಕ್ರತುಂಡೋಕ್ತಿ

ಬಿಕಿನಿ ಧರಿಸಿದರೆ ಇಡೀ ದೇಹ ಕಾಣಿಸುತ್ತದೆ. ಹಾಗೆಂದು ಮೈತುಂಬಾ ಸೀರೆ ಉಟ್ಟುಕೊಂಡು ನೀರಿಗೆ ಇಳಿಯಲಾಗುವುದಿಲ್ಲ.

ದೆಹಲಿ: ₹2000 ಕೋಟಿ ಮೌಲ್ಯದ ಕೊಕೇನ್ ವಶ

ವಿವರಪುಟ → 8

ಫನ್‌ತರಂಗ

- ರಘುಪತಿ ಶೃಂಗೇರಿ -



ಸಿಎಂ ಪತ್ನಿಯ ರೀತಿಯಲ್ಲಿಯೇ ನಿವೇಶನ ವಾಪಸು ಮಾಡಿದ ಆರ್.ಅಶೋಕ
ಜಂಟಿ ಸುದ್ದಿಗೋಷ್ಠಿಯಲ್ಲಿ ದಾಖಲೆ ಸಮೇತ ವಾಗ್ದಾಳಿ ನಡೆಸಿದ ಸಚಿವರು

ಭೂ ಚಕ್ರದ ಸುಳಿಯಲ್ಲಿ ಸಾಮ್ರಾಟ?

ಬೆಂಗಳೂರು: ಮುಡಾ ನಿವೇಶನ ಹಂಚಿಕೆ ವಿವಾದ ತೀವ್ರ ಸ್ವರೂಪ ಪಡೆದ ಬೆನ್ನಲ್ಲೇ ಮುಖ್ಯಮಂತ್ರಿ ಪತ್ನಿ ಪಾರ್ವತಿ ಅವರು ನಿವೇಶನ ಹಿಂದಿರುಗಿಸಿರುವುದನ್ನು ಬಿಜೆಪಿಗರು ವಿರೋಧಿಸುತ್ತಿದ್ದಾರೆ. ಇದೀಗ ಇದೇ ರೀತಿಯಲ್ಲಿ ಈ ಹಿಂದೆ ಆರ್.ಅಶೋಕ ಬಿಡಿಎಗೆ ಸೈಟು ಮರಳಿಸಿರುವ ದಾಖಲೆಗಳನ್ನು ಬಿಡುಗಡೆ ಮಾಡುವ ಮೂಲಕ, ಕಾಂಗ್ರೆಸ್ ಪ್ರತ್ಯಾಸ್ತ್ರ ಹೂಡಿದೆ.

ಸಿಎಂ ಸಿದ್ದರಾಮಯ್ಯ ವಿರುದ್ಧ ಪ್ರತಿಪಕ್ಷದ ನಾಯಕರು 'ತಪ್ಪು ಮಾಡಿರುವ ಕಾರಣ ನಿವೇಶನ ವಾಪಸ್ ನೀಡಿದ್ದೀರಿ' ಎಂದು ಬೇರೆ ಅರ್ಥ ಕಲ್ಪಿಸಿ ಆರೋಪ ಮಾಡಿದ್ದಾರೆ. ಆದರೆ, ಅವರೇ ಈ ರೀತಿ ಹಲವು ತಪ್ಪು ಮಾಡಿ, ಈಗ ಏನೂ ನಡೆದಿಲ್ಲವೆಂಬಂತೆ ನಾಟಕವಾಡಿದ್ದಾರೆಂದು ಅಶೋಕ ವಿರುದ್ಧ ಕಾಂಗ್ರೆಸ್‌ನ ಹಿರಿಯ ಸಚಿವರು ದಾಖಲೆಗಳ ಮೂಲಕ ತಿರುಗೇಟು ನೀಡಿದ್ದಾರೆ.

ಕೆಪಿಸಿಸಿ ಕಚೇರಿಯಲ್ಲಿ ಗೃಹಸಚಿವ ಡಾ.ಜಿ.ಪರಮೇಶ್ವರ್ ಈ ಸಂಬಂಧಿತ ದಾಖಲೆ ಬಿಡುಗಡೆ ಮಾಡಿ ಮಾತನಾಡಿ, ಲೊಟ್ಟೆ ಗೊಲ್ಲಹಳ್ಳಿಯಲ್ಲಿ ನೂರಾರು ಕೋಟಿ ಭೂ ಹಗರಣದ ನಡೆದಿದೆ.

→ 4

ಅಶೋಕ ವಿರುದ್ಧದ ಆರೋಪಗಳೇನು?

- ಕೋಟ್ಯಂತರ ಬೆಲೆಬಾಳುವ ಭೂಮಿ ವಶ
- ಜಮೀನಿನ ಮೂಲ ಮಾಲೀಕರಾದ ರಾಮಸ್ವಾಮಿ ಅವರಿಂದ ಶುದ್ಧ ಕ್ರಯದ ಮೂಲಕ ಖರೀದಿ ಮಾಡಿರುವ ಆರ್. ಅಶೋಕ
- ಅಂದಿನ ಮುಖ್ಯಮಂತ್ರಿ ಯಡಿಯೂರಪ್ಪ ಅವರು ಈ ಅರ್ಜಿಯ ಮೇಲೆ 'ಕೂಡಲೇ ಮಂಡಿಸಿ' ಎಂದು ಬರೆದಿದ್ದಾರೆ
- ಕಡತ ಮಂಡನೆಯಾದ ಎರಡು ತಿಂಗಳಲ್ಲಿ ಭೂಸ್ವಾಧೀನ ಕೈಬಿಡಲಾಗುತ್ತದೆ
- ಸರಕಾರಿ ಜಾಗ 23 ವರ್ಷಗಳ ನಂತರ ಡಿನೋಟಿಫಿಕೇಷನ್ ಮಾಡಿರುವುದು ಅಕ್ರಮ

ಜಮೀನಿನ ಮೂಲ ಮಾಲೀಕ ರಾಮಸ್ವಾಮಿ ಅವರಿಂದ ಆರ್.ಅಶೋಕ ಅವರು ಈ ಜಮೀನನ್ನು ಶುದ್ಧ ಕ್ರಯದ ಮೂಲಕ ಖರೀದಿ ಮಾಡುತ್ತಾರೆ. ಈ ವೇಳೆ ಅಂದಿನ ಸಿಎಂ ಯಡಿಯೂರಪ್ಪ ಅವರು ಈ ಅರ್ಜಿಯ ಮೇಲೆ ಕೂಡಲೇ ಮಂಡಿಸಿ ಎಂದು ಬರೆಯುತ್ತಾರೆ. ನಂತರ ಕಡತ ಮಂಡನೆಯಾದ 2 ತಿಂಗಳಲ್ಲಿ ಭೂಸ್ವಾಧೀನ ಕೈಬಿಡಲಾಗುತ್ತದೆ. ಇದು ಅಕ್ರಮವಲ್ಲವೇ?

- ಡಾ.ಜಿ.ಪರಮೇಶ್ವರ್ ಗೃಹ ಸಚಿವ

ಆರ್.ಅಶೋಕ ಅವರ ಹೇಳಿಕೆ ಗಮನಿಸಿದರೆ ಆಶ್ಚರ್ಯವಾಗುತ್ತದೆ. ಬಿಡಿಎ ಜಮೀನು ತಮ್ಮ ಹೆಸರಿಗೆ ಮಾಡಿಕೊಂಡು ನಂತರ ಬಿಡಿಎಗೆ ವಾಪಸ್ ನೀಡಿರುವವರು ತಮ್ಮ ಅನುಭವದ ಮಾತನ್ನು ಈಗ ಆಡುತ್ತಿದ್ದಾರೆ. ನೀವು ಮಾಡಿದ್ದು ಸರಿಯಾದರೆ, ಪಾರ್ವತಮ್ಮ ಅವರು ಮಾಡಿದ್ದರಲ್ಲಿ ತಪ್ಪು ಹೇಗಾಗುತ್ತದೆ?

- ಎಚ್.ಕೆ.ಪಾಟೀಲ್
ಕಾನೂನು, ಸಂಸದೀಯ ವ್ಯವಹಾರಗಳ ಸಚಿವ

ಹೆಲಿಕಾಪ್ಟರ್ ಪತನ: ಪೈಲಟ್ ಸೇರಿ 3 ಸಾವು

ಪುಣೆ: ಮಹಾರಾಷ್ಟ್ರದ ಪುಣೆ ಜಿಲ್ಲೆಯಲ್ಲಿ ಹೆಲಿಕಾಪ್ಟರ್ ಪತನಗೊಂಡು ಬೆಂಕಿ ಹೊತ್ತಿಕೊಂಡ ಪರಿಣಾಮ ಪೈಲಟ್ ಸೇರಿ ಮೂವರು ಮೃತಪಟ್ಟಿದ್ದಾರೆ. ಪೈಲಟ್‌ಗಳಾದ ಪರಂಜೀತ್ ಸಿಂಗ್, ಜಿ.ಕೆ.ಪಿಳ್ಳೈ ಹಾಗೂ ಎಂಜಿನಿಯರ್ ಪ್ರೀತಂ ಭಾರದ್ವಾಜ್ ಮೃತರು. ದೆಹಲಿ ಮೂಲದ ಖಾಸಗಿ ವಿಮಾನಯಾನ ಸಂಸ್ಥೆಗೆ ಸೇರಿದ ಹೆಲಿಕಾಪ್ಟರ್ ಆಕ್ಸ್‌ಫರ್ಡ್ ಗಾಲ್ಫ್ ಕೋರ್ಸ್ ಹೆಲಿಪ್ಯಾಡ್‌ನಿಂದ ಹೊರಟು ಮುಂಬೈನ ಜುಹುಗೆ ತೆರಳುತ್ತಿತ್ತು. ಹೆಲಿಕಾಪ್ಟರ್ ಟೇಕಾಫ್ ಆದ ಕೆಲವೇ ಕ್ಷಣಗಳಲ್ಲಿ ಏಕಾಏಕಿ ನಿಯಂತ್ರಣ ಕಳೆದುಕೊಂಡು ಬವ್ಧಾನ್ ಪ್ರದೇಶದ ಗುಡ್ಡಗಾಡು ಪ್ರದೇಶದ ಬಳಿ ಬೆಳಗ್ಗೆ 6.45ಕ್ಕೆ ಪತನಗೊಂಡಿದೆ.

ಇಂದು ನಾಡಹಬ್ಬ ದಸರೆಗೆ ಚಾಲನೆ

ಮೈಸೂರು: ನಾಡಹಬ್ಬ ದಸರಾ ಮಹೋತ್ಸವದ ಉದ್ಘಾಟನೆಗೆ ಕ್ಷಣಗಣನೆ ಆರಂಭವಾಗಿದ್ದು, ಗುರುವಾರ ಬೆಳಗ್ಗೆ 9.15 ರಿಂದ 9:45ರವರೆಗಿನ ವೃಶ್ಚಿಕ ಲಗ್ನದಲ್ಲಿ ಹಿರಿಯ ಸಾಹಿತಿ, ನಾಡೋಜ ಡಾ. ಹಂ.ಪ.ನಾಗರಾಜಯ್ಯ ಅವರು ಚಾಮುಂಡಿ ಬೆಟ್ಟದಲ್ಲಿ ಆಯೋಜಿಸಲಾಗಿರುವ ಕಾರ್ಯಕ್ರಮದಲ್ಲಿ ಬೆಳ್ಳಿರಥದಲ್ಲಿ ವಿರಾಜಮಾನಳಾಗಿರುವ ತಾಯಿ ಚಾಮುಂಡೇಶ್ವರಿಗೆ ಪುಷ್ಪಾರ್ಚನೆ ಮಾಡುವ ಮೂಲಕ ವಿಧ್ಯುಕ್ತವಾಗಿ ಚಾಲನೆ ನೀಡಲಿದ್ದಾರೆ. ಇಡೀ ಮೈಸೂರು ನಗರ ನವವಧುವಿನಂತೆ ಸಿಂಗಾರಗೊಂಡಿದ್ದು, ನಾಡಿನ ಜನರ ಮನತಣಿಸಲು ಸಕಲ ರೀತಿಯಲ್ಲೂ ಸಜ್ಜಾಗಿದೆ.

ದರ್ಶನ್ ಗ್ಯಾಂಗ್‌ನ ಮೂವರಿಗೆ ಜಾಮೀನು

ತುಮಕೂರು: ಇಲ್ಲಿನ ಕಾರಾಗೃಹದಲ್ಲಿದ್ದ ರೇಣುಕಾಸ್ವಾಮಿ ಕೊಲೆ ಪ್ರಕರಣದ ಮೂವರು ಆರೋಪಿಗಳು ಬುಧವಾರ ಜಾಮೀನಿನ ಮೇಲೆ ಬಿಡುಗಡೆಯಾಗಿದ್ದಾರೆ. 15ನೇ ಆರೋಪಿ ಕಾರ್ತಿಕ್, 16ನೇ ಆರೋಪಿ ಕೇಶವಮೂರ್ತಿ ಮತ್ತು 17ನೇ ಆರೋಪಿ ನಿಖಿಲ್ ಬಿಡುಗಡೆಗೊಂಡವರು. ಜಾಮೀನು ಮಂಜೂರಾಗಿ 10 ದಿನಗಳ ಬಳಿಕ ಆರೋಪಿಗಳು ಬಿಡುಗಡೆಯಾಗಿದ್ದಾರೆ. ಜಾಮೀನು ದೊರೆತರೂ ಕೂಡ ಜೈಲಿನಿಂದ ಹೊರಬರಲು ಕೆಲ ವಿಚಾರಗಳ ಹಿನ್ನೆಲೆಯಲ್ಲಿ ಹಿನ್ನಡೆ ಉಂಟಾಗಿತ್ತು. ಜೈಲಿನಿಂದ ಬಿಡುಗಡೆಯಾದ ಮೂವರು, ಪೊಲೀಸರಿಗೆ ನಾವು ಈಗಾಗಲೇ ಹೇಳಿಕೆ ನೀಡಿದ್ದೇವೆ ಎಂದಿದ್ದಾರೆ.

ಮಹಾತ್ಮ ಗಾಂಧಿಯವರ 155ನೇ ಜನ್ಮದಿನ ಮತ್ತು ಗಾಂಧೀಜಿ ಅಧ್ಯಕ್ಷತೆಯ ಎಐಸಿಸಿ ಅಧಿವೇಶನಕ್ಕೆ ನೂರು ವರ್ಷ ತುಂಬಿದ ನೆನಪಿಗಾಗಿ ಬುಧವಾರ ನಡೆದ 'ಗಾಂಧಿ ನಡಿಗೆ' ಕಾರ್ಯಕ್ರಮದಲ್ಲಿ ಸಿಎಂ ಸಿದ್ದರಾಮಯ್ಯ, ಡಿಸಿಎಂ ಡಿ.ಕೆ.ಶಿವಕುಮಾರ್, ಸಚಿವರು, ಶಾಸಕರು, ಕಾರ್ಯಕರ್ತರು ಹೆಜ್ಜೆ ಹಾಕಿದರು.

ಪಶ್ಚಿಮ ಏಷ್ಯಾದಲ್ಲಿ ಯುದ್ಧ ಕಾರ್ಮೋಡ

ಇಸ್ರೇಲ್ ಮೇಲೆ ಇರಾನ್ ಸರಣಿ ಕ್ಷಿಪಣಿ ದಾಳಿ
ಇರಾನ್ ಸರ್ವನಾಶ ಮಾಡುವುದಾಗಿ ಇಸ್ರೇಲ್ ಶಪಥ

ಜೆರುಸಲೆಂ/ಟೆಹರಾನ್: ಇಸ್ರೇಲ್ ಮತ್ತು ಇರಾನ್ ಸೇನಾಪಡೆಗಳು ನೇರವಾಗಿ ರಣರಂಗಕ್ಕೆ ಧುಮುಕಿದ್ದು, ಅಮೆರಿಕ ಕೂಡ ಇಸ್ರೇಲ್ ಪರವಾಗಿ ಯುದ್ಧರಂಗ ಪ್ರವೇಶ ಮಾಡಿದೆ. ಪರಿಣಾಮ ಪಶ್ಚಿಮ ಏಷ್ಯಾದಲ್ಲಿ ಈಗ ಯುದ್ಧದ ಕಾರ್ಮೋಡ ಕವಿದಿದೆ. ಇಸ್ರೇಲ್ ಮೇಲೆ ನೂರಾರು ಕ್ಷಿಪಣಿಗಳಿಂದ ದಾಳಿ ಮಾಡಿದ್ದಕ್ಕೆ ಅಮೆರಿಕವು ಇರಾನ್ ಆಡಳಿತಕ್ಕೆ ತೀವ್ರ ಎಚ್ಚರಿಕೆ ನೀಡಿದ್ದು, ಇಸ್ರೇಲ್‌ಗೆ ಬೆಂಬಲವಾಗಿ ತನ್ನ ಬಲಿಷ್ಠ ಎಫ್-16 ಯುದ್ಧ ವಿಮಾನಗಳನ್ನೂ ರವಾನಿಸಿದೆ.

→ 4

ಇಸ್ರೇಲ್ ಮೇಲೆ ಇರಾನ್ ಕ್ಷಿಪಣಿ ದಾಳಿ ನಡೆಸಿರುವ ದೃಶ್ಯ.

ಕಚ್ಚಾ ತೈಲ ಪೂರೈಕೆಗೆ ಅಡ್ಡಿ?

ಇಸ್ರೇಲ್-ಇರಾನ್ ನಡುವೆ ಬಿಕ್ಕಟ್ಟು ಉಲ್ಬಣಗೊಂಡಿರುವುದರಿಂದ ಸರಕು ಸಾಗಣೆ ವೆಚ್ಚವು ಮತ್ತಷ್ಟು ಹೆಚ್ಚಳವಾಗುವ ಸಾಧ್ಯತೆಯಿದೆ. ಕಚ್ಚಾ ತೈಲ, ಎಲೆಕ್ಟ್ರಾನಿಕ್ಸ್, ಕೃಷಿ ವ್ಯಾಪಾರ ವಹಿವಾಟಿಗೆ ಅಡ್ಡಿಯಾಗುವ ಸಂಭವ ಹೆಚ್ಚಿದೆ ಎಂದು ರಫ್ತುದಾರರು ಹೇಳಿದ್ದಾರೆ.

ಇಸ್ರೇಲ್ ತನ್ನ ಅಪರಾಧಗಳನ್ನು ನಿಲ್ಲಿಸದಿದ್ದರೆ ತೀವ್ರ ಪ್ರತಿಕ್ರಿಯೆ ಎದುರಿಸಬೇಕಾಗುತ್ತದೆ.
-ಮಸೌದ್ ಪೆಜೆಷ್ಕಿಯಾನ್ ಇರಾನ್ ಅಧ್ಯಕ್ಷ

ಇಸ್ರೇಲ್ ಮೇಲೆ ಕ್ಷಿಪಣಿ ದಾಳಿ ನಡೆಸಿರುವ ಇರಾನ್ ತಕ್ಕ ಬೆಲೆ ತೆರಬೇಕಾಗುತ್ತದೆ.
-ಬೆಂಜಮಿನ್ ನೆತನ್ಯಾಹು ಇಸ್ರೇಲ್ ಪ್ರಧಾನಿ

ಇಸ್ರೇಲ್ ಮೇಲೆ ಇರಾನ್ ಕ್ಷಿಪಣಿ ದಾಳಿ ನಡೆಸಿರುವುದು ಪರಿಣಾಮ ಬೀರಲ್ಲ.
-ಜೋ ಬೈಡೆನ್ ಅಮೆರಿಕ ಅಧ್ಯಕ್ಷ

ಸಮಾಚಾರ ಸಣ್ಣದಲ್ಲ

ನಕಲಿ ದಾಖಲೆ ಸೃಷ್ಟಿಸಿ ಸಾಲ: ಐವರ ಬಂಧನ

ಕೋಲಾರ: ನಕಲಿ ದಾಖಲೆ ಸೃಷ್ಟಿಸಿ ಬ್ಯಾಂಕ್ ಸಾಲ ಪಡೆದಿದ್ದ ಐವರು ಆರೋಪಿಗಳನ್ನು ಸೈಬರ್ ಪೊಲೀಸರು ಬಂಧಿಸಿ ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿದ್ದಾರೆ. ದೇವರಾಜ ಅರಸು ಅಭಿವೃದ್ಧಿ ನಿಗಮದ ಜಿಲ್ಲಾ ವ್ಯವಸ್ಥಾಪಕ ಗಣೇಶ್, ಸಿಬ್ಬಂದಿ ಶಿವಾನಂದರೆಡ್ಡಿ, ಜ್ಯೋತಿಲಕ್ಷ್ಮಿ,ವೇಮಗಲ್ ಸಿಂಡಿಕೇಟ್ ಬ್ಯಾಂಕ್ ಮ್ಯಾನೇಜರ್ ಕುಚ್ಚಪ್ಪ ಮತ್ತು ಮಧ್ಯವರ್ತಿ ಮೋತಕಪಲ್ಲಿ ಕುಮಾರನಾಯ್ಡು ಬಂಧಿತರು. ಬೆಳಮಾರನಹಳ್ಳಿ ಆನಂದಕುಮಾರ್ ಅವರ ಹೆಸರಿನಲ್ಲಿ ದೇವರಾಜ ಅರಸು ನಿಗಮದಲ್ಲಿ ನಕಲಿ ದಾಖಲೆ ಸೃಷ್ಟಿ ಮಾಡಿ ಕುರಿ ಸಾಕಣೆಗೆ 5 ಲಕ್ಷ ರೂ. ಸಾಲ ಪಡೆದಿದ್ದು ಜತೆಗೆ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯಲ್ಲಿ ಉದ್ಯೋಗಿನಿ ಯೋಜನೆಯಲ್ಲಿ 3 ಲಕ್ಷ ರೂ. ಸಾಲ ಪಡೆದುಕೊಳ್ಳಲು ಪ್ರಯತ್ನ ನಡೆದಿತ್ತು. ಈ ಹಂತದಲ್ಲಿ ಆನಂದಕುಮಾರ್ ಅವರು ಪೊಲೀಸರಿಗೆ ದೂರು ನೀಡಿದ್ದರಿಂದ ತನಿಖೆ ನಡೆದು ಆರೋಪಿಗಳನ್ನು ಬಂಧಿಸಿ ಜೈಲಿಗೆ ಅಟ್ಟಲಾಗಿದೆ ಎಂದು ಎಸ್ಪಿ ನಿಖಿಲ್ ವಿಶ್ವವಾಣಿಗೆ ತಿಳಿಸಿದ್ದಾರೆ.

ದಸರಾ: ಮಹಿಳೆಯರಿಗೆ ವಿವಿಧ ಸ್ಪರ್ಧೆ

ತುಮಕೂರು: ಜಿಲ್ಲಾಡಳಿತದ ವತಿಯಿಂದ ಮೊದಲ ಬಾರಿಗೆ ಆಚರಿಸಲಾಗುತ್ತಿರುವ ತುಮಕೂರು ದಸರಾ ಭಾಗವಾಗಿ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯಿಂದ ಮಹಿಳಾ ಮತ್ತು ಮಕ್ಕಳ ದಸರಾ ಮಾಡಲಾಗುತ್ತಿದ್ದು, ಮಹಿಳೆಯರಿಗಾಗಿ ವಿವಿಧ ಸ್ಪರ್ಧೆಗಳನ್ನು ಆಯೋಜಿಸಲಾಗಿದೆ ಎಂದು ಇಲಾಖೆ ಉಪ ನಿರ್ದೇಶಕ ತಿಳಿಸಿದ್ದಾರೆ. ನ ಗ ರ ದ ಶಿವಕುಮಾರ ಸ್ವಾಮೀಜಿ ವೃತ್ತದಿಂದ ಮಹಾತ್ಮಗಾಂಧಿ ಕ್ರೀಡಾಂಗಣ ರಸ್ತೆಯಲ್ಲಿ ಅ.6ರ ಬೆಳಿಗ್ಗೆ 7 ರಿಂದ 9.30ಗಂಟೆಯವರೆಗೂ ರಂಗೋಲಿ ಸ್ಪರ್ಧೆ, ಬೆಳಗ್ಗೆ 10 ಗಂಟೆಗೆ ಕ್ರೀಡಾಂಗಣದಲ್ಲಿ ಹಗ್ಗ ಜಗ್ಗಾಟ, ಪಾಯಿಸನ್ ಬಾಕ್ಸ್ ಲೆಗ್ ಟೈಡ್ ರೇಸ್, ವಾರ್ಟ ಬಾಲ್ ಅನ್ ಬಾಸ್ಕೆಟ್ ಸ್ಪರ್ಧೆ, ಸಂಜೆ 5:30 ಗಂಟೆಗೆ ಬಾಲಭವನ ಸಭಾಂಗಣದಲ್ಲಿ ತಾಯಿ ಮತ್ತು ಮಗುವಿನ ಸಾಂಪ್ರದಾಯಿಕ ಉಡುಗೆಗಳ ವೇಷಭೂಷಣ ಸ್ಪರ್ಧೆ ಏರ್ಪಡಿಸಲಾಗಿದೆ. ಆಸಕ್ತರು ಅ.4ರೊಳಗೆ ಜಿಲ್ಲಾ ಬಾಲಭವನ ಕಛೇರಿಯಲ್ಲಿ ಹೆಸರು ನೊಂದಾಯಿಸಿಕೊಳ್ಳಬಹುದಾಗಿದೆ. ಹೆಚ್ಚಿನ ಮಾಹಿತಿಗಾಗಿ ಮೊ. 9901890079/ 08162956624ನ್ನು ಸಂಪರ್ಕಿಸಬಹುದಾಗಿದೆ.

ಯುವತಿ ಪತ್ತೆಗೆ ಮನವಿ

ಚಿಕ್ಕಬಳ್ಳಾಪುರ: ಚಿಕ್ಕಬಳ್ಳಾಪುರ ತಾಲ್ಲೂಕಿನ ಚೊಕ್ಕಹಳ್ಳಿ ಗ್ರಾಮದ 20 ವರ್ಷದ ಅನುಶ್ರೀ ಎಂಬ ಯುವತಿ ಸೆ.30 ರಂದು ಮನೆಯಿಂದ ಹೊರಟು ಹೋಗಿದ್ದಾರೆ. ಈ ಬಗ್ಗೆ ಎಷ್ಟು ಹುಡುಕಿದರೂ ಪತ್ತೆಯಾಗದ ಕಾರಣ ಕಾಣೆಯಾದ ನನ್ನ ಮಗಳನ್ನು ಪತ್ತೆ ಮಾಡಿಕೊಡುವಂತೆ ತಂದೆ ಅಶ್ವತ್ಥಪ್ಪ ನೀಡಿದ ದೂರಿನ ಮೇರೆಗೆ ಮಹಿಳಾ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ಈ ಬಗ್ಗೆ ಮಾಹಿತಿ ಸಿಕ್ಕಲ್ಲಿ ಹತ್ತಿರ ಪೊಲೀಸ್ ಠಾಣೆಗೆ ಹಾಗೂ ಚಿಕ್ಕಬಳ್ಳಾಪುರ ನಗರದ ಮಹಿಳಾ ಪೋಲೀಸ್ ಠಾಣೆಯನ್ನು ಸಂಪರ್ಕಿಸಿ.

ಕಾರ್ಮಿಕರ ಶ್ರಮದಿಂದ ಸಮಾಜ ಸುಗಮ

ಚಿಕ್ಕಬಳ್ಳಾಪುರ: ಕಾರ್ಮಿಕರ ಶ್ರಮದಿಂದ ಸಮಾಜವು ಸುವ್ಯವಸ್ಥಿತವಾಗಿ ನಡೆಯುತ್ತಿದೆ. ಕಾರ್ಮಿಕ ವರ್ಗದ ಕಲ್ಯಾಣಕ್ಕಾಗಿ ಸರ್ಕಾರ ಹಲವು ಯೋಜನೆ ಮತ್ತು ರಕ್ಷಣೆಗೆ ಕಾನೂನು ಜಾರಿಗೊಳಿಸಿದ್ದು, ಇದರ ಸದುಪಯೋಗ ಪಡೆದುಕೊಳ್ಳಬೇಕು ಎಂದು ಗೌರವಾನ್ವಿತ ಹಿರಿಯ ಸಿವಿಲ್ ನ್ಯಾಯಾಧೀಶೆ ಬಿ. ಶಿಲ್ಪ ತಿಳಿಸಿದರು. ಕಾರ್ಮಿಕ ಇಲಾಖೆ, ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ, ಜಿಲ್ಲಾ ಕೌಶಲ್ಯಾಭಿವೃದ್ಧಿ ಇಲಾಖೆ ಇವರ ಸಹಯೋಗದೊಂದಿಗೆ ಏರ್ಪಡಿಸಿದ್ದ ಕಾನೂನು ಅರಿವು ನೆರವು ಕಾರ್ಯಾಗಾರಕ್ಕೆ ಚಾಲನೆ ನೀಡಿ ಅವರು ಮಾತನಾಡಿದರು. ಕಾನೂನು ಸೇವಾ ಪ್ರಾಧಿಕಾರದ ಮೂಲ ಉದ್ದೇಶ ಮತ್ತು ಕಾನೂನಿನಡಿ ಕಾರ್ಮಿಕರಿಗೆ ಸಿಗುವ ಸೌಲಭ್ಯಗಳ ಬಗ್ಗೆ ಮಾಹಿತಿ ನೀಡಿದರು. ಸಹಾಯಕ ಕಾರ್ಮಿಕ ಆಯುಕ್ತ ಎ.ಸಿ ತಮ್ಮಣ್ಣ ಮಾತನಾಡಿ, ಕಾರ್ಖಾನೆ, ಕೈಗಾರಿಕೆಗಳಲ್ಲಿ ಮತ್ತು ಕಟ್ಟಡ ನಿರ್ಮಾಣದ ಕೆಲಸಗಳಲ್ಲಿ ಕಾರ್ಮಿಕರು ತಮ್ಮ ಸುರಕ್ಷತೆಗೆ ಹೆಚ್ಚು ಗಮನ ನೀಡಬೇಕು ಎಂದರು. ಶಾಖಾ ವ್ಯವಸ್ಥಾಪಕ ಉಷಾ ಮಾತಾನಾಡಿ, ಅಸಂಘಟಿತ ಕಾರ್ಮಿಕರಿಗೆ ಸಿಗುವ ಯೋಜನೆಗಳು ಮತ್ತು ಸೌಲಭ್ಯಗಳ ಕುರಿತು ತಿಳಿಸಿದರು. ಕಾರ್ಖಾನೆಗಳ ಉಪನಿರ್ದೇಶಕರಾದ ಎಂ.ಎ ಸೋಮಶೇಖರ, ಪರಿವರ್ತನಾಧಿಕಾರಿ ಬಸವಪ್ರಭು, ಸತೀಶ್.ಟಿ.ಬಿ, ಜಿಲ್ಲಾ ಕೌಶಲ್ಯಾಭಿವೃದ್ಧಿ ಅಧಿಕಾರಿ ಎಂ.ಪ್ರಸಾದ್ ಹಾಜರಿದ್ದರು.

ಜಗತ್ತಿನ ಮಹಾನ್ ಅಹಿಂಸಾ ಪ್ರತಿಪಾದಕ ಗಾಂಧಿ

ಉನ್ನತ ಶಿಕ್ಷಣ ಸಚಿವ ಡಾ.ಎಂ.ಸಿ.ಸುಧಾಕರ ಅವರಿಂದ ಗಾಂಧಿ ಭವನ ಕಟ್ಟಡ ಲೋಕಾರ್ಪಣೆ

ಚಿಕ್ಕಬಳ್ಳಾಪುರ: ಮಹಾತ್ಮಾ ಗಾಂಧೀಜಿ ಜಗತ್ತಿನ ಬಹುದೊಡ್ಡ ಅಹಿಂಸಾ ತತ್ವದ ಪ್ರತಿಪಾದಕರಾಗಿದ್ದರಲ್ಲದೆ, ಇದೇ ಮಾರ್ಗದಲ್ಲಿಯೇ ಸಾಗಿ ಬ್ರಿಟೀಷರಿಂದ ಭಾರತಕ್ಕೆ ಬಿಡುಗಡೆ ನೀಡಿ ಪ್ರಜಾಪ್ರಭುತ್ವ ಸ್ಥಾಪಿಸಲು ಶಕ್ತಿಯಾಗಿ ನಿಂತಿದ್ದರು ಎಂದು ಜಿಲ್ಲಾ ಉಸ್ತುವಾರಿ ಸಚಿವ ಡಾ.ಎಂ.ಸಿ.ಸುಧಾಕರ ತಿಳಿಸಿದರು.

ನಗರದಲ್ಲಿ ನೂತನವಾಗಿ ನಿರ್ಮಿಸಿರುವ ಗಾಂಧಿ ಭವನ ಕಟ್ಟಡವನ್ನು ಬುಧವಾರ ಲೋಕಾರ್ಪಣೆ ಮಾಡಿದ ನಂತರ ಜಿಲ್ಲಾಡಳಿತ, ವಾರ್ತಾ ಇಲಾಖೆ ಸಂಯುಕ್ತಾಶ್ರಯದಲ್ಲಿ ಆಯೋಜಿಸಿದ್ದ ಗಾಂಧಿ ಜಯಂತಿ ಮತ್ತು ಲಾಲ್ ಬಹುದ್ದೂರ್ ಶಾಸ್ತ್ರಿ ಜಯಂತಿ ಕಾರ್ಯಕ್ರಮವನ್ನು ಚಾಲನೆ ನೀಡಿ ಮಾತನಾಡಿದರು.

ಶ್ರೀಮಂತರಾಗಿ ಹುಟ್ಟಿದರೂ ಸರಳತೆಯನ್ನು ಮೈಗೂಡಿಸಿಕೊಂಡು ಸತ್ಯಕ್ಕಾಗಿ ಹೋರಾಟ ಮಾಡಿದರು. ಇವರ ಜನ್ಮದಿನವನ್ನು ವಿಶ್ವಸಂಸ್ಥೆ ಅಹಿಂಸಾ ದಿನವಾಗಿ ಆಚರಿಸುತ್ತಿರುವುದು. ದೇಶಕ್ಕೆ ಹೆಮ್ಮೆ ತರುವ ವಿಚಾರವಾಗಿದೆ. ಚರಕದ ಮೂಲಕ ಗುಡಿ ಕೈಗಾರಿಕೆಗೆ ಪ್ರೋತ್ಸಾಹ ನೀಡಿ ಹಳ್ಳಿಗಳ ಉದ್ದಾರವೇ ದೇಶದ ಉದ್ದಾರ ಎಂದು ಸಾರುತ್ತಾ,ದೇಶದ ಅಭಿವೃದ್ಧಿಗೆ ಅಡ್ಡಗಾಲಾಗಿದ್ದ ಅಸ್ಪೃಶ್ಯತಾ ಆಚರಣೆ ವಿರುದ್ಧ ಸಮರವನ್ನೇ ಸಾರಿದ್ದರು ಎಂದರು.

ಭಾರತದ ಎರಡನೇ ಪ್ರಧಾನಿ ಲಾಲ್ಬಹಾದ್ದೂರ್ ಶಾಸ್ತ್ರಿ ಕೂಡ ಸರಳತೆಗೆ ಜೀವಕೊಟ್ಟು ದೇಶದ ಸಮಗ್ರತೆ ಎತ್ತಿಹಿಡಿದ ಮಹಾನ್ ನೇತಾರ. ಇವರ ಜನ್ಮದಿನವೂ ಕೂಡ ಇಂದೇ ಆಗಿದೆ ಎಂದರು.

ಚಿಕ್ಕಬಳ್ಳಾಪುರ ದಲ್ಲಿ ನೂತನವಾಗಿ ನಿರ್ಮಿಸಿರುವ ಗಾಂಧೀಭವನದ ಕಟ್ಟಡವನ್ನು ಉನ್ನತ ಶಿಕ್ಷಣ ಸಚಿವ ಸುಧಾಕರ್ ಅವರು ಲೋಕಾರ್ಪಣೆ ನೆರವೇರಿಸಿದರು.

ಮಹಾತ್ಮನ ಜನ್ಮದಿನದ ದಿವಸ ಜಿಲ್ಲಾ ಕೇಂದ್ರದಲ್ಲಿ ಗಾಂಧೀಭವನ ಲೋಕಾರ್ಪಣೆ ಮಾಡುತ್ತಿರುವುದು ಅತ್ಯಂತ ಸಂತೋಷ ತಂದಿದೆ. 20016ರಲ್ಲಿ ಈ ಭವನವನ್ನು ಜಿಲ್ಲೆಗೆ ಮಂಜೂರು ಮಾಡಿ 3 ಕೋಟಿ ಅನುದಾನ ನೀಡಿದ್ದ ಮುಖ್ಯಮಂತ್ರಿ ಸಿದ್ಧರಾಮಯ್ಯ, ಮಾಜಿ ಜಿಲ್ಲಾ ಉಸ್ತುವಾರಿ ಸಚಿವ ಎನ್.ಹೆಚ್. ಶಿವಶಂಕರರೆಡ್ಡಿ, ಮಾಜಿ ಸಂಸದ ವೀರಪ್ಪಮೊಯಿಲಿ ಅವರನ್ನು ಸ್ಮರಿಸಿದರು.

ಶಾಸಕ ಪ್ರದೀಪ್ ಈಶ್ವರ್ ಮಾತನಾಡಿ, ಮಹಾತ್ಮ ಗಾಂಧೀಜಿಗೂ ಜಿಲ್ಲೆಗೂ ಇದ್ದ ನಂಟನ್ನು ಸಭೆಗೆ ತಿಳಿಸಿಕೊಟ್ಟರು. ಅವರು ಖಾದಿ ಪ್ರಚಾರ ಹಾಗೂ ಹರಿಜನ ನಿಧಿ ಸಂಗ್ರಹಣೆಗಾಗಿ, ಕಸ್ತೂರಿಬಾ ಜೊತೆ ಗಾಂಧೀಜಿ ದಕ್ಷಿಣ ಭಾರತ ಪ್ರವಾಸದಲ್ಲಿದ್ದಾಗ ಬಾಪೂಜಿಗೆ ಆರೋಗ್ಯ ಹದಗೆಟ್ಟಿತ್ತು. 20ನೇ ಎಪ್ರಿಲ್ 1927 ರಂದು ನಂದಿ ಗಿರಿಧಾಮಕ್ಕೆ ಆಗಮಿಸಿ 45 ದಿನಗಳ ಕಾಲ ವಿಶ್ರಾಂತಿ ಪಡೆದಿದ್ದರು ಎಂದರು.

ಚಿಕ್ಕಬಳ್ಳಾಪುರದ ಜನರು ಬಾಪೂಜಿಯವರಿಗೆ ಹೂಮಾಲೆಗಳನ್ನು ಅರ್ಪಿಸಿ, ಹರಿಜನ ನಿಧಿಗಾಗಿ ಒಂದು ನೂರು ರೂಪಾಯಿಗಳನ್ನು ಸಂಗ್ರಹಿಸಿ ಕೊಟ್ಟರು. ನಂತರ ಶಿಡ್ಲಘಟ್ಟ, ಚಿಂತಾಮಣಿ, ಕೋಲಾರ, ಬಂಗಾರಪೇಟೆ ಹಾಗೂ ಕೋಲಾರ ಚಿನ್ನದ ಗಣಿಗೆ ಭೇಟಿ ಘಟನೆ ಜತೆ ಜಿಲ್ಲೆಯಲ್ಲಿನ ಗಾಂಧಿ ಹೆಜ್ಜೆಯ ಗುರುತುಗಳ ಬಗ್ಗೆ ನೆನೆದರು.

ನಿವೃತ್ತ ಪ್ರಾಂಶುಪಾಲ ಕೋಡಿರಂಗಪ್ಪ ಮಾತನಾಡಿದರು. ಗಾಂಧೀಜಿ ಕುರಿತ ಪ್ರಬಂಧ ಸ್ಪರ್ಧೆಯಲ್ಲಿ ವಿಜೇತರಾದ ವಿದ್ಯಾರ್ಥಿಗಳಿಗೆ ನಗದು ಬಹುಮಾನ ನೀಡಿ ಗೌರವಿಸಲಾಯಿತು. ಸರ್ವಧರ್ಮಗಳ ಪ್ರತಿನಿಧಿಗಳು ಪ್ರಾರ್ಥನೆ ಸಲ್ಲಿಸಿದರು.

ರಾಜ್ಯ ಜಾನಪದ ಅಕಾಡೆಮಿ ಅಧ್ಯಕ್ಷ ಗೊಲ್ಲಹಳ್ಳಿ ಶಿವಪ್ರಸಾದ್, ಜಿಲ್ಲಾಧಿಕಾರಿ ಪಿ.ಎನ್.ರವೀಂದ್ರ, ಸಿಇಒ ಪ್ರಕಾಶ್ ಜಿ.ಟಿ. ನಿಟ್ಟಾಲಿ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಕುಶಲ್ ಚೌಕ್ಸೆ, ಅಪರ ಜಿಲ್ಲಾಧಿಕಾರಿ ಡಾ. ಎನ್.ಭಾಸ್ಕರ್, ಕೂಡಾ ಅಧ್ಯಕ್ಷ ಕೆ.ಎನ್. ಕೇಶವರೆಡ್ಡಿ, ಉಪನಿರ್ದೇಶಕ ಬೈಲಾಂಜಿನಪ್ಪ, ವಾರ್ತಾ ಇಲಾಖೆಯ ಸಹಾಯಕ ನಿರ್ದೇಶಕ ಎಂ.ಜುಂಜಣ್ಣ ಇದ್ದರು.

ದಲಿತ ಮುಖಂಡರ ಗದ್ದಲ, ಸಚಿವಗೆ ಮುಜುಗರ

ನೂತನ ಗಾಂಧೀಭವನದ ಕಟ್ಟಡ ಲೋಕಾರ್ಪಣೆ ನಂತರ ನಡೆದ ಗಾಂಧೀಜಿ ಜನ್ಮದಿನಾಚರಣೆಯ ವೇದಿಕೆ ಕಾರ್ಯಕ್ರಮ ಕೆಲ ಕಾಲ ಸ್ವಪಕ್ಷೀಯರ ಗದ್ದಲಕ್ಕೆ ಬಲಿಯಾಯಿತು. ಬ್ಯಾನರ್‌ನಲ್ಲಿ ಶಿಷ್ಟಾಚಾರದಂತೆ ಶಾಸಕ ಪ್ರದೀಪ್ ಈಶ್ವರ ಪೋಟೋ ಇಲ್ಲ ಎಂಬುದೇ ಗದ್ದಲಕ್ಕೆ ನಾಂದಿ ಹಾಡಿತು. ಜಿಲ್ಲಾಡಳಿತ ಉದ್ದೇಶಪೂರ್ವಕವಾಗಿ ಶಾಸಕರಿಗೆ ಅಪಮಾನ ಮಾಡಿದೆ. ಇದು ಸರಿಯಾ? ಎಂದು ಜೋರು ದನಿಯಲ್ಲಿ ದಲಿತ ಮುಖಂಡರು ಪ್ರಶ್ನಿಸಿ ಸಭೆಗೆ ಕಾವೇರಿಸಿದರು. ಸ್ವಪಕ್ಷೀಯರೇ ತಂದ ಇರಿಸು ಮುರಿಸಿಗೆ ಒಳಗಾದ ಸಚಿವ ಸುಧಾಕರ್, ಸಮಾಧಾನಿಸಲು ಮುಂದಾದರೂ ತಣ್ಣಗಾಗದ ನಾಯಕರು ನಮ್ಮ ಶಾಸಕರಿಗೆ ಅಪಮಾನ ಮಾಡುವುದನ್ನು ನಾವು ಸಹಿಸಲ್ಲ ಎಂದು ಕಿಡಿಕಿಡಿಯಾದರು. ಜಿಲ್ಲಾಧಿಕಾರಿ ರವೀಂದ್ರ, ಶಾಸಕರನ್ನು ನಾವು ಅವಮಾನಿಸಿಲ್ಲ.ಎಲ್ಲವೂ ಶಿಷ್ಟಾಚಾರದಂತೆ ನಡೆದಿದೆ ಎಂದು ಸ್ಪಷ್ಟನೆ ನೀಡಿದರು. ಆಗ ಸ್ವತಃ ಶಾಸಕ ಪ್ರದೀಪ್ ಈಶ್ವರ್ ದಲಿತ ಮುಖಂಡರನ್ನು ಸಮಾಧಾನಪಡಿಸಿದರು.

ಅಹಿಂಸಾ ಮಾರ್ಗದಲ್ಲಿ ಭವ್ಯ ಭಾರತ ಕಟ್ಟಬೇಕಿದೆ

ಕೋಲಾರ: ದೇಶಕ್ಕೆ ಸಿಕ್ಕಿರುವ ಸ್ವಾತಂತ್ರ್ಯವನ್ನು ದುರುಪಯೋಗ ಮಾಡಿಕೊಳ್ಳಬಾರದು, ಗಾಂಧಿಯವರ ಅಹಿಂಸಾ ಮಾರ್ಗದಲ್ಲಿ ನಾವು ಎಲ್ಲರೂ ಒಗ್ಗಟ್ಟಿನಿಂದ ಭವ್ಯ ಭಾರತವನ್ನು ನಿರ್ಮಾಣ ಮಾಡಬೇಕಾಗಿದೆ ಎಂದು ಜಿಲ್ಲಾ ಉಸ್ತುವಾರಿ ಸಚಿವ ಬೈರತಿ ಸುರೇಶ್ ತಿಳಿಸಿದರು.

ನಗರದ ಗಾಂಧಿವನದಲ್ಲಿ ಬುಧವಾರ ಜಿಲ್ಲಾ ಕಾಂಗ್ರೆಸ್ ನಿಂದ ಆಯೋಜಿಸಿದ್ದ ಗಾಂಧಿ ಜಯಂತಿಯಲ್ಲಿ ಮಾತನಾಡಿ, ಗಾಂಧೀ ಅಹಿಂಸೆಯ ಮಾರ್ಗದಲ್ಲಿ ದೇಶಾದ್ಯಂತ ಲಕ್ಷಾಂತರ ಜನರನ್ನು ಒಗ್ಗೂಡಿಸಿ ಹೋರಾಟದ ಮಂತ್ರದ ಮೂಲಕವೇ ಉಪವಾಸ ಸತ್ಯಾಗ್ರಹ ಮಾಡಿ ಬ್ರಿಟಿಷ್ ಸಾಮ್ರಾಜ್ಯದ ವಿರುದ್ಧ ಹೋರಾಡಿದ್ದಾರೆ. ತ್ಯಾಗ ಬಲಿದಾನದ ಪ್ರತೀಕ ದೇಶಕ್ಕೆ ಸ್ವಾತಂತ್ರ್ಯ ಕೊಡಿಸಿದ್ದು ಅದು ಪ್ರಸ್ತುತ ದಿನಗಳಲ್ಲಿ ಸದುಪಯೋಗವಾಗಬೇಕು ಎಂದರು.

ನಾವು ಗಾಂಧಿಯ ಜತೆ ಲಾಲ್ ಬಹಾದ್ದೂರ್ ಶಾಸ್ತ್ರಿ ಮತ್ತು ಸಂಧಾನದ ಶಿಲ್ಪಿ ಅಂಬೇಡ್ಕರ್ ಅವರನ್ನು ನೆನೆಯಬೇಕಾಗಿದೆ. ವಿವಿಧ

ಭಾಷೆ ಸಂಸ್ಕೃತಿಗಳಿಂದ ಬೆಳೆದಿದ್ದು ದೇಶಕ್ಕಾಗಿ ಪ್ರತಿ ಹಂತದಲ್ಲೂ ಕೊಡುಗೆ ಕೊಟ್ಟ

ಕೋಲಾರದಲ್ಲಿ ಜಿಲ್ಲಾ ಕಾಂಗ್ರೆಸ್ ನಿಂದ ಆಯೋಜಿಸಿದ್ದ ಗಾಂಧಿ ಜಯಂತಿಯಲ್ಲಿ ಸಚಿವ ಸುರೇಶ್ ಬೈರತಿ ಇತರರು ಇದ್ದರು.

ಮಹನೀಯರ ಮಾರ್ಗದರ್ಶನದಲ್ಲಿ ಯುವ ಪೀಳಿಗೆ ನಡೆಯಬೇಕು. ರಾಜ್ಯದಲ್ಲಿ ಸಿದ್ದರಾಮಯ್ಯ ಸರ್ಕಾರ ಇದ್ದು ಒಳ್ಳೆಯ ಜನಪರ ಕೆಲಸಗಳನ್ನು ಮಾಡಿಕೊಂಡು ಹೋಗುತ್ತಿದ್ದು ಅವರ ಬೆಂಬಲವಾಗಿ ನಿಲ್ಲಬೇಕು ಎಂದು ಹೇಳಿದರು.

ಕಾರ್ಯಕ್ರಮಕ್ಕೂ ಮುನ್ನ ಜಿಲ್ಲಾ ಕಾಂಗ್ರೆಸ್ ಕಚೇರಿಯಿಂದ ಗಾಂಧಿವನದವರೆಗೂ ಕಾಲ್ನಡಿಗೆ ಜಾಥಾ ಮಾಡಿದರು. ಶಾಸಕ ಕೊತ್ತೂರು ಜಿ ಮಂಜುನಾಥ್, ಎಂಎಲ್ಸಿ ಎಂ.ಎಲ್ ಅನಿಲ್ ಕುಮಾರ್, ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಲಕ್ಷ್ಮೀನಾರಾಯಣ, ಕಾರ್ಯಾಧ್ಯಕ್ಷ ಊರುಬಾಗಿಲು ಶ್ರೀನಿವಾಸ್, ನಗರ ಅಧ್ಯಕ್ಷ ಪ್ರಸಾದ್ ಬಾಬು, ಜಿಲ್ಲಾ ಗ್ಯಾರಂಟಿ ಸುತಿ ಅಧ್ಯಕ್ಷ ವೈ ಶಿವಕುಮಾರ್, ನಗರಸಭೆ ಅಧ್ಯಕ್ಷೆ ಲಕ್ಷ್ಮೀದೇವಮ್ಮ, ಉಪಾಧ್ಯಕ್ಷೆ ಸಂಗೀತಾ, ಮುಖಂಡರಾದ ಜಯದೇವ್ ನಾಗರಾಜ್, ಮೈಲಾಂಡಹಳ್ಳಿ ಮುರಳಿ, ಒಬಿಸಿ ಮಂಜುನಾಥ್, ಹೊನ್ನೇನಹಳ್ಳಿ ಯಲ್ಲಪ್ಪ,ಸೋಮಶೇಖರ್ ಇದ್ದರು.

ಪ್ರಬಂಧ ಸ್ಪರ್ಧೆ ವಿಜೇತರಿಗೆ ನಗದು ಬಹುಮಾನ

ತುಮಕೂರು: ವಾರ್ತಾ ಇಲಾಖೆ ಆಯೋ ಜಿಸಿದ್ದ ಜಿಲ್ಲಾ ಮಟ್ಟದ ಬಾಪೂಜಿ ಪ್ರಬಂಧ ಸ್ಪರ್ಧೆಯಲ್ಲಿ ವಿಜೇತರಾದ ವಿದ್ಯಾರ್ಥಿ ಗಳಿಗೆ ಗೃಹ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಡಾ: ಜಿ. ಪರಮೇಶ್ವರ ನಗದು ಬಹುಮಾನ ಹಾಗೂ ಪ್ರಮಾಣಪತ್ರ ವಿತರಣೆ ಮಾಡಿದರು.

ನಗರದ ಸರಕಾರಿ ಜೂನಿಯರ್ ಕಾಲೇ ಜು ಮೈದಾನದಲ್ಲಿ ಜಿಲ್ಲಾಡಳಿತ, ಮಹಾ ನಗರ ಪಾಲಿಕೆ ವತಿಯಿಂದ ಆಯೋಜಿಸಿದ್ದ ಗಾಂಧೀಜಿ, ಶಾಸ್ತ್ರೀಜಿ ಜಯಂತಿ ಹಾಗೂ ಪೌರ ಕಾರ್ಮಿಕರ ದಿನಾಚರಣೆ ಕಾರ್ಯ ಕ್ರಮದ ಉದ್ಘಾಟನೆ ನೆರವೇರಿಸಿದ ನಂತರ ಬಹುಮಾನ ವಿತರಣೆ ಮಾಡಿದರು.

ಪ್ರೌಢ ಶಾಲಾ ವಿಭಾಗದಲ್ಲಿ ಹನುಮನಹಳ್ಳಿ ಸರ್ಕಾರಿ ಪ್ರೌಢಶಾಲೆಯ ದೀಕ್ಷಿತ ಪ್ರಥಮ, ಅಮೃತೂರು ಕೆ.ಪಿ.ಎಸ್‌ನ ಎನ್.ಎನ್. ಹಿಮಾನಿ ದ್ವಿತೀಯ, ಅಂಕಸಂದ್ರ ಸರ್ಕಾರಿ ಪ್ರೌಢಶಾಲೆಯ ಎ. **ಪಿ. ಅಶ್ವಿನಿ ತೃತೀಯ ಸ್ಥಾನ:** ಪದವಿ ಪೂರ್ವ ಕಾಲೇಜು ವಿಭಾಗದಿಂದ ಸಿರಾ ಪ್ರೆಸಿಡೆನ್ಸಿ ಕಾಲೇಜಿನ ಎಸ್.ಎಂ. ಗುಣಶ್ರೀ ಪ್ರಥಮ, ತುರುವೇಕೆರೆ ಕಾಲೇಜಿನ ಹೆಚ್.ಎನ್. ಇಂಚರ ದ್ವಿತೀಯ, ತುಮಕೂರು ದಿ **ಮಾಸ್ಟರ್ಸ್ ಕಾಲೇಜಿನ ವೆಂಕಟ್ ತೇಜ್ ತೃತೀಯ;** ಪದವಿ ವಿಭಾಗದಿಂದ ತುಮ ಕೂರು ವಿವಿಯ ಪಿಜಿ ವಿದ್ಯಾರ್ಥಿ ಶರಣಪ್ಪ ಪ್ರಥಮ, ಎಸ್. ಕೆ. ಸುಪ್ರೀತ ದ್ವಿತೀಯ, ಹೆಚ್ .ಡಿ. ಸಂತೋಷ್ ತೃತೀಯ ಸ್ಥಾನ ಪಡೆದ ವಿದ್ಯಾರ್ಥಿಗಳಿಗೆ ಸಚಿವರು ನಗದು ಬಹುಮಾನ, ಪ್ರಮಾಣಪತ್ರ ವಿತರಣೆ ಮಾಡಿದರು. ಈ ಸಂದರ್ಭದಲ್ಲಿ ಜಿಲ್ಲಾಧಿ ಕಾರಿ ಶುಭ ಕಲ್ಯಾಣ್, ಜಿಲ್ಲಾ ಪಂಚಾ ಯತ್ ಮುಖ್ಯ ಕಾರ್ಯನಿರ್ವಹಣಾ ಧಿಕಾರಿ ಜಿ.ಪ್ರಭು, ಮಹಾನಗರ ಪಾಲಿಕೆ ಆಯುಕ್ತೆ ಬಿ.ವಿ.ಅಶ್ವಿಜಾ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಕೆ.ವಿ.ಅಶೋಕ್ ಇದ್ದರು.

ಗಾಂಧೀಜಿ ಬದುಕು ನಮಗೆ ಪ್ರೇರಣೆಯಾಗಬೇಕು

ನಗರದ ಕಾಂಗ್ರೆಸ್ ಭವನದಲ್ಲಿ ಗಾಂಧಿ ಜಯಂತಿ ಅಂಗವಾಗಿ ಬುಧವಾರ ಗಾಂಧೀಜಿ ಮತ್ತು ಶಾಸ್ತ್ರಿ ಅವರ ಭಾವಚಿತ್ರಗಳನ್ನು ಹಿಡಿದು ಪಾದಯಾತ್ರೆ ನಡೆಸಿದರು.

ಶಿಡ್ಲಘಟ್ಟ: ಸಮಯಪ್ರಜ್ಞೆ, ಸರಳ ಜೀವನ, ಸ್ವಚ್ಛತೆ, ಸೇವಾ ಮನೋಭಾವದ ಗಾಂಧೀಜಿ ಬದುಕು ನಮಗೆ ಪ್ರೇರಣೆಯಾಗಬೇಕು' ಎಂದು ಕೆಪಿಸಿಸಿ ಸಂಯೋಜಕ ರಾಜೀವ್ ಗೌಡ ಹೇಳಿದರು.

ನಗರದ ಕಾಂಗ್ರೆಸ್ ಭವನದಲ್ಲಿ ಗಾಂಧಿ ಜಯಂತಿ ಅಂಗವಾಗಿ ಬುಧವಾರ ಗಾಂಧೀಜಿ ಮತ್ತು ಶಾಸ್ತ್ರಿ ಅವರ ಭಾವಚಿತ್ರಗಳಿಗೆ ಪುಷ್ಪಾರ್ಚನೆ ನಮನ ಸಲ್ಲಿಸಿ ಮಾತನಾಡಿದರು.

ವಿಶ್ವಸಂಸ್ಥೆಯು ಗಾಂಧಿ ಜಯಂತಿಯನ್ನು ಅಂತರಾಷ್ಟ್ರೀಯ ಅಹಿಂಸಾ ದಿನ' ಎಂದು ಆಚರಿಸಿ ಮಹಾತ್ಮ ಗಾಂಧಿಗೆ ತಮ್ಮ ಗೌರವ ನಮನಗಳನ್ನು ಸಲ್ಲಿಸುತ್ತದೆ. ಮಾಜಿ ಪ್ರಧಾನಿ ಲಾಲ್ ಬಹುದ್ದೂರ್ ಶಾಸ್ತ್ರಿಯವರು 17 ತಿಂಗಳ ಕಾಲ ಪ್ರಧಾನಿಯಾಗಿದ್ದರೂ ಕೂಡ ಅವರು ಮಾದರಿ ಪ್ರಧಾನಿಯಾಗಿ ಕಾರ್ಯ ನಿರ್ವಹಿಸಿದ್ದಾರೆ. 1965 ರ ಪಾಕಿಸ್ತಾನ ಮತ್ತು ಭಾರತ ಯುದ್ಧ ಸಂದರ್ಭದಲ್ಲಿ ಅವರು ದೇಶ ರಕ್ಷಣೆಗೆ ತೆಗೆದುಕೊಂಡ ನಿರ್ಧಾರಗಳು ಶ್ಲಾಘನೀಯವಾದದ್ದು ಎಂದರು. ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷೆ ಸಹನಾ ರಾಜೀವ್ ಗೌಡ ಮಾತನಾಡಿ, ನನ್ನ ಜೀವನವೇ ನನ್ನ ಸಂದೇಶ ಎಂದಿದ್ದ ಮಹಾತ್ಮ ಗಾಂಧಿ ಒಂದು ಶಕ್ತಿ. ತಮ್ಮ ಜೀವನದುದ್ದಕ್ಕೂ ಸತ್ಯ, ಸಮಾನತೆ, ಶಾಂತಿ, ಅಹಿಂಸೆ, ಜಾತ್ಯತೀತತೆ, ಅಸ್ಪೃಶ್ಯತೆ ನಿವಾರಣೆ, ಶ್ರಮದಾನ, ಸ್ವಚ್ಛತೆಯ ಮಹತ್ವವನ್ನೇ ಉಸಿರಾಡಿದ್ದ ಮಹಾತ್ಮ ಸ್ವಾತಂತ್ರ್ಯಕ್ಕಾಗಿ ಸವೆಸಿದ ಹಾದಿ ಇಂದಿನ ಪೀಳಿಗೆಗೆ ಆದರ್ಶ. ಅವರು ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ಗೆ ದೂರದೃಷ್ಟಿತ್ವ ಮತ್ತು ಮಾರ್ಗದರ್ಶನ ನೀಡಿ ಸ್ವಾವಲಂಬಿ ರಾಷ್ಟ್ರದ ಕನಸನ್ನು ಪ್ರತಿಪಾದಿಸಿದ್ದರು' ಎಂದು ಹೇಳಿದರು. ಕಾಂಗ್ರೆಸ್ ಆಂಜಿನಪ್ಪ ಪುಟ್ಟು,ಜಿಲ್ಲಾ ಮಹಿಳಾ ಅಧ್ಯಕ್ಷೆ ಯಾಸ್ಮಿನ್ ತಾಜ್, ತಾ.ಉಪಾಧ್ಯಕ್ಷೆ ಗಾಯತ್ರಿ, ಅಧ್ಯಕ್ಷ ನರೇಂದ್ರ, ಟಿ.ಕೆ.ನಟರಾಜ್, ಭಕ್ತರಹಳ್ಳಿ ಮುನೇಗೌಡ, ಗುಡಿಯಪ್ಪ, ಎ.ನಾಗರಾಜ್, ಮುನೀಂದ್ರ, ಗೋವಿಂದರಾಜು ಹಾಜರಿದ್ದರು.

99 ವಿಷಯಗಳಿಗೆ ನಗರಸಭೆ ಅನುಮೋದನೆ

ಅರಸೀಕೆರೆ: ನಗರಸಭೆಯ ಸಾಮಾನ್ಯ ಸಭೆಯಲ್ಲಿ ನಗರದ ಅಭಿವೃದ್ಧಿ ವಿಚಾರವಾಗಿ ಚರ್ಚೆಗಳು ನಡೆದು ಹಲವು ಯೋಜನೆಗಳಿಗೆ ಅನುಮೋದನೆ ನೀಡಲಾಯಿತು.

ನಗರಸಭೆಯ ಸಭಾಂಗಣದಲ್ಲಿ ನಗರಸಭೆ ಅಧ್ಯಕ್ಷ ಎಂ. ಸಮೀವುಲ್ಲಾರವರ ಅಧ್ಯಕ್ಷತೆಯಲ್ಲಿ ನಡೆದ ಸಾಮಾನ್ಯ ಸಭೆಯಲ್ಲಿ ನಗರಸಭೆ ಅಧ್ಯಕ್ಷ ಮಾತನಾಡಿ, ಸಾಮಾನ್ಯ ಸಭೆಯಲ್ಲಿ ನಗರದಲ್ಲಿ ಹಲವು ಕಾಮಗಾರಿಗಳ ಅವಶ್ಯಕತೆ ಇದ್ದು ಇದಕ್ಕಾಗಿ 99 ವಿಷಯಗಳನ್ನು ಸಭೆಯಲ್ಲಿ ಮಂಡಿಸಿ ಒಪ್ಪಿಗೆ ಪಡೆಯಲಾಗಿದೆ. ಅದರಲ್ಲಿ ಶೌಚಾಲಯ ನಿರ್ಮಾಣ, ನಗರವ್ಯಾಪಿ ನಾಮಫಲಕಗಳ ಅವಳಡಿಕೆ, ಸಿ.ಸಿ. ರಸ್ತೆಗಳ ನಿರ್ಮಾಣ, ಹೈಮಾಸ್ಟ್ ದೀಪಗಳು ಹಾಗೂ ಬೀದಿ ದೀಪಗಳ ಅಳವಡಿಕೆ, ನಗರಸಭೆ ಆವರಣದಲ್ಲಿ ಕುಡಿಯುವ ನೀರಿನ ಘಟಕ ಸ್ಥಾಪನೆ, ಸಮುದಾಯ ಭವನ ನಿರ್ಮಾಣಕ್ಕೆ ನಿವೇಶನ, ನಗರ ವ್ಯಾಪ್ತಿಯಲ್ಲಿ ವಸತಿ ಮತ್ತು ವಸತಿಯೇತರ ಕಟ್ಟಡದಲ್ಲಿರುವ ಅನಧಿಕೃತ ನಲ್ಲಿ ಸಂಪರ್ಕಗಳನ್ನು ಸಕ್ರಮಗೊಳಿಸಬೇಕು, ಮಾರುಕಟ್ಟೆ ಸುಂಕ ವಸೂಲಾತಿಗೆ ಮರು ಹರಾಜು ನಡೆಸುವುದು, ನಗರದ ದೇವಸ್ಥಾನಗಳಿಗೆ ಅಭಿವೃದ್ಧಿ ಕಾಮಗಾರಿಗೆ ಒತ್ತು ನೀಡಲಾಗುವುದು ಎಂದರು.

ಒಳಚರಂಡಿ ಸರಿಪಡಿಸಿ: ನಗರದಲ್ಲಿ ರಸ್ತೆ ಅಭಿವೃದ್ಧಿ ಹೆಸರಿನಲ್ಲಿ ಉತ್ತಮ ರಸ್ತೆಗಳು ಆಗುವುದರ ಜತೆಯಲ್ಲಿ ಒಳಚರಂಡಿ ನಿರ್ಮಾಣ ಅವೈಜ್ಞಾನಿಕವಾಗಿ ನಡೆದು ವಾಹನ ಚಲಾವಣೆಗೆ ತೊಂದರೆಯಾಗುತ್ತಿದ್ದು ಸರಿಯಾಗಿ ಕಾಮಗಾರಿಗಳನ್ನು ಮಾಡುವಂತೆ ಗುತ್ತಿಗೆದಾರರಿಗೆ ಸೂಚಿಸಿ, ಗುಣಮಟ್ಟದ ಕಾಮಗಾರಿಗೆ ಒತ್ತು ನೀಡುವಂತೆ ಸದಸ್ಯ ವೆಂಕಟಮುನಿ ಹೇಳಿದರು. ಇದಕ್ಕೆ ಉತ್ತರಿಸಿದ ನಗರಸಭಾಧ್ಯಕ್ಷ ಕೆಲವು ಭಾಗದಲ್ಲಿ ಒಳಚರಂಡಿ ನಿರ್ಮಾಣದಿಂದ ರಸ್ತೆಗಳಲ್ಲಿ ಸಮಸ್ಯೆಗಳಾಗಿದ್ದು ಅದನ್ನು ಸರಿಪಡಿಸಲಾಗುವುದು ಎಂದರು.

ರಾಜಕಾಲುವೆ ಒತ್ತುವರಿ: ನಗರದಲ್ಲಿ ಕೆಲವು ಭಾಗಗಳಲ್ಲಿ ರಾಜಕಾಲುವೆ ಒತ್ತುವರಿಯಾಗಿದ್ದು ಈಗಾಗಲೇ ತಾಲೂಕು ಆಡಳಿತ ಸರ್ವೇ ಕಾರ್ಯ ಮಾಡುತ್ತಿದ್ದು ಅದನ್ನು ತೆರವುಗೊಳಿಸುವಲ್ಲಿ ಗಮನಹರಿಸಲಾಗುವುದು ಎಂದು ನಗರಾಧ್ಯಕ್ಷರು ಹೇಳಿದರು. ಇದಕ್ಕೆ ಉತ್ತರಿಸಿದ ಶಾಸಕರು ರಾಜಕಾಲುವೆ ಒತ್ತುವರಿಯಿಂದ ಮಳೆಗಾಲದಲ್ಲಿ ತೊಂದರೆಯಾಗಲಿದೆ. ಇದನ್ನರಿತು ಯಾರೇ ಒತ್ತುವರಿ ಮಾಡಿದ್ದರು ಮುಲಾಜಿಲ್ಲದೇ ತೆರವುಗೊಳಿಸಿ, ಈ ವಿಚಾರದಲ್ಲಿ ರಾಜೀಬೇಡ ಎಂದರು.

ಮುಖ್ಯದ್ವಾರದಲ್ಲಿ ನಾಮಫಲಕ: ನಗರಕ್ಕೆ ಸ್ವಾಗತ ಕೋರುವ ನಾಮಫಲಕಗಳ ಅಳವಡಿಕೆ ಮಾಡುವ ನಿಟ್ಟಿನಲ್ಲಿ ಜಾಜೂರು, ಹಾಸನ ರಸ್ತೆ, ಕಂತೇನಹಳ್ಳಿ ಹತ್ತಿರದ ಮುಖ್ಯ ದ್ವಾರದಲ್ಲಿ ನಾಮಫಲಕಗಳನ್ನು ಅಳವಡಿಸಲು ಅನುಮೋದನೆ ನೀಡಿದರು. ಈ ಸಂದರ್ಭದಲ್ಲಿ ಪೌರಾಯುಕ್ತ ಕೃಷ್ಣಮೂರ್ತಿ, ಉಪಾಧ್ಯಕ್ಷ ಮನೋರ್ಹ, ಸದಸ್ಯರಾದ ಗಿರೀಶ್, ಕಾಂತೇಶ್, ಜಿ.ಟಿ. ಗಣೇಶ್, ಅನ್ನಪೂರ್ಣ, ಮೇಲಗಿರಿಗೌಡ, ರಾಜು, ಸುಜಾರಮೇಶ್, ಶುಭಮನೋಜ್, ಭಾಸ್ಕರ್, ಜಾರ್ಕಿ, ಅಭಿರಾಮಿ, ಮಧುರ, ಶ್ವೇತರಮೇಶ್, ಪ್ರೇಮ ಉಪಸ್ಥಿತರಿದ್ದರು.

ಬೆಂಗಳೂರು ಉತ್ತರ ದಾಸನ್ ಪುರ ಹೋಬಳಿಯ ಗ್ರಾಮ ಪಂಚಾಯಿತಿ ಕಿತ್ತನಹಳ್ಳಿ ಗ್ರಾಮ ವ್ಯಾಪ್ತಿಯಲ್ಲಿ ಜಿಂದಾಲ್ ಮಹಿಳಾ ಕಾಲೇಜಿನ ಎನ್‌ಸಿಸಿ ಕೆಡೆಟ್ ತಂಡದಿಂದ 'ಸ್ವಭಾವ ಸ್ವಚ್ಛ ಸಂಸ್ಕಾರ ಸ್ವಚ್ಛ' ಧ್ಯೇಯದಡಿ ಸ್ವಚ್ಛತೆ ಬಗ್ಗೆ ಗ್ರಾಮಸ್ಥರಲ್ಲಿ ಅರಿವು ಮೂಡಿಸಲಾಯಿತು. ಕಾಲೇಜಿನ ಎನ್ ಸಿ ಸಿ ಕ್ಯಾಂಪ್ಟನ್ ಭಾಗ್ಯವತಿ ಮತ್ತು ಎನ್ ಸಿ ಸಿ ಅಧಿಕಾರಿಗಳೊಂದಿಗೆ ಹಾಗೂ ಪಂಚಾಯಿತಿ ಅಧಿಕಾರಿ ಶಿವ್ ಭದ್ರಯ್ಯ, ಗ್ರಾಪಂ ಅಧ್ಯಕ್ಷರು, ಸದಸ್ಯರು ಸ್ವಚ್ಛತಾ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು.

IN THE COURT OF THE CIVIL JUDGE
JMFC AT KORATAGERE
C.MIS.No. 273/2024

Petitioner:- 1. Muddamma W/o Late Veerabhadraih Aged About 53 Years. Old R/o Koratagere Taluk, Holavanahalli Hobli Bajjanahalli Village Now residing at Madhugiri Taluk Puruvara Hobli Doddagaalihalli villege.

V/S

Respondent: - The Tahasildar Registrar of Birth & Death Koratagere Taluk.

PUBLIC NOTIFICATION

Whereas the petitioner,s has filed the above petition to obtain the death certificate of the petitioner Mother by name Akkamma W/o Late Veerabharaiah was died on 28-03-2017 at Bajjanahalli Village, Holavanahalli Hobli, Koratagere Taluk, Tumkur Dist at the said address. It is hereby notify that whoever has interest or objection to obtain the death certificate of the petitioner Mother may appear in person or through your advocate on 03/10/2024 in the above case. Failing which the matter will be heard written mined in your absence.

By order of the Court
Shirastedar,
Civil Judge and J.M.F.C Court
at Koratagere.

Advocates for petitioner,
Ravi M. A, Koratagere.

ಗ್ಯಾರಂಟಿಗಳಿಂದ ಮೂಲ ಸೌಲಭ್ಯಗಳು ಕುಂಠಿತ

ಕುಣಿಗಲ್: ರಾಜ್ಯ ಸರಕಾರದ ಗ್ಯಾರೆಂಟಿ ಯೋಜನೆಗಳಿಂದ ಮೂಲ ಸೌಲಭ್ಯಗಳ ಕೆಲಸಗಳು ಕುಂಠಿತವಾಗುತ್ತಿವೆ ಎಂದು ಬೆಂಗಳೂರು ಗ್ರಾಮಾಂತರ ಲೋಕಸಭಾ ಸದಸ್ಯ ಸಿ.ಎನ್. ಮಂಜುನಾಥ್ ತಿಳಿಸಿದರು. ತಾಲೂಕಿನ ಉಜ್ಜಿನಿ ಹಾಗೂ ನಿಡಸಾಲೆ ಗ್ರಾಮದಲ್ಲಿ ಸಾರ್ವಜನಿಕರ ಸಭೆಯಲ್ಲಿ ಮಾತನಾಡಿ, ಗ್ಯಾರೆಂಟಿ ಯೋಜನೆಯಿಂದ ನಾಡಿಗೆ ಮೂಲ ಸೌಲಭ್ಯಗಳು ಇಲ್ಲದಂತಾಗಿದೆ. ಕುಡಿಯುವ ನೀರು ರಸ್ತೆ ಆಸ್ಪತ್ರೆ ಶಾಲೆಗಳ ದುರಸ್ತಿ ಕೆರೆಗಳ ನಿರ್ಮಾಣ ಸೇರಿದಂತೆ ಅನೇಕ ಕೇಂದ್ರ ಮತ್ತು ರಾಜ್ಯ ಸರ್ಕಾರದ ಜಂಟಿ ಯೋಜನೆಗಳ ಪ್ರಗತಿ ವಿಳಂಬವಾಗುತ್ತಿದೆ. ಸರ್ಕಾರಿ ಕಚೇರಿಗಳಲ್ಲಿ ಸಿಬ್ಬಂದಿಗಳ ಕೊರತೆ ಎದ್ದು ಕಾಣುತ್ತಿದ್ದು ಯಾವುದೇ ಅಭಿವೃದ್ಧಿ ಕೆಲಸ ಕೈಗೊಳ್ಳಲು ಸಾಧ್ಯವಾಗುತ್ತಿಲ್ಲ ಎಂದು ಬೇಸರ ವ್ಯಕ್ತಪಡಿಸಿದರು. ಜನಪ್ರತಿನಿಧಿಗಳು ಚುನಾವಣೆಯ ಸಂದರ್ಭದಲ್ಲಿ ಮಾತ್ರ ಪಕ್ಷಕ್ಕೆ ಸೀಮಿತವಾಗಿರಬೇಕು. ನಂತರ ಕ್ಷೇತ್ರದ ಎಲ್ಲಾ ಮತದಾರಿಗೆ ಪ್ರತಿನಿಧಿಯಾಗಿ ಒಗ್ಗಟ್ಟಾಗಿ ಅಭಿವೃದ್ಧಿ ಕೆಲಸ ಕೈಗೊಳ್ಳಬೇಕೆಂದು ತಾವು ಲೋಕಸಭಾ ಸದಸ್ಯರಾಗಿ 110 ದಿನಗಳಲ್ಲಿ ಒಂಬತ್ತು ಸಾವಿರ ಕಿಮೀ ಸಂಚರಿಸಿ ಜನರ ಸಮಸ್ಯೆಗಳನ್ನ ಸ್ಪಂದಿಸುತ್ತಿದ್ದು ಬೆಂಗಳೂರು ಗ್ರಾಮಾಂತರ ಕ್ಷೇತ್ರವು ಅತಿ ದೊಡ್ಡ ಕ್ಷೇತ್ರವಾಗಿದೆ. ತುಮಕೂರು ಜಿಲ್ಲೆಯ ತೆಂಗು ಬೆಳೆಗಾರರ ಬಾಕಿ ಹಣ 57 ಕೋಟಿ ಹಣ ಬಿಡುಗಡೆ ಮಾಡಿಸಲಾಗಿದೆ. ಮಹಿಳೆಯರ ಉದ್ಯೋಗಕ್ಕಾಗಿ ಗಾರ್ಮೆಂಟ್ ಕಾರ್ಖಾನೆ ಆರಂಭಿಸಲು ಕ್ರಮ ವಹಿಸಲಾಗುವುದು ಎಂದರು. ಈ ಸಂದರ್ಭದಲ್ಲಿ ಜೆಡಿಎಸ್ ಮುಖಂಡರಾದ ಬಿ.ಎನ್. ಜಗದೀಶ್ ನಾಗರಾಜಯ್ಯ, ಉಜಿನಿಯ ಚೆನ್ನೇಗೌಡ,ನಿಡಸಾಲೆ ಗ್ರಾಮ ಪಂಚಾಯಿತಿ ಅಧ್ಯಕ್ಷ ಪ್ರವೀಣ್, ಜಿ ಟಿ ಗಂಗಾಧರ, ನಿಡಾಸಾಲೆ ಪ್ರಸಾದ್, ದೇವರಾಜ್, ದೊಡ್ಡ ಮಧುರೆ ವೆಂಕಟೇಶ್, ಹುಲಿಯೂರು ದುರ್ಗ ನಟರಾಜ್, ಜೆಡಿಎಸ್ ವಕ್ತಾರ ತರೀಕೆರೆ ಪ್ರಕಾಶ್ ಇದ್ದರು.

ಗಾಂಧೀಜಿ ಆದರ್ಶ ವಿಶ್ವವೇ ಒಪ್ಪಿದೆ : ಸಚಿವ

ತುಮಕೂರು: ಅಹಿಂಸೆ, ಶಾಂತಿ ಮಾರ್ಗದಿಂದ ಸ್ವಾತಂತ್ರ್ಯ ಗಳಿಸಬಹುದು ಎಂಬುದನ್ನು ಮಹಾತ್ಮ ಗಾಂಧೀಜಿ ಅವರು ವಿಶ್ವಕ್ಕೆ ತೋರಿಸಿಕೊಟ್ಟಿದ್ದಾರೆ ಎಂದು ಉಸ್ತುವಾರಿ ಸಚಿವ ಡಾ. ಜಿ.ಪರಮೇಶ್ವರ ಹೇಳಿದರು.

ಮಹಾನಗರ ಪಾಲಿಕೆ ವತಿಯಿಂದ ನಗರದ ಅಮಾನಿಕೆರೆ ಉದ್ಯಾನವನದಲ್ಲಿ ಗ್ಯಾರಾ ಕಲಾಕೃತಿಯನ್ನು ಉದ್ಘಾಟಿಸಿ ಮಾತನಾಡಿ, ಜಗತ್ತಿನ ಹಲವಾರು ದೇಶಗಳು ಗಾಂಧೀಜಿಯವರ ಆದರ್ಶಗಳನ್ನು ಒಪ್ಪಿ, ಅಳವಡಿಸಿಕೊಂಡಿವೆ. ಇದಕ್ಕೆ ಸಾಕ್ಷಿಯಾಗಿ ಬಹುತೇಕ ಪ್ರಪಂಚದ ಎಲ್ಲ ದೇಶಗಳಲ್ಲಿ ಗಾಂಧೀಜಿ ಅವರ ಪ್ರತಿಮೆಗಳನ್ನು ಕಾಣಬಹುದಾಗಿದೆ. ಆಫ್ರಿಕಾ ದೇಶವನ್ನು ಸ್ವತಂತ್ರಗೊಳಿಸುವಲ್ಲಿ ನೆಲ್ಸನ್ ಮಂಡೇಲಾ ಅವರಿಗೆ ಗಾಂಧೀಜಿಯವರ ಆದರ್ಶಗಳೇ ಪ್ರೇರಣೆಯಾಗಿದ್ದವು. ಗಾಂಧಿ ಭಾರತದ ಶಕ್ತಿಯಾಗಿದ್ದರು. ಗಾಂಧೀಜಿಯವರನ್ನು ಪಡೆದ ನಾವೆಲ್ಲ ಅದೃಷ್ಟವಂತರು ಎಂದು ಹೇಳಿದರು.

ಕೇಂದ್ರದ ರೈಲ್ವೆ ಸಚಿವ ಹಾಗೂ ಸಂಸದ ವಿ. ಸೋಮಣ್ಣ ಮಾತನಾಡಿ, ಸ್ವಚ್ಛ ಭಾರತ ಗಾಂಧಿಯವರ ಕನಸಾಗಿತ್ತು. ಗಾಂಧಿ ಕನಸನ್ನು ನನಸಾಗಿಸಲು ಕೇಂದ್ರದಿಂದ ದೇಶದಾದ್ಯಂತ ಹಮ್ಮಿಕೊಂಡಿರುವ ಸ್ವಚ್ಛ ಭಾರತ್ ಅಭಿಯಾನ ಕಾರ್ಯಕ್ರಮ ಯಶಸ್ವಿ ಕಂಡಿದೆ ಎಂದರು. ಮಹಾನಗರ ಪಾಲಿಕೆ ಆಯುಕ್ತೆ ಬಿ.ವಿ.ಅಶ್ವಿಜಾ ಗ್ಯಾರಾ ಮೂರ್ತಿಗಳ ಬಗ್ಗೆ ಮಾಹಿತಿ ನೀಡುತ್ತಾ ಅಮಾನಿಕೆರೆಯ ಗ್ಯಾರಾ ಮೂರ್ತಿ(ಹನ್ನೊಂದು ಮೂರ್ತಿ) ಎಂಬುದು ಭಾರತದ ಸ್ವಾತಂತ್ರ್ಯ ಸಂಗ್ರಾಮದ ಪ್ರಮುಖ ಚಳವಳಿಯಾದ ದಂಡಿಯಾತ್ರೆ ಅಥವಾ ಉಪ್ಪಿನ ಸತ್ಯಾಗ್ರಹವನ್ನು ಬಿಂಬಿಸುವ ಕಲಾಕೃತಿಯಾಗಿದೆ ಎಂದು ತಿಳಿಸಿದರು. ಜಿಲ್ಲೆಯ ಮಾಜಿ ಸೈನಿಕರಾದ ಸುಬೇದಾರ ಬಿ. ಲಿಂಗಣ್ಣ, ಸಾರ್ಜೆಂಟ್ ಸಿ. ಪಾಂಡುರಂಗ, ಹವಾಲ್ದಾರರುಗಳಾದ ಪ್ರಸನ್ನಕುಮಾರ, ನವೀನ್, ಗಂಗಯ್ಯ, ವಿ.ಡಿ. ನಾಗರಾಜು, ಪುಟ್ಟ ಬಾಲಯ್ಯ, ರಾಜಣ್ಣ, ಡಿ.ಎಲ್ ರಾಜಣ್ಣ ಅವರನ್ನು ಸನ್ಮಾನಿಸಿ ಗೌರವಿಸಲಾಯಿತು. ಶಾಸಕರಾದ ಜ್ಯೋತಿಗಣೇಶ್ ಬಿ.ಸುರೇಶ್‌ಗೌಡ, ಜಿಲ್ಲಾಧಿಕಾರಿ ಶುಭ ಕಲ್ಯಾಣ್, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಕೆ.ವಿ. ಅಶೋಕ್, ಸಿಇಒ ಪ್ರಭು ಇದ್ದರು.

ಗಾಂಧಿ ಜಯಂತಿ: ಸ್ವಚ್ಛತಾ ಅಭಿಯಾನ

ಬಾಗೇಪಲ್ಲಿ: ಗಾಂಧಿ ಜಯಂತಿ ಅಂಗವಾಗಿ ಬುಧವಾರ ಪಟ್ಟಣದ ಯಂಗ್ ಇಂಡಿಯಾ ಶಾಲೆಯಲ್ಲಿ ಸ್ವಚ್ಛತಾ ಅಭಿಯಾನ ಹಾಗೂ ಗಿಡಗಳ ವಿತರಣೆ ಕಾರ್ಯಕ್ರಮ ಆಯೋಜಿಸಲಾಗಿತ್ತು.

ಕಾರ್ಯಕ್ರಮದಲ್ಲಿ ಯಂಗ್ ಇಂಡಿಯಾ ಶಾಲೆಯ ಮುಖ್ಯಸ್ಥ ಡಿ.ಶಿವಣ್ಣ ಮಾತನಾಡಿ, ವಿದ್ಯಾರ್ಥಿ ದೆಸೆಯಿಂದಲೇ ಪರಿಸರವನ್ನು ಸಂರಕ್ಷಣೆ ಮಾಡುವ ಕೆಲಸಕ್ಕೆ ಮುಂದಾಗುವ ಮೂಲಕ ಗಾಂಧೀಜಿ ಕಂಡಿದ್ದ ಸ್ವಚ್ಛ ಭಾರತದ ಸಂಕಲ್ಪದ ಕನಸನ್ನು ನೆನಸು ಮಾಡುವಂತೆ ವಿದ್ಯಾರ್ಥಿಗಳಿಗೆ ಕಿವಿಮಾತು ಹೇಳಿದರು. ಶಾಲೆಯ ಸುತ್ತಮುತ್ತಲಿನ ಪ್ರದೇಶಗಳನ್ನು ವಿದ್ಯಾರ್ಥಿಗಳು ಸ್ವಚ್ಛಗೊಳಿಸಿದರು. ಶಾಲೆಯ ಸಂಸ್ಥಾಪಕರಾದ ಪ್ರೊ.ಡಿ.ಶಿವಣ್ಣ, ಬೆಂಗಳೂರು ಸತ್ಯಸಾಯಿ ಕರ್ನಾಟಕ ಸಂಸ್ಥೆ ಹಾಗೂ ಬಾಗೇಪಲ್ಲಿ ಪಟ್ಟಣದ ಸತ್ಯಸಾಯಿ ಸಂಸ್ಥೆ ಮುಖ್ಯಸ್ಥ ಶ್ರೀನಿವಾಸ್ ರೆಡ್ಡಿ ನೇತೃತ್ವದಲ್ಲಿ ಶಾಲಾ ಮಕ್ಕಳಿಗೆ ವಿವಿಧ ಜಾತಿಯ 400 ಗಿಡಗಳನ್ನು ವಿತರಣೆ ಮಾಡಲಾಯಿತು. ಮುಖ್ಯ ಶಿಕ್ಷಕಿ ಕಲ್ಪನಾ, ಶಿಕ್ಷಕರು ಹಾಗೂ ಶಾಲೆಯ ಸಿಬ್ಬಂದಿ ಇದ್ದರು,

ಬಾಪು ಜಯಂತಿಗೆ ಸರ್ವ ಧರ್ಮಗಳ ಪ್ರಾರ್ಥನೆ

ಜಿಲ್ಲಾಡಳಿದಿಂದ ರಾಷ್ಟ್ರಪಿತ ಮಹಾತ್ಮ ಗಾಂಧೀಜಿಯ 155ನೇ ಜಯಂತಿ | ಸಚಿವ ಎಚ್.ಸಿ.ಮಹದೇವಪ್ಪ ಭಾಗಿ

ಮೈಸೂರು: ಗಾಂಧಿ ಜಯಂತಿ ಅಂಗವಾಗಿ ಜಿಲ್ಲಾ ಉಸ್ತುವಾರಿ ಸಚಿವ ಎಚ್.ಸಿ.ಮಹದೇವಪ್ಪ ಅವರು ಗಾಂಧೀಜಿ ಅವರ ಭಾವಚಿತ್ರಕ್ಕೆ ಪುಷ್ಪಾರ್ಚನೆ ನೆರವೇರಿಸಿದರು.

ಜಿಲ್ಲಾಡಳಿತ, ಮೈಸೂರು ಮಹಾನಗರ ಪಾಲಿಕೆ ಹಾಗೂ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ಸಹಯೋಗದೊಂದಿಗೆ ಪುರಭವನದ ಶ್ರೀರಂಗಾಚಾರ್ಲು ಸ್ಮಾರಕ ಭವನದಲ್ಲಿ ಹಮ್ಮಿಕೊಂಡಿದ್ದ ಪ್ರಾರ್ಥನಾ ಸಭೆಯಲ್ಲಿ ಪುಷ್ಪಾರ್ಚನೆ ನೆರವೇರಿಸಿದರು.

ರಾಮಕೃಷ್ಣ ಆಶ್ರಮದ ಅಗರಾನಂದ ಸ್ವಾಮೀಜಿ ಅವರಿಂದ ಹಿಂದೂ ಧರ್ಮ ಪ್ರಾರ್ಥನೆ, ಸೆಂಟ್ ಫಿಲೋಮಿನಾ ಚರ್ಚ್ ನ ಫಾದರ್ ಪೀಟರ್ ಅವರಿಂದ ಕ್ರೈಸ್ತ ಧರ್ಮ ಪ್ರಾರ್ಥನೆ, ಅಬ್ದುಲ್ ಸಲಾಂ ಅವರಿಂದ ಇಸ್ಲಾಂ ಧರ್ಮದ ಪ್ರಾರ್ಥನೆ, ಜೈನ ಗುರು ಸುರೇಶ್ ಕುಮಾರ್ ಜೈನ್ ಅವರಿಂದ ಜೈನ ಧರ್ಮದ ಪ್ರಾರ್ಥನೆ, ಡಾ.ಕಲ್ಯಾಣ್ ಬಂತೇಜಿಯ ಬೌದ್ಧ ಧರ್ಮದ ಪ್ರಾರ್ಥನೆ, ಸುಕ್ವಿಂದರ್ ಸಿಂಗ್ ಅವರಿಂದ ಸಿಖ್ ಧರ್ಮೀಯ ಪ್ರಾರ್ಥನೆ ನಡೆಯಿತು. ನಂತರ ಸ್ವಚ್ಛತಾ ಪ್ರತಿಜ್ಞಾ ವಿಧಿ ಸ್ವೀಕಾರ ಮಾಡಲಾಯಿತು.

ವಾರ್ತಾ ಇಲಾಖೆ ವತಿಯಿಂದ ಏರ್ಪಡಿಸಿದ್ದ ಜಿಲ್ಲಾ ಮಟ್ಟದ ಬಾಪೂಜಿ ಪ್ರಬಂಧ ಸ್ಪರ್ಧೆ ವಿಜೇತರಿಗೆ ಬಹುಮಾನ ವಿತರಿಸಲಾಯಿತು.

ಜಿಲ್ಲಾ ಉಸ್ತುವಾರಿ ಸಚಿವ ಎಚ್.ಸಿ.ಮಹದೇವಪ್ಪ ಅವರು ಗಾಂಧೀಜಿ ಅವರ ಪ್ರತಿಮೆಗೆ ಮಾಲಾರ್ಪಣೆ ನೆರವೇರಿಸಿದರು.

ಕರ್ನಾಟಕ ರಾಜ್ಯ ಪಂಚ ಗ್ಯಾರಂಟಿ ಯೋಜನೆಗಳ ಉಪಾಧ್ಯಕ್ಷೆ ಡಾ.ಪುಷ್ಪ ಅಮರನಾಥ್, ಶಾಸಕ ತನ್ವೀರ್ ಸೇಠ್, ಜಿಲ್ಲಾಧಿಕಾರಿ ಜಿ. ಲಕ್ಷ್ಮೀಕಾಂತರೆಡ್ಡಿ, ನಗರ ಪೊಲೀಸ್ ಆಯುಕ್ತೆ ಸೀಮಾ ಲಾಟ್ಕರ್, ಸಿಇಒ ಕೆ. ಎಂ.ಗಾಯತ್ರಿ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ವಿಷ್ಣುವರ್ಧನ್, ಪಾಲಿಕೆಯ ಆಯುಕ್ತ ಆಶಾದ್ ಉರ್ ರೆಹಮಾನ್ ಷರೀಫ್, ವಾರ್ತಾ ಇಲಾಖೆ ಉಪ ನಿರ್ದೇಶಕ ಅಶೋಕ್ ಕುಮಾರ್ ಉಪಸ್ಥಿತರಿದ್ದರು.

ಪ್ರಬಂಧ ಸ್ಪರ್ಧೆ ವಿಜೇತರಿಗೆ ನಗದು ಬಹುಮಾನ

ಚಾಮರಾಜನಗರ: ಜಿಲ್ಲಾಡಳಿತ ಹಾಗೂ ವಾರ್ತಾ ಇಲಾಖೆ ವತಿಯಿಂದ ರಾಷ್ಟ್ರಪಿತ ಮಹಾತ್ಮ ಗಾಂಧೀಜಿಯವರ 155ನೇ ಜಯಂತಿ ಚಾಮರಾಜನಗರದ ಗಾಂಧಿ ಭವನದಲ್ಲಿ ಅರ್ಥಪೂರ್ಣವಾಗಿ ಆಚರಿಸಲಾಯಿತು.

ಶಾಸಕರಾದ ಸಿ.ಪುಟ್ಟರಂಗಶೆಟ್ಟಿ ಅವರು ಗಾಂಧಿ ಪುತ್ಥಳಿಗೆ ಮಾಲಾರ್ಪಣೆ ಬಳಿಕ ವೇದಿಕೆ ಕಾರ್ಯಕ್ರಮದಲ್ಲಿ ಗಾಂಧೀಜಿ ಹಾಗೂ ಲಾಲ್ ಬಹೂದ್ದೂರ್ ಶಾಸ್ತ್ರಿ ಅವರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡಿದರು.

ಗಾಂಧಿ ಪ್ರಿಯ ಭಜನೆ,ಗಾಂಧಿ,ಸ್ವಾತಂತ್ರ್ಯ ಹೋರಾಟಗಾರರ ವೇಷ ಭೂಷಣ ಪ್ರದರ್ಶನ ನಡೆಯಿತು. ವಾರ್ತಾಇಲಾಖೆಯಿಂದ ನಡೆದ ಜಿಲ್ಲಾ ಮಟ್ಟದ ಬಾಪೂಜಿ ಪ್ರಬಂಧ ಸ್ಪರ್ಧೆ ವಿಜೇತರಿಗೆ ನಗದು ಬಹುಮಾನ, ಪ್ರಮಾಣ ಪತ್ರಗಳನ್ನು ವಿತರಿಸಲಾಯಿತು.

ಕಾಡಾ ಅಧ್ಯಕ್ಷ ಪಿ.ಮರಿಸ್ವಾಮಿ,ಚೂಡಾ ಅಧ್ಯಕ್ಷ ಮಹಮದ್ ಅಸ್ಗರ್ ಮುನ್ನ, ನಗರಸಭೆ ಅಧ್ಯಕ್ಷ ಸುರೇಶ್, ಗ್ರಾಪಂ ಅಧ್ಯಕ್ಷ ಮಹದೇವಮ್ಮ, ಜಿಲ್ಲಾಧಿಕಾರಿ ಶಿಲ್ಪಾ ನಾಗ್, ಜಿಪಂ ಸಿಇಒ ಮೋನಾ ರೋಹಿತ್, ಎಸ್ಪಿ ಡಾ.ಬಿ.ಟಿ.ಕವಿತ, ಎಡಿಸಿ ಗೀತಾಹುಡೇದ, ತಹಶೀಲ್ದಾರ್ ಗಿರಿಜ,ವಾರ್ತಾ ಇಲಾಖೆ ಹಿರಿಯ ಸಹಾಯಕ ನಿರ್ದೇಶಕ ಎ.ರಮೇಶ್ ಉಪಸ್ಥಿತರಿದ್ದರು. ಕಾರ್ಯಕ್ರಮಕ್ಕೂ ಮೊದಲು ವೈದ್ಯಕೀಯ ವಿಜ್ಞಾನ ಸಂಸ್ಥೆಯ ಆಸ್ಪತ್ರೆ ಮುಂಭಾಗದಲ್ಲಿ ಶ್ರಮದಾನ ನಡೆಯಿತು.

ಸತ್ಯವೇ ದೇವರು ಎಂದು ನಂಬಿದ ಗಾಂಧೀಜಿ

ಸರಗೂರು : ಸಮಾಜದ ಶ್ರೇಷ್ಠತೆಗೆ ಹೆಚ್ಚು ಒತ್ತು ನೀಡಿದವರು ಗಾಂಧೀಜಿ ಹಾಗೂ ಲಾಲ್ ಬಹದ್ದೂರ್ ಶಾಸ್ತ್ರಿ ಎಂದು ರೋಟರಿ ಕ್ಲಬ್‌ನ ಸದಸ್ಯರಾದ ಸಿಂಧು ಅರಸ್ ಹೇಳಿದರು. ಪಟ್ಟಣದ ವಿವೇಕಾ ನಂದ ಸ್ಮಾರಕ ಆಸ್ಪತ್ರೆ ಆವರಣದಲ್ಲಿ ಗಾಂಧೀಜಿ ಜಯಂತಿ ಕಾರ್ಯಕ್ರಮದಲ್ಲಿ ಮಾತನಾಡಿದರು. ಸತ್ಯವೇ ದೇವರು ಎಂದು ನಂಬಿದ ಗಾಂಧೀಜಿ ನಮ್ಮಲಿ ನಾವು ಬದಲಾವಣೆ ಕಂಡುಕೊಳ್ಳಬೇಕು ಎಂದು ತಿಳಿಸಿದರು. ವಿವೇಕಾನಂದ ಸ್ಮಾರಕ ಆಸ್ಪತ್ರೆಯ ಹಿರಿಯ ವೈದ್ಯಾಧಿಕಾರಿ ಡಾ. ಪ್ರಶಾಂತ್ ಬಿಂಜಲ್, ಭಾರತದ ಸ್ವಾತಂತ್ರ ಸಂಗ್ರಾಮದ ಬಗ್ಗೆ ಮಾತನಾಡಿ ದರು. ಕಸ ಸಂಗ್ರಹಿಸುವ ಪೌರಕಾರ್ಮಿ ಕರಾದ ಹರೀಶ್ ಕುಮಾರ್, ಅಕ್ಷಯ್‌ಕುಮಾರ್, ನಂದೀಶ್ ಮತ್ತು ಚಂದನ್ ರವರಿಗೆ ಆಸ್ಪತ್ರೆಯ ಆಡಳಿತ ಮಂಡಳಿ ಯಿಂದ ಸನ್ಮಾನಿಸಲಾಯಿತು.

ದೇಶಕ್ಕೆ ಗಾಂಧೀಜಿ ಕೊಡುಗೆ ಅಪಾರ: ಸಚಿವ

ಮಂಡ್ಯ: ಭಾರತ ದೇಶದ ಸ್ವಾತಂತ್ರ್ಯ ಹೋರಾಟದಲ್ಲಿ ಮಹಾತ್ಮ ಗಾಂಧೀಜಿಯವರ ಸಾಧನೆ ಹಾಗೂ ಕೊಡುಗೆ ಅಪಾರ ಎಂದು ಕೃಷಿ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಎನ್. ಚಲುವರಾಯಸ್ವಾಮಿ ಬಣ್ಣಿಸಿದರು.

ಬುಧವಾರ ನಗರದ ಜಿಲ್ಲಾಧಿಕಾರಿ ಕಚೇರಿ ಮುಂಭಾಗವಿರುವ ಕಾವೇರಿ ಉದ್ಯಾನವನದಲ್ಲಿ ರಾಷ್ಟ್ರಪಿತ ಮಹಾತ್ಮ ಗಾಂಧೀಜಿ ಅವರ 155ನೇ ಜನ್ಮ ದಿನಾಚರಣೆ ಹಾಗೂ ಮಾಜಿ ಪ್ರಧಾನಿ ದಿ.ಲಾಲ್ ಬಹದ್ದೂರ್ ಶಾಸ್ತ್ರಿ ಅವರ 120ನೇ ಜನ್ಮ ದಿನಾಚರಣೆಯನ್ನು ಉದ್ಘಾಟಿಸಿ, ಮಾತನಾಡಿದರು. ಈ ಎರಡು ಜಯಂತಿ ಗಳು ಕೂಡ ತುಂಬಾ ಮಹತ್ವವಾದದ್ದು. ಇವರಿಬ್ಬರ ಜೀವನದ ಆದರ್ಶಗಳು ಭಾರತ ದೇಶದ ನಾಗರಿ ಕರಿಗೆ ಮಾದರಿ. ಶಾಸ್ತ್ರಿ ಸ್ವತಂತ್ರ ಹೋರಾಟಗಾರರಾಗಿ, ಅಂದಿನ ಪ್ರಧಾನಿಯಾಗಿ ಕೃಷಿ ಯೋಜನೆಗಳನ್ನು ಲೋಕ ಕಲ್ಯಾಣಕ್ಕಾಗಿ ತಂದವರು ಎಂದು ಶ್ಲಾಘಿಸಿದರು. ಮಹಾತ್ಮ ಗಾಂಧೀಜಿಯವರು ಯಾವುದೇ ಆಸೆ, ಆಮಿಷಗಳಿಗೆ ಒಳಪಡದೆ ಅಹಿಂಸಾತ್ಮಕವಾಗಿ ಅನೇಕ ಹೋರಾಟವನ್ನು ಪ್ರಾರಂಭ ಮಾಡಿದವರು. ಹೋರಾಟ ಮಾಡುವ ಸಂದರ್ಭದಲ್ಲಿ ಬಂದಂತಹ ಅನೇಕ ಸಮಸ್ಯೆಗಳನ್ನು ಎದುರಿಸಿ ಇಡೀ ದೇಶದ ಜನರನ್ನು ಒಗ್ಗೂಡಿಸಿ ಸ್ವಾತಂತ್ರ್ಯ ಹೋರಾಟದಲ್ಲಿ ಪಾಲ್ಗೊಳುವಂತೆ ಮಾಡಿದರು ಎಂದರು.

ಸ್ಪೃಶ್ಯತೆಯನ್ನು ಹೋಗಲಾಡಿಸಲು ದಲಿತರನ್ನು ತಮ್ಮ ಜೊತೆಯಲ್ಲಿ ದೇವಾಲಯಕ್ಕೆ ಕರೆದುಕೊಂಡು ಹೋಗುತ್ತಿದ್ದರು. ಈ ಮೂಲಕ ಸಮಾಜದಲ್ಲಿ ಸಮಾನತೆ ಮೂಡಿಸಲು ಶ್ರಮಿಸಿದರು. ಲಾಲ್ ಬಹದ್ದೂರ್ ಶಾಸ್ತ್ರಿ 'ಜೈ ಜವಾನ್, ಜೈ ಕಿಸಾನ್' ಘೋಷಣೆಯ ಮೂಲಕ ಹಸಿರು ಕ್ರಾಂತಿಗೆ ಪ್ರೇರಣೆ ನೀಡಿದವರು ಎಂದು ಹೇಳಿದರು.

ಹಿಂದೂ ಧರ್ಮ ಗುರು ಹೆಚ್.ಎನ್ ಪದ್ಮನಾಭ್, ಕ್ರಿಶ್ಚಿಯನ್ ಧರ್ಮ ಗುರು ಜಯಂತ್ ಪ್ರಸಾದ್ ಇಸ್ಲಾಂ ಧರ್ಮ ಗುರು ತನ್ವೀರ್, ಜೈನ್ ಧರ್ಮಗುರು ಶಾಂತಿ ಪ್ರಸಾದ್ ಜೈನ್ ಸರ್ವಧರ್ಮ ಪ್ರಾರ್ಥನೆ ನಡೆಸಿಕೊಟ್ಟರು. ಗಾಂಧೀಜಿ ಪುತ್ಥಳಿಗೆ ಮಾಲಾರ್ಪಣೆ ಮಾಡಲಾಯಿತು. ಶಾಸಕ ಪಿ.ರವಿಕುಮಾರ್ ಗಣಿಗ, ಮುಡಾ ಅಧ್ಯಕ್ಷ ನಯೀಮ್, ಮಾಜಿ ಶಾಸಕ ಎಂ.ಶ್ರೀನಿವಾಸ್, ಎಸ್ಪಿ ಮಲ್ಲಿಕಾರ್ಜುನ ಬಾಲದಂಡಿ, ಜಿಪಂ ಸಿಇಒ ಶೇಖ್ ತನ್ವೀರ್ ಆಸಿಫ್, ಅಪರ ಜಿಲ್ಲಾಧಿಕಾರಿ ಡಾ.ಹೆಚ್.ಎಲ್ .ನಾಗರಾಜು, ವಾರ್ತಾಧಿಕಾರಿ ಎಚ್.ಎಸ್.ನಿರ್ಮಲಾ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ನಂದೀಶ್, ನೆಹರು ಯುವ ಕೇಂದ್ರದ ಹರ್ಷ, ಅನನ್ಯ ಹಾರ್ಟ್ಸ್‌ನ ಅನುಪಮಾ ಉಪಸ್ಥಿತರಿದ್ದರು.

ದೇಶದ ಅಭಿವೃದ್ಧಿ ಪಥಕ್ಕೆ ಗಾಂಧೀಜಿ ಕೊಡುಗೆ

ಕೆ.ಆರ್.ನಗರ: ಭಾರತವಲ್ಲದೆ ವಿದೇಶದಲ್ಲಿಯೂ ಸ್ವಾತಂತ್ರ್ಯ, ಸಮಾನತೆಗಾಗಿ ಹೋರಾಟ ಮಾಡಿದ ಪುಣ್ಯ ಪುರುಷ ಮಹಾತ್ಮ ಗಾಂಧೀಜಿ ಮತ್ತು ದೇಶದ ಅಭಿವೃದ್ಧಿಗಾಗಿ ದುಡಿದ ಮಾಜಿ ಪ್ರಧಾನಿ ಶಾಸ್ತ್ರಿ ಎಂದು ಶಾಸಕ ಡಿ ರವಿಶಂಕರ ತಿಳಿಸಿದರು. ಪಟ್ಟಣದ ಮಿನಿ ಆಡಳಿತ ಸೌಧದ ಮುಂಭಾಗ ತಾಲೂಕ ಆಡಳಿತ, ಪುರಸಭೆ ವತಿಯಿಂದ ಆಯೋಜಿಸಿದ್ದ ಗಾಂಧೀಜಿ ಮತ್ತು ಶಾಸ್ತ್ರಿ ಅವರ ಜಯಂತಿ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿದರು.

ಪ್ರಪಂಚದಲ್ಲಿ ಭಾರತ ಸ್ಪರ್ಧಾ ದೇಶವಾಗಿ ಹೊರಹೊಮ್ಮಲು ಗಾಂಧೀಜಿ ದೂರ ದೃಷ್ಟಿ ಮತ್ತು ಚಿಂತನೆ ಕಾರಣ ಎಂದರು.

ವಿಧಾನಪರಿಷತ್ ಸದಸ್ಯ ಎಚ್. ವಿಶ್ವನಾಥ್ ಮಾತನಾಡಿ, ಈ ರಾಜ್ಯ ಮತ್ತು ಈ ದೇಶ ಅಭಿವೃದ್ಧಿಯ ಪಥದಲ್ಲಿ ಮುಂದುವರೆಯುತ್ತಿವೆ ಎಂದರೆ ಈ ಮಹಾನ್ ವ್ಯಕ್ತಿಗಳ ಪರಿಶ್ರಮ ಕಾರಣ. ಈ ಪುರುಷರ ಆದರ್ಶ ಮತ್ತು ತತ್ವಗಳನ್ನು ಮೈಗೂಡಿಸಿಕೊಳ್ಳಬೇಕು ಎಂದರು.

ತಹಸಿಲ್ದಾರ್ ಸುರೇಂದ್ರ ಮೂರ್ತಿ ಮಾತನಾಡಿದರು. ವೇದಿಕೆಯಲ್ಲಿ ಕ್ಷೇತ್ರ ಶಿಕ್ಷಣಾಧಿಕಾರಿ ಕೃಷ್ಣಪ್ಪ, ಪುರಸಭಾ ಮುಖ್ಯಾಧಿಕಾರಿ ವೆಂಕಟೇಶ್, ಮಹಿಳಾ ಮತ್ತು ಮಕ್ಕಳ ಕಲ್ಯಾಣಾಧಿಕಾರಿ ಅಣ್ಣಯ್ಯ, ತಾಪಂ ಇಒ ಕುಲದೀಪ್, ಟಿಎಚ್ಒ ನಟರಾಜ್, ಎಇಇ ಸುಮಿತ್ರ, ಸಿಪಿಐ ಶಿವಪ್ರಸಾದ್, ಪಶುವೈದ್ಯ ಸಹಾಯಕ ನಿರ್ದೇಶಕ ಮಂಜುನಾಥ್, ವಲಯ ಅಧಿಕಾರಿ ಹರಿಪ್ರಸಾದ್ ಹಾಜರಿದ್ದರು.

ಗಾಂಧಿ ಭೇಟಿಯ ನೆನಪಿಗಾಗಿ ಪಾದಯಾತ್ರೆ

ನಂಜನಗೂಡು 1927ರಲ್ಲಿ ಮಹಾತ್ಮ ಗಾಂಧೀಜಿ ಅವರು ನಮ್ಮ ತಾಲ್ಲೂಕಿನ ಬದನವಾಳು ಹಾಗೂ ತಗಡೂರು ಗ್ರಾಮಗಳಿಗೆ ಭೇಟಿ ನೀಡಿ, ಖಾದಿ ಗ್ರಾಮೋದ್ಯೋಗ ಕೇಂದ್ರ ಆರಂಭಿಸಿ ಇತಿಹಾಸ ನಿರ್ಮಿಸಿದ್ದಾರೆ ಎಂದು ಶಾಸಕ ದರ್ಶನ್ ಧ್ರುವನಾರಾಯಣ ಹೇಳಿದರು.

ಬದನವಾಳುವಿನಲ್ಲಿ ಆಯೋಜಿಸಿದ್ದ ಗಾಂಧಿ ಹಾಗೂ ಶಾಸ್ತ್ರಿ ಜಯಂತಿ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದರು.

ಗಾಂಧೀಜಿಯವರು ಭೇಟಿ ನೀಡಿದ ಕುರುಹುಗಳು ಇನ್ನುಗ್ರಾಮೋದ್ಯೋಗ ಕೇಂದ್ರದಲ್ಲಿ ಜೀವಾಂತವಾಗಿ ಉಳಿದಿವೆ. ಅಂದಿನಿಂದ ಇಂದಿನವರೆಗೂ ಖಾದಿ ಗ್ರಾಮೋದ್ಯೋಗ ಕೇಂದ್ರದಲ್ಲಿ ಮಹಿಳೆಯರು ಚರಕಗಳ ಮೂಲಕ ಖಾದಿ ಬಟ್ಟೆ ತಯಾರಿಸುತ್ತಿದ್ದಾರೆ. ಈ ಕೇಂದ್ರ ಅಭಿವೃದ್ಧಿ ಪಡಿಸುವ ಸಲುವಾಗಿ ನಮ್ಮ ತಂದೆ ಧ್ರುವನಾರಾಯಣ ಹಗಲಿರುಳು ಶ್ರಮಿಸಿದ್ದರು ಎಂದರು.

ಮುಖ್ಯಮಂತ್ರಿ ಸಿದ್ದರಾಮಯ್ಯನವರು ಕೂಡ ಈ ಕೇಂದ್ರವನ್ನುಅಭಿವೃದ್ಧಿಪಡಿಸಲು ಅನುದಾನ ಘೋಷಣೆ ಮಾಡಿದ್ದಾರೆ.

2027ಕ್ಕೆ ಖಾದಿ ಗ್ರಾಮೋದ್ಯೋಗ ಕೇಂದ್ರಕ್ಕೆ 100 ವರ್ಷ ತುಂಬಲಿವೆ. ಅಂದು ರಾಹುಲ್ ಗಾಂಧಿ ಅವರನ್ನು ಕರೆಸಿ ಅದ್ದೂರಿಯಾಗಿ ಕಾರ್ಯಕ್ರಮ ಮಾಡೋಣ ಎಂದು ಹೇಳಿದರು. ನಗರದ ನಾಗಮ್ಮ ಶಾಲೆಯ ಆವರಣದಿಂದ ಬದನವಾಳು ಕೇಂದ್ರದ ವರೆಗೆ ಶಾಸಕರ ನೇತೃತ್ವದಲ್ಲಿ ನೂರಾರು ಕಾರ್ಯಕರ್ತರು ಪಾದಯಾತ್ರೆ ನಡೆಸಿದರು. ಮುಖಂಡರಾದ ಕಳಲೆಕೇಶವ ಮೂರ್ತಿ, ನಗರಸಭೆ ಅಧ್ಯಕ್ಷ ಶ್ರೀಕಂಠ ಸ್ವಾಮಿ, ಉಪಾಧ್ಯಕ್ಷೆ ರೇಹನಭಾನು, ಎಚ್.ಪವಿತ್ರ,ದೊರೆಸ್ವಾಮಿ, ಶೋಭ, ತಹಶೀಲ್ದಾರ್ ನಗರಸಭೆ ಆಯುಕ್ತ ನಂಜುಂಡಸ್ವಾಮಿ, ಡಿ.ವೈ.ಎಸ್.ಪಿ ರಘು, ಬಿಇಒ ಮಹೇಶ್, ಕುರಹಟ್ಟಿಮಹೇಶ್, ಸೋಮೇಶ್ ಇದ್ದರು.

ಗಾಂಧಿ ವಿಚಾರಧಾರೆ ವಿಶ್ವಕ್ಕೆ ಮಾದರಿ

ಪಿರಿಯಾಪಟ್ಟಣ: ಸತ್ಯ ಮತ್ತು ಅಹಿಂಸೆಯನ್ನು ಬದು ಕಿನಲ್ಲಿ ಅಳವಡಿಸಿಕೊಂಡು ಹೋರಾಟ ನಡೆಸಿದ ಮಹಾತ್ಮ ಗಾಂಧೀಜಿಯವರ ತತ್ವ ಸಿದ್ಧಾಂತಗಳು ಇಂದಿನ ಕಾಲಕ್ಕೆ ಅಗತ್ಯವಾಗಿದೆ ಎಂದು ತಹಶೀಲ್ದಾರ ನಿಸರ್ಗ ಪ್ರಿಯ ತಿಳಿಸಿದರು. ರಾಷ್ಟ್ರೀಯ ಹಬ್ಬಗಳ ಆಚರಣೆ ಸಮಿತಿ ವತಿಯಿಂದ ತಾಲೂಕು ಕಚೇರಿ ಯಲ್ಲಿ ಹಮ್ಮಿಕೊಂಡಿದ್ದ ಮಹಾತ್ಮ ಗಾಂಧೀಜಿ ಮತ್ತು ಲಾಲ್ ಬಹದ್ದೂರ್ ಶಾಸ್ತ್ರಿ ಜಯಂತಿ ಕಾರ್ಯಕ್ರ ಮದಲ್ಲಿ ಪುಷ್ಪಾರ್ಚನೆ ನೆರವೇರಿಸಿ ಮಾತನಾಡಿದರು.

ಗಾಂಧೀಜಿಯ ವಿಚಾರಗಳು ಕೇವಲ ಭಾರತಕ್ಕೆ ಮಾತ್ರವಲ್ಲದೆ ಇಡೀ ವಿಶ್ವಕ್ಕೆ ಅವಶ್ಯಕವಾಗಿವೆ. ಸತ್ಯ ಆಹಿಂಸೆಯ ಮಾರ್ಗವನ್ನು ಸ್ವಾತಂತ್ರ ಚಳವಳಿಗೆ ಅನುಸರಿಸಿದರು. ಅಹಿಂಸ ಸಿದ್ಧಾಂತಕ್ಕಾಗಿ ಅಂತರಾಷ್ಟ್ರೀಯ ಮಟ್ಟದಲ್ಲಿ ಗಾಂಧಿಯ ಜನ್ಮದಿನವನ್ನು ಅಹಿಂಸಾ ದಿನವಾಗಿ ಆಚರಿಸಲಾಗುತ್ತಿದೆ. ತನ್ನ ಸಿದ್ಧಾಂತಗಳ ಮೂಲಕ ದೇಶ ವಿದೇಶಗಳಲ್ಲಿ ಚಿರಪರಿಚಿತರಾದರು.

ಅವರ ಹೋರಾಟಗಳಿಗೆ ಬೆಲೆ ಕಟ್ಟಲಾಗದು ಅದು ಜೀವನದ ಉಸಿರಾಗಿದೆ ಎಂದರು. ಶಾಸ್ತ್ರೀ ಕೂಡ ದೇಶ ಕಂಡ ಅಪ್ರತಿಮ ಆಡಳಿತಗಾರ, ಪ್ರಧಾನ ಮಂತ್ರಿಯಾಗಿ ಸೇವೆ ಸಲ್ಲಿಸಿದ ನೇತಾರ, ಬಡತನದಲ್ಲಿ ಜನಿಸಿದ ಇವರು ಬಡವರ ನೋವುಗಳನ್ನು ಅರಿತಿದ್ದರು.

ರೈಲ್ವೆ, ಸಾರಿಗೆ, ಸಂವಹನ, ವಾಣಿಜ್ಯ ಉದ್ಯಮ ಖಾತೆ ಸಚಿವರು ಗಳಾಗಿ ದೇಶದಲ್ಲಿದ್ದ ಆಹಾರದ ಕೊರತೆಯನ್ನು ನೀಗಿಸಿ ದೇಶದ ರಕ್ಷಣೆ ಮಾಡುವಲ್ಲಿ ಪ್ರಮುಖ ಪಾತ್ರ ವಹಿಸಿದ್ದರು ಎಂದು ಸ್ಮರಿಸಿದರು. ಬಿಇಒ ರವಿ ಪ್ರಸನ್ನ, ಭೂ ಮಾಪನ ಇಲಾಖೆ ಮುನಿಯಪ್ಪ , ಆಹಾರ ಇಲಾಖೆ ಶಿರಸ್ತೇದಾರ್ ಸಣ್ಣಸ್ವಾಮಿ, ಪಶು ಪಾಲನ ಇಲಾಖೆ ಸಹಾಯಕ ನಿರ್ದೇಶಕ ಸೋಮಯ್ಯ, ತಾಪಂ ವ್ಯವಸ್ಥಾಪಕ ರಂಗನಾಥ್, ತೋಟಗಾರಿಕೆ ಇಲಾಖೆ ಪ್ರಸಾದ್, ಉಪ ತಹಸೀಲ್ದಾರ್ ಹಾಜರಿದ್ದರು.

ಸಮಾಚಾರ ಸಣ್ಣದಲ್ಲ

ಬಸವರಾಜ ಭಜಂತ್ರಿಗೆ ಸಂಗೀತ ವಿದ್ವಾನ್ ಪ್ರಶಸ್ತಿ

ಮೈಸೂರು: ರಾಜ್ಯ ಸಂಗೀತ ವಿದ್ವಾನ್ ಪ್ರಶಸ್ತಿ –2024 ಪ್ರಕಟವಾಗಿದ್ದು, ಖ್ಯಾತ ಶಹನಾಯ್ ವಾದಕ ಪಂಡಿತ್ ಬಸವರಾಜ ಭಜಂತ್ರಿ ಹೆಡಿಗ್ಗೊಂಡ ಅವರು ಪ್ರತಿಷ್ಠಿತ ಪ್ರಶಸ್ತಿಗೆ ಭಾಜನರಾಗಿದ್ದಾರೆ. ಕನ್ನಡ ಮತ್ತು ಸಂಸ್ಕೃತಿ ಇಲಾಖೆಯು ಬಸವರಾಜ ಭಜಂತ್ರಿ ಅವರನ್ನು ರಾಜ್ಯ ಸಂಗೀತ ವಿದ್ವಾನ್ ಪ್ರಶಸ್ತಿಗೆ ಆಯ್ಕೆ ಮಾಡಿದ್ದು, ಅ.3ರಂದು ಮೈಸೂರಿನ ಅರಮನೆ ಮುಂಭಾಗ ನಡೆ ಯುವ ಸಾಂಸ್ಕೃತಿಕ ಕಾರ್ಯಕ್ರಮದಲ್ಲಿ ದಸರಾ ಉದ್ಘಾಟಕರಾದ ಸಾಹಿತಿ ಹಂಪಾ ನಾಗರಾಜಯ್ಯ ಹಾಗೂ ಸಿಎಂ ಸಿದ್ದರಾಮಯ್ಯ ಅವರು ಪ್ರಶಸ್ತಿ ಪ್ರದಾನ ಮಾಡಲಿದ್ದಾರೆ. 'ಶಹನಾಯಿ ರಾಜ' ಎಂದು ಗುರುತಿಸಿಕೊಂಡಿರುವ ಭಜಂತ್ರಿಯವರು ಹಾವೇರಿ ಜಿಲ್ಲೆ ಬ್ಯಾಡಗಿ ತಾಲೂಕು ಹೆಡಿಗ್ಗೊಂಡ ಗ್ರಾಮದ ತಿರುಕಪ್ಪ ಹಾಗು ಸಾವಿತ್ರಮ್ಮ ದಂಪತಿಯ ಪುತ್ರರಾಗಿದ್ದಾರೆ.

ಹಂದಿಗೆ ಬೈಕ್ ಡಿಕ್ಕಿ : ಮಹಿಳೆ ಸಾವು

ಹಲಗೂರು: ಕಾಡು ಹಂದಿ ಅಡ್ಡಬಂದ ಪರಿಣಾಮ ಚಲಿಸುತ್ತಿದ್ದ ಬೈಕ್ ಬಿದ್ದು ಮಹಿಳೆಯೊಬ್ಬರು ಸಾವನ್ನಪ್ಪಿದ ಘಟನೆ ಮಳವಳ್ಳಿ ತಾಲೂಕಿನ ಹಲಗೂರು ಸಮೀಪದ ನಂದಿಪುರ ಗ್ರಾಮದಲ್ಲಿ ನಡೆದಿದೆ. ಗ್ರಾಮದ ಮಹಿಳೆ ಭವ್ಯ (26) ಮೃತ ಮಹಿಳೆ. ಸಂಬಂಧಿಕರ ಮನೆಯಿಂದ ತಮ್ಮ ಸ್ವಗ್ರಾಮ ನಂದೀಪುರಕ್ಕೆ ಹೋಗುವ ವೇಳೆ ಬೈಕ್‌ಗೆ ಕಾಡು ಹಂದಿ ಅಡ್ಡ ಬಂದು ಬೈಕ್‌ನಲ್ಲಿದ್ದ ಮೂವರು ಕೆಳಗೆ ಬಿದ್ದು ದುರ್ಘಟನೆ ಸಂಭವಿಸಿದೆ. ಪತಿ ಸಿದ್ದರಾಜು ಹಾಗೂ ಮಗು ಲಕ್ಷ್ಮಿಗೌಡಗೆ ಸಣ್ಣಪುಟ್ಟ ಗಾಯಗಳಾಗಿದ್ದು, ಮೃತ ಮಹಿಳೆ ಭವ್ಯಗೆ ತಲೆಗೆ ತೀವ್ರ ಪೆಟ್ಟಾಗಿ ಸಾವನ್ನಪ್ಪಿದ್ದಾರೆ. ಹಲಗೂರು ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಇಂದಿನಿಂದ ಕಾವೇರಿಗೆ ಸಾಂಕೇತಿಕ ಆರತಿ

ಶ್ರೀರಂಗಪಟ್ಟಣ: ಶ್ರೀರಂಗನಾಥ ದೇಗುಲದ ಬಳಿಯ ಸ್ನಾನಘಟ್ಟದಲ್ಲಿ ಗಂಗಾರತಿ ಮಾದರಿಯಲ್ಲಿ ಕಾವೇರಿ ಆರತಿಗೆ ಸಿದ್ದತೆ ಮಾಡಿಕೊಳ್ಳಲಾಗಿದ್ದು, ಅ.3ರಿಂದ ಅ.8ರವರೆಗೆ ಪ್ರಾಯೋಗಿಕವಾಗಿ 5 ದಿನ ಕಾವೇರಿ ಆರತಿ ಪೂಜೆ ನಡೆಯಲಿದೆ. ಪ್ರಸಿದ್ಧ ಅರ್ಚಕ ಡಾ. ಭಾನುಪ್ರಕಾಶ್ ಶರ್ಮಾ ನೇತೃತ್ವದಲ್ಲಿ ಕಾವೇರಿ ಆರತಿ ಪೂಜಾ ಕೈಂಕರ್ಯ ನಡೆಯಲಿದ್ದು, ಕಾವೇರಿ ಆರತಿಗಾಗಿ ಪಟ್ಟಣದ ಸ್ನಾನಘಟ್ಟ ಬಳಿ ಭರದ ಸಿದ್ದತೆ ಕಾರ್ಯ ನಡೆಯುತ್ತಿದೆ. ದೇಗುಲಕ್ಕೆ ಸುಣ್ಣಬಣ್ಣ ಕಾರ್ಯ ನಡೆಸಲಾಗುತ್ತಿದ್ದು, ರಾತ್ರಿ ವೇಳೆ ಆರತಿ ಪೂಜಾ ಕಾರ್ಯಕ್ಕಾಗಿ ಸ್ಥಳದಲ್ಲಿ ಬೆಳಕಿಗಾಗಿ ವಿದ್ಯುತ್ ದೀಪದ ವ್ಯವಸ್ಥೆ ಮಾಡಲಾಗಿದೆ. ಅ.3 ಸಂಜೆ 6.15ರಿಂದ ರಾತ್ರಿ 7ಗಂಟೆವರೆಗೂ ಆರತಿಗೆ ಸಮಯ ನಿಗದಿಯಾಗಿದ್ದು, ಪ್ರಾಯೋಗಿಕ ಕಾವೇರಿ ಆರತಿ ಯಶಸ್ಸು ಕಂಡರೆ ಗಂಗಾರತಿ ರೀತಿ ಪ್ರತಿದಿನ ಮುಂದುವರೆಕೆಗೆ ಚಿಂತನೆ ನಡೆಸಲಾಗುತ್ತಿದೆ. ಶಾಸಕ ರಮೇಶ್ ಬಾಬು ಬಂಡಿಸಿದ್ದೇಗೌಡ ನೇತೃತ್ವದಲ್ಲಿ ಕಾರ್ಯಕ್ರಮ ನಡೆಯಲಿದೆ.

ಮಾರಮ್ಮ ದೇವಸ್ಥಾನದಲ್ಲಿ ನವರಾತ್ರಿ ಉತ್ಸವ

ಹುಣಸೂರು: ನಗರದ ಗ್ರಾಮ ದೇವತೆ ಮುತ್ತು ಮಾರಮ್ಮ ದೇವಸ್ಥಾನದಲ್ಲಿ ಅ.3ರಿಂದ ಅ. 11 ರವರೆಗೆ ನವರಾತ್ರಿ ಉತ್ಸವದ ಪೂಜಾ ಕಾರ್ಯಕ್ರಮ ಏರ್ಪಡಿಸಲಾಗಿದೆ .ಎಂದು ದೇವಸ್ಥಾನದ ಆಡಳಿತ ಮಂಡಳಿಯ ಅಧ್ಯಕ್ಷ ಎಚ್ ವೈ ಮಹಾದೇವ್ ತಿಳಿಸಿದರು. ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ನವರಾತ್ರಿ ಉತ್ಸವದ ಅಂಗವಾಗಿ ಪ್ರತಿದಿನ ಸಂಜೆ 6ರಿಂದ ದೇವಿಗೆ ಸರ್ವ ಅಲಂಕಾರ, ಮಹಾ ಪೂಜೆ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮ ನಡೆಯಲಿವೆ. ಅ.3ರಂದು ಕಸ್ತೂರಿ ತಿಲಕ ಭಜನಾ ಮಂಡಳಿಯಿಂದ ಭಕ್ತಿ ಗೀತೆ. ಅ. 4 ರಂದು ಚಿಕ್ಕ ವೆಂಕಟೇಗೌಡರ ತಂಡದ ಭಕ್ತಿಗೀತೆ. ಅ.5 ರಂದು ಕೌಸ್ತುಭ ಭಜನಾ ಮಂಡಳಿಯ ಭಕ್ತಿ ಗೀತೆ, ಅ. 6 ರಂದು ರವಿ ಮೆಲೋಡಿಸ್‌ನಿಂದ ಭಕ್ತಿಗೀತೆ, ಅ.12ರಂದು ಅಮ್ಮನವರ ಉತ್ಸವ ಮ.12.30ರಿಂದ ರಾಜ ಬೀದಿಗಳಲ್ಲಿ ಮೆರವಣಿಗೆ ಹೊರಟು ಬನ್ನಿ ಮರಕ್ಕೆ ತೆರಳಿ ಬನ್ನಿ ಮುಡಿಯಲಿದೆ ಎಂದರು. ಸುದ್ದಿಗೋಷ್ಠಿಯಲ್ಲಿ ಎಚ್ ಎಸ್ ಶಿವಯ್ಯ, ಉಪಾಧ್ಯಕ್ಷ ಈಶ್ವರಯ್ಯ, ಅಶೋಕ್ ರಾಜಲಿಂಗಯ್ಯ, ಪುರುಷೋತ್ತಮ್ ಗುಂಡುಮಣಿ ಇದ್ದರು.

ವಿ+ ಸೋಮವಾರ

{ ಯದುವೀರ ಒಡೆಯರ್ } ಸಂಸದರು

ಸಿಎಂ ಪತ್ನಿಯನ್ನು ರಾಜಕೀಯಕ್ಕೆ ತಂದಿಲ್ಲ. ಮುಖ್ಯಮಂತ್ರಿಯಾಗಲೀ, ಮಹಿಳೆಯಾಗಲೀ, ಯಾರೇ ಆಗಲಿ, ಆರೋಪ ಬಂದಾಗ ಎದುರಿಸಬೇಕು. ಮುಡಾದ ಮೂಲ ಉದ್ದೇಶ ಬಡವರಿಗೆ ಸೈಟ್ ಸಿಗಬೇಕು ಎಂಬುದು. ಆದರೆ, ಅದು ಒಂದು ವರ್ಗಕ್ಕೆ ಲಾಭ ಆಗುತ್ತಿದೆ. ಹಾಗಾಗಿ ಸಮಗ್ರ ತನಿಖೆ ಆಗಬೇಕು.

ದಸರಾ: ಅಂತಿಮ ಸಿದ್ಧತೆ ಡಿಸಿ ಪರಿಶೀಲನೆ

ಮೈಸೂರು: ದಸರಾ ಮಹೋತ್ಸವ ಚಾಲನೆ ಮುನ್ನ ದಿನ ಬುಧವಾರ ಕೊನೆಯ ಹಂತದ ಸಿದ್ಧತೆಗಳನ್ನು ನಡೆಸಲಾಯಿತು. ಚಾಮುಂಡಿಬೆಟ್ಟದಲ್ಲಿ ಚಾಮುಂಡಿದೇವಿಯ ಉತ್ಸವ ಮೂರ್ತಿಯನ್ನು ಶುದ್ಧಗೊಳಿಸಿ, ಕೆಂಪುಬಣ್ಣದ ಸೀರೆಯಿಂದ ಸಿಂಗರಿಸಲಾಯಿತು.

ಈ ನಡುವೆ ಜಿಲ್ಲಾಧಿಕಾರಿ ಲಕ್ಷ್ಮೀಕಾಂತ ರೆಡ್ಡಿ ಅವರು ಚಾಮುಂಡಿಬೆಟ್ಟಕ್ಕೆ ಭೇಟಿ ನೀಡಿ ಸಿದ್ಧತೆಗಳನ್ನು ಪರಿಶೀಲಿಸಿದರು. ದಸರಾ ಉದ್ಘಾಟನಾ ಕಾರ್ಯಕ್ರಮಕ್ಕೆ ಸಾರ್ವಜನಿಕರು ಭಾಗವಹಿಸಲು ಅವಕಾಶವಿದ್ದು, ಆಸನ ವ್ಯವಸ್ಥೆ ಸೇರಿದಂತೆ ಇತರ ಮೂಲಸೌಕರ್ಯ ಕಲ್ಪಿಸಲಾಗಿದೆ.

10 ದಿನವೂ ವಿಶೇಷ ಅಲಂಕಾರ:

ಬೆಟ್ಟದ ಚಾಮುಂಡೇಶ್ವರಿ ದೇವಿಗೆ 10 ದಿನವೂ ವಿಶೇಷ ಅಲಂಕಾರ ಮಾಡಲಾಗುತ್ತದೆ. ಅ.3ರಂದು ಬ್ರಾಹ್ಮೀ, 4ರಂದು ಮಹೇಶ್ವರಿ, 5ರಂದು ಕೌಮಾರಿ, 6ರಂದು ವೈಷ್ಣವಿ, 7ರಂದು ವಾರಾಹಿ, 8ರಂದು ಇಂದ್ರಾಣಿ, 9ರಂದು ಸಿದ್ಧಿ ಧಾತ್ರಿ, 10ರಂದು ಸರಸ್ವತಿ, 11ರಂದು ಮಹಾಲಕ್ಷ್ಮಿ ಹಾಗೂ 12ರಂದು ಅಶ್ವಾರೋಹಣ ಅಲಂಕಾರ ಮಾಡಲಾಗುತ್ತದೆ. ಈ ಕುರಿತು ಮಾಹಿತಿ ನೀಡಿದ ದೇವಸ್ಥಾನದ ಪ್ರಧಾನ ಅರ್ಚಕ ಶಶಿಶೇಖರ ದೀಕ್ಷಿತ್, ಚಾಮುಂಡಿಬೆಟ್ಟ ಹಾಗೂ ಅರಮನೆ ನಡುವೆ ಅವಿನಾಭಾವ ಸಂಬಂಧವಿದ್ದು, ಎರಡೂ ಕಡೆಗಳಲ್ಲಿ ಒಂದೇ ರೀತಿಯ ಪೂಜೆ ನಡೆಯುತ್ತದೆ ಎಂದು ತಿಳಿಸಿದ್ದಾರೆ.

ಮಡಿಕೇರಿಯಲ್ಲಿ ಎರಡು ದಿನ ಕಾಫಿ ಘಮಲು

ಮಡಿಕೇರಿ: ಮಡಿಕೇರಿ ದಸರಾದಲ್ಲಿ ಈ ವರ್ಷದಿಂದ 'ಕಾಫಿ ದಸರಾ' ಎಂಬ ವಿನೂತನ ಕಾರ್ಯಕ್ರಮ ಅ.6 ಮತ್ತು 7ರಂದು ಕಾಫಿ ದಸರಾದಲ್ಲಿ ಕಾಫಿ ಮತ್ತು ಇತರ ಕೃಷಿಗೆ ಸಂಬಂಧಿಸಿದಂತೆ ಅನೇಕ ಮಾಹಿತಿ ದೊರಕಲಿದೆ. ಜಿಲ್ಲೆಯ 7 ಮಂದಿ ಸಾಧಕರನ್ನೂ ಕಾಫಿ ದಸರಾ ವೇಳೆ ಸನ್ಮಾನಿಸಿ ಗೌರವಿಸಲಾಗುತ್ತಿದೆ ಎಂದು ಮಡಿಕೇರಿ ಶಾಸಕ ಡಾ ಮಂಥರ್ ಗೌಡ ತಿಳಿಸಿದ್ದಾರೆ.

ನಗರದಲ್ಲಿ ಕಾಫಿ ದಸರಾ ಸಭೆಯಲ್ಲಿ ಪಾಲ್ಗೊಂಡು ಮಾತನಾಡಿದ ಶಾಸಕರು, ಇದೇ ಮೊದಲ ಬಾರಿ ನಡೆಯುವ ಕಾಫಿ ದಸರಾಕ್ಕೆ ಕಾಫಿ ಮಂಡಳಿ, ಪ್ಲಾಂಟರ್ಸ್ ಅಸೋಸಿಯೇಷನ್ ಸೇರಿದಂತೆ ಕಾಫಿ ವಲಯದಿಂದ ಉತ್ತಮ ಸ್ಪಂದನ ದೊರಕಿದೆ. ಈಗಾಗಲೇ 32 ಮಳಿಗೆಗಳು ಭರ್ತಿಯಾಗಿದ್ದು, ಕಾಫಿ, ಹೈನುಗಾರಿಕೆ, ಬಿದಿರು, ತೋಟಗಾರಿಕಾ ಬೆಳೆಗಳು, ಯಂತ್ರೋಪಕರಣದ ಸಮಗ್ರ ಮಾಹಿತಿ ಈ ಮಳಿಗೆಗಳಲ್ಲಿ ದೊರಕಲಿದೆ, ತೋಟಗಾರಿಕೆ, ಕೃಷಿ, ಮೀನುಗಾರಿಕಾ, ಪಶುಪಾಲನಾ ಇಲಾಖೆ, ಚೆಟ್ಟಳ್ಳಿಯ ತೋಟಗಾರಿಕಾ ಸಂಶೋಧನಾ ಕೇಂದ್ರದ ಮಳಿಗೆಗಳು ಬೆಳಗ್ಗೆ 10 ಗಂಟೆಯಿಂದ ಸಂಜೆ 5 ಗಂಟೆಯವರೆಗೆ ತೆರೆದಿರುತ್ತವೆ. ಅಂದು ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ಕೊಡಗು ಜಿಲ್ಲೆಯ ಕೃಷಿ ಸಾಧಕರಿಗೆ ಸನ್ಮಾನಿಸಿ ಗೌರವಿಸಲಿದ್ದಾರೆ ಎಂದರು.



ಜಿಲ್ಲಾಧಿಕಾರಿ ವೆಂಕಟರಾಜಾ ಮಾತನಾಡಿ, ಕಾಫಿ ದಸರಾವನ್ನು ಯಶಸ್ವಿಗೊಳಿಸುವ ನಿಟ್ಟಿನಲ್ಲಿ ಇಲಾಖೆಗಳ ಅಧಿಕಾರಿ, ಸಿಬ್ಬಂದಿಗಳು ಅಗತ್ಯ ಸಹಕಾರ ನೀಡೇಕೆಂದು ಸೂಚಿಸಿದರು.

ಕಾಫಿ ದಸರಾ ಸಂಚಾಲಕ ಎಚ್.ಟಿ.ಅನಿಲ್ ಮಾತನಾಡಿ, ಸ್ಥಳಾವಕಾಶ ಲಭ್ಯವಿಲ್ಲದ ಕಾರಣ 32 ಮಳಿಗೆಗಳಿಗೆ ಮಾತ್ರ ಜಾಗ ನೀಡಲಾಗಿದೆ. ಸಾಕಷ್ಟು ಮಳಿಗೆಗಳಿಗೆ ಬೇಡಿಕೆ ಇದ್ದರೂ ಸ್ಥಳಾವಕಾಶ ಕಡಿಮೆ ಎಂದರು. ದಸರಾ ಸಮಿತಿ ಕಾರ್ಯಾಧ್ಯಕ್ಷ ಪ್ರಕಾಶ್ ಆಚಾರ್ಯ, ರಾಜೇಶ್ ಬಿವೈ, ಖಜಾಂಚಿ ಅರುಣ್ ಶೆಟ್ಟಿ ಕಾಫಿ ಮಂಡಳಿ ಉಪನಿರ್ದೇಶಕ ವಿವಿಧ ಇಲಾಖೆಯ ಅಧಿಕಾರಿಗಳು ಪಾಲ್ಗೊಂಡಿದ್ದರು.

ಬಾರದ ಯೋಜನೆ, ವಸತಿ ರಹಿತರ ಮುನಿಸು

ಗುಂಡ್ಲುಪೇಟೆ: ರಾಜ್ಯ ಸರಕಾರದಿಂದ ಗ್ರಾಮ ಪಂಚಾಯಿತಿಗಳಿಗೆ ಕೊಡಬೇಕಾದ ಮನೆಗಳನ್ನು ಕಳೆದ ಒಂದುವರೆ ವರ್ಷದಿಂದ ಕೊಟ್ಟಿಲ್ಲ. ಇದರಿಂದಾಗಿ ಗ್ರಾಮ ಪಂಚಾಯಿತಿ ಸದಸ್ಯರ ಹಾಗೂ ವಸತಿ ರಹಿತ ಗ್ರಾಮಸ್ಥರ ನಡುವೆ ವೈ ಮನಸಿಗೆ ಕಾರಣವಾಗಿದೆ.

ಕಳೆದ ಬಾರಿ ಹಾಗೂ ಈ ವರ್ಷ ಕೂಡ ಕೇಂದ್ರದ ಪ್ರಧಾನಿ ಆವಾಸ್ ಯೋಜನೆಯಡಿ ವಸತಿರಹಿತರಿಗೆ ಮನೆಗಳು ಬಿಡುಗಡೆ

ನಿಯಮಗಳ ಅನುಸಾರವಾಗಿ ಸದರಿ ಮನೆಗಳನ್ನು ಗ್ರಾಪಂ ಪರಿಮಿತಿಯಲ್ಲಿ ಸೂಚನೆ ವಸತಿ ರೈತರಿಗೆ ನೀಡಲಾಗುತ್ತಿದೆ. ಆದರೆ.

ಈ ಮನೆಗಳನ್ನು ಸದರಿ ಕೇಂದ್ರದ ಫಲಾನುಭವಿಗಳ ಪಟ್ಟಿ ಕ್ರಮ ಸಂಖ್ಯೆಯಂತೆ ನೀಡಬೇಕಾಗುತ್ತದೆ. ಯಾವುದೇ ರೀತಿ ಬದಲಾವಣೆ ಮಾಡಲು ಸಾಧ್ಯವಿಲ್ಲ. ಕೆಲವೊಂದು ಗ್ರಾಮಗಳಲ್ಲಿ ಸಕುಟುಂಬಗಳ ಕಳೆದ ವರ್ಷ ವಿಭಾಗವಾದವರಿಗೆ ನಿವೇಶನ ನೀಡಲು ಸಾಧ್ಯವಾಗುವುದಿಲ್ಲ. ರಾಜ್ಯ ಸರಕಾರದ ಮನೆಗಳಾದರೆ ಸಣ್ಣಪುಟ್ಟ ಬದಲಾವಣೆ ಮಾಡಿ ವಸತಿ ರಹಿತರಿಗೆ ನೀಡಬಹುದಾಗಿತ್ತು. ಆದರೆ ರಾಜ್ಯ ಸರಕಾರದ ಮನೆಗಳು ಬಾರದ ಕಾರಣ ಗ್ರಾಮ ಪಂಚಾಯತಿ ಸದಸ್ಯರು ಮನೆಗಳ ಹಂಚಿಕೆ ಇಕ್ಕಟ್ಟಿನ ಪರಿಸ್ಥಿತಿ ಎದುರಿಸಬೇಕಾಗಿದೆ.

ಇದರಿಂದ ವಸತಿ ರಹಿತ ಗ್ರಾಮಸ್ಥರು ಗ್ರಾಪಂಗೆ ಹಿಡಿ ಶಾಪ ಹಾಕುತ್ತಿದ್ದಾರೆ. ಕೂಡಲೇ ಗ್ರಾಮೀಣಾಭಿವೃದ್ಧಿ ಪಂಚಾಯತ್ ರಾಜ್ ಸಚಿವರು ಇದರ ಬಗ್ಗೆ ಪರಿಶೀಲಿಸಿ ಆದಷ್ಟು ಬೇಗ ವಸತಿ ಕಲ್ಪಿಸಿ ಕೊಡಲಿ ಎಂದು ಒತ್ತಾಯಿಸಿದ್ದಾರೆ.

ರಾಜ್ಯ ಸರಕಾರ ಗ್ರಾಮ ಪಂಚಾಯಿತಿಯಿಂದ ಕಳೆದ ವರ್ಷ ಕೂಡ ಯಾವುದೇ ರೀತಿಯ ಮನೆಗಳನ್ನು ಕೊಟ್ಟಿಲ್ಲ. ಈ ವರ್ಷವೂ ಕೊಡದೆ ಇರುವುದರಿಂದ ಮನೆ ಹಂಚಿಕೆ ವಿಚಾರದಲ್ಲಿ ವೈಮನಸು ಉಂಟಾಗಿದೆ. ಈಗಾಗಲೇ ಕೇಂದ್ರದಿಂದ ಮಂಜೂರು ಆಗಿರೋ ಮನೆಗಳನ್ನು ಪಟ್ಟಿಯಂತೆ ನೀಡಬೇಕಾಗಿದೆ. ಸೂರು ಇಲ್ಲದವರಿಗೆ ಮನೆ ಕೊಡುವಲ್ಲಿ ವಸತಿ ಸಚಿವರು ಶ್ರಮಿಸಬೇಕಾಗಿದೆ.

–ಶಿವಾನಂದ ಸ್ವಾಮಿ, ಮಾಜಿ ಗ್ರಾಪಂ ಅಧ್ಯಕ್ಷರು, ಕೋಟೆಗೆರೆ

ಮಾನವೀಯ ಮೌಲ್ಯ ಕುಸಿತ, ಆತಂಕ

ಮೈಸೂರು: ವಿಜ್ಞಾನ, ತಂತ್ರಜ್ಞಾನ ಕ್ಷೇತ್ರ, ಸಾಕಷ್ಟು ಪ್ರಗತಿ ಹೊಂದಿ ದ್ದರೂ ನಮ್ಮಲ್ಲಿ ಮಾನವೀಯತೆ ಮೌಲ್ಯಗಳು ಕುಸಿಯುತ್ತಿವೆ ಎಂದು ಸೆಸ್ಕ್ ತಾಂತ್ರಿಕ ವಿಭಾಗದ ನಿರ್ದೇಶಕ ಮುನಿಗೋಪಾಲ್ ರಾಜು ಕಳವಳ ವ್ಯಕ್ತಪಡಿಸಿದ್ದಾರೆ. ವಿಜಯನಗರದ ನಿಗಮದ ಕಚೇರಿಯಲ್ಲಿ ಬುಧವಾರ ನಡೆದ ಗಾಂಧಿ ಜಯಂತಿ ಕಾರ್ಯಕ್ರ ಮದಲ್ಲಿ ಮಾತನಾಡಿದ ಅವರು, ಮೌಲ್ಯಗಳು ಕುಸಿಯುತ್ತಿರುವುದು ಕಳವಳಕಾರಿ. ಕೆಲವೊಮ್ಮೆ ನಮ್ಮ ಸುತ್ತಲಿನ ಬೆಳವಣಿಗೆ ಗಮನಿಸಿದರೆ, ಮುಂದೇನು? ಎಂಬ ಆತಂಕ ಮೂಡುತ್ತದೆ ಎಂದರು. ಇಲ್ಲಿ ಗಾಂಧಿಜೀ ಅವರ ಆದರ್ಶಗಳನ್ನು ಮೈಗೂಡಿಸಿಕೊಂಡರೇ ಮಾತ್ರ ಪ್ರಗತಿ ಸಾಧ್ಯವಾಗಲಿದೆ. ಕರ್ತವ್ಯ ಪ್ರಜ್ಞೆ, ಸೇವೆಯಿಂದ ಕೆಲಸ ಮಾಡಿದ ಲಾಲ್ ಬಹಾದ್ದೂರ್ ಶಾಸ್ತ್ರಿ ಸಹ ನಮಗೆ ಆದರ್ಶ. ಅವರ ಆದರ್ಶಗಳ ಬಗ್ಗೆ ನಮ್ಮ ಮಕ್ಕಳಿಗೂ ತಿಳುವಳಿಕೆ ಮೂಡಿಸಬೇಕು ಎಂದು ಹೇಳಿದರು. ನಾಡಹಬ್ಬ ದಸರಾ ಮಹೋತ್ಸವದ ದೀಪಾಲಂ ಕಾರ ಈ ಬಾರಿ ಉತ್ತಮವಾಗಿ ಮಾಡಲಾಗಿದ್ದು, ಎಲ್ಲರನ್ನೂ ನಿಬ್ಬೆರಗಾಗುವಂತೆ ಮಾಡುತ್ತಿದ್ದು, ಕೆಲವು ವೃತ್ತಗಳ ದೀಪಾಲಂಕಾರ ಕಲಾತ್ಮಕತೆ ಸಾರುತ್ತದೆ ಎಂದರು. ಸೆಸ್ಕ್ ವ್ಯವಸ್ಥಾಪಕ ನಿರ್ದೇಶಕಿ ಜಿ. ಶೀಲಾ, ಅಧಿಕಾರಿಗಳು ಹಾಗೂ ಸಿಬ್ಬಂದಿ ಹಾಜರಿದ್ದರು.

ನ್ಯಾಯಕ್ಕಾಗಿ ದಸಂಸ ಹೋರಾಟ

ತಿ.ನರಸೀಪುರ ; ಡಾ.ಅಂಬೇಡ್ಕರ್ ರವರ ತತ್ವ ಸಿದ್ಧಾಂತಗಳ ಮೂಲಕ ಸಾಮಾಜಿಕ ನ್ಯಾಯವನ್ನು ಎತ್ತಿ ಹಿಡಿದು ಹೋರಾಟ ಮಾಡುವ ಸಂಕಲ್ಪದೊಂದಿಗೆ ನಾವು ಸಂಘಟಿತರಾಗಬೇಕಿದೆ ಎಂದು ದ.ಸಂ.ಸ ಜಿಲ್ಲಾ ಸಂಚಾಲಕ ಡಾ.ಆಲಗೂಡು ಚಂದ್ರಶೇಖರ್ ತಿಳಿಸಿದರು.

ಪಟ್ಟಣದಲ್ಲಿ ಕರೆಯಲಾಗಿದ್ದ ದಸಂಸ ಪದಾಧಿಕಾರಿಗಳ ಪುನರ್ ನೇಮಕ ಕುರಿತ ಸಭೆ ಉದ್ದೇಶಿಸಿ ಮಾತನಾಡಿದರು.

ನಂತರ ಮಾತನಾಡಿದ ಅವರು, ಯಾವುದೇ ಸರಕಾರಗಳು ಬಂದರೂ ಹಗರಣಗಳಲ್ಲಿ ಸಿಲುಕಿ ಅಭಿವೃದ್ಧಿ ಹಾಗೂ ಮೂಲಭೂತ

ಸೌಕರ್ಯಗಳಿಗೆ ತೊಂದರೆಯಾಗುತ್ತಿದೆ. ಸೌಲಭ್ಯಗಳ ಬಗ್ಗೆ ಅಧಿಕಾರಿಗಳಲ್ಲಿ ಕೇಳಿದಾಗ ಸರಕಾರದಿಂದ ಯಾವುದೇ ಹಣ ಬಿಡುಗಡೆಯಾಗಿಲ್ಲ ಎಂಬ ಉತ್ತರ ನೀಡುತ್ತಾರೆ. ಇವುಗಳ ಬಗ್ಗೆ ನಾವು ಹೋರಾಟ ಮಾಡುವ ಮೂಲಕ ಸರಕಾರವನ್ನು ಎಚ್ಚರಗೊಳಿಸಬೇಕಿದೆ ಎಂದರು.

ಮೈಸೂರು ಜಿಲ್ಲಾ ಸಂಘಟನಾ ಸಂಚಾಲಕರಾಗಿ ಕೆಂಪಯ್ಯನಹುಂಡಿ ರಾಜು. ಆರ್, ಜಿಲ್ಲಾ ವಿಭಾಗೀಯ ಸಂಚಾಲಕರಾಗಿ ಕನ್ನಾಯಕನಹಳ್ಳಿ ಮರಿಸ್ವಾಮಿ, ಮೂಗೂರು ಹೋಬಳಿ ಸಂಚಾಲಕ ಕುಮಾರ, ಕುರುಬೂರು ಶಿವರಾಜು, ಸೋಸಲೆ ಸಂಚಾಲಕ ಉಕ್ಕಲಗೆರೆ ಮಹದೇವ, ತಲಕಾಡು ಸಂಚಾಲಕ ಬೆಟ್ಟಹಳ್ಳಿ ರವಿಕಾಂತ್ ರನ್ನು ಒಳಗೊಂಡು ಇತರರನ್ನು ಆಯ್ಕೆ ಮಾಡಲಾಯಿತು.

ಶೀಘ್ರವೇ ಅತಿಥಿ ಉಪನ್ಯಾಸಕರ ನೇಮಕ

ಚಿಕ್ಕಬಳ್ಳಾಪುರ: ಹೈಕೋರ್ಟಿಗೆ ಮೇಲ್ಮನವಿ ಸಲ್ಲಿಸುವ ವಿಚಾರದಲ್ಲಿ ಕಾನೂನು ಪಂಡಿತರಿಂದ ಅಭಿಪ್ರಾಯ ಪಡೆದಿದ್ದು ಪರಿಶೀಲನೆ ನಡೆಯುತ್ತಿದೆ. ಈಬಗ್ಗೆ ಅಂತಿಮ ತೀರ್ಮಾನಕ್ಕೆ ಬಂದ ಕೂಡಲೇ ಅತಿಥಿ ಉಪನ್ಯಾಸಕರ ನೇಮಕಕ್ಕೆ ಚಾಲನೆ ನೀಡಲಾಗುವುದು ಎಂದು ಉನ್ನತ ಶಿಕ್ಷಣ ಸಚಿವ ಡಾ.ಎಂ.ಸಿ. ಸುಧಾಕರ ಹೇಳಿದರು.

ಸುದ್ದಿಗಾರರೊಂದಿಗೆ ಮಾತನಾಡಿ, 10 ತಿಂಗಳ ಅವಧಿಗೆ ನೇಮಕ ಮಾಡಿಕೊಳ್ಳುವ ಅವಧಿ ಮುಗಿದ ಕೂಡಲೇ ಎರಡು ತಿಂಗಳು ಸೇವೆಯಿಂದ ಬಿಡುಗಡೆ ಮಾಡುವ ಪ್ರಕ್ರಿಯೆ ಹಿಂದಿನಿಂದಲೂ ನಡೆದುಕೊಂಡು ಬಂದಿದೆ. ನಮ್ಮ ಸರಕಾರ ಕೊಟ್ಟ ಮಾತಿನಂತೆ ಅತಿಥಿ ಉಪನ್ಯಾಸಕರನ್ನು 10 ತಿಂಗಳ ಅವಧಿಗೆ ನೇಮಕ ಸಿದ್ಧವಿದೆ.ಈಗ ಸಾಮಾನ್ಯ ವರ್ಗಾವಣೆ ಮುಗಿದಿದ್ದು ಎಷ್ಟು ಮಂದಿ ಅತಿಥಿ ಉಪನ್ಯಾಸಕರು ಬೇಕು ಎಂಬ ಬಗ್ಗೆ ಸ್ಪಷ್ಟತೆ ಸಿಗಲಿದೆ. ಇದರ ಜತೆಗೆ 1242 ಮಂದಿಯ ಹೊಸ ಸಹಾಯಕ ಪ್ರಾಧ್ಯಾಪಕರ ನೇಮಕಾತಿ ಪ್ರಕ್ರಿಯೆ ನಡೆದಿದೆ ಎಂದರು.

ಯುಜಿಸಿ ನಿಯಮಗಳ ಅನುಸಾರ ಎನ್ಇಟಿ, ಎಸ್ಎಲ್ಇಟಿ, ಪಿಎಚ್.ಡಿ ಅರ್ಹತೆಯಿದ್ದವರನ್ನು ಮಾತ್ರ ಅತಿಥಿ ಉಪನ್ಯಾಸಕರ ಆಯ್ಕೆಗೆ ಪರಿಗಣಿಸಿ ಎಂದು ಹೇಳಿತ್ತು. ಆದರೂ ಹಿಂದಿನ ಸರಕಾರ 1 ಜನವರಿ 2025ರ ತನಕ ಈ ಅರ್ಹತೆ ಪಡೆಯಲು ಅವಕಾಶ ನೀಡಿ ನೇಮಕ ಮಾಡಿಕೊಂಡಿತ್ತು.ಇದೇ ಆಧಾರದಲ್ಲಿ ನಾವು ಅತಿಥಿ ಉಪನ್ಯಾಸಕರ ನೇಮಕ ಪ್ರಕ್ರಿಯೆಗೆ ಚಾಲನೆ ನೀಡಿದ್ದೆವು. ಆದರೆ ನಾವು ಊಹೆ ಕೂಡ ಮಾಡದ ಹಾಗೆ ಕೋರ್ಟಿನ ಅಂತಿಮ ಆದೇಶ ಬಂದಿದೆ. ಈ ಎಲ್ಲಾ ಕಾರಣಗಳಿಗಾಗಿ ಅತಿಥಿ ಉಪನ್ಯಾಸಕರ ನೇಮಕ ವಿಳಂಬವಾಗಿದೆ.

-ಡಾ.ಎಂ.ಸಿ.ಸುಧಾಕರ, ಉನ್ನತ ಶಿಕ್ಷಣ ಸಚಿವ

'ಮುಡಾದಿಂದ ಸರಕಾರ ಬೀಳಲ್ಲ'

ಕೋಲಾರ: ಮುಡಾ ಸೈಟ್ ಪ್ರಕರಣದಲ್ಲಿ ಸರಕಾರ ಬೀಳಲ್ಲ, ಬಿಜೆಪಿ ಷಡ್ಯಂತ್ರ ನಡೆಯಲ್ಲ ಎಂದು ಜಿಲ್ಲಾ ಉಸ್ತುವಾರಿ ಸಚಿವ ಭೈರತಿ ಸುರೇಶ್ ಹೇಳಿದರು.

ಸುದ್ದಿಗಾರರೊಂದಿಗೆ ಮಾತನಾಡಿ, ಯಾವ ಕೋರ್ಟೂ ಸಿದ್ದರಾಮಯ್ಯ ಅವರ ರಾಜೀನಾಮೆಗೆ ಸೂಚಿಸಿಲ್ಲ. ಪಾರ್ವತಮ್ಮ ಸ್ವ ಇಚ್ಛೆಯಿಂದ ಸೈಟುಗಳನ್ನು ವಾಪಸ್ ನೀಡಿದ್ದು ತಮ್ಮ ಪತ್ರದಲ್ಲಿ ವಿರೋಧ ಪಕ್ಷದವರ ಕಿರುಕುಳವನ್ನು ಸ್ಪಷ್ಟಪಡಿಸಿದ್ದಾರೆ. ಮೂಡಾಗೆ ಲಾಭ ಆಗುವುದರಿಂದ ಒಂದೇ ದಿನದಲ್ಲಿ ವಾಪಸ್ ಪ್ರಕ್ರಿಯೆ ಕಾನೂನಾತ್ಮಕವಾಗಿ ನಡೆದಿದೆ. ಕುಮಾರಸ್ವಾಮಿ ಅವರ ವ್ಯಾಖ್ಯಾನದಂತೆ ಸಿಎಂ ಯೂ ಟರ್ನ್ ಆರೋಪ ಹೊಂದಾಣಿಕೆ ಆಗುವುದಿಲ್ಲ. ಮುಡಾ ಪ್ರಕರಣ ಪಾರ್ವತಮ್ಮಗೆ ಸಂಬಂಧಿಸಿದ್ದಾಗಿದ್ದು ಇದರಲ್ಲಿ ಸಿಎಂ ಪಾತ್ರ ಇಲ್ಲವೇ ಇಲ್ಲ . ಸರಕಾರ ಬೀಳಿಸಲು ಸಾವಿರ ಕೋಟಿ ಸಂಗ್ರಹ ಹೇಳಿಕೆಗೆ ಶಾಸಕ ಯತ್ನಾಳ್ ಅವರೇ ಉತ್ತರ ನೀಡಬೇಕು ಎಂದರು.

ಮಧ್ಯ ಏಷ್ಯಾದಲ್ಲಿ ಯುದ್ಧದ ಕಾರ್ಮೋಡ

← ಮೊದಲಪುಟದಿಂದ

ಜತೆಗೆ ನುರಿತ ತಂತ್ರಜ್ಞರು, ಯೋಧರು ಸೇರಿದಂತೆ ತನ್ನ ಸೇನಾಪಡೆಯನ್ನೂ ಹಾಗೂ ಯುದ್ಧ ನೌಕೆಯನ್ನೂ ಕಳುಹಿಸಿಕೊಟ್ಟಿದೆ. ಇಸ್ರೇಲ್‌ನ ಸೇನಾನೆಲೆಗಳ ಮೇಲೆ ಇರಾನ್ ಸರಣಿಯಂತೆ ನೂರಾರು ಬಾಲಿಸ್ಟಿಕ್ ಕ್ಷಿಪಣಿಗಳಿಂದ ದಾಳಿ ಮಾಡಿದ ಬಳಿಕ ಇಸ್ರೇಲ್, ಇರಾನ್ ಸರ್ವನಾಶ ಮಾಡುವ ಶಪಥ ಮಾಡಿದೆ. ಇರಾನ್‌ನ ಸರ್ವೋಚ್ಚ ನಾಯಕ ಅಲಿ ಖಮೇನಿ ಅವರನ್ನೇ ಮುಂದಿನ ಗುರಿಯಾಗಿಸುವುದಾಗಿ ಹೇಳಿದೆ.

ಸಂಯಮ ಕಾಪಾಡಿಕೊಳ್ಳಲು ಭಾರತ ಕರೆ: ಪಶ್ಚಿಮ ಏಷ್ಯಾದಲ್ಲಿ ಬಿಕ್ಕಟ್ಟು ಉಲ್ಬಣಿಸುತ್ತಿರುವ ಹಿನ್ನೆಲೆಯಲ್ಲಿ ಎಲ್ಲ ರಾಷ್ಟ್ರಗಳು ಸಂಯಮ ಕಾಪಾಡಿಕೊಳ್ಳಬೇಕು ಮತ್ತು ಸಂಘರ್ಷದ ಆಯಾಮ ಆಯ್ಕೆ ಮಾಡಿಕೊಳ್ಳಬಾರದು. ಮಾತುಕತೆ ಹಾಗೂ ರಾಜತಾಂತ್ರಿಕತೆಯ ಮೂಲಕ ಸಮಸ್ಯೆ ಪರಿಹರಿಸಿಕೊಳ್ಳಬೇಕು ಎಂದು ಭಾರತ ಕರೆ ನೀಡಿದೆ.

ಡೆವಲಪರ್‌ಗಳಿಂದ ನಿವೇಶನ ಹಂಚಿಕೆ ಕರ್ಮಕಾಂಡ | ಉಲ್ಲಾಸ ಕಾರಂತರಿಗೂ ಮೋಸ | ಕೋಟ್ಯಂತರ ರು.ವಂಚನೆ

ಚಿಕ್ಕಬಳ್ಳಾಪುರ ಬಳಿ ವಿವಿಐಪಿಗಳಿಗೇ ಟೋಪಿ

ಶಿವಕುಮಾರ್ ಬೆಳ್ಳಿತಟ್ಟೆ

ಬೆಂಗಳೂರು: ವಂಚನೆ, ಅನ್ಯಾಯ ಹಾಗೂ ಅಕ್ರಮಗಳು ನಡೆಯದಂತೆ ತಡೆಯುವ, ಜನರನ್ನು ಜಾಗೃತಿಗೊಳಿಸುವ, ಎಚ್ಚರಿಸುವ ಗಣ್ಯಾತಿಗಣ್ಯರಿಗೇ (ವಿವಿಐಪಿ) ಕೋಟ್ಯಂತರ ರುಪಾಯಿ 'ಟೋಪಿ' ಹಾಕಿರುವ ಪ್ರಕರಣ ಪತ್ತೆಯಾಗಿದೆ.

ಹೆಸರು ಹೇಳಲು ಇಚ್ಛಿಸದ ಉನ್ನತ ಅಧಿಕಾರಿಗಳು, ವಕೀಲರು, ಪ್ರಸಿದ್ಧ ವೈದ್ಯರು, ವಿಜ್ಞಾನಿಗಳು, ಪೊಲೀಸರು, ಐಟಿಬಿಟಿ ಮುಖ್ಯಸ್ಥರು, ಇಂಗ್ಲೀಷ್ ಮಾಧ್ಯಮಗಳ ಹಿರಿಯ ಪತ್ರಕರ್ತರು ಸೇರಿದಂತೆ ನೂರಾರು ಮಂದಿಗೆ ನಿವೇಶನ ನೀಡುವುದಾಗಿ ಡೆವಲಪರ್ ಗಳು ಕೋಟ್ಯಂತರ ರೂಪಾಯಿ ವಂಚಿಸಿರುವುದು ಬೆಳಕಿಗೆ ಬಂದಿದೆ.

ಇನ್ನೂ ಅಚ್ಚರಿ ಎಂದರೆ, ಖ್ಯಾತ ಪರಿಸರವಾದಿ ಉಲ್ಲಾಸ್ ಕಾರಂತ್ ಅವರ ಪತ್ನಿ ಸೇರಿದಂತೆ ಅನೇಕ ಸಾಮಾಜಿಕ ಹೋರಾಟಗಾರರು, ಪ್ರೊಫೆಸರ್‌ಗಳಿಗೇ ನಿವೇಶನ ಹೆಸರಿನಲ್ಲಿ ವಂಚನೆ ಮಾಡಲಾಗಿರುವ ಬಗ್ಗೆ ದೂರು ದಾಖಲಾಗಿದೆ.

ಚೆನ್ನೈ ಮೂಲದ ಶ್ರೀರಾಮ್ ಲ್ಯಾಂಡ್ ಕಂಪನಿಯ ವ್ಯಾಪ್ತಿಗೆ ಬರುವ ಎಸ್ಎಲ್ ಪ್ಲಾಟೆಡ್ ಡೆವಲಪ್ ಮೆಂಟ್ ಪ್ರಾಜೆಕ್ಟ್ ಕಂಪನಿಯವರು ಶ್ರೀರಾಮ್ ಗೋಧೂಳಿ ಎಂಬ ಬಡಾವಣೆ ನಿರ್ಮಿಸುವ ನೆಪದಲ್ಲಿ ಕೋಟ್ಯಂತರ ರುಪಾಯಿ ವಂಚಿಸಿದ್ದಾರೆ ಎಂದು ವಂಚನೆಗೆ ಒಳಗಾದವರು ದೂರು ನೀಡಿದ್ದಾರೆ. ಇವರು ಬರೀ ಪೊಲೀಸರು ಮಾತ್ರವಲ್ಲ, ಚಿಕ್ಕಬಳ್ಳಾಪುರ ಜಿಲ್ಲಾಡಳಿತ, ಜಿಲ್ಲಾಪಂಚಾಯತಿ, ಸ್ಥಳೀಯ ಶಾಸಕರು ಹಾಗೂ ರಾಜ್ಯ ಮಾಹಿತಿ ಹಕ್ಕು ಆಯೋಗ ಹಾಗೂ ರೇರಾ (ರಿಯಲ್ ಎಸ್ಟೇಟ್ ನಿಯಂತ್ರಣಾ ಪ್ರಾಧಿಕಾರ) ಸೇರಿದಂತೆ ಅನೇಕ ಸಂಸ್ಥೆಗಳಿಗೆ ದೂರು ನೀಡಲಾಗಿದೆ. ಆದರೂ ವಂಚನೆ ಮಾಡಿರುವ ಡೆವಲಪರ್‌ಗಳ ವಿರುದ್ಧ ಈತನಕ ಯಾವುದೇ ಕ್ರಮ ಜರುಗಿಸಿಲ್ಲ ಎಂದು ನೊಂದವರು ಹೇಳಿದ್ದಾರೆ.

ಅಂದಹಾಗೆ ಈ ಬಡಾವಣೆ ನಿರ್ಮಾಣವಾಗಿರುವುದು ಚಿಕ್ಕಬಳ್ಳಾಪುರದಿಂದ ಕೂಗಳತೆಯ ಬಡನಿಂಗನಹಳ್ಳಿಯಲ್ಲಿ. ಎಸ್ ಎಲ್ ಪ್ಲಾಟೆಡ್ ಡೆವಲಪ್‌ಮೆಂಟ್ ಪ್ರಾಜೆಕ್ಟ್ ಕಂಪನಿಯ ವರು ಇಲ್ಲಿ 500ಕ್ಕೂ ಹೆಚ್ಚು ಮಂದಿಗೆ ಸುಸಜ್ಜಿತ ಹಾಗೂ ಸುಂದರ ನಿವೇಶನಗಳನ್ನು ನಿರ್ಮಿಸಿಕೊಡುವುದಾಗಿ ಕೋಟ್ಯಂ ತರ ರೂಪಾಯಿ ವಸೂಲಿ ಮಾಡಿರುವ ಡೆವಲಪರ್‌ಗಳು ಕನಿಷ್ಠ ಮೂಲ ಸೌಕರ್ಯವನ್ನೂ ನೀಡದೆ ಕಿರು ಅರಣ್ಯ ಮಾದರಿಯಲ್ಲಿ ಹಂಚಿಕೆ ಮಾಡಿದ್ದಾರೆ ಎಂದು ದೂರಲಾಗಿದೆ.

ಅಂದರೆ, ಬಡಾವಣೆಯಲ್ಲಿ ಕ್ಲಬ್‌ಹೌಸ್, ಕೊಳಚೆ ನೀರು ಶುದ್ಧೀಕರಣ ಘಟಕ, ಈಜುಕೊಳ, ಮಕ್ಕಳ ಆಟದ ಅಂಗಳ, ವಿವಿಧ ಕ್ರೀಡೆಗಳ ಸುಂದರ ಅಂಗಳ ಇತ್ಯಾದಿ ಸೌಲಭ್ಯಗಳನ್ನು ಒದಗಿಸುವುದಾಗಿ ಹೆಚ್ಚಿನ ಹಣ ಪಡೆದು ಸೌಲಭ್ಯ ನೀಡುವು ದಾಗಿ ಹೇಳಿದ್ದರು. ಆದರೆ ಬಡಾವಣೆ ನಿರ್ಮಾಣ ಕ್ಕಾಗಿ ಖರೀದಿ ಸಿದ್ದ ಜಮೀನುಗಳನ್ನೇ ವಿಭಾಗಗಳನ್ನಾಗಿ ಮಾಡಿ ಹಂಚಿಕೆ ಮಾಡಲಾ ಗಿದೆ ಎಂದು ವಂಚನೆ ಒಳಗಾದವವರು ದೂರಿನಲ್ಲಿ ತಿಳಿಸಿದ್ದಾರೆ. ಹೀಗೆ ವಿವಿಧ ಕ್ಷೇತ್ರಗಳ ನೂರಾರು ಸಾಧಕರು, ಗಣ್ಯರು ಕೋಟ್ಯಂತರ ರುಪಾಯಿ ವೆಚ್ಚ ಮಾಡಿ ನಿವೇಶನ ಖರೀದಿಸಿ ಸೌಲಭ್ಯಕ್ಕಾಗಿ ಕಳೆದ 10 ವರ್ಷಗಳಿಂದ ಸರಕಾರಿ ಕಚೇರಿಗಳಿಗೆ ಅಲೆಯುತ್ತಿದ್ದಾರೆ. ಆದರೆ ಈತನಕ ಯಾರಿಗೂ ನ್ಯಾಯ ಸಿಕ್ಕಿಲ್ಲ. ವಂಚಿಸಿದವರ ವಿರುದ್ಧ ಯಾವುದೇ ಕ್ರಮವೂ ಆಗಿಲ್ಲ ಎಂದು ನೊಂದವರು ತಿಳಿಸಿದ್ದಾರೆ.



ಮಾರಾಟದ ವೇಳೆ ತೋರಿಸಿದ್ದ ಬಡಾವಣೆ

ಸದ್ಯ ಇರುವ ಬಡಾವಣೆಯ ಸ್ಥಿತಿ

ಕೋಟಿ ಕೋಟಿ ಅಕ್ರಮ!

ಡೆವಲಪರ್‌ಗಳು ಬಡಾವಣೆ ಜಾಗದ ಭೂ ಪರಿವರ್ತನೆಯ ನ್ನೇನೊ ಮಾಡಿಸಿದ್ದಾರೆ. ಆದರೆ ಅನಂತರದಲ್ಲಿ ಎಲ್ಲವೂ ನಿಯಮಬಾಹಿರ. ಅಂದರೆ ನಿಯಮದ ಪ್ರಕಾರ, ರಸ್ತೆಗ ಳನ್ನು ಮತ್ತು ಚರಂಡಿಗಳನ್ನು ಅಭಿವೃದ್ಧಿ ಮಾಡಿಲ್ಲ. ಬಡಾ ವಣೆಗೆ ವಿದ್ಯುತ್ ಸೌಲಭ್ಯವೇ ಇಲ್ಲ. ನೀರಿನ ಸೌಲಭ್ಯವನ್ನು ಕೇಳುವಂತೆಯೇ ಇಲ್ಲ. ಇನ್ನು ಪಾರ್ಕ್ ಮತ್ತು ಈಜುಕೊಳ ವನ್ನು ಖರೀದಿ ಸಂದರ್ಭದಲ್ಲಿ ನೀಡಿದ್ದ ವಿಡಿಯೊಗಳಲ್ಲಿ ನೋಡಿಕೊಳ್ಳ ಬೇಕಿದೆ. ಇದೆಲ್ಲಕ್ಕಿಂತ ಮುಖ್ಯವಾಗಿ ಬಡಾ ವಣೆಗಳನ್ನು ಮಾರಾಟಕ್ಕೆ ಮಂಜೂರು ಮಾಡಬೇಕಾದ ಅಂಗರೇಕನಹಳ್ಳಿ ಗ್ರಾಮಪಂಚಾಯಿತಿ ಅಧಿಕಾರಿಗಳು, ಅಭಿವೃದ್ಧಿಗೂ ಮುನ್ನ ಶೇ.60 ರಷ್ಟು ನಿವೇಶನಗಳನ್ನು, ಅಭಿವೃದ್ಧಿ ನಂತರ ಶೇ.40 ರಷ್ಟು ನಿವೇಶನಗಳನ್ನು ಬಿಡುಗಡೆ ಮಾಡಬೇಕಿತ್ತು. ಆದರೆ ಎಲ್ಲವನ್ನೂ ಆರಂಭದಲ್ಲೇ ಅಭಿವೃ ದ್ಧಿಗೂ ಮುನ್ನವೇ ಬಿಡುಗಡೆ ಮಾಡಿ ವಂಚನೆಗೆ ದಾರಿ ಮಾಡಿ ಕೊಟ್ಟಿದ್ದಾರೆ ಎನ್ನುವುದು ದಾಖಲೆಗಳಿಂದ ತಿಳಿದುಬಂದಿದೆ.

ಏನಿದು ವಂಚನೆ, ಹೇಗಾಯಿತು?

ಪ್ರಸಿದ್ಧ ಶ್ರೀರಾಮ್ ಪ್ರಾಪರ್ಟೀಸ್ ಕಂಪನಿಯಲ್ಲಿ ಷೇರು ಪಡೆದಿದ್ದಾರೆ ಎನ್ನಲಾದ ವೆಂಕಟರಾಮನ್ ಸ್ವಾಮಿನಾಥನ್ ಅವರು, ವೀರಭದ್ರಪ್ಪ ಗಿರೀಶ್ ಎಂಬುವರ ಜತೆಗೂಡಿ 2013ರಲ್ಲಿ ಎಸ್ ಎಲ್ ಪ್ಲಾಟೆಡ್ ಡೆವಲಪ್‌ಮೆಂಟ್ ಪ್ರಾಜೆಕ್ಟ್ ಕಂಪನಿ ಆರಂಭಿಸಿ ದರು. ಈ ಕಂಪನಿ ಅಡಿಯಲ್ಲಿ ಚಿಕ್ಕಬಳ್ಳಾಪುರದಿಂದ 12 ಕಿ.ಮೀ. ದೂರದಲ್ಲಿರುವ ಬಡನಿಂಗನಹಳ್ಳಿ (ಅಂಗರೇಕನಹಳ್ಳಿ ಗ್ರಾಮ ಪಂಚಾಯಿತಿ ವ್ಯಾಪ್ತಿ)ಯಲ್ಲಿ 33 ಎಕರೆ ಪ್ರದೇಶದಲ್ಲಿ 482 ನಿವೇಶನಗಳನ್ನು ನಿರ್ಮಾಣ ಮಾಡಲು ಮುಂದಾದರು. ನಿರ್ಮಾಣ ಹಂತದಲ್ಲಿರುವಾಗಲೇ ಚ.ಅಡಿಗೆ 650 ರೂ.ನಂತೆ ಮಾರಾಟ ಆರಂಭಿಸಿದರು. ಸುಮಾರು 450 ನಿವೇಶನಗಳು ಮಾರಾಟ ಮಾಡಿದರು. ಮಾರಾಟ ಸಂದರ್ಭದಲ್ಲಿ ಬಡಾವಣೆ ಯಲ್ಲಿ ಕ್ಲಬ್ ಹೌಸ್, ಎಸ್‌ಟಿಪಿ, ಈಜುಕೊಳ, ಆಟೋಟಗಳ ಅಂಗಳ ಸೇರಿದಂತೆ ವಿವಿಧ ಸೌಲಭ್ಯ ಒದಗಿಸುವುದಾಗಿ ಹೇಳಿದ್ದರು. ಅದನ್ನೇ ಬ್ರೋಷರ್‌ನಲ್ಲೂ ತಿಳಿಸಿ, ವಿಡಿಯೊಗಳನ್ನು ಹಂಚಿಕೆ ಮಾಡಿ ಖರೀದಿದಾರರನ್ನು ನಂಬಿಸಿದ್ದರು. ಆದರೆ ಬಡಾವಣೆಗೆ ಮೂಲಸೌಕರ್ಯ ಎನ್ನುವುದು ಮರೀಚಿಕೆಯಾಗಿತು ಎಂದು ವಂಚಿತರು ರೇರಾ ಸಂಸ್ಥೆಗೆ ನೀಡಿರುವ ದೂರಿನಲ್ಲಿ ತಿಳಿಸಿದ್ದಾರೆ.

ಇದೊಂದು ದೊಡ್ಡ ವಂಚನೆಯಾಗಿದ್ದು, ನೂರಾರು ಮಂದಿ ಲಕ್ಷಾಂತರ ರುಪಾಯಿ ಕಳೆದುಕೊಳ್ಳುವಂತಾಗಿದೆ. ಇದರ ವಿರುದ್ಧ 60ಕ್ಕೂ ಹೆಚ್ಚು ಮಂದಿ ಹೋರಾಟ ಮಾಡುತ್ತಿದ್ದೇವೆ. ಅಧಿಕಾರಿಗಳು ಸ್ಪಂದಿಸುತ್ತಿಲ್ಲ. ಸದ್ಯ ರೇರಾಗೂ ದೂರು ನೀಡಲಾಗಿದೆ. ಮುಂದೆ ಕೋರ್ಟ್ ಮೂಲಕ ಕಾನೂನು ಹೋರಾಟಕ್ಕೆ ನಿರ್ಧರಿಸಿದ್ದೇವೆ.

-ರವಿಚಂದ್ರನ್, ನಿವೃತ್ತ ಉದ್ಯೋಗಿ ವಂಚನೆಗೆ ಒಳಗಾದವರು

ಮೈಸೂರಿನ ಚಾಮುಂಡಿ ಬೆಟ್ಟದಲ್ಲಿ ಸಾಹಿತಿ ಹಂ.ಪ. ನಾಗರಾಜಯ್ಯರಿಂದ ಉದ್ಘಾಟನೆ | 19 ಉಪಸಮಿತಿಗಳಿಂದ ಕೊನೆ ಕ್ಷಣದ ತಯಾರಿ

ನಾಡಹಬ್ಬ ದಸರಾ ಉತ್ಸವಕ್ಕೆ ಚಾಲನೆ ಇಂದು



ಮೈಸೂರಿನ ಕೆ.ಆರ್. ವೃತ್ತ ವಿದ್ಯುತ್ ದೀಪಾಲಂಕರದಿಂದ ಝಗಮಗಿಸುತ್ತಿದೆ.



ಕೆ.ಜೆ.ಲೋಕೇಶ್ ಬಾಬು

ಮೈಸೂರು: ನಾಡಹಬ್ಬ ದಸರಾ ಮಹೋತ್ಸವದ ಉದ್ಘಾಟನೆಗೆ ಕ್ಷಣಗಣನೆ ಆರಂಭವಾಗಿದ್ದು, ಅ.3ರ ಗುರುವಾರ ಬೆಳಗ್ಗೆ ನಾಡದೇವತೆ ತಾಯಿ ಚಾಮುಂಡೇಶ್ವರಿಯ ಸನ್ನಿಧಿಯಲ್ಲಿ ವಿಧ್ಯುಕ್ತ ಚಾಲನೆ ದೊರೆಯಲಿದೆ.

ದಸರಾ ಮಹೋತ್ಸವ ಹಿನ್ನೆಲೆಯಲ್ಲಿ ಇಡೀ ಮೈಸೂರು ನಗರ ನವವಧುವಿನಂತೆ ಸಿಂಗಾರಗೊಂಡಿದ್ದು, ನಾಡಿನ ಜನರ ಮನತಣಿಸಲು ಸಕಲ ರೀತಿಯಲ್ಲೂ ಸಜ್ಜಾಗಿದೆ. ಅದಕ್ಕಾಗಿಯೇ ರೂಪಿತವಾದ 19 ಉಪಸಮಿತಿಗಳು ತಮ್ಮ ಜವಾಬ್ದಾರಿಯನ್ನು ಯಶಸ್ವಿಯಾಗಿ ನಿರ್ವಹಿಸಿವೆ. ಗುರುವಾರ ಬೆಳಗ್ಗೆ 9.15 ರಿಂದ 9:45ರವರೆಗಿನ ವೃಶ್ಚಿಕ ಲಗ್ನದಲ್ಲಿ ಹಿರಿಯ ಸಾಹಿತಿ, ನಾಡೋಜ ಡಾ. ಹಂ.ಪ. ನಾಗರಾಜಯ್ಯ ಅವರು ಚಾಮುಂಡಿ ಬೆಟ್ಟದಲ್ಲಿ ಆಯೋಜಿಸಲಾಗಿರುವ ವೇದಿಕೆ ಕಾರ್ಯಕ್ರಮದಲ್ಲಿ ಬೆಳ್ಳಿರಥದಲ್ಲಿ ವಿರಾಜಮಾನಳಾಗಿರುವ ತಾಯಿ ಚಾಮುಂಡೇಶ್ವರಿಗೆ ಪುಷ್ಪಾರ್ಚನೆ ಮಾಡುವ ಮೂಲಕ ದಸರಾ ಮಹೋತ್ಸವಕ್ಕೆ ನಾಂದಿ ಹಾಡಲಿದ್ದಾರೆ. ಈ ವೇಳೆ ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್, ಕೇಂದ್ರ ಸಚಿವರಾದ ನಿರ್ಮಲಾ ಸೀತಾರಾಮನ್, ಎಚ್.ಡಿ.ಕುಮಾರಸ್ವಾಮಿ, ಪ್ರಹ್ಲಾದ ಜೋಶಿ, ವಿ.ಸೋಮಣ್ಣ, ಶೋಭಾ ಕರಂದ್ಲಾಜೆ, ರಾಜ್ಯದ ಸಚಿವರಾದ ಡಾ.ಎಚ್.ಸಿ. ಮಹದೇ ವಪ್ಪ, ಕೆ. ವೆಂಕಟೇಶ್, ಶಿವರಾಜ ತಂಗಡಗಿ, ಎಚ್.ಕೆ.ಪಾಟೀಲ್, ಕೆ.ಜೆ.ಜಾರ್ಜ್, ರಾಮಲಿಂಗಾರೆಡ್ಡಿ, ಈಶ್ವರ ಖಂಡ್ರೆ, ಬೈರತಿ ಸುರೇಶ್ ಉಪಸ್ಥಿತರಿರುವರು. ಚಾಮುಂಡೇಶ್ವರಿ ಕ್ಷೇತ್ರದ ಶಾಸಕ ಜಿ.ಟಿ. ದೇವೇಗೌಡ ಅಧ್ಯಕ್ಷತೆ ವಹಿಸಲಿದ್ದಾರೆ.

ಇಂದು ಚಾಲನೆಗೊಳ್ಳುವ ಕಾರ್ಯಕ್ರಮಗಳು

- ಬೆಳಗ್ಗೆ 9.15ಕ್ಕೆ ಚಾಮುಂಡೇಶ್ವರಿ ಸನ್ನಿಧಿಯಲ್ಲಿ ನಾಡಹಬ್ಬ
- ಬೆ. 11.30ಕ್ಕೆ ಕೆಎಸ್ಒಯು ಭವನದಲ್ಲಿ ಚಲನಚಿತ್ರೋತ್ಸವ
- ಬೆ. 11.30ಕ್ಕೆ ಮಹಾರಾಜ ಕಾಲೇಜಿನಲ್ಲಿ ಆಹಾರ ಮೇಳ
- ಮಧ್ಯಾಹ್ನ 12.30ಕ್ಕೆ ಕುಪ್ಪಣ ಪಾರ್ಕ್,ಫಲಪುಷ್ಪ ಪ್ರದರ್ಶನ
- ಸಂಜೆ 4ಕ್ಕೆ ಅರಸು ಕ್ರೀಡಾಂಗಣದಲ್ಲಿ ಕುಸ್ತಿ ಪಂದ್ಯಾವಳಿ
- ಸಂಜೆ 4ಕ್ಕೆ ಕಾವಾ ಕಾಲೇಜಿನಲ್ಲಿ ಚಿತ್ರಕಲಾ ಶಿಬಿರ
- ಸಂಜೆ 4.30ಕ್ಕೆ ಚಾಮುಂಡಿ ಕ್ರೀಡಾಂಗಣದಲ್ಲಿ ಕ್ರೀಡಾಕೂಟ
- ಸಂಜೆ 5ಕ್ಕೆ ಸ್ಕೌಟ್ಸ್ ಮತ್ತು ಗೈಡ್ಸ್ ಮೈದಾನದಲ್ಲಿ ಪುಸ್ತಕ ಮೇಳ
- ಸಂಜೆ 5,30ಕ್ಕೆ ರಂಗಾಯಣದಲ್ಲಿ ನವರಾತ್ರಿ ರಂಗೋತ್ಸವ
- ಸಂಜೆ 6ಕ್ಕೆ ಅರಮನೆ ಆವರಣದಲ್ಲಿ ಸಾಂಸ್ಕೃತಿಕ ಕಾರ್ಯಕ್ರಮ
- ಸಂಜೆ 6.30ಕ್ಕೆ ಹಸಿರು ಚಪ್ಪರದಡಿ ವಿದ್ಯುತ್ ದೀಪಾಲಂಕಾರ
- ರಾತ್ರಿ 7.30ಕ್ಕೆ ದಸರಾ ವಸ್ತು ಪ್ರದರ್ಶನದ ಉದ್ಘಾಟನೆ

ಅರಮನೆ ಅಂಗಳದಲ್ಲಿ ಸಾಂಸ್ಕೃತಿಕ ಕಾರ್ಯಕ್ರಮ

ಅ.3ರಂದು ಸಂಜೆ 6 ಗಂಟೆಗೆ ಅರಮನೆಯ ಆವರಣದಲ್ಲಿ ಸಾಂಸ್ಕೃತಿಕ ಕಾರ್ಯಕ್ರಮಗಳಿಗೆ ಚಾಲನೆ ದೊರಕಲಿದೆ. ಮಾತ್ರವಲ್ಲ ರಾಜ್ಯ ಸಂಗೀತ ವಿದ್ವಾನ್ ಪ್ರಶಸ್ತಿ ಪ್ರದಾನ ಕಾರ್ಯಕ್ರಮ ನಡೆಯಲಿದೆ. ಸಿಎಂ ಸಿದ್ದರಾಮಯ್ಯ, ಡಿಸಿಎಂ ಡಿ.ಕೆ.ಶಿವಕುಮಾರ್, ಸಭಾಪತಿಗಳಾದ ಯು.ಟಿ.ಖಾದರ್, ಬಸವರಾಜ ಹೊರಟ್ಟಿ, ಸಚಿವರಾದ ಮಹದೇವಪ್ಪ, ಶಿವರಾಜ ತಂಗಡಗಿ, ಕೆ.ವೆಂಕಟೇಶ್ ಉಪಸ್ಥಿತರಿದ್ದು, ಕೃಷ್ಣರಾಜ ಕ್ಷೇತ್ರದ ಶಾಸಕ ಶ್ರೀವತ್ಸ ಅಧ್ಯಕ್ಷತೆ ವಹಿಸಲಿದ್ದಾರೆ. ಗುರುವಾರದಿಂದ 8 ದಿನಗಳ ಕಾಲ ಪ್ರತಿದಿನ 4 ರಿಂದ 10 ಗಂಟೆವರೆಗೆ ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆಯಲಿವೆ. 508 ಕಲಾತಂಡಗಳ 6,500 ಕಲಾವಿದರು ವಿವಿಧ ಕಲಾ ಪ್ರಕಾರದ ಸಾಂಸ್ಕೃತಿಕ ಕಾರ್ಯಕ್ರಮಗಳ ಪ್ರದರ್ಶನ ನೀಡಲಿದ್ದಾರೆ.

ಇಂದಿನಿಂದ ಯದುವೀರ್ ಖಾಸಗಿ ದರ್ಬಾರ್

ದಸರಾ ಉತ್ಸವಕ್ಕಾಗಿ ಅರಮನೆಯಲ್ಲಿ ಶರನ್ನವರಾತ್ರಿ ಆಚರಣೆಯ ಸಡಗರ ಗುರುವಾರದಿಂದ ಆರಂಭವಾಗಲಿದೆ. ರಾಜವಂಶಸ್ಥ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಖಾಸಗಿ ದರ್ಬಾರ್ ನಡೆಸಲಿದ್ದಾರೆ. ಅ.3ರಂದು ಎಣ್ಣೆ ಶಾಸ್ತ್ರ ಕಾರ್ಯ ನೆರವೇರಲಿದ್ದು, ಬೆಳಗ್ಗೆ 5.45 ರಿಂದ 6.10ರ ಶುಭ ಮುಹೂರ್ತದಲ್ಲಿ ರತ್ನಖಚಿತ ಸಿಂಹಾಸನಕ್ಕೆ ಸಿಂಹದ ಮುಖ ಜೋಡಣೆ ಮಾಡಲಾಗುತ್ತದೆ. ಇದಾದ ನಂತರ ಬೆಳಗ್ಗೆ 7.45ರಿಂದ 8.45ರ ಒಳಗೆ ಚಾಮುಂಡಿ ತೊಟ್ಟಿಯಲ್ಲಿ ಯದುವಂಶಸ್ಥ ಯದುವೀರ್ ಅವರಿಗೆ ಕಂಕಣಧಾರಣೆ ಮಾಡಲಾಗುತ್ತದೆ. ಬೆಳಗ್ಗೆ 10.30ಕ್ಕೆ ಸವಾರಿ ತೊಟ್ಟಿಗೆ ಪಟ್ಟದ ಆನೆ, ಕುದುರೆ, ಹಸುಗಳು ಆಗಮಿಸಲಿವೆ. ಬೆಳಗ್ಗೆ 11ಕ್ಕೆ ಕಳಸ ಪೂಜೆ ಮತ್ತು ಸಿಂಹಾಸನ ಪೂಜೆ ನೆರವೇರಲಿದೆ. ಬೆ.11.35 ರಿಂದ 12.05ರ ಒಳಗೆ ಸಿಂಹಾಸನಾರೋಹಣದ ಮೂಲಕ ಖಾಸಗಿ ದರ್ಬಾರ್ ಆರಂಭವಾಗಲಿದೆ. ಮಧ್ಯಾಹ್ನ 1.05ರಿಂದ 1.30ರೊಳಗೆ ಮೈಸೂರು ಅರಸರ ಕುಲದೇವತೆ ಚಾಮುಂಡೇಶ್ವರಿ ಅಮ್ಮನವರ ಮೂರ್ತಿಯನ್ನು ಚಾಮುಂಡಿ ತೊಟ್ಟಿಯಿಂದ ಕನ್ನಡಿ ತೊಟ್ಟಿಗೆ ತರಲಾಗುತ್ತದೆ. ಖಾಸಗಿ ದರ್ಬಾರ್‌ನಲ್ಲಿ ಪಟ್ಟದ ಆನೆಯಾಗಿ ಕಂಜನ್ ಹಾಗೂ ಪಟ್ಟದ ನಿಶಾನೆ ಆನೆಯಾಗಿ ಭೀಮ ಆನೆಗಳು ಪಾಲ್ಗೊಳ್ಳಲಿವೆ.

ದಸರಾ ಚಲನಚಿತ್ರೋತ್ಸವ

ದಸರಾ ಚಲನಚಿತ್ರ ಉಪಸಮಿತಿ ವತಿಯಿಂದ ಅ.3ರಂದು ಬೆಳಗ್ಗೆ 10.30ಕ್ಕೆ ಕೆಎಸ್ಒಯು ಘಟಿಕೋತ್ಸವ ಭವನದಲ್ಲಿ ದಸರಾ ಚಲನಚಿತ್ರೋತ್ಸವ ಉದ್ಘಾಟನಾ ಸಮಾರಂಭ ನಡೆಯಲಿದೆ.ಕಾರ್ಯಕ್ರಮವನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪಮುಖ್ಯಮಂತ್ರಿ ಡಿ.ಕೆ ಶಿವಕುಮಾರ್ ಹಾಗೂ ಕೇಂದ್ರ ಸಚಿವ ಎಚ್.ಡಿ ಕುಮಾರಸ್ವಾಮಿ ಉಪಸ್ಥಿತಿಯಲ್ಲಿ ಮೈಸೂರು ಜಿಲ್ಲಾ ಉಸ್ತುವಾರಿ ಸಚಿವ ಡಾ. ಎಚ್.ಸಿ. ಮಹದೇವಪ್ಪ ಉದ್ಘಾಟಿಸುವರು. ಚಾಮರಾಜ ಕ್ಷೇತ್ರದ ಶಾಸಕ ಕೆ.ಹರೀಶ್ ಗೌಡ ಅಧ್ಯಕ್ಷತೆ ವಹಿಸುವರು. ಸಂಸದರಾದ ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್ ಹಾಗೂ ಸುನಿಲ್ ಬೋಸ್ ಮುಖ್ಯ ಅತಿಥಿಗಳಾಗಿ ಪಾಲ್ಗೊಳ್ಳಲಿದ್ದಾರೆ. ಖ್ಯಾತ ಚಲನಚಿತ್ರ ನಟರಾದ ರಮೇಶ್ ಅರವಿಂದ್, ಡಾಲಿ ಧನಂಜಯ್, ನಿರ್ಮಾಪಕರಾದ ಯೋಗೇಶ್ ದ್ವಾರಕೀಶ್, ನಟಿಯರಾದ ಸಪ್ತಮಿ ಗೌಡ, ಶರಣ್ಯ ಶೆಟ್ಟಿ, ಅಕ್ಷಿತ ಬೋಪಯ್ಯ ಅವರು ಸಮಾರಂಭದ ವಿಶೇಷ ಆಹ್ವಾನಿತರಾಗಿ ಭಾಗವಹಿಸಲಿದ್ದಾರೆ.

ವ್ಯಾಪಕ ಬಂದೋಬಸ್ತ್

ಅ.3ರಿಂದ 9ರವರೆಗೆ ಮೊದಲ ಹಂತದ ಬಂದೋಬಸ್ತ್ ವ್ಯವಸ್ಥೆ ಮಾಡಲಾಗಿದೆ. 16 ಎಸ್ಪಿ, 599 ಇತರ ಅಧಿಕಾರಿಗಳು, 2391 ಸಿಬ್ಬಂದಿ ಸೇರಿ 2996 ಸಿಬ್ಬಂದಿಯನ್ನು ಭದ್ರತಾ ಕರ್ತವ್ಯಕ್ಕಾಗಿ ನಿಯೋಜಿಸಲಾಗಿದೆ. ಆಯಕಟ್ಟಿನ ಪ್ರದೇಶಗಳಲ್ಲಿ ಹೆಚ್ಚಿನ ನಿಗಾ ವಹಿಸಲಾಗಿದೆ.

ಪಟ್ಟಣ ಪಂಚಾಯಿತಿ ಕಾರ್ಯಾಲಯ,
ಅರಕಲಗೂಡು, ಹಾಸನ ಜಿಲ್ಲೆ-573102
ಫೋ.ನಂ.220350 E-mail: ka.arkalgudu.tp@gmail.com
ನಂ:ಅ.ಪ.ಪಂ/ಕಿ.ಅ/ಟೆಂಡರ್/15ನೇ ಹಣಕಾಸು/ಪ.ಪಂ ನಿಧಿ/05/2024-25
ದಿನಾಂಕ: 01/10/2024

ಟೆಂಡರ್ ಪ್ರಕಟಣೆ (ಇ-ಪ್ರೊಕ್ಯೂರಮೆಂಟ್ ಮೂಲಕ ಮಾತ್ರ)

ಅರಕಲಗೂಡು ಪಟ್ಟಣ ವ್ಯಾಪ್ತಿಯಲ್ಲಿ 2022-23ನೇ ಸಾಲಿನ 15ನೇ ಹಣಕಾಸು ಯೋಜನೆಯ ಅನುದಾನ ಮತ್ತು 2024-25ನೇ ಸಾಲಿನ ಪಟ್ಟಣ ಪಂಚಾಯಿತಿ ಅನುದಾನದಲ್ಲಿ ಕಾಮಗಾರಿಗಳನ್ನು ನಿರ್ವಹಿಸಲು ಕರ್ನಾಟಕ ಸಾರ್ವಜನಿಕ ಸಂಗ್ರಹಣ ಪಾರದರ್ಶಕತೆ ಅಧ್ಯಾದೇಶ 2000 ರಂತೆ ಹಾಗೂ STANDARD TENDER DOCUMENT ಸರ್ಕಾರದ ಅದೇಶ ಸಂಖ್ಯೆ: ಎಫ್.ಡಿ/06/ಪಿಸಿಎಲ್/2006, ಬೆಂಗಳೂರು ರಂತೆ ದ್ವಿಲಕೋಟೆ ಪದ್ಧತಿಯಲ್ಲಿ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ನೊಂದಾಯಿಸಲ್ಪಟ್ಟ ಅರ್ಹ ಗುತ್ತಿಗೆದಾರರಿಂದ ಐಟಂವಾರು ದರದ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ. ಹೆಚ್ಚಿನ ವಿವರಗಳಿಗಾಗಿ http://kppp.karnataka.gov.in ನ್ನು ಅಥವಾ ಕಚೇರಿಯ ಅಭಿಯಂತರರ ಶಾಖೆಯನ್ನು ಸಂಪರ್ಕಿಸಬಹುದಾಗಿದೆ. 1.ಖಾಲಿ ಟೆಂಡರ್ ಪಾರಂಗಳಿಗೆ ಇ-ಪ್ರೊಕ್ಯೂರ್‌ಮೆಂಟ್ ಪ್ರಕಾರ ಅರ್ಜಿ ಸಲ್ಲಿಸುವ ಹಾಗೂ ಷೆಡ್ಯೂಲ್-ಬಿಗಳನ್ನು ವೆಬ್‌ಸೈಟ್‌ನಲ್ಲಿ ಭರ್ತಿ ಮಾಡಿ ಸಲ್ಲಿಸುವ ದಿನಾಂಕ: 16/10/2024 ರಂದು ಸಂಜೆ 5.30 ಗಂಟೆ 2.ತಾಂತ್ರಿಕ ಬಿಡ್ ತೆರೆಯುವ ದಿನಾಂಕ:18/10/2024 ರ ಬೆಳಗ್ಗೆ 11.00 ಗಂಟೆ 3.ಆರ್ಥಿಕ ಬಿಡ್ ತೆರೆಯುವ ದಿನಾಂಕ: 21/10/2024 ರ ಬೆಳಗ್ಗೆ 11.00 ಗಂಟೆ 2022-23ನೇ ಸಾಲಿನ 15ನೇ ಹಣಕಾಸು ಯೋಜನೆಯ ಅನುದಾನ ಕ್ರ.ಸಂ.1)ವಿವರ:DMA/2024-25/OW/WORK-INDENT30200 ಅಂದಾಜು ಮೊತ್ತ (ರೂ.ಲಕ್ಷಗಳಲ್ಲಿ) ವರ್ಗ: 11.40 2)2024-25ನೇ ಸಾಲಿನ ಪಟ್ಟಣ ಪಂಚಾಯಿತಿ ಅನುದಾನ: DMA/2024-25/OW/WORK_INDENT30456 ಅಂದಾಜು ಮೊತ್ತ (ರೂ.ಲಕ್ಷಗಳಲ್ಲಿ) ವರ್ಗ: 6.40

ಸಹಿ/-ಅಧ್ಯಕ್ಷರು, ಪಟ್ಟಣ ಪಂಚಾಯಿತಿ, ಅರಕಲಗೂಡು.
ಸಹಿ/-ಉಪಾಧ್ಯಕ್ಷರು, ಪಟ್ಟಣ ಪಂಚಾಯಿತಿ, ಅರಕಲಗೂಡು,
ಸಹಿ/-ಮುಖ್ಯಾಧಿಕಾರಿ, ಪಟ್ಟಣ ಪಂಚಾಯಿತಿ, ಅರಕಲಗೂಡು

ವಾಸಾಸಂಇ/ಹಿಸನಿ/ಹಾಸನ/521/ಕೆಎಸ್ಎಂಸಿಎ/2024-25

ಭೂ ಚಕ್ರದ ಸುಳಿಯಲ್ಲಿ ಸಾಮ್ರಾಟ?

← ಮೊದಲಪುಟದಿಂದ

ಸರ್ವೆ ನಂಬರ್ 10/1, 10/11 ಎಫ್1 ಹಾಗೂ 10/11 ಎಫ್2 ಜಾಗದಲ್ಲಿ 32 ಗುಂಟೆ ಜಮೀನನ್ನು ಬಿಡಿಎ 24-02-1977ರಲ್ಲಿ ಬಿಡಿಎ ನೋಟಿಫಿಕೇಶನ್ ಮಾಡಿದೆ. 27-2-1977ರಲ್ಲಿ ಮತ್ತೊಂದು ಪ್ರಾಥಮಿಕ ಅಧಿಸೂಚನೆ ಹೊರಡಿಸಲಾ ಗುತ್ತದೆ. 31-8-1978ರಂದು ಅಂತಿಮ ಅಧಿಸೂಚನೆ ಹೊರಡಿಸಲಾಗುತ್ತದೆ.

ನಂತರ 26-02-2003 ಹಾಗೂ 2007ರಲ್ಲಿ ಜಮೀನಿನ ಮೂಲ ಮಾಲೀಕರಾದ ರಾಮಸ್ವಾಮಿ ಅವರಿಂದ ಆರ್.ಅಶೋಕ ಈ ಜಮೀನನ್ನು ಶುದ್ಧ ಕ್ರಯದ ಮೂಲಕ ಖರೀದಿ ಮಾಡುತ್ತಾರೆ. ಈ ವೇಳೆ ಅಂದಿನ ಮುಖ್ಯಮಂತ್ರಿಗಳಾದ ಯಡಿಯೂರಪ್ಪ ಅವರು ಈ ಅರ್ಜಿಯ ಮೇಲೆ 'ಕೂಡಲೇ ಮಂಡಿಸಿ' ಎಂದು ಬರೆಯುತ್ತಾರೆ. ನಂತರ ಕಡತ ಮಂಡನೆಯಾದ ಎರಡು ತಿಂಗಳಲ್ಲಿ ಭೂಸ್ವಾಧೀನ ಕೈಬಿಡಲಾಗುತ್ತದೆ ಎಂದು ಆರೋಪಿಸಿದರು.

ಡಿನೋಟಿಫಿಕೇಷನ್ ನಂತರ ನಿವೃತ್ತ ವಿಂಗ್ ಕಮಾಂಡರ್ ಜೆ.ವಿ.ಅತ್ರಿ ಎಂಬುವವರು ಲೋಕಾಯುಕ್ತಕ್ಕೆ ದೂರು ನೀಡುತ್ತಾರೆ. ನಂತರ ನ್ಯಾಯಾಲಯದ ಮೆಟ್ಟಿಲೇರುತ್ತಾರೆ. ನಂತರ ಆರ್.ಅಶೋಕ ಈ ಜಮೀನು ಹಿಂತಿರುಗಿಸಲು ತೀರ್ಮಾನಿಸುತ್ತಾರೆ. 27-08-2011ರಂದು ರಿಜಿಸ್ಟರ್ ಗಿಫ್ಟ್ ಮೂಲಕ ಬಿಡಿಎಗೆ ನೀಡುತ್ತಾರೆ. ಪ್ರಕರಣವು ಹೈಕೋರ್ಟ್ ಮೆಟ್ಟಿಲೇರಿದ ನಂತರ ನ್ಯಾಯಾಧೀಶರಾದ ದಿನೇಶ್ ಮಹೇಶ್ವರಿ ಹಾಗೂ ನ್ಯಾ.ಅರವಿಂದ್ ಕುಮಾರ್ ಅವರು ವಿಚಾರಣೆ ಮಾಡಿ, 'ಈ ಭೂಮಿ ಬಿಡಿಎ ಅಧೀನದಲ್ಲಿರುವ ಕಾರಣ ಕ್ರಿಮಿನಲ್ ಮೊಕದ್ದಮೆ ಹೂಡುವ ಅಗತ್ಯವಿಲ್ಲ' ಎಂದು ತೀರ್ಪು ನೀಡುತ್ತಾರೆ. ಸಿದ್ದರಾಮಯ್ಯ ಅವರ ಪತ್ನಿ ತಮಗೆ ಪರಿಹಾರವಾಗಿ ಬಂದ ನಿವೇಶನ ವಾಪಸ್ ನೀಡಿರುವುದಕ್ಕೆ ನೀವು ಆಡುತ್ತಿರುವ ಮಾತುಗಳು ಹಾಗೂ ಈ ತೀರ್ಪನ್ನು ನೀವು ಯಾವ ರೀತಿ ಅರ್ಥೈಸುತ್ತೀರಿ, ಇದರ ಬಗ್ಗೆ ಜನರಿಗೆ ಏನು ಹೇಳುತ್ತೀರಿ? ಎಂದು ಪ್ರಶ್ನಿಸಿದರು.

ಕಂದಾಯ ಸಚಿವ ಕೃಷ್ಣಬೈರೇಗೌಡ ಮಾತನಾಡಿ, ಈ ಜಾಗ ಡಾಲರ್ಸ್ ಕಾಲೋನಿ 2ನೇ ಹಂತದ ಆರ್‌ಎಂವಿ ಬಡಾವಣೆ ಹಾಗೂ ವರ್ತುಲ ರಸ್ತೆ ಬಳಿ ಇದೆ. ಈ ಪ್ರದೇಶ ಬಿಡಿಎ 1977 ಹಾಗೂ 1978ರಲ್ಲಿ ವಶಕ್ಕೆ ಪಡೆದಿತ್ತು. ಈ ಜಾಗ ವರ್ತುಲ ರಸ್ತೆಗೆ ಮುಖವಾಗಿದೆ. ಹೀಗಾಗಿ ಈ ಜಮೀನಿನ ಮೌಲ್ಯ ಕೋಟ್ಯಂತರ ರುಪಾಯಿಯಾಗಿದೆ. 2003ರಲ್ಲಿ ಆರ್.ಅಶೋಕ ಶುದ್ಧ ಕ್ರಯ ಹೇಗೆ ಮಾಡಿಕೊಂಡರು? ಇಷ್ಟು ದಿನ ಅಕ್ರಮವಾಗಿ ಜಿಪಿಎ ಮಾಡಿಕೊಂಡಿರುವುದನ್ನು ಕೇಳಿದ್ದೆ.

ಆದರೆ ಮೊದಲ ಬಾರಿಗೆ ಸ್ವಾಧೀನಪಡಿಸಿಕೊಂಡಿರುವ ಜಮೀನನ್ನು ಶುದ್ಧ ಕ್ರಯ ಮಾಡಿಕೊಂಡಿರುವ ಪ್ರಕರಣ ನೋಡುತ್ತಿದ್ದೇನೆ. ಬಿಡಿಎ ಸ್ವತ್ತನ್ನು ಖಾಸಗಿ ಅವರಿಂದ ಹೇಗೆ ಖರೀದಿ ಮಾಡಿದರು? ಬಿಡಿಎ ಬಳಿ ಖಾತಾ ಇರುವಾಗ ಗುಳ್ಳಮ್ಮ ಅವರ ವಾರಸುದಾರರಿಂದ ಹೇಗೆ ಖರೀದಿ ಮಾಡಿದರು? ಎಂದು ಪ್ರಶ್ನಿಸಿದರು. ಅಲ್ಲದೆ, ಬಿಜೆಪಿ ಸರಕಾರದ ಅವಧಿಯಲ್ಲಿ ರಾಮಸ್ವಾಮಿ ಬಿನ್ ವೆಂಕಟಪ್ಪ ಎಂಬುವವರ ಹೆಸರಲ್ಲಿ ಡಿನೋಟಿಫಿಕೇಷನ್ ಮಾಡಬೇಕು ಎಂದು ಅರ್ಜಿ ನೀಡುತ್ತಾರೆ. 18-11-2009ರಂದು ಆಗಿನ ಸಿಎಂ ಯಡಿಯೂರಪ್ಪ ಅವರು ಬಿಡಿಎ ಆಯುಕ್ತರು ಕೂಡಲೇ ಕಡತದಲ್ಲಿ ಮಂಡಿಸಿ ಎಂದು ಬರೆಯುತ್ತಾರೆ. ನಂತರ ಅದೇ ವರ್ಷ ಡಿಸೆಂಬರ್ 31ಕ್ಕೆ ಅಂದರೆ ಒಂದು ತಿಂಗಳು 12 ದಿನಗಳ ಅಂತರದಲ್ಲಿ ಡಿನೋಟಿಫಿಕೇಷನ್ ಮಾಡುತ್ತಾರೆ. ಸರಕಾರಿ ಜಾಗ 23 ವರ್ಷಗಳ ನಂತರ ಡಿನೋಟಿಫಿಕೇಷನ್ ಮಾಡಿರುವುದು ಅಕ್ರಮ ಎಂದರು.

ಶುದ್ಧ ಕ್ರಯ ಪತ್ರದಲ್ಲಿ ಗುಳ್ಳಮ್ಮ ಎಂಬುವವರ ವಾರಸುದಾರರು ಯಾರು ಎಂದು ನೋಡಿದರೆ, ವಾರಸುದಾರರು ಜಿ.ಶಾಮಣ್ಣ, ಜಿ.ಮುನಿರಾಜು, ಜಿ.ಗೋವಿಂದಪ್ಪ, ಜಿ. ಕಾಂತರಾಜು, ಜಿ.ಸುಬ್ರಮಣ್ಯ ಎಂದು ಇದೆ. ಇಲ್ಲಿ ರಾಮಸ್ವಾಮಿ ಹಾಗೂ ವೆಂಕಟಪ್ಪ ಎಂಬುವವರಿಗೆ ಗುಳ್ಳಮ್ಮ ಎಂಬುವವರು ಹೇಗೆ ಸಂಬಂಧ ಎಂದು ಗೊತ್ತಿಲ್ಲ. ನನ್ನ ಪ್ರಕಾರ ರಾಮಸ್ವಾಮಿ ದಾರಿಯಲ್ಲಿ ಹೋಗುವ ದಾಸಯ್ಯ ಎಂದು ನನಗೆ ಮೇಲ್ನೋಟಕ್ಕೆ ಕಾಣುತ್ತಿದೆ. ದಾರಿಯಲ್ಲಿ ಹೋಗುವವರಿಂದ ಅರ್ಜಿ ಪಡೆದು ಕೋಟ್ಯಂತರ ರುಪಾಯಿ ಮೌಲ್ಯದ ಜಮೀನು ಡೈನೋಟಿಫೈ ಮಾಡುತ್ತೀರಿ. ಈ ಬೇನಾಮಿ ರಾಮಸ್ವಾಮಿ ಎಲ್ಲಿಂದ ಬಂತು? ಎಂದು ಅಶೋಕ ಅವರನ್ನು ಪ್ರಶ್ನಿಸಿದ್ದಾರೆ.

ಯಾವುದೇ ತಪ್ಪು ಮಾಡಿಲ್ಲದಿದ್ದರೂ ಸಿದ್ದರಾಮಯ್ಯ ಅವರ ರಾಜೀನಾಮೆ ಕೇಳಿ, ಬಿಜೆಪಿಯ ಅಸ್ತ್ರದಂತೆ ಇರುವ ಇ.ಡಿ ಸಂಸ್ಥೆ ಪ್ರಯೋಗಿಸುತ್ತಾರೆ. ಹೀಗಾಗಿ ಇಷ್ಟೆಲ್ಲಾ ಅಕ್ರಮ ಮಾಡಿರುವ ಆರ್.ಅಶೋಕ ಅವರು ಪ್ರತಿಪಕ್ಷದ ನಾಯಕ ಹಾಗೂ ಶಾಸಕ ಸ್ಥಾನಕ್ಕೆ ರಾಜೀನಾಮೆ ನೀಡುತ್ತೀರಾ? ಎಂದು ಪ್ರಶ್ನಿಸಿದ್ದಾರೆ.

ಲೋಕೋಪಯೋಗಿ ಸಚಿವ ಸತೀಶ್ ಜಾರಕಿಹೊಳಿ, ಕೆಪಿಸಿಸಿ ಮಾಧ್ಯಮ ವಿಭಾಗದ ಮುಖ್ಯಸ್ಥರಾದ ರಮೇಶ್ ಬಾಬು ಉಪಸ್ಥಿತರಿದ್ದರು.

ಮೂಲ ವಾರಸುದಾರರು ಡಿನೋಟಿಫಿಕೇಷನ್‌ಗೆ ಅರ್ಜಿ ಕೊಟ್ಟಿಲ್ಲ. ಇವರ ಹೆಸರಲ್ಲಿ ಬೇನಾಮಿ ರಾಮಸ್ವಾಮಿ ಎಂಬುವವರನ್ನು ಸೃಷ್ಟಿ ಮಾಡಲಾಗಿದೆ. ಇದು ಕ್ರಮವೇ? ಅಕ್ರಮವೇ? ಅಂತಿಮವಾಗಿ ಡಿನೋಟಿಫಿಕೇಷನ್ ಆಗಿದ್ದು ಮುನಿಸ್ವಾಮಪ್ಪ ಬಿನ್ ದೊಡ್ಡಪಿಳ್ಳಪ್ಪ ಎಂಬುವವರಿಗೆ. ಈ ಮುನಿಸ್ವಾಮಪ್ಪ ಬಿನ್ ದೊಡ್ಡಪಿಳ್ಳಪ್ಪ ಎಂಬುವವರು ಯಾರು? ಅಂತಿಮವಾಗಿ ಖಾತೆ ಆಗುವುದು ಆರ್. ಅಶೋಕ ಅವರ ಹೆಸರಿಗೆ. ಹೆಜ್ಜೆ ಹೆಜ್ಜೆಗೂ ಅಕ್ರಮ ಮಾಡಿರುವ ಅಶೋಕ ಅವರು ಈಗ ಆಡುತ್ತಿರುವ ಮಾತುಗಳು ನೋಡಿದರೆ ಅಚ್ಚರಿಯಾಗುತ್ತದೆ.

- ಕೃಷ್ಣಬೈರೇಗೌಡ ಕಂದಾಯ ಸಚಿವ

ಟ್ವೀಟೂ-ಖಾರಾ

ಮಲ್ಲಿಕಾರ್ಜುನ ಖರ್ಗೆ, ಎಐಸಿಸಿ ಅಧ್ಯಕ್ಷ

ಮೋದಿಯವರು ತಮ್ಮ ಬಂಡವಾಳಶಾಹಿ ಸ್ನೇಹಿತರನ್ನು ಮಾತ್ರ ಬೆಂಬಲಿಸುತ್ತಿದ್ದಾರೆ. ಅವರು ರೈತರನ್ನು ಬೆಂಬಲಿಸಲಿಲ್ಲ. ಶ್ರೀಮಂತರ 16 ಲಕ್ಷ ಕೋಟಿ ರು.ಗಳ ಸಾಲ ಮನ್ನಾ ಮಾಡಿದ್ದಾರೆ. ರೈತರಿಗೆ ಜಿಎಸ್‌ಟಿ ಹೊರೆ ಹೆಚ್ಚಿಸಿದ್ದಾರೆ. ಎಂಎಸ್‌ಪಿ ಬಗ್ಗೆ ಗ್ಯಾರಂಟಿ ನೀಡುತ್ತಿಲ್ಲ. ಮೂರು ಕರಾಳ ಶಾಸನಗಳ ಕಾರಣ ಹರಿಯಾಣದಲ್ಲಿ 750 ರೈತರು ತಮ್ಮ ಪ್ರಾಣಗಳನ್ನು ಅರ್ಪಿಸುವಂತಾಯಿತು.

ಅಶೋಕ್ ಕುಮಾರ್, ನಾಸಿಕ್

ಕಾಂಗ್ರೆಸ್ ಪಕ್ಷದ ಆಡಳಿತವಿದ್ದಾಗ ದೇಶದಲ್ಲಿ ನೀವು ಏನು ಮಾಡಿದಿರಿ..? ಮತದಾರರಿಗೆ ಎಲ್ಲವೂ ಚೆನ್ನಾಗಿ ಗೊತ್ತಿದೆ.

ಸಮಾಚಾರ ಸಣ್ಣದಲ್ಲ

ಮೂರು ಜಿಂಕೆಗಳ ಬೇಟೆ: ಆರೋಪಿ ಸೆರೆ

ಚಾಮರಾಜನಗರ: ಅಕ್ರಮವಾಗಿ ಅರಣ್ಯ ಪ್ರವೇಶಿಸಿ ನಾಡ ಬಂದೂಕಿನಿಂದ ಮೂರು ಜಿಂಕೆಗಳನ್ನು ಬೇಟೆಯಾಡಿದ ಮೂವರು ಆರೋಪಿಗಳ ಪೈಕಿ ಒಬ್ಬನನ್ನು ವಶಕ್ಕೆ ಪಡೆಯುವಲ್ಲಿ ಅರಣ್ಯ ಇಲಾಖೆ ಅಧಿಕಾರಿಗಳು ಯಶಸ್ವಿಯಾಗಿದ್ದಾರೆ. ಗೋವಿಂದ, ಪ್ರಭು, ಹರೀಶ್ ಆರೋಪಿಗಳಾಗಿದ್ದು, ಹರೀಶ್‌ನನ್ನು ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಗಿದೆ. ಇನ್ನಿಬ್ಬರು ಪರಾರಿಯಾಗಿದ್ದಾರೆ. ರಾಮಪುರ ವನ್ಯಜೀವಿ ವಲಯ ಕೌದಳ್ಳಿ ವಲಯ ಅರಣ್ಯಾಧಿಕಾರಿ ಕಾಂತರಾಜು ಎಸ್.ಚೌಹಾಣ್ ಹಾಗೂ ಸಿಬ್ಬಂದಿ ರಾತ್ರಿ ಗಸ್ತಿನಲ್ಲಿದ್ದಾಗ ಮಲೆ ಮಹದೇಶ್ವರ ಬೆಟ್ಟ ಮುಖ್ಯರಸ್ತೆಯ ಬಳಿ ಮೂರು ಜಿಂಕೆಗಳ ಹತ್ಯೆ ಮಾಡಿರುವುದು ಕಂಡು ಬಂದಿದೆ. ತಕ್ಷಣ ಆರೋಪಿಗಳ ಬಂಧಿಸಲು ಪ್ರಯತ್ನಿಸಿದಾಗ ಗೋ ವಿಂದ್, ಪ್ರಭು ನಾಡಬಂದೂಕು ಜತೆ ಪರಾರಿಯಾ ಗಿದ್ದಾರೆ.

ರೌಡಿಶೀಟರ್ ಮೇಲೆ ಪೊಲೀಸರ ಗುಂಡು

ಹಾಸನ: ಮಾರಕಾಸ್ತ್ರದಿಂದ ಹಲ್ಲೆ ಮಾಡಿ ಎಸ್ಕೇಪ್ ಆಗಲು ಯತ್ನಿಸಿದ ರೌಡಿಶೀಟರ್ ಮೇಲೆ ಪೊಲೀಸರು ಗುಂಡು ಹಾರಿಸಿದ ಘಟನೆ ಬೇಲೂರು ತಾಲೂಕಿನ ಬಿಕ್ಕೋಡು ಗ್ರಾಮದಲ್ಲಿ ನಡೆದಿದೆ. ರೌಡಿಶೀಟರ್ ಮಧು ಎಂಬಾತನ ಮೇಲೆ ಪೊಲೀಸರು ಫೈರಿಂಗ್ ನಡೆಸಿದ್ದು, ಬಂಧನದ ವೇಳೆ ಮಾರಕಾಸ್ತ್ರದಿಂದ ಪೊಲೀಸರ ಮೇಲೆ ಹಲ್ಲೆ ಮಾಡಿದ ಹಿನ್ನೆಲೆ ಆತನ ಕಾಲಿಗೆ ಗುಂಡು ಹಾರಿಸಿದ್ದಾರೆ. ಸೆ.14 ರಂದು ರೌಡಿಶೀಟರ್ ಮಧು ಕ್ಷುಲ್ಲಕ ಕಾರಣಕ್ಕೆ ವಾಟರ್ ಮ್ಯಾನ್ ಗಣೇಶ್ ಗೆ ಚಾಕುವಿನಿಂದ ಇರಿದು ಕೊಲೆಮಾಡಿ ತಲೆಮರೆಸಿಕೊಂಡಿದ್ದ. ಬುಧವಾರ ಹಬ್ಬಕ್ಕೆಂದು ಅರೇಹಳ್ಳಿಗೆ ಆರೋಪಿ ಮಧು ಬರುವ ಮಾಹಿತಿ ಮೇರೆಗೆ ಬಂಧಿಸಲು ಪೊಲೀಸರು ತೆರಳಿದ್ದರು. ಬಂಧನದ ವೇಳೆ ಡ್ಯಾಗರ್‌ನಿಂದ ಪೊಲೀಸರ ಮೇಲೆ ಹಲ್ಲೆ ನಡೆಸಿದ್ದಾನೆ. ಈ ವೇಳೆ, ಬೇಲೂರು ಇನ್ಸ್‌ಪೆಕ್ಟರ್ ವಿನಯ್ ಕಾಲಿಗೆ ಗುಂಡು ಹಾರಿಸಿ ಆರೋಪಿಯನ್ನು ಬಂಧಿಸಿದ್ದಾರೆ. ಗಾಯಾಳುವನ್ನು ಬೇಲೂರು ಆಸ್ಪತ್ರೆಗೆ ದಾಖಲಿಸಲಾಗಿದೆ.

ಹೊತ್ತಿ ಉರಿದ ಕೈ ಮುಖಂಡನ ಕಾರು

ಚಿಕ್ಕೋಡಿ: ಕಾಂಗ್ರೆಸ್ ಮುಖಂಡ ಹಾಗೂ ಉದ್ಯಮಿ ಕಾರು ಹೊತ್ತಿ ಉರಿದ ಪರಿಣಾಮ ವ್ಯಕ್ತಿ ಸುಟ್ಟು ಕರಕಲಾದ ಘಟನೆ ತಾಲೂಕಿನ ಜೈನಾಪುರ ಗ್ರಾಮದ ಬಳಿ ನಡೆದಿದೆ. ಚಿಕ್ಕೋಡಿ ಪಟ್ಟಣದ ಮುಲ್ಲಾ ಪ್ಲಾಟ್ ನಿವಾಸಿ ಫೈರೋಜ್ ಬಡಗಾಂವ (40) ಮೃತಪಟ್ಟವರು. ಜೈನಾಪುರ ಗ್ರಾಮದ ಸಂಕೇಶ್ವರ - ಜೇವರ್ಗಿ ರಾಜ್ಯ ಹೆದ್ದಾರಿ ಬಳಿ ಮಂಗಳವಾರ ತಡರಾತ್ರಿ ಕಾರಿಗೆ ಬೆಂಕಿ ಬಿದ್ದಿದೆ. ಬುಧವಾರ ಬೆಳಗ್ಗೆ ಘಟನೆ ಬೆಳಕಿಗೆ ಬಂದಿದ್ದು ಘಟನೆಯಲ್ಲಿ ಗ್ರಾನೈಟ್ ಉದ್ಯಮಿ ಫೈರೋಜ್ ಸಂಪೂರ್ಣ ಸುಟ್ಟು ಕರಕಲಾಗಿದ್ದಾರೆ. ಮೃತ ವ್ಯಕ್ತಿ ಕಾಂಗ್ರೆಸ್ ಪಕ್ಷದಲ್ಲಿ ಗುರುತಿಸಿಕೊಂಡಿದ್ದರು. ಜೊತೆಗೆ ಮುಂಬರುವ ಸ್ಥಳೀಯ ಸಂಸ್ಥೆ ಚುನಾವಣೆ ಸ್ಪರ್ಧೆಗೆ ತಯಾರಿ ನಡೆಸಿದ್ದರು ಎಂದು ತಿಳಿದುಬಂದಿದೆ. ಚಿಕ್ಕೋಡಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

{ರಮೇಶ ಜಿಗಜಿಣಗಿ} ಸಂಸದ

ಕಾಂಗ್ರೆಸ್‌ನಲ್ಲಿ ದಲಿತ ಮುಖಂಡರ ಗುಪ್ತ ಸಭೆ ಪ್ರಯೋಜನಕ್ಕೆ ಬರುವುದಿಲ್ಲ. ದೆಹಲಿಯಿಂದ ಏನು ಬರುತ್ತೋ ಅದೇ ನಾಟುವುದು. ಈ ಜನ್ಮದಲ್ಲಿ ಕಾಂಗ್ರೆಸ್ ನವರು ದಲಿತರನ್ನು ಸಿಎಂ ಮಾಡುವುದಿಲ್ಲ, ಇದು ಸತ್ಯ. ಕಾಂಗ್ರೆಸ್ ನಲ್ಲಿ ದಲಿತರು ಸಿಎಂ ಆಗುವ ಕನಸು ಕಾಣಬೇಕಷ್ಟೆ. ಎಚ್.ಸಿ ಮಹಾದೇವಪ್ಪ ಹುಚ್ಚ ಇದ್ದಾನೆ. ಪೈಪೋಟಿ ನಡೆಯುತ್ತೆ. ಅದರಿಂದ ಏನು ಆಗುವುದಿಲ್ಲ.



ರಾಜ್ಯಾದ್ಯಂತ ನಡೆದ ಗಾಂಧಿ ನಡಿಗೆ ಯಶಸ್ವಿ

ಸರಕಾರ, ಕಾಂಗ್ರೆಸ್ ವತಿಯಿಂದ ಹಮ್ಮಿಕೊಂಡಿದ್ದ ಕಾರ್ಯಕ್ರಮ | ಬೆಂಗಳೂರಲ್ಲಿ ಸಿಎಂ, ಡಿಸಿಎಂ ನೇತೃತ್ವದಲ್ಲಿ ನಡೆದ ಕಾಲ್ನಡಿಗೆ

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ಮಹಾತ್ಮ ಗಾಂಧಿ ಅವರು ಬೆಳಗಾವಿಯಲ್ಲಿ ನಡೆದ ಎಐಸಿಸಿ ಅಧಿವೇಶನದ ಅಧ್ಯಕ್ಷತೆವಹಿಸಿ ನೂರು ವರ್ಷ ತುಂಬಿದ ಹಿನ್ನಲೆಯಲ್ಲಿ ರಾಜ್ಯಾದ್ಯಂತ 'ಗಾಂಧಿ ನಡಿಗೆ'ಯನ್ನು ಯಶಸ್ವಿಯಾಗಿ ನಡೆಸಲಾಯಿತು.

ಸರಕಾರ ಹಾಗೂ ಕಾಂಗ್ರೆಸ್ ಪಕ್ಷದ ವತಿಯಿಂದ ಪ್ರತ್ಯೇಕವಾಗಿ ಈ ಕಾರ್ಯಕ್ರಮ ನಡೆಸಲಾಗಿದೆ. ಬೆಂಗಳೂರು ಸೇರಿದಂತೆ ರಾಜ್ಯಾದ್ಯಂತ ಸ್ಥಳೀಯ ನಾಯಕರು, ಜನಪ್ರತಿನಿಧಿಗಳು ಹಾಗೂ ನಾಯಕರು ಗಾಂಧಿ ನಡಿಗೆಯಲ್ಲಿ ಹೆಜ್ಜೆ ಹಾಕಿದರು.

ಬೆಂಗಳೂರಿನಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ, ಕೆಪಿಸಿಸಿ ಅಧ್ಯಕ್ಷ ಹಾಗೂ ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್, ಮಾಜಿ ಮುಖ್ಯಮಂತ್ರಿ ವೀರಪ್ಪ ಮೊಯ್ಲಿ, ಸಚಿವರಾದ ಲಕ್ಷ್ಮೀ ಹೆಬ್ಬಾಳ್ಕರ್, ಎಚ್.ಕೆ.ಪಾಟೀಲ್, ಪ್ರಿಯಾಂಕ್ ಖರ್ಗೆ ಸೇರಿದಂತೆ ಅನೇಕರು ಗಾಂಧಿಭವನ ಬಳಿಯ ಮಹಾತ್ಮ ಗಾಂಧೀಜಿಯವರ ಪ್ರತಿಮೆಗೆ ಮಾಲಾರ್ಪಣೆ ಮಾಡಿ ಕಾಲ್ನಡಿಗೆ ಜಾಥಾ ಆರಂಭಿಸಿದರು.

ಅಲ್ಲಿಂದ ರೇಸ್‌ಕೋರ್ಸ್ ರಸ್ತೆ, ಚಾಲುಕ್ಯ ವೃತ್ತದ ಮೂಲಕ ವಿಧಾನಸೌಧದ ಬಳಿಯಿರುವ ಮಹಾತ್ಮ ಗಾಂಧಿ ಪ್ರತಿಮೆವರೆಗೂ ಗಾಂಧಿ ನಡಿಗೆ ನಡೆಯಿತು. ಡಿ.ಕೆ. ಶಿವಕುಮಾರ್‌ರವರು ರಾಷ್ಟ್ರಧ್ವಜ ಹಿಡಿದು ಸಿದ್ದರಾಮಯ್ಯನವರೊಂದಿಗೆ ಹೆಜ್ಜೆ ಹಾಕಿದರು. ಆರಂಭದಲ್ಲಿ ಕಾರ್ಯಕ್ರಮಕ್ಕೆ ಆಗಮಿಸಿದ ಮುಖ್ಯಮಂತ್ರಿ ಸಿದ್ದರಾಮಯ್ಯನವರಿಗೆ ಡಿ.ಕೆ. ಶಿವಕುಮಾರ್ ಗಾಂಧಿ ಟೋಪಿ ತೊಡಿಸಿದರು.

ಬೆಂಗಳೂರಲ್ಲಿ ಸಿಎಂ, ಡಿಸಿಎಂ ನೇತೃತ್ವದಲ್ಲಿ ನಡೆದ ಕಾಲ್ನಡಿಗೆಯಲ್ಲಿ ಭಾಗವಹಿಸಿದ್ದ ಕಾಂಗ್ರೆಸ್ ನಾಯಕರು.

ಕಾಂಗ್ರೆಸ್‌ನಿಂದ ಗಾಂಧಿ ಜ್ಯೋತಿ ಪಾದಯಾತ್ರೆ

ಕಾಂಗ್ರೆಸ್ ಪಕ್ಷದ ವತಿಯಿಂದ ಗಾಂಧಿ ಜ್ಯೋತಿ ಪಾದಯಾತ್ರೆ' ಮೂಲಕ ಎಂ.ಜಿ ರಸ್ತೆಯ ಗಾಂಧಿ ಪ್ರತಿಮೆಯಿಂದ ಕೆಪಿಸಿಸಿ ಕಚೇರಿಯ ಭಾರತ ಜೋಡೋ ಭವನದವರೆಗೆ ಡಿಸಿಎಂ ಡಿ ಕೆ ಶಿವಕುಮಾರ್ ನೇತೃತ್ವದಲ್ಲಿ ತೆರಳಿದರು. ಭಾರತ ಜೋಡೋ ಭವನದಲ್ಲಿ ನಡೆದ ಗಾಂಧಿ ಜಯಂತಿ ಕಾರ್ಯಕ್ರಮದಲ್ಲಿ ಮಹಾತ್ಮ ಗಾಂಧಿಜಿ ಹಾಗೂ ಮಾಜಿ ಪ್ರಧಾನಿ ಲಾಲ್ ಬಹದ್ದೂರ್ ಶಾಸ್ತ್ರಿ ಅವರ ಭಾವಚಿತ್ರಕ್ಕೆ ಪುಷ್ಪನಮನ ಸಲ್ಲಿಸಲಾಯಿತು. ಜಿಲ್ಲಾ ಹಾಗೂ ತಾಲೂಕು ಮಟ್ಟದ ಕಾರ್ಯಕ್ರಮಕ್ಕೆ ಜೂಮ್ ಮೂಲಕ ಸಂಪರ್ಕ ಸಾಧಿಸಲಾಗಿತ್ತು. ಆಮೂಲಕ ರಾಜ್ಯಾದ್ಯಂತ ಕಾಂಗ್ರೆಸ್ ಪಕ್ಷ ಒಟ್ಟಿಗೆ ಗಾಂಧಿ ಜಯಂತಿ ಕಾರ್ಯಕ್ರಮ ಆಚರಿಸಿತು. ಈ ಸಂದರ್ಭದಲ್ಲಿ ಕೆಪಿಸಿಸಿ ಅಧ್ಯಕ್ಷರಾದ ಡಿಸಿಎಂ ಡಿ.ಕೆ. ಶಿವಕುಮಾರ್ ರಾಜ್ಯಾದ್ಯಂತ ಕಾಂಗ್ರೆಸ್ ಕಾರ್ಯಕರ್ತರು ಹಾಗೂ ಜನರಿಗೆ ಗಾಂಧಿ ತತ್ವದ ಪ್ರತಿಜ್ಞಾ ವಿಧಿ ಬೋಧಿಸಿದರು.

ಬೆಳಗಾವಿಯಲ್ಲಿ ನಡೆದ ಕಾಂಗ್ರೆಸ್ ಅಧಿವೇಶನದಲ್ಲಿ ಮಹಾತ್ಮ ಗಾಂಧೀಜಿ ಕಾಂಗ್ರೆಸ್ ಅಧ್ಯಕ್ಷರಾಗಿ ನೇತೃತ್ವ ವಹಿಸಿದ್ದರು. ಅಲ್ಲಿಂದಲೇ ಸ್ವಾತಂತ್ರ್ಯ ಹೋರಾಟಕ್ಕೆ ಚಾಲನೆ ನೀಡಲಾಯಿತು. ಅಹಿಂಸಾ ಮಾರ್ಗವಾಗಿ ಬ್ರಿಟಿಷರ ವಿರುದ್ಧ ಹೋರಾಟ ನಡೆಸಿ ಸ್ವಾತಂತ್ರ್ಯ ತಂದುಕೊಡುವಲ್ಲಿ ಗಾಂಧೀಜಿ ಯಶಸ್ವಿಯಾದರು. 1924 ರಲ್ಲಿ ಬೆಳಗಾವಿಯಲ್ಲಿ ಅಧಿವೇಶನ ನಡೆದ ಶತಮಾನೋತ್ಸವ ನೆನಪಿಗಾಗಿ ವರ್ಷಪೂರ್ತಿ ಕಾರ್ಯಕ್ರಮಗಳನ್ನು ಆಯೋಜನೆ ಮಾಡಲಾಗುತ್ತಿದೆ.

-ಡಿ.ಕೆ.ಶಿವಕುಮಾರ್, ಉಪಮುಖ್ಯಮಂತ್ರಿ

ಕಿತ್ತೂರು ವಿಜಯೋತ್ಸವದ ಜ್ಯೋತಿಗೆ ಸಿದ್ದರಾಮಯ್ಯ ಚಾಲನೆ

ಸ್ವಾಭಿಮಾನ, ನಾಡಭಕ್ತಿಗೆ ರಾಣಿ ಚೆನ್ನಮ್ಮ ಮತ್ತೊಂದು ಹೆಸರು

ಬೆಂಗಳೂರು: ಸ್ವಾಭಿಮಾನ-ನಾಡಭಕ್ತಿ, ದೇಶ ಭಕ್ತಿಗೆ ಮತ್ತೊಂದು ಹೆಸರು ರಾಣಿ ಚೆನ್ನಮ್ಮ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಬಣ್ಣಿಸಿದರು.

ವಿಧಾನಸೌಧ ಗ್ರ್ಯಾಂಡ್ ಸ್ಟೆಪ್‌ಗಳ ಬಳಿ ಕಿತ್ತೂರು ವಿಜಯೋತ್ಸವದ ಜ್ಯೋತಿ ಗೆ ಚಾಲನೆ ನೀಡಿ ಮಾತನಾಡಿದರು. ಇಲ್ಲಿಂದ ಹೊರಟ ಜ್ಯೋತಿ ಎಲ್ಲಾ ಜಿಲ್ಲೆಗಳನ್ನು ಹಾದು ಕಿತ್ತೂರು ತಲುಪಲಿದೆ. ಕಿತ್ತೂರು ಉತ್ಸವದ ಅಂಗವಾಗಿ ರಾಜ್ಯಾದ್ಯಂತ ಸಂಚರಿಸಲಿರುವ ಜ್ಯೋತಿ ಯಾತ್ರೆ ಅ.23ರಂದು ಚೆನ್ನಮ್ಮನ ಕಿತ್ತೂರು ತಲುಪಲಿದೆ.

ಈ ವೇಳೆ ಮಾತನಾಡಿದ ಸಿಎಂ ಸಿದ್ದರಾಮಯ್ಯ, ಬ್ರಿಟಿಷರ ವಿರುದ್ಧ ನೇರ ಸವಾಲೊಡ್ಡಿದ ದಿಟ್ಟ ಮಹಿಳೆ. ಸಂಗೊಳ್ಳಿ ರಾಯಣ್ಣ ಕೂಡ ರಾಣಿ ಚನ್ನಮ್ಮ ಅವರ ಸೈನ್ಯದಲ್ಲಿದ್ದರು. ಬ್ರಿಟೀಷರಿಗೆ ತೆರಿಗೆ ಕೊಡಲು ವಿರೋಧಿಸಿ ವೀರೋಚಿತವಾಗಿ ಹೋರಾಡಿದ ದೇಶಪ್ರೇಮಿ ಗಳು ಇವರು ಎಂದರು. ಈ ವೇಳೆ ಉಪ ಮುಖ್ಯಮಂತ್ರಿ ಡಿ. ಕೆಶಿವ ಕುಮಾರ್, ಬೆಳಗಾವಿ ಜಿಲ್ಲಾ ಉಸ್ತುವಾರಿ ಸಚಿವ ಸತೀಶ್ ಜಾರಕಿಹೊಳಿ, ಪ್ರವಾ ಸೋದ್ಯಮ ಇಲಾಖೆಯ ಸಚಿವ ಎಚ್.ಕೆ.ಪಾಟೀಲ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಸಚಿವೆ ಲಕ್ಷ್ಮೀ ಹೆಬ್ಬಾಳ್ಕರ್, ಪ್ರಿಯಾಂಕ್ ಖರ್ಗೆ, ಕಿತ್ತೂರು ಶಾಸಕರಾದ ಬಾಬಾಸಾಹೇಬ್ ಪಾಟೀಲ ಸೇರಿದಂತೆ ಹಲವರಿದ್ದರು.

ವಿಧಾನಸೌಧ ಗ್ರ್ಯಾಂಡ್ ಸ್ಟೆಪ್‌ಗಳ ಬಳಿ ಕಿತ್ತೂರು ವಿಜಯೋತ್ಸವದ ಜ್ಯೋತಿಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಚಾಲನೆ ನೀಡಿದರು.

ನಾಡಪ್ರೇಮ, ದೇಶಪ್ರೇಮ, ಸ್ವಾಭಿಮಾನಕ್ಕೆ ಮತ್ತೊಂದು ಹೆಸರು ರಾಣಿ ಚನ್ನಮ್ಮ. ಕಿತ್ತೂರಿನಲ್ಲಿ ಆಚರಿಸಲ್ಪಡುತ್ತಿರುವ ಕಿತ್ತೂರು ಉತ್ಸವಕ್ಕೆ ಮತ್ತು ಕಿತ್ತೂರಿನ ಅಭಿವೃದ್ಧಿಗೆ ಸರಕಾರ ಸಕಲ ನೆರವನ್ನು ನೀಡುತ್ತಿದೆ. ಅಗತ್ಯ ಅನುದಾನವನ್ನೂ ನೀಡುತ್ತಿದೆ. ಮಹಾತ್ಮ ಗಾಂಧಿಯಯವರ ಜಯಂತಿ ಹಾಗೂ ಲಾಲ್ ಬಹದ್ದೂರು ಶಾಸ್ತ್ರಿ ಅವರ ಜನ್ಮದಿನವೂ ಹೌದು. ಗಾಂಧಿ ನಡಿಗೆ ಮೂಲಕ ಗಾಂಧಿ ತತ್ವಾದರ್ಶಗಳು ಇವತ್ತಿನ ಯುವ ಪೀಳಿಗೆಗೆ ತಲುಪಿಸುವ ಪ್ರಯತ್ನ ಮಾಡಿದ್ದೇವೆ.

-ಸಿದ್ದರಾಮಯ್ಯ, ಮುಖ್ಯಮಂತ್ರಿ

ದೇಶದಲ್ಲಿ ಕಾನೂನು, ಸಂಚಿನ ಹೋರಾಟ ನಡೆಯುತ್ತಿದೆ: ಸಿಎಂ

ಬಿಜೆಪಿಯವರಿಗೆ ಗೋಡ್ಸೆ ನಾಯಕ

ಬೆಂಗಳೂರು: ಮಹಾತ್ಮ ಗಾಂಧಿ ಭಾರತದ ಪ್ರಜ್ಞೆ. ಗಾಂಧಿಯ ದೇಹ ಕೊಂದರೂ ವಿಚಾರಗಳನ್ನು ಕೊಲ್ಲಲು ಅಸಾಧ್ಯ. ಆದರೆ ಬಿಜೆಪಿಯವರಿಗೆ ಗೋಡ್ಸೆ ನಾಯಕ. ಗೋಡ್ಸೆ ಭಾರತ ಮಾಡುವ ಬಿಜೆಪಿ ಷಡ್ಯಂತ್ರವನ್ನು ಸೋಲಿಸೋಣ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಕಾರ್ಯಕರ್ತರಿಗೆ ಕರೆ ನೀಡಿದರು.

ಕೆಪಿಸಿಸಿ ಕಚೇರಿಯ ಭಾರತ್ ಜೋಡೋ ಭವನದಲ್ಲಿ ಆಯೋಜಿಸಿದ್ದ ಮಹಾತ್ಮ ಗಾಂಧೀಜಿ ಅಧ್ಯಕ್ಷತೆಯ ಅಖಿಲ ಭಾರತ ಕಾಂಗ್ರೆಸ್ ಸಮಿತಿಯ ಅಧಿವೇಶನಕ್ಕೆ ನೂರು ವರ್ಷಗಳ ಸಂಭ್ರಮಾಚರಣೆಯ ಹಿನ್ನೆಲೆಯಲ್ಲಿ ಗಾಂಧಿ ಭಾರತ ಕಾರ್ಯಕ್ರಮದ ಉದ್ಘಾಟನಾ ಸಮಾರಂಭದಲ್ಲಿ ಮಾತನಾಡಿದ ಅವರು, ಗಾಂಧಿ ವಿಚಾರದಲ್ಲಿ ಬಿಜೆಪಿ ಬಹಳ ಕೆಳಮಟ್ಟದ ರಾಜಕಾರಣ ಮಾಡುತ್ತಿದೆ. ಬಿಜೆಪಿ ಗೋಡ್ಸೆ ಭಾರತ ಮಾಡಲು ಹೊರಟಿದೆ. ಈ ಷಡ್ಯಂತ್ರವನ್ನು ನಾವು ಸೋಲಿಸಬೇಕಿದೆ. ಗಾಂಧಿ ಭಾರತದ ಆತ್ಮ. ಭಾರತದ ಪ್ರಜ್ಞೆ. ಇಲ್ಲಿ ಗೋಡ್ಸೆಗಳು ಬೆಳೆಯಲು ಬಿಡಬಾರದು. ಧರ್ಮದ ಹೆಸರಲ್ಲಿ, ಜಾತಿ ಹೆಸರಲ್ಲಿ ಸಮಾಜವನ್ನು ಛಿದ್ರ ಮಾಡಲು ಅವಕಾಶ ಕೊಡಬಾರದು. ಕೋಮು ಶಕ್ತಿಗಳನ್ನು ಸೋಲಿಸಬೇಕು ಎಂದು ಅಭಿಪ್ರಾಯಪಟ್ಟರು.

ಬಿಜೆಪಿಗೆ ಜನಪರ ಪ್ರಗತಿ ಮುಖ್ಯವಲ್ಲ. ನಾವು ಸರ್ವ ಜಾತಿ, ಜನಾಂಗ, ಧರ್ಮದವರಿಗೆ ಮತ್ತು ಸರ್ವ ವರ್ಗದವರ ಏಳಿಗೆಗಾಗಿ ಗ್ಯಾರಂಟಿಗ ಳನ್ನು ಜಾರಿ ಮಾಡಿದರೆ, ಈ ಜನಪರ ಕಾರ್ಯಕ್ರಮಗಳ ವಿರುದ್ಧ ತಪ್ಪು ಮಾಹಿತಿ ನೀಡಿ ಫಲಾನುಭವಿಗಳನ್ನು ಅವಮಾನಿಸಿ ದರು ಎಂದು ಆಕ್ರೋಶ ವ್ಯಕ್ತಪಡಿಸಿದರು.

ಕಾನೂನು ಮತ್ತು ಒಳಸಂಚು: ಇಡೀ ದೇಶದಲ್ಲಿ ಕಾನೂನು ಮತ್ತು ಒಳಸಂಚಿನ ನಡುವೆ ಹೋರಾಟ ನಡೆಯುತ್ತಿದೆ. ಸಂಚಿನ ಮೂಲಕ ಕಾನೂನನ್ನು ಸೋಲಿಸಲು ಯತ್ನಿಸಿ ರಾಜಕೀಯ ಅಸ್ಥಿರತೆ ಸೃಷ್ಟಿಸುತ್ತಿದೆ. ಮಹಾತ್ಮ ಗಾಂಧಿ ಅವರು ಹೇಳಿದಂತೆ , ಎಲ್ಲಾ ನ್ಯಾಯಾಲಯಗಳಿಗಿಂತ ಆತ್ಮಸಾಕ್ಷಿಯ ನ್ಯಾಯಾಲಯ ದೊಡ್ಡದು . ಈ ಆತ್ಮಸಾಕ್ಷಿಗೆ ತಕ್ಕಂತೆ ನಡೆಯೋಣ ಎಂದು ಸಿಎಂ ಕರೆ ನೀಡಿದರು.

ಸರ್ವ ಜನಾಂಗದ ಶಾಂತಿಯ ತೋಟದ ನಾಯಕ ಗಾಂಧೀಜಿ

ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಮಾತನಾಡಿ, ಕಾಂಗ್ರೆಸ್ ಶಕ್ತಿ ದೇಶದ ಶಕ್ತಿ, ಕಾಂಗ್ರೆಸ್ ಇತಿಹಾಸ ದೇಶದ ಇತಿಹಾಸ, ಕಾಂಗ್ರೆಸ್ ಅಧಿಕಾರಕ್ಕೆ ಬಂದರೆ, ಎಲ್ಲಾ ವರ್ಗದವರು ಅಧಿಕಾರಕ್ಕೆ ಬಂದಂತೆ. ನಾವು ನೀವೆಲ್ಲರೂ ಗಾಂಧಿ ಕುಟುಂಬದ ಸದಸ್ಯರು. ನಮ್ಮ ಮೇಲೆ ರಾಷ್ಟ್ರಧ್ವಜವಿದೆ. ಈ ಅವಕಾಶ ಬೇರೆ ಯಾರಿಗೂ ಸಿಗುವುದಿಲ್ಲ. ನಾವು ಭಾವನೆ ಮೇಲೆ ರಾಜಕಾಕರಣ ಮಾಡುತ್ತಿಲ್ಲ. ಜನರ ಬದುಕಿನ ಮೇಲೆ ರಾಜಕಾರಣ ಮಾಡುತ್ತಿದ್ದೇವೆ. ಜನರ ಬದುಕು ಸುಧಾರಿಸಲು ಐದು ಗ್ಯಾರಂಟಿ ಯೋಜನೆ ಜಾರಿ ಮಾಡಿದ್ದೇವೆ. ದುಡಿಮೆಯ ನಂಬಿ ಬದುಕು. ಅದರಲ್ಲೇ ದೇವರನ್ನೇ ಹುಡುಕು ಎಂದು ಗಾಂಧಿಜಿಯವರು ಹೇಳಿದ್ದಾರೆ. ಗಾಂಧಿ ಜಯಂತಿಯಂದು ನಾವು ಅನೇಕ ಕಾರ್ಯಕ್ರಮ ರೂಪಿಸಿದ್ದು, ಮುಂದಿನ ಒಂದು ವರ್ಷಗಳ ಈ ಕಾರ್ಯಕ್ರಮ ರೂಪಿಸಲಾಗುವುದು. ಗಾಂಧಿಜಿ ಅವರ ತತ್ವ, ಆದರ್ಶ, ಮಾರ್ಗದರ್ಶನವನ್ನು ಕಾಂಗ್ರೆಸಿಗರು ಅಳವಡಿಸಿಕೊಳ್ಳಬೇಕು ಎಂದು ತಿಳಿಸಿದರು.

ಗಾಂಧಿ ಭಾರತದ ಆತ್ಮ. ಗಾಂಧಿ ಭಾರತದ ಪ್ರಜ್ಞೆ. ಗಾಂಧಿ ಭಾರತದ ಆಲೋಚನಾ ಕ್ರಮ. ಆದ್ದರಿಂದ ಗಾಂಧಿಯ ದೇಹವನ್ನು ಕೊಲ್ಲಬಹುದೇ ಹೊರತು, ಗಾಂಧಿತತ್ವಗಳು, ವಿಚಾರಗಳನ್ನು ಕೊಲ್ಲಲು ಸಾಧ್ಯವೇ ಇಲ್ಲ. ಗಾಂಧಿ ವಿಚಾರಗಳು ಈ ಮಣ್ಣಿನಲ್ಲಿ ಬೆರೆತಿವೆ. ಹೀಗಾಗಿ ಗಾಂಧಿಯವರು ಅಧ್ಯಕ್ಷತೆ ವಹಿಸಿದ್ದ ಬೆಳಗಾವಿ ಅಧಿವೇಶನದ ಶತಾಬ್ದಿ ಅರ್ಥಪೂರ್ಣವಾಗಿ ಇಡೀ ವರ್ಷ ನಡೆಯುತ್ತಿದೆ.

-ಸಿದ್ದರಾಮಯ್ಯ, ಮುಖ್ಯಮಂತ್ರಿ

ಗೌಪ್ಯ ಸಭೆಗೆ ಬೇರೆ ಅರ್ಥ ಕಲ್ಪಿಸುವುದು ಬೇಡ: ದರ್ಶನಾಪುರ

ಸಿಎಂ ಬೆಂಬಲಕ್ಕೆ ಗೌಪ್ಯ ಸಭೆ

ಯಾದಗಿರಿ: ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಬೆಂಬಲ ಸೂಚಿಸೋಕೆ ದಲಿತ ಸಚಿವರು ಸಭೆ ಮಾಡಿದರೆ ಹೊರತು ಇನ್ನ್ಯಾವುದೂ ಕಾರಣಕ್ಕಲ್ಲ. ಹೀಗಾಗಿ ಗೌಪ್ಯ ಸಭೆಗೆ ಬೇರೆ ಅರ್ಥ ಕಲ್ಪಿಸುವುದು ಬೇಡವೆಂದು ಸಚಿವ ಶರಣಬಸಪ್ಪ ದರ್ಶನಾಪುರ ಸ್ಪಷ್ಟಪಡಿಸಿದರು.



ಸಚಿವರಾದ ಜಿ.ಪರಮೇಶ್ವರ, ಮಹಾದೇವಪ್ಪ, ಸತೀಶ ಜಾರಕಿಹೊಳಿ ಗೌಪ್ಯ ಸಭೆ ವಿಚಾರಕ್ಕೆ ನಗರದಲ್ಲಿ ಸುದ್ದಿಗಾರರಿಗೆ ಪ್ರತಿಕ್ರಿಯೆ ನೀಡಿರುವ ಅವರು, ರಾಜ್ಯದ ಜನತೆ ಸೇರಿದಂತೆ ಕೈ ಹೈಕಮಾಂಡ್‌ಗೂ ಸಿದ್ದರಾಮಯ್ಯ ಅವರ ಮೇಲೆ ನಂಬಿಕೆಯಿದೆ. ಸಿಎಂ ಜೊತೆಗೆ ನಾವೆಲ್ಲರೂ ನಿಂತಿದ್ದೇವೆ. ಸಿದ್ದರಾಮಯ್ಯ ಮತ್ತು ಕಾಂಗ್ರೆಸ್ ಜನಪ್ರಿಯತೆ ಕುಗ್ಗಿಸುವ ಕೆಲಸ ನಡೆಯುತ್ತಿದ್ದು, ಇದು ಸಾಧ್ಯವಿಲ್ಲ ಎಂದರು.

ಮುಖ್ಯಮಂತ್ರಿ ಸಿದ್ದರಾಮಯ್ಯನವರ ಪತ್ನಿ ಅವರಿಗೆ ನೈತಿಕತೆ ಕಾಡಿದೆ. ಅವರಿಂದ ಪತಿಗೆ ಮುಜುಗರ ಆಗಬಾರದೆಂದು ಸೈಟು ವಾಪಸ್ ನೀಡುವ ಸ್ವಂತ ನಿರ್ಧಾರ ತೆಗೆದುಕೊಂಡಿದ್ದಾರೆ. ಇದನ್ನು ಪ್ರಶಂಸೆ ಮಾಡಬೇಕು ಅದನ್ನು ಬಿಟ್ಟು ಇಡಿಗೆ ಹೆದರಿಗೆ ಸೈಟ್ ವಾಪಸ್ ಕೊಟ್ಟಿದ್ದಾರೆ ಅನ್ನೋದು ಸುಳ್ಳು ಎಂದು ಬಿಜೆಪಿಗೆ ತಿರುಗೇಟು ನೀಡಿದರು.

ದೇವೇಗೌಡರ ಆಸ್ತಿಗೆ ಗಗನಕ್ಕೇರಿದರೆ, ಸಿದ್ದರಾಮಯ್ಯ ಆಸ್ತಿ ಪಾತಾಳಕ್ಕೆ ತಲುಪಿದೆ.ಇದೆ ಮುಡಾದಲ್ಲಿ ಕುಮಾರಸ್ವಾಮಿ ಕುಟುಂಬಸ್ಥರು ಎಷ್ಟು ಜನ ಸೈಟ್ ಪಡೆದಿದ್ದಾರೆ ? ಎಂದು ಪ್ರಶ್ನಿಸಿದ ಸಚಿವರು, ದೇವೆಗೌಡರು ಈ ಹಿಂದೆ ಮುಂದಿನ ಜನ್ಮದಲ್ಲಿ ಮುಸ್ಲಿಂ ಆಗಿ ಹುಟ್ಟುವುದಾಗಿ ಹೇಳಿದ್ದರಲ್ಲ ಇವಾಗ ಏನಾ ಹೇಳ್ತಾರೆ ? ಎಂದು ಖಾರವಾಗಿ ಪ್ರಶ್ನಿಸಿದರು.

ಎಚ್ಡಿಕೆ, ಬಿಎಸ್‌ವೈ ಇಬ್ಬರು ಕಳ್ಳರಲ್ವಾ?

ಸಿದ್ದರಾಮಯ್ಯ ಯೂಟರ್ನ್ ರಾಮಯ್ಯ ಎಂಬ ಹೇಳಿಕೆಗೆ ಕೆಂಡಮಂಡಲಗೊಂಡ ದರ್ಶನಾಪುರ, ಕುಮಾರಸ್ವಾಮಿಗೆ ತಳಬುಡ ಇಲ್ಲ. ಬೇಲ್ ಮೇಲೆ ಹೊರಗಡೆ ಇದ್ದಾನೆ.ಅವನೇ ದೊಡ್ಡ ಕಳ್ಳ ಅಲ್ವಾ? ಯಡಿಯೂರಪ್ಪ ಬೇಲ್ ಮೇಲೆ ಇದ್ದಾನೆ ಜೈಲಿಗೆ ಹೋಗಿ ಬಂದಿಲ್ವಾ..? ಅವರು ದೊಡ್ಡ ಕಳ್ಳರು ಅಲ್ವಾ..? ಕುಮಾರಸ್ವಾಮಿ ಬೇರೆವರಿಗೆ ಕಳ್ಳರು ಎನ್ನುವ ಮೊದಲು ತಾವು ಏನೆಂದು ನೋಡಿಕೊಳ್ಳಬೇಕೆಂದು ವಾಗ್ದಾಳಿ ನಡೆಸಿದರು.

ಅತ್ತ, ಇತ್ತ, ಸುತ್ತ, ಮುತ್ತ, ಕತ್ತೆತ್ತಿದತ್ತ, ಕಣ್ಣು ಹಾಯಿಸಿದಷ್ಟೂ ಕಾಣುತ್ತಿದ್ದುದು ಬರೀ ಕೆಂಪು...! ರಾಜ್ಯದ ಶಕ್ತಿಕೇಂದ್ರ ವಿಧಾನಸೌಧದ ನೆತ್ತಿಯ ಮೇಲಿನ ಆಗಸವು ಕೋಪದಿಂದ ಕೊತಕೊತ ಕುದಿಯುತ್ತಿದೆಯೋ ಎಂಬಂತೆ ನೆತ್ತರ ಬಣ್ಣಕ್ಕೆ ತಿರುಗಿರುವುದನ್ನು ಬುಧವಾರ ಕ್ಯಾಮೆರಾ ಕಣ್ಣಲ್ಲಿ ಸೆರೆಹಿಡಿದಿದ್ದು ವಿಶ್ವವಾಣಿ ಛಾಯಾಗ್ರಾಹಕ ಸುಧಾಕರ್ ದೇವರಾಜ್.

ಸಿಎಂ ಪತ್ನಿಯಿಂದ ನಿವೇಶನ ಹಿಂಪಡೆದಿರುವುದು ಕಾನೂನು ಉಲ್ಲಂಘನೆ: ಎಚ್‌ಡಿಕೆ

ಮುಡಾ: ಸಾಕ್ಷ್ಯನಾಶಕ್ಕೆ ವ್ಯವಸ್ಥಿತ ಸಂಚು

ಬೆಂಗಳೂರು: ಮುಡಾ ಪ್ರಕರಣವನ್ನು ಮುಚ್ಚಿ ಹಾಕಲು ವ್ಯವಸ್ಥಿತ ಹುನ್ನಾರ ನಡೆಯುತ್ತಿದೆ ಎಂದು ಕೇಂದ್ರ ಸರಕಾರ ಎಚ್.ಡಿ. ಕುಮಾರಸ್ವಾಮಿ ಆರೋಪಿಸಿದ್ದಾರೆ.

- **ಸಿಎಂ ಪತ್ನಿ 14 ನಿವೇಶನಗಳನ್ನು ವಾಪಸ್ ನೀಡಿರುವುದು ಕ್ರಮ ಸರಿಯಿಲ್ಲ**

ಜೆಡಿಎಸ್ ಕಚೇರಿಯಲ್ಲಿ ನಡೆದ ಗಾಂಧಿ ಜಯಂತಿ ಕಾರ್ಯಕ್ರಮದ ಬಳಿಕ ಮಾತನಾಡಿದ ಅವರು, ಸಾಕ್ಷ್ಯ ನಾಶ ಮಾಡಿ ಮುಡಾ ಹಗರಣವನ್ನು ಮುಚ್ಚಿ ಹಾಕಲು ಮಾಡಲು ವ್ಯವಸ್ಥಿತ ಹುನ್ನಾರ ನಡೆಯು ತ್ತಿದೆ. ನ್ಯಾಯಾಲಯದ ಆದೇಶ ಉಲ್ಲಂಘಿಸಿ ಮುಖ್ಯಮಂತ್ರಿ ಪತ್ನಿ ಅವರಿಂದ ನಿವೇಶನಗಳನ್ನು ವಾಪಸ್ ಪಡೆದಿರುವ ಮುಡಾ ಆಯುಕ್ತರನ್ನು ಕೂಡಲೇ ಬಂಧಿಸಬೇಕು ಎಂದು ಆಗ್ರಹಿಸಿದರು.

ಮುಡಾ ಹಗರಣವನ್ನು ಮುಚ್ಚಿ ಹಾಕಲು ಮುಖ್ಯಮಂತ್ರಿ ಸಿದ್ದರಾಮಯ್ಯ, ನಗರಾಭಿವೃದ್ಧಿ ಸಚಿವ ಬೈರತಿ ಸುರೇಶ್, ಲೋಕಾಯುಕ್ತ ಅಧಿಕಾರಿಗಳು ಹಾಗೂ ಮುಡಾ ಅಧಿಕಾರಿಗಳು ವ್ಯವಸ್ಥಿತವಾಗಿ ಶಾಮೀಲಾಗಿದ್ದಾರೆ. ಹಗರಣದಲ್ಲಿ ಸಿಲುಕಿರುವ ಸಿಎಂ ಸಿದ್ದರಾಮಯ್ಯ ಅವರ ಪತ್ನಿ 14 ನಿವೇಶನಗಳನ್ನು ವಾಪಸ್ ನೀಡಿರುವ ಕ್ರಮ ಸರಿಯಿಲ್ಲ. ನಿವೇಶನಗಳನ್ನು ಹಿಂದಕ್ಕೆ ಪಡೆದಿರುವುದು ನ್ಯಾಯಾಲಯದ ಆದೇಶದ ಸ್ಪಷ್ಟ ಉಲ್ಲಂಘನೆ ಮತ್ತು ನ್ಯಾಯಾಂಗ ನಿಂದನೆ. ಹೀಗಾಗಿ ಮುಡಾ ಆಯುಕ್ತರನ್ನು ಬಂಧಿಸಬೇಕು ಎಂದು ಅವರು ಒತ್ತಾಯಿಸಿದರು.

ಮುಡಾ ತನಿಖೆಯನ್ನು ಜಾರಿ ನಿರ್ದೇಶನಾಲಯ ಕೈಗೆತ್ತಿಕೊಂಡು ಇಸಿಐಆರ್ ದಾಖಲು ಮಾಡಿದ ಕೂಡಲೇ ಬಿರುಸಿನ ಬೆಳವಣಿಗೆಗಳು ನಡೆದಿವೆ. ಮಂಗಳವಾರದ ದಿನ ಸಿದ್ದರಾಮಯ್ಯ ಅವರ ಪತ್ನಿ ಪಾರ್ವತಿ ಅವರೇ ಖುದ್ದು ಮುಡಾ ಕಚೇರಿಗೆ ಬಂದು ನಿವೇಶನ ವಾಪಸ್ ನೀಡುವುದಾಗಿ ಹೇಳಿದ್ದರು. ಈ ಹೇಳಿಕೆ ಹೊರಬಿದ್ದ ನಂತರ ಎಲ್ಲಾ ನಿವೇಶನಗಳ ಮುಡಾ ವಶಕ್ಕೆ ಹೋಗಿವೆ. ಹದಿನಾಲ್ಕು ನಿವೇಶನಗಳ ಕ್ರಯಪತ್ರಗಳು ರದ್ದಾಗಿವೆ ಎಂದು ಮುಡಾ ಆಯುಕ್ತರೇ ಹೇಳಿಕೆ ಕೊಟ್ಟಿದ್ದಾರೆ. ಇದೆಲ್ಲಾ ರಾಕೆಟ್ ವೇಗದಲ್ಲಿ ಆಗಿದೆ ಎಂದು ಕುಮಾರಸ್ವಾಮಿ ಅವರು ಹೇಳಿದರು.

ಇದೆಲ್ಲವೂ ಸಂಶಯಾಸ್ಪದವಾಗಿ ನಡೆದಿದೆ. ಹೈಕೋರ್ಟ್ ಮತ್ತು ಜನಪ್ರತಿನಿಧಿಗಳ ನ್ಯಾಯಾಯಾಲಗಳ ಆದೇಶಗಳಿವೆ. ಹೀಗಿದ್ದೂ ಮುಡಾ ಆಯುಕ್ತರು ನಿವೇಶನಗಳನ್ನು ವಾಪಸ್ ಪಡೆಯುವ ನಿರ್ಧಾರ ಮಾಡುತ್ತಾರೆ. ಅವರಿಗೆ ಈ ಅಧಿಕಾರ ಇಲ್ಲ. ಇಲ್ಲಿ ಸಿಎಂ ಅಧಿಕಾರದ ದುರುಪಯೋಗ ಮಾಡಿದ್ದಾರೆ. ಯಾವ ಆಧಾರದ ಮೇಲೆ ವಾಪಸ್ ಪಡೆಯಲಾಗಿದೆ? ಮುಡಾ ಆಯುಕ್ತರು ತಮ್ಮ ಅಧಿಕಾರ ಮೀರಿ ವರ್ತಿಸಿದ್ದಾರೆ. ಹೀಗಾಗಿ ಕೂಡಲೇ ಅವರನ್ನು ಬಂಧಿಸಬೇಕು ಎಂದು ಆಗ್ರಹಿಸಿದರು.

ತನಿಖೆಯಲ್ಲಿ ಸಿಎಂ ಹಸ್ತಕ್ಷೇಪ ಎದ್ದು ಕಾಣುತ್ತಿದೆ. ಯಾರ ಆಸ್ತಿ ಇದು. ಎಲ್ಲವನ್ನೂ ನಕಲಿ ದಾಖಲೆ ಸೃಷ್ಟಿ ಮಾಡಿ ಜನರನ್ನು ಯಾಮಾರಿಸಿದರು. ಕೋರ್ಟ್‌ನಲ್ಲಿ ನಮ್ಮದೇ ಆಸ್ತಿ ಎಂದಿದ್ದಾರೆ. ಇಷ್ಟಕ್ಕೂ ಮುಡಾ ಆಯುಕ್ತ ಎಲ್ಲಿಗೆ, ಯಾರ ಬಳಿಗೆ ಯಾವಾಗ ಬಂದು ನಿವೇಶನಗಳನ್ನು ವಾಪಸ್ ಪಡೆಯುವ ಮನವಿ ಸ್ವೀಕಾರ ಮಾಡಿದರು?

-ಎಚ್.ಡಿ. ಕುಮಾರಸ್ವಾಮಿ, ಕೇಂದ್ರ ಸಚಿವ

ಸಿಎಂ ಪತ್ನಿ ನಿರ್ಧಾರಕ್ಕೆ ಅಭಿನಂದನೆ; ಸಚಿವ ಬೋಸರಾಜು

ಸಿಎಂಗೆ ಮಸಿ ಬಳಿಯಲು ಷಡ್ಯಂತ್ರ

ರಾಯಚೂರು: ಮುಡಾ ಪ್ರಕರಣಕ್ಕೆ ಸಂಬಂಧಿಸಿದಂತೆ ನಿವೇಶನ ವಾಪಸ್ ನೀಡಿದ ಸಿಎಂ ಪತ್ನಿಯ ನಿರ್ಧಾರ ವನ್ನು ಸ್ವಾಗತಿಸು ವುದಾಗಿ ಸಣ್ಣ ನೀರಾವರಿ ಸಚಿವ ಎನ್.ಎಸ್.ಬೋಸರಾಜು ಹೇಳಿದ್ದಾರೆ. ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಮುಖ್ಯಮಂತ್ರಿ ಸಿದ್ದರಾಮಯ್ಯ ನವರ ರಾಜಕೀಯ ಜೀವನಕ್ಕೆ ಮಸಿ ಬಳಿಯಲು ಪ್ರಯತ್ನ ನಡೆದಿದೆ. ಇದಕ್ಕೆ ಬೇಸರಗೊಂಡು ನ್ಯಾಯಬದ್ಧವಾಗಿ ಪಡೆದ ಸೈಟ್‌ಗಳನ್ನು ಸಿಎಂ ಪತ್ನಿ ವಾಪಸ್ ಕೊಟ್ಟಿದ್ದಾರೆ. ಪಾರ್ವತಿಯವರ ನಿರ್ಧಾರ ಉತ್ತಮವಾ ಗಿದೆ. ನಾವು ಅಭಿನಂದಿಸು ತ್ತೇವೆ. ಬಿಜೆಪಿ ಯವರಿಗೆ ನ್ಯಾಯ, ಅಭಿವೃದ್ಧಿ ಬೇಕಿಲ್ಲ. ಕೇವಲ ಕುತಂತ್ರ ರಾಜಕೀಯ ಮಾತ್ರ ಬೇಕು ಎಂದು ಟೀಕಿಸಿದರು.



ಕುಮಾರಸ್ವಾಮಿಗೆ ತಿರುಗೇಟು

ಸಿದ್ದರಾಮಯ್ಯ ವಾಚ್ ಪ್ರಕರಣ ಮತ್ತೆ ಮುನ್ನೆಲೆಗೆ ಬಂದಿರುವ ವಿಚಾರದ ಕುರಿತು ಮಾತನಾಡಿ, ವಿದೇಶದಲ್ಲಿದ್ದ ಸ್ನೇಹಿತರು ಬಂದು ವಾಚ್ ಕೊಟ್ಟಿದ್ದರು. ಅದರ ಬಗ್ಗೆ ಟೀಕೆ -ಟಿಪ್ಪಣಿ ಬಂದ ಕೂಡಲೇ ತಕ್ಷಣ ವಾಪಸ್ ಮಾಡಿದ್ದಾರೆ. ಜವಾಬ್ದಾರಿಯುತ ಜನಪ್ರತಿನಿಧಿ ಮಾಡಬೇಕಾದ ಕೆಲಸ ಮಾಡಿದ್ದಾರೆ. ಅದು ತಪ್ಪಾ? ಕುಮಾರಸ್ವಾಮಿ ಅವರ ಕುಟುಂಬ ಮಾಡಿದ ಹಾಗೆ ಕಳ್ಳತನ ಮಾಡಬೇಕಿತ್ತಾ? ಅವರು ಯಾವ ರೀತಿ ಲೂಟಿ ಮಾಡಿ ಸಾವಿರಾರು ಕೋಟಿ ಮಾಡಿದ್ದಾರೆ ಅನ್ನೋದು ಎಲ್ಲರಿಗೂ ಗೊತ್ತಿಲ್ವಾ? ಇದನ್ನೆಲ್ಲಾ ಮಾಡಿರುವವರ ಮಾತುಗಳಿಗೆ ದೇಶ ಹಾಗೂ ರಾಜ್ಯದ ಜನರು ಹೆಚ್ಚು ಗಮನ ಕೊಡುವ ಅವಶ್ಯಕತೆಯಿಲ್ಲ ಸಚಿವ ಬೋಸರಾಜು ತಿರುಗೇಟು ನೀಡಿದರು.

ವಿಶ್ವವಾಣಿ

ಸಂಪಾದಕೀಯ

ಯುದ್ಧೋನ್ಮಾದ ನಿಲ್ಲಲಿ

ಎರಡು ವರ್ಷಗಳ ಹಿಂದೆ ಆರಂಭವಾದ ರಷ್ಯಾ ಮತ್ತು ಉಕ್ರೇನ್ ನಡುವಣ ಸಮರ ಇನ್ನೂ ನಿಂತಿಲ್ಲ. ಇದೀಗ ಲೆಬನಾನ್ ಮೇಲಿನ ದಾಳಿಯನ್ನು ನೆಪ ಮಾಡಿಕೊಂಡು ಇರಾನ್, ಇಸ್ರೇಲ್ ಮೇಲೆ ಸರಣಿ ಕ್ಷಿಪಣಿ ದಾಳಿ ನಡೆಸಿದೆ. ಇದಕ್ಕೆ ಪ್ರತಿಯಾಗಿ ಇರಾನಿನ ಸರ್ವನಾಶ ಮಾಡುವುದಾಗಿ ಇಸ್ರೇಲ್ ಶಪಥ ಮಾಡಿದೆ. ವಿಶ್ವಕ್ಕೆ ಅಹಿಂಸೆಯನ್ನು ಬೋಧಿಸಿದ ಗಾಂಧೀಜಿಯ ಜನುಮದಿನದಂದೇ ಜಗತ್ತು ಮತ್ತೊಂದು ಮಹಾಸಮರದತ್ತ ಹೊರಳಿರುವುದು ದುರದೃಷ್ಟಕರ ವಿದ್ಯಮಾನ. ಯುದ್ಧದಲ್ಲಿ ಗೆದ್ದವರು ಮತ್ತು ಸೋತವರು ಸೇರಿ ಯಾರಿಗೂ ಒಳಿತಾಗದು. ಈ ಹಿಂದೆ ಆಗಿರುವ ಎಲ್ಲ ವಿನಾಶಕಾರಿ ಯುದ್ಧಗಳು ಕೊಟ್ಟ ಸಂದೇಶವಿದು. ಆದರೆ ಜಗತ್ತಿನಲ್ಲಿ ಯುದ್ಧದಾಹ ನಿಂತಿಲ್ಲ. ಧರ್ಮ,ಮತ, ಗಡಿ ವಿಸ್ತರಣೆಯ ಸಾಮ್ರಾಜ್ಯಶಾಹಿ ಧೋರಣೆಗಳು ಈಗಲೂ ಯುದ್ಧೋನ್ಮಾದವನ್ನು ಸೃಷ್ಟಿಸುತ್ತಿವೆ. ತನ್ನ ಸುತ್ತಲೂ ವೈರಿ ರಾಷ್ಟ್ರಗಳನ್ನು ಹೊಂದಿರುವ ಇಸ್ರೇಲ್‌ಗೆ ಯುದ್ಧ ನಿತ್ಯದ ಪ್ರಕ್ರಿಯೆ. ಈ ಪುಟ್ಟ ರಾಷ್ಟ್ರ ಈಗ ಆರು ರಾಷ್ಟ್ರಗಳ ಜೊತೆ ಏಕಕಾಲದಲ್ಲಿ ಸಮರನಿರತವಾಗಿದೆ. ಅಮೆರಿಕವು ಇಸ್ರೇಲ್ ಬೆನ್ನಿಗೆ ನಿಂತಿದೆ. ಇಸ್ರೇಲ್ ಮತ್ತು ಇರಾನ್ ನಡುವೆ ನೇರ ಯುದ್ಧ ನಡೆದರೆ, ಪ್ರಮುಖ ವ್ಯಾಪಾರ ಮಾರ್ಗವಾದ ಕೆಂಪು ಸಮುದ್ರದಲ್ಲಿ ಸಮಸ್ಯೆ ತಲೆದೋರುವುದು ಖಚಿತ. ಭಾರತ, ಯುರೋಪ್, ಅಮೆರಿಕ, ಆಫ್ರಿಕಾ ಮತ್ತು ಪಶ್ಚಿಮ ಏಷ್ಯಾ ರಾಷ್ಟ್ರಗಳು ವ್ಯಾಪಾರಕ್ಕಾಗಿ ಸೂಯೆಜ್ ಕಾಲುವೆಯನ್ನೇ ಅವಲಂಬಿಸಿವೆ. ಇದು ಸಾಲದೆಂಬಂತೆ ಕೆಂಪು ಸಮುದ್ರದಲ್ಲಿ ಸಾಗುವ ಹಡಗುಗಳ ಮೇಲೆ ದಾಳಿ ನಡೆಸುವ ಯೆಮೆನ್‌ನ ಹೌತಿ ಬಂಡುಕೋರರ ಜತೆ ಹೆಜ್ಬೊಲ್ಲಾ ಉತ್ತಮ ಸಂಬಂಧ ಹೊಂದಿದೆ. ಇರಾನ್‌ನಲ್ಲಿ ಅಂದಾಜು 10,000 ಭಾರತೀಯರು ವಾಸವಾಗಿದ್ದರೆ, ಇಸ್ರೇಲ್‌ನಲ್ಲಿ ಅಂದಾಜು 18,000 ಭಾರತೀಯರಿದ್ದಾರೆ. ಇರಾನ್ ಹಾಗೂ ಇಸ್ರೇಲ್ ಎರಡರ ಜೊತೆಗೂ ಭಾರತ ಸ್ನೇಹ ಸಂಬಂಧ ಹೊಂದಿದೆ. ಇರಾನ್ ಮತ್ತು ಭಾರತ ಇತ್ತೀಚೆಗೆ ಚಬಹಾರ್ ಬಂದರಿನ ಅಭಿವೃದ್ಧಿ ನಿಟ್ಟಿನಲ್ಲಿ ಸುದೀರ್ಘ ಸಹಕಾರಕ್ಕೆ ಒಪ್ಪಿಗೆ ಸೂಚಿಸಿದ್ದವು. ಇರಾನ್ ಮೂಲಕ ಭಾರತ ಮತ್ತು ರಷ್ಯಾವನ್ನು ಸಂಪರ್ಕಿಸುವ ಇಂಟರ್‌ನ್ಯಾಷನಲ್ ನಾರ್ತ್- ಸೌತ್ ಟ್ರಾನ್ಸ್‌ಪೋರ್ಟ್ ಕಾರಿಡಾರ್ (ಐಎನ್‌ಎಸ್‌ಟಿಸಿ) ಕೂಡ ಪ್ರಗತಿಯಲ್ಲಿದೆ. ಇಸ್ರೇಲ್- ಇರಾನ್ ಯುದ್ಧ ಮುಂದುವರಿದರೆ ಭಾರತ ಕಚ್ಚಾ ತೈಲ ಸೇರಿದಂತೆ ಹಲವು ವಿಷಯಗಳಿಗೆ ಬದಲಿ ವ್ಯವಸ್ಥೆ ಮಾಡಿಕೊಳ್ಳುವುದು ಅನಿವಾರ್ಯ. ಈ ಯುದ್ಧ ಮುಂದುವರಿಯದಂತೆ ಜಗತ್ತಿನ ಇತರ ರಾಷ್ಟ್ರಗಳು ಒಟ್ಟಾಗಿ ಒತ್ತಡ ಹೇರುವ ಪ್ರಯತ್ನ ಮಾಡಬೇಕಿದೆ.

ಸೊಂಪಾದಕೀಯ

ಕೋಡು ಮತ್ತು ಕೊಂಬು

ಇಂದಿನ ಮಕ್ಕಳಿಗೆ ವಿದ್ಯಾಭ್ಯಾಸ ಅನ್ನೋದು ಫುಲ್‌ಟೈಮ್ ಜಾಬ್ ಆಗಿಬಿಟ್ಟಿದೆ. ಇದು ಎಲ್ಲರಿಗೂ ಗೊತ್ತು. ತಂದೆ ತಾಯಂದಿರು ತಮ್ಮ ಮಕ್ಕಳಿಗೆ ಪುರುಸೊತ್ತಿಲ್ಲದಂತೆ ಸ್ಕೂಲ್, ಟ್ಯೂಷನ್, ಕೋಚಿಂಗ್ ಕ್ಲಾಸ್ ಅಂತೆಲ್ಲ ಅವರು ಸಂಪೂರ್ಣವಾಗಿ ಬ್ಯುಸಿ ಇರುವಂತೆ ನೋಡಿಕೊಳ್ಳುತ್ತಿದ್ದಾರೆ. ಹಾಗಾಗಿ ಮಕ್ಕಳಿಗೆ ಆಟವಾಡಲು ಕೂಡ ಸಮಯ ಸಿಗದಂತಾಗಿದೆ. ಇನ್ನು ಇತ್ತೀಚಿಗೆ ಹುಟ್ಟಿಕೊಂಡಿರುವ ಇನ್ನೊಂದು ಎಜುಕೇಷನ್ ಭೂತ ಎಂದರೆ ಅದು ಕೋಡಿಂಗ್ ಕ್ಲಾಸ್‌ಗಳದ್ದು. ನೆಟ್ಟಗೆ ಕಣ್ಣು ಬಿಟ್ಟಿಲ್ಲದ ಮಕ್ಕಳನ್ನೂ ಈಗ ಕೋಡಿಂಗ್ ಕಲಿಯಲು ಕಳಿಸಲಾಗುತ್ತಿದೆ. ಕೋಡಿಂಗ್ ಕಲಿತರೆ ಸಾಕು ತಮ್ಮ ಮಕ್ಕಳಿಗೆ ಎರಡು ಕೋಡು ಅಥವಾ ಕೊಂಬು ಮೂಡುತ್ತದೆ ಅನ್ನೋದು ಬಹುತೇಕ ಪೋಷಕರ ಅಭಿಪ್ರಾಯ. ಇದೆಲ್ಲವನ್ನು ಗಮನಿಸಿರುವ ಸರಕಾರ ಮಕ್ಕಳ ಮೇಲಿನ ಹೊರೆಯನ್ನು ಕಡಿಮೆ ಮಾಡುವ ಚಿಂತನೆ ನಡೆಸಿದೆ. ಅದರನ್ವಯ, ಈಗ 16 ವರ್ಷದ ಒಳಗಿನ ಮಕ್ಕಳನ್ನು ಯಾವುದೇ ಕೋಚಿಂಗ್ ಕ್ಲಾಸ್‌ಗಳಿಗೆ ಸೇರಿಸದಂತೆ ಸರಕಾರ ನಿಯಮ ಜಾರಿ ಮಾಡಿದೆ. ಹಾಗಾಗಿ ಇನ್ನು ಮುಂದೆ ಮಣಭಾರದ ಪುಸ್ತಕಗಳನ್ನು ಶಾಲೆಗೆ ತೆಗೆದುಕೊಂಡು ಹೋಗುವುದಷ್ಟೇ ಮಕ್ಕಳ ಕೆಲಸ. ಶಾಲೆ ಮುಗಿದ ನಂತರ ಆ ಟ್ಯೂಷನ್, ಈ ಟ್ಯೂಷನ್ ಎನ್ನುತ್ತಾ ಮಕ್ಕಳು ಅಲೆದಾಡುವುದನ್ನು ಬಿಟ್ಟು ಆಟದ ಮೈದಾನದತ್ತ ಓಡಬಹುದು. ಆದರೆ ಇಂದಿನ ಮಕ್ಕಳು ಏನೂ ಕಮ್ಮಿ ಇಲ್ಲ; ಟ್ಯೂಷನ್, ಕೋಚಿಂಗ್ ಇಲ್ಲ ಅಂದ ತಕ್ಷಣ ಮೊಬೈಲ್ ಹಿಡಿದುಕೊಂಡು ಊಟ ತಿಂಡಿ ನೀರು ಎಲ್ಲವನ್ನು ಮರೆತು ಅದರಲ್ಲಿ ಮುಳುಗಿ ಹೋಗಿಬಿಡುತ್ತಾರೆ. ಹಾಗಾಗಿ ಈ ಟ್ಯೂಷನ್ ಕ್ಯಾನ್ಸಲ್ ಆಗಿರುವ ವಿಷಯ ಮಕ್ಕಳ ಮೇಲೆ ಯಾವ ರೀತಿ ಪರಿಣಾಮ ಬೀರುತ್ತದೆ ಎಂದು ಹೇಳುವುದು ಸ್ವಲ್ಪ ಕಷ್ಟವಾಗುತ್ತದೆ. ಆದರೆ ಸದ್ಯಕ್ಕೆ ಮಕ್ಕಳ ಮೇಲೆ ಹಾಕಲಾಗುತ್ತಿರುವ ಓದಿನ ಒತ್ತಡ ಕೊಂಚಮಟ್ಟಿಗೆ ತಗ್ಗಿದೆ ಅಂತಲೇ ಹೇಳಬಹುದು. ಸರಕಾರವೇನೋ ಸದ್ಯಕ್ಕೆ ಈ ನೀತಿಯನ್ನು ಜಾರಿಗೆ ತಂದಿದೆ. ಆದರೆ ಈ ನೀತಿಯನ್ನು ಅದೆಷ್ಟು ಸಮರ್ಪಕವಾಗಿ ಪ್ರಾಕ್ಟಿಕಲ್ ಆಗಿ ಜಾರಿಗೆ ತರಲಾಗುತ್ತದೆ ಎಂಬುದಕ್ಕೆ ಕಾದು ನೋಡಲೇಬೇಕಿದೆ.

ಸಂಪಾದಕರ ಸದ್ಯಶೋಧನೆ

ಜಿಮ್ಮಿ ಕಾರ್ಟರ್‌ಗೆ ನೂರು

ಅಮೆರಿಕದಲ್ಲಿ ಅಧ್ಯಕ್ಷರು ನಾಲ್ಕು ವರ್ಷಗಳಂತೆ, ಎರಡು ಅವಧಿಗೆ ಅಂದರೆ ಎಂಟು ವರ್ಷಗಳವರೆಗೆ ಆ ಹುದ್ದೆಯಲ್ಲಿರಬಹುದು. ಅದಕ್ಕಿಂತ ಹೆಚ್ಚು ಅವಧಿಗೆ ಇರುವಂತಿಲ್ಲ. ಆದರೆ 'ಮಾಜಿ ಅಧ್ಯಕ್ಷ'ರಾಗಿ? ಹೂಂ.. ಎಷ್ಟು ವರ್ಷಗಳವರೆಗಾದರೂ ಇರಬಹುದು. ಮೊನ್ನೆ ತಾನೇ ತಮ್ಮ ಶತವರ್ಷಗಳನ್ನು ಪೂರೈಸಿದ ಅಮೆರಿಕದ ಮಾಜಿ ಅಧ್ಯಕ್ಷ ಜಿಮ್ಮಿ ಕಾರ್ಟರ್ (ಜನನ: ಅಕ್ಟೋಬರ್ 1,1924), ಅಮೆರಿಕದ ಅಧ್ಯಕ್ಷರಾದವರ ಪೈಕಿ ನೂರು ವರ್ಷ ಪೂರೈಸಿದ ಪ್ರಪ್ರಥಮ ವ್ಯಕ್ತಿ ಎಂಬ ಅಗ್ಗಳಿಕೆಗೆ ಪಾತ್ರರಾದರು. ಅವರು ಅಧ್ಯಕ್ಷರಾಗಿ ಆ ಹುದ್ದೆಯಿಂದ ಇಳಿದಿದ್ದು 1981ರಲ್ಲಿ. ಅವರು 1977ರಿಂದ ಮುಂದಿನ 4 ವರ್ಷಗಳ ಅವಧಿಗೆ ಅಧ್ಯಕ್ಷರಾಗಿದ್ದರು. ಆ ಅವಧಿಯಲ್ಲಿ ಅವರು ಭಾರತಕ್ಕೊಮ್ಮೆ ಭೇಟಿ ನೀಡಿದ್ದರು. ಆ ಸಮಯದಲ್ಲಿ ಮೊರಾರ್ಜಿ ದೇಸಾಯಿ ಭಾರತದ ಪ್ರಧಾನಿಯಾಗಿದ್ದರು. ಸಾಮಾನ್ಯವಾಗಿ ಅಮೆರಿಕದ ಅಧ್ಯಕ್ಷರಾಗಿ ನಿವೃತ್ತರಾದವರು ನೇಪಥ್ಯಕ್ಕೆ ಸರಿದುಬಿಡುತ್ತಾರೆ. ಜಗತ್ತಿನಲ್ಲಿಯೇ ಅತ್ಯುನ್ನತ ಸ್ಥಾನವನ್ನು ಅಲಂಕರಿಸಿದ ಬಳಿಕ, ಬೇರೆ ಯಾವ ಹುದ್ದೆಯನ್ನೇರಿದರೂ ಅವರ ಘನತೆ, ವ್ಯಕ್ತಿತ್ವಕ್ಕೆ ಅದು ಕಮ್ಮಿಯೇ. ಹೀಗಾಗಿ ಬಹುತೇಕರು ತಮ್ಮ ಹೆಸರಿನಲ್ಲಿ ಪ್ರತಿಷ್ಠಾನಗಳನ್ನು ಸ್ಥಾಪಿಸಿಕೊಂಡು, ಸಮಾಜ ಸೇವಾ ಕಾರ್ಯಗಳಲ್ಲಿ ನಿರತರಾಗುವುದು ಸಾಮಾನ್ಯ. ಆದರೆ ಕಾರ್ಟರ್ ಅಷ್ಟಕ್ಕೇ ತಮ್ಮ ಬಿಡುವಿನ ವೇಳೆಯನ್ನು ಕಳೆಯಲು ಸೀಮಿತಗೊಳಿಸಿಕೊಳ್ಳಲಿಲ್ಲ. ಅವರು ಮಾನವ ಹಕ್ಕುಗಳ ಜಾಗೃತಿ ಬಗ್ಗೆ ಜಗತ್ತಿನಾದ್ಯಂತ ಪ್ರವಾಸ ಮಾಡಿದರು. ಸಾಂಕ್ರಾಮಿಕ ರೋಗಗಳ ತಡೆಗೆ ಅಗತ್ಯ ಕ್ರಮಗಳನ್ನು ಕೈಗೊಳ್ಳುವ ಕುರಿತು ಅರಿವು ಮೂಡಿಸಲು ಅವರು ಆಫ್ರಿಕಾ ದೇಶಗಳಲ್ಲಿ ವ್ಯಾಪಕವಾಗಿ ಪ್ರವಾಸ ಮಾಡಿದರು. ಅತಿ ಕಡಿಮೆ ಹಣದಲ್ಲಿ ಮನೆಯನ್ನು ನಿರ್ಮಿಸುವುದನ್ನು ಉತ್ತೇಜಿಸುವ, ಎಲ್ಲರಿಗೂ ಸೂರು ಕಲ್ಪಿಸುವ ಅಗತ್ಯವನ್ನು ಪ್ರತಿಪಾದಿಸುವ, 'ಹ್ಯಾಬಿಟ್ಯಾಟ್ ಫಾರ್ ಹ್ಯುಮಾನಿಟಿ' ಎಂಬ ಸ್ವಯಂಸೇವಾ ಸಂಸ್ಥೆಯ ಚಟುವಟಿಕೆಗೆ ತಮ್ಮ ಸಮಯವನ್ನು ಮೀಸಲಿಟ್ಟರು. ಅಮೆರಿಕದ ಅಧ್ಯಕ್ಷರಾಗಿ ಕಾರ್ಟರ್ ಅವರ ಅವಧಿ ಅಷ್ಟೇನೂ ಮಹತ್ವಪೂರ್ಣದ್ದಾಗಿರಲಿಲ್ಲ ಎನ್ನುವ ರಾಜಕೀಯ ವಿಶ್ಲೇಷಕರು, 'ಕಾರ್ಟರ್ ನಿಜವಾದ ವ್ಯಕ್ತಿತ್ವ ಅನಾವರಣಗೊಂಡಿದ್ದೇ ಅವರು ಮಾಜಿ ಅಧ್ಯಕ್ಷರಾದ ಬಳಿಕ. ಅವರಿಗೆ ಮುಪ್ಪು ಸಮಸ್ಯೆ ಆಗಲಿಲ್ಲ. ಅವರು ವಯಸ್ಸನ್ನು ಲೆಕ್ಕಿಸದೇ ಹೆಚ್ಚು ಕ್ರಿಯಾಶೀಲರಾದರು. ಅವರು ಬಹುತೇಕರಂತೆ ನೇಪಥ್ಯಕ್ಕೆ ಸರಿಯಲಿಲ್ಲ. ಸದಾ ಒಂದಿಲ್ಲೊಂದು ಕಾರಣಕ್ಕೆ ಸುದ್ದಿಯಲ್ಲಿರುತ್ತಾರೆ' ಎಂದು ಅಭಿಮಾನದ ಮಾತುಗಳನ್ನು ಹೇಳುತ್ತಾರೆ. ಮೂಲತಃ ಶೇಂಗಾ ಕೃಷಿಕರಾದ ಕಾರ್ಟರ್, ನಿವೃತ್ತಿಯ ಬಳಿಕ ಕೃಷಿ ಚಟುವಟಿಕೆಗಳಲ್ಲಿ ತಮ್ಮನ್ನು ತೊಡಗಿಸಿಕೊಂಡರು. 1981ರಲ್ಲಿ ಅಧ್ಯಕ್ಷ ಪದವಿಯನ್ನು ತೊರೆದಾಗ, ವೈಟ್ ಹೌಸಿನಿಂದ ಅವರು ತಮ್ಮ ಹುಟ್ಟೂರಾದ ಜಾರ್ಜಿಯಾದ ಪ್ಲೈನ್ಸ್‌ಗೆ ಮರಳಿ, 1961ರಲ್ಲಿ ಖರೀದಿಸಿದ್ದ ಮನೆಯಲ್ಲಿ ವಾಸಿಸಲಾರಂಭಿಸಿ ದರು. ಅವರು ಜಾರ್ಜಿಯಾದ ಗವರ್ನರ್ ಆಗಿದ್ದಾಗಲೂ ಅದೇ ಮನೆಯಲ್ಲಿ ಉಳಿದಿದ್ದರು. ಅಮೆರಿಕದ ಅಧ್ಯಕ್ಷರಾಗಿದ್ದ ಆ 4 ವರ್ಷಗಳ ಅವಧಿಯಲ್ಲಿ ಮಾತ್ರ ಆ ಮನೆಯಲ್ಲಿ ಉಳಿಯಲಿಲ್ಲ. ಆ ಮನೆಯಲ್ಲಿ ಕಾರ್ಟರ್ 63 ವರ್ಷಗಳನ್ನು ಕಳೆದಿದ್ದಾರೆ. ಅದು 3 ಬೆಡ್‌ರೂಮುಗಳ, ನೆಲ ಅಂತಸ್ತು ಮಾತ್ರ ಇರುವ ಸಾಧಾರಣ ಮನೆ. ನಿವೃತ್ತರಾದ ಬಳಿಕ ಗಂಭೀರ ಬರವಣಿಗೆಯಲ್ಲಿ ನಿರತರಾದ ಕಾರ್ಟರ್, ಇಲ್ಲಿ ತನಕ ಸುಮಾರು 30 ಪುಸ್ತಕಗಳನ್ನು ಬರೆದಿದ್ದಾರೆ. ಕಾರ್ಟರ್ ಕೃತಿಗಳು ಭಾರಿ ಸಂಖ್ಯೆಯಲ್ಲಿ ಮಾರಾಟವಾಗುತ್ತವೆ. Faith: A Journey for All, A Full Life: Reflections at Ninety, ಮತ್ತು Our Endangered Values: America's Moral Crisis ಅವರ ಕೃತಿಗಳಲ್ಲಿ ಮಹತ್ವದ್ದಾಗಿವೆ. ಹಾಗೆ ಅವರ ಆಡಿಯೋ ರೆಕಾರ್ಡಿಂಗ್ ಪುಸ್ತಕಗಳು ಬಹಳ ಜನಪ್ರಿಯ. 9 ಸಲ Grammy Award for Best Spoken Word Album ಪ್ರಶಸ್ತಿಗೆ ಅವರ ಹೆಸರು ಪ್ರಸ್ತಾಪವಾಗಿತ್ತು. ತಮ್ಮ 85ನೇ ವಯಸ್ಸಿನ ತನಕವೂ ಸೈಕಲ್ ಸವಾರಿ ಮಾಡುತ್ತಿದ್ದ ಕಾರ್ಟರ್‌ಗೆ ಮೂವರು ಗಂಡು ಮಕ್ಕಳು. ಅವರಾರೂ ತಂದೆ ನೂರು ವರ್ಷ ಪೂರೈಸಿ ದ್ದನ್ನು ಕಣ್ತುಂಬಿಕೊಳ್ಳಲು ಬದುಕುಳಿದಿಲ್ಲ. ತಮ್ಮ ಮರಣದ ಬಳಿಕ ಹುಟ್ಟೂರಿ ನಲ್ಲಿಯೇ ಸಮಾಧಿ ಮಾಡುವಂತೆ ಈಗಾಗಲೇ ಅವರು ಕೋರಿದ್ದಾರೆ.

ಹಿಂದಕ್ಕೆ ಬರಲಾಗದ, ಮುಂದಕ್ಕೆ ಹೋಗಲಾಗದ, ಇದ್ದಲ್ಲಿ ಇರಲಾಗದ ಸ್ಥಿತಿ!

ನಾವು ವಾಹನವೇರಿ ಮರುಭೂಮಿಯಲ್ಲಿ ಸಾಗುವಾಗ ಮಾರ್ಗದಲ್ಲಿ ಅಲ್ಲಲ್ಲಿ ದೂರದಲ್ಲಿ ಒಂಟೆಗಳು, ಒಂದೆರಡು ವಾಹನಗಳು ಕಣ್ಣಿಗೆ ಬಿದ್ದಿದ್ದನ್ನು ಬಿಟ್ಟರೆ, ಅಲ್ಲಿ ಮನುಷ್ಯರ ಅಸ್ತಿತ್ವವೇ ಇಲ್ಲವೇನೋ ಎಂಬ ಅನುಮಾನ ಬರುವಂತಿತ್ತು. ಆ ಮರುಭೂಮಿಯಲ್ಲಿ ಡಾಂಬರು ರಸ್ತೆ ಇರಲಿಲ್ಲ. ಮಣ್ಣು, ಉಸುಕು ಅಥವಾ ಮರಳಿನ ಕಾಲುದಾರಿಯ ಮೇಲೆ ಉಬ್ಬು-ತಗ್ಗು ಮಾರ್ಗದಲ್ಲಿ ನಮ್ಮ ಕಾರು ಹೊರಟಿತ್ತು.

ನೂರೆಂಟು ವಿಶ್ವ

ವಿಶ್ವೇಶ್ವರ ಭಟ್

vbhat@me.com

ಸ್ನೇಹಿತರಾದ ಕಿರಣ್ ಉಪಾಧ್ಯಾಯ ಅವರ ಜತೆ ನಾನು ಕಳೆದ ವರ್ಷ ಸೌದಿ ಅರೇಬಿಯಾಕ್ಕೆ ರೋಡ್ ಟ್ರಿಪ್‌ಗೆ ಹೋಗಿದ್ದೆ. ಆ ಮರುಭೂಮಿ ದೇಶದಲ್ಲಿ ನಾವು ಡ್ರೈವ್ ಮಾಡಿಕೊಂಡು ಏನಿಲ್ಲವೆಂದರೂ ಐದು ಸಾವಿರಕ್ಕೂ ಅಧಿಕ ಕಿ.ಮೀ. ದೂರ ಪ್ರವಾಸ ಮಾಡಿರಬಹುದು. ಸೌದಿಯಲ್ಲಿ ಪ್ರವಾಸ ಮಾಡುವಾಗ ನಗರ ಪ್ರದೇಶವನ್ನು ದಾಟಿದರೆ, ಎಲ್ಲಿ ನೋಡಿದರೂ ಮರುಭೂಮಿಗಳೇ. ಅದರ ಹೊರತಾಗಿ ಮತ್ತೇನನ್ನೂ ನೋಡಲು ಸಾಧ್ಯವಿಲ್ಲ. ನೂರಾರು ಕಿ.ಮೀ. ಪ್ರಯಾಣಿಸಿದರೂ ಒಂದೇ ಒಂದು ಮರ, ಹುಲ್ಲು, ಹಸಿರು ಸಹ ಕಣ್ಣಿಗೆ ಗೋಚರಿಸುವುದಿಲ್ಲ. ರಸ್ತೆಯ ಇಕ್ಕೆಲಗಳಲ್ಲಿ ಮರಳಿನ ಸಾಗರ!

ರಸ್ತೆ ಫಲಕ, ಮೈಲಿಗಲ್ಲು ಅಥವಾ ಜಿಪಿಎಸ್ ಇಲ್ಲದಿದ್ದರೆ, ಎಲ್ಲಿದ್ದೇವೆ ಎಂಬುದೂ ತಿಳಿಯುವುದಿಲ್ಲ. ಎಲ್ಲಿಗೆ ಹೋದರೂ ಒಂದೇ ಪರಿಸರ, ಒಂದೇ ಹವಾಮಾನ ಮತ್ತು ಒಂದೇ ಭೌಗೋಳಿಕ ಪ್ರದೇಶ. ನಾವಿರುವ ತಾಣದ ಸುತ್ತಮುತ್ತ ಇನ್ನಿತರ ಪ್ರೇಕ್ಷಣೀಯ ಸ್ಥಳಗಳಿವೆಯಾ ಎಂದು ಮೊಬೈಲ್‌ನಲ್ಲಿ ಪರಿಶೀಲಿಸಿದರೆ, ಸುಮಾರು ಇಪ್ಪತ್ತು ಕಿ.ಮೀ. ದೂರದಲ್ಲಿ Edge of the World (ಅಂದರೆ 'ಪ್ರಪಂಚದ ಅಂಚು') ಎಂಬ ರಮಣೀಯ ತಾಣವಿದೆ ಎಂಬುದು ಗೊತ್ತಾಯಿತು. ಆ ತಾಣದ ಹೆಸರು ಅಲ್ಲಿಗೆ ಹೋಗುವಂತೆ ನಮ್ಮನ್ನು ಪ್ರೇರೇಪಿಸಿತು. ಸರಿ, ಅಲ್ಲಿಗೆ ಹೋಗಲೇಬೇಕು ಎಂದು ನಿರ್ಧರಿಸಿ ಹೊರಟೆವು. ಆ ತಾಣಕ್ಕೆ ಸುಮಾರು ಹತ್ತು ಹತ್ತು ಕಿ.ಮೀ. ದೂರವಿರುವಾಗಲೇ, ಜಿಪಿಎಸ್ ಹುಚ್ಚಾಪಟ್ಟೆ ವರ್ತಿಸಲಾರಂಭಿಸಿತು. ಹತ್ತು ಕಿ.ಮೀ. ದೂರದಲ್ಲಿದೆ ಎಂದು ತೋರಿಸಿದ ಜಿಪಿಎಸ್ ಮುಂದಿನ ಕ್ಷಣದಲ್ಲಿ ಹದಿನೈದು ಕಿ. ಮೀ. ದೂರ ಎಂದು ತೋರಿಸಲಾರಂಭಿಸಿತು. ಅಷ್ಟೊತ್ತಿಗೆ ಸಾಯಂಕಾಲ ಐದೂವರೆ ಗಂಟೆ ಆಗಿರಬಹುದು. ಸೂರ್ಯ ಮುಳುಗಲಾರಂಭಿಸಿದರೂ ಆ ಬಟಾಬಯಲಿನಲ್ಲಿ ನಾವು 'ಪ್ರಪಂಚದ ಅಂಚ'ನ್ನು ತಲುಪುವ ಉಮೇದಿನಲ್ಲಿ ಹೊರಟಿದ್ದೆವು.

ನಾವು ಹಾಗೆ ಹೋಗುವಾಗ ಮಾರ್ಗದಲ್ಲಿ ಅಲ್ಲಲ್ಲಿ ದೂರದಲ್ಲಿ ಒಂಟೆಗಳು, ಒಂದೆರಡು ವಾಹನಗಳು ಕಣ್ಣಿಗೆ ಬಿದ್ದಿದ್ದನ್ನು ಬಿಟ್ಟರೆ, ಆ ಮರುಭೂಮಿಯಲ್ಲಿ ಮನುಷ್ಯರ ಅಸ್ತಿತ್ವವೇ ಇಲ್ಲವೇನೋ ಎಂಬ ಅನುಮಾನ ಬರುವಂತಿತ್ತು. ಆ ಮರುಭೂಮಿಯಲ್ಲಿ ಡಾಂಬರು ರಸ್ತೆ ಇರಲಿಲ್ಲ. ಮಣ್ಣು, ಉಸುಕು ಅಥವಾ ಮರಳಿನ ಕಾಲುದಾರಿಯ ಮೇಲೆ ಉಬ್ಬು-ತಗ್ಗು ಮಾರ್ಗದಲ್ಲಿ ನಮ್ಮ ಕಾರು ಹೊರಟಿತ್ತು. ದೂರದಲ್ಲೆಲ್ಲೋ ಎದ್ದ ಕಾರಿನ ಧೂಳು ನಮಗೆ Edge of the Worldನ ದಿಕ್ಕನ್ನು ಹೇಳುತ್ತಿತ್ತು. ಆ ಕಾರಿನಲ್ಲಿದ್ದವರು ಆ ತಾಣವನ್ನು ನೋಡಿ ಹಿಂದಿರುಗುತ್ತಿರಬಹುದು ಎಂದು ನಾವು ಅಂದುಕೊಂಡು ಆ ದಿಕ್ಕಿನೆಡೆ ಕ್ರಮಿಸುತ್ತಿದ್ದೆವು. ಎಷ್ಟು ದೂರ ಕ್ರಮಿಸಿದರೂ 'ಪ್ರಪಂಚದ ಅಂಚು' ಸಮೀಪಿಸುತ್ತಿರುವ ಸಣ್ಣ ಸುಳಿವೂ ನಮಗೆ ಗೊತ್ತಾಗುತ್ತಿರಲಿಲ್ಲ.

ಅಷ್ಟೊತ್ತಿಗೆ ನಮ್ಮ ಮೊಬೈಲ್ ನೆಟ್‌ವರ್ಕ್ ಹೊರಟುಹೋಯಿತು. ಈ ಕಾರಣದಿಂದ ಜಿಪಿಎಸ್ ಸಹ ಕೆಲಸ ಮಾಡುತ್ತಿರಲಿಲ್ಲ. ಸೂರ್ಯನೂ ನಿಧಾನವಾಗಿ ಕಂತುತ್ತಿದ್ದ. ನಮ್ಮ ಮುಂದೆ ಎರಡು ಆಯ್ಕೆಗಳಿದ್ದವು. ಮೊದಲನೆಯದು, ಅಷ್ಟು ಸನಿಹ ಬಂದಿರುವುದರಿಂದ 'ಪ್ರಪಂಚದ ಅಂಚು' ತಲುಪುವುದು ಮತ್ತು ಎರಡನೆಯದು, ಅಲ್ಲಿಂದ ಬಂದ ದಾರಿಯಲ್ಲಿ ತಕ್ಷಣ ವಾಪಸ್ ಹೊರಡುವುದು. Edge of the World ಸುಮಾರು 1,200 ನೂರು ಮೀಟರ್ ಆಳದ ಕಣಿವೆ. ಸೌದಿ ಅರೇಬಿಯಾದ ರಾಜಧಾನಿ ರಿಯಾದ್‌ನಿಂದ ಸುಮಾರು ನೂರೈವತ್ತು ಕಿ.ಮೀ. ದೂರದಲ್ಲಿ, ಸುಮಾರು ಎಂಟು ನೂರು ಕಿ.ಮೀ. ಉದ್ದದ ತುವೈಕ್ ಪರ್ವತ ಶ್ರೇಣಿಯ ಕಟ್ಟಕಡೆಯ ಕಣಿವೆ ಪ್ರದೇಶ. ಅದರ ಮುಂದೆ ಏನಿದೆಯೋ ಆ ಬ್ರಹ್ಮನಿಗೇ ಗೊತ್ತು! ನಾವು Edge of the World ತಲುಪುವುದೇ ಅನುಮಾನ ಎಂದು ನಮಗೆ ಬಲವಾಗಿ ಅನಿಸಲಾರಂಭಿಸಿತು. ಒಂದು ವೇಳೆ ತಲುಪಿದರೂ, ಅಷ್ಟೊತ್ತಿಗೆ ಸಂಪೂರ್ಣ ಕತ್ತಲಾಗುವುದರಿಂದ ಅಲ್ಲೇನನ್ನೂ ನೋಡಲಾಗುವುದಿಲ್ಲ. ಅದಕ್ಕಿಂತ ಹೆಚ್ಚಾಗಿ, ಆ ದಾರಿಯಲ್ಲಿ ವಾಪಸ್ ಬರುವುದಾದರೂ ಹೇಗೆ? ಇನ್ನೊಂದು ಮನಸ್ಸು ಹೇಳುತ್ತಿತ್ತು, ಹೇಗಿದ್ದರೂ ಅಷ್ಟು ದೂರ ಹೋಗಿದ್ದೀರಾ.. ನೀವು ನೋಡಬೇಕೆಂದಿರುವ ಸ್ಥಳ ಬಹಳ ಹತ್ತಿರದಲ್ಲಿದೆ, ಅಷ್ಟು ಸನಿಹ ಹೋಗಿ ಖಾಲಿ ಕೈಯಲ್ಲಿ ಬರುತ್ತೀರಾ?

ಆದರೆ ನಾವು ಆ ದುಸ್ಸಾಹಸಕ್ಕೆ ಮುಂದಾಗಲಿಲ್ಲ. ಅದೇ ಒಳ್ಳೆಯದಾಯಿತು. Edge of the World ಹತ್ತಿರ ಹತ್ತಿರ ಹೋದವರು, ಒಲ್ಲದ ಮನಸ್ಸಿನಿಂದ ಕಾರನ್ನು ಹಿಂದಕ್ಕೆ ತಿರುಗಿಸಿದೆವು. ಅಷ್ಟರೊಳಗೆ ಸೂರ್ಯ ಹೆಚ್ಚು-ಕಮ್ಮಿ ಮುಳುಗಿದ್ದ. ಆತ ಕಂತುವಾಗ ಹೊರಸೂಸುವ ಕಿರಣಗಳು ಮೋಡಗಳಿಂದ ಹೊರಚಾಚುತ್ತಿದ್ದವು. ಆದರೆ ಆ ಮರುಭೂಮಿಯಲ್ಲಿ ನರಪಿಳ್ಳೆಯೂ ಇರಲಿಲ್ಲ. ದೂರದಲ್ಲಿ ಇರುವೆಗಳಂತೆ ಕಾಣಿಸುತ್ತಿದ್ದ ಒಂಟೆಗಳ ಸಾಲುಗಳು ಮರೆಯಾಗಿದ್ದವು. ಅದು ಮಂಗಳ ಗ್ರಹದ ಮೈದಾನದಂತೆ ಬೋಳುಬೋಳಾಗಿ ಕಾಣಿಸುತ್ತಿತ್ತು. ತುಸು ದೂರ ವಾಪಸ್ ಬರುತ್ತಿರುವಂತೆ, ನಮ್ಮ ಮುಂದೆ ಎರಡು ಕಾಲು ದಾರಿಗಳು ತೆರೆದುಕೊಂಡವು. ಯಾವ ಹಾದಿಯಲ್ಲಿ ಹೋಗುವುದೆಂದು ಗೊಂದಲವಾಯಿತು. ಏನಾದರೂ ಆಗಲಿ ಎಂದು ಒಂದು ದಾರಿಯನ್ನು ಆಯ್ದುಕೊಂಡೆವು. ಪುಣ್ಯವಶಾತ್ ಆ ಎರಡೂ ದಾರಿಗಳು ಸ್ವಲ್ಪ ದೂರದ ನಂತರ ಕೂಡಿ ಒಂದಾದವು.

ಆ ಮರುಭೂಮಿಯಲ್ಲಿ ನಾವು ಎಲ್ಲಿದ್ದೇವೆ, ಮುಂದೆ ಯಾವ ಕಡೆ ಹೋಗಬೇಕು, ನಾವು ಸಾಗುತ್ತಿರುವ ದಿಕ್ಕು ಸರಿಯಾಗಿದೆಯಾ, ಇನ್ನು ಎಷ್ಟು ದೂರ ಕ್ರಮಿಸಿದರೆ ನಮಗೆ ಮುಖ್ಯರಸ್ತೆ ಅಥವಾ ಊರು ಸಿಗುತ್ತದೆ ಎಂಬ ಪ್ರಶ್ನೆಗೆ ನಮ್ಮಲ್ಲಿ ಉತ್ತರಗಳಿರಲಿಲ್ಲ. ಹೇಳಿ ಕೇಳಿ ಕಿರಣ್ ಮರುಭೂಮಿವಾಸಿ. ಅವರು ಸುಮಾರು ಎರಡು ದಶಕಗಳನ್ನು ಮರುಭೂಮಿಯಲ್ಲಿಯೇ ಕಳೆದವರು. ಮರುಭೂಮಿಯ ನೀರವತೆ, ಅಸಹನೀಯ ತಬ್ಬಲಿತನ ಅವರಿಗೆ ಗೊತ್ತಿಲ್ಲದ ಸಂಗತಿಗಳೇನಲ್ಲ. ಆದರೆ ಅಂದು ನಾವಿದ್ದ ತಾಣ ಅವರಿಗೂ ಗೊತ್ತಿಲ್ಲದ ಮತ್ತೊಂದು ಮರುಭೂಮಿ. ಅಸಲಿಗೆ ನಾವು ಎಲ್ಲಿದ್ದೇವೆ ಎಂಬುದೇ ಗೊತ್ತಿಲ್ಲದಿರುವಾಗ ಹೋಗುವುದಾದರೂ ಎಲ್ಲಿಗೆ? ಈ ಪ್ರಶ್ನೆ ನಮ್ಮನ್ನು ಭೂತಾಕಾರವಾಗಿ ಕಾಡಲಾರಂಭಿಸಿತು. ಅಷ್ಟೊತ್ತಿಗೆ ನಮ್ಮ ಮುಂದೆ ಕತ್ತಲ ಪರದೆ ನಿಧಾನವಾಗಿ ಜಾರಲಾರಂಭಿಸಿತು. ಅಕ್ಷರಶಃ ಅದೇ ನಮಗೆ Edge of the World! ಅಲ್ಲಿ ನಿಲ್ಲುವ ಹಾಗಿರಲಿಲ್ಲ. ಅದೃಷ್ಟವಶಾತ್ ಕಾರಿನಲ್ಲಿ ಇನ್ನೂ ಸ್ವಲ್ಪ ಪೆಟ್ರೋಲ್ ಇತ್ತು.

ಬಚಾವ್ ಆಯ್ತು ಬಡಜೀವ ಅಂದುಕೊಂಡೆವು. ಮೊಬೈಲಿಗೆ ನೆಟ್‌ವರ್ಕ್ ಆಸರೆ ಇರಲಿಲ್ಲ. ಜಿಪಿಎಸ್ ಏದುಸಿರು ಬಿಡುತ್ತಿತ್ತು. Edge of the Worldಗೆ ವಿರುದ್ಧ ದಿಕ್ಕಿಗೆ ಸಾಗುತ್ತಿದ್ದೇವೆ ಎಂಬುದನ್ನು ಖಾತ್ರಿಪಡಿಸಿಕೊಂಡೆವು. ಪೆಟ್ರೋಲ್ ಖಾಲಿಯಾಗುವುದರೊಳಗೆ ಜನವಸತಿ ಪ್ರದೇಶವನ್ನಂತೂ ತಲುಪಬಹುದು ಎಂಬ ಆಶಾಭಾವನೆಯಿಂದ ಆ ಕತ್ತಲಿನಲ್ಲಿ ಕಿರಣ್ ಕಾರನ್ನು ಓಡಿಸಲಾರಂಭಿಸಿದರು. ಆದರೆ ಎಲ್ಲಿಗೆ ಹೋಗುತ್ತಿದ್ದೇವೆ ಎಂಬುದು ಮಾತ್ರ ಇಬ್ಬರಿಗೂ ಗೊತ್ತಿರಲಿಲ್ಲ.

ಕ್ಷಣಕ್ಷಣಕ್ಕೂ ನಮ್ಮ ಗೊಂದಲದ ಮೂಟೆಯ ಭಾರ ಹೆಚ್ಚಾಗುತ್ತಿತ್ತು. ಆ ಕಗ್ಗತ್ತಲಿನಲ್ಲಿ ಸಣ್ಣ ಬೆಳಕು, ದೂರದಲ್ಲೆಲ್ಲೋ ಒಬ್ಬ ವ್ಯಕ್ತಿ ಕಾಣಿಸಿಕೊಳ್ಳಬಾರದೇ ಎಂದು ಅಂದುಕೊಂಡಿದ್ದಷ್ಟೇ ಬಂತು. ಅಂಥ ಯಾವ ಚಮತ್ಕಾರವೂ ನಡೆಯಲಿಲ್ಲ, ಇದು ಆತಂಕ, ಎದೆಬಡಿತವನ್ನು ಮತ್ತಷ್ಟು ಜಾಸ್ತಿ ಮಾಡುತ್ತಿತ್ತು. Edge of the World ನಮ್ಮ ಪಾಲಿಗೆ end of the world ಥರ ಭಾಸವಾಗುತ್ತಿತ್ತು. ನಾನಂತೂ ನನ್ನ ಜೀವನದಲ್ಲಿ ಆ ರೀತಿ ಭೀತಿ ಹುಟ್ಟಿಸುವ ನಿರ್ದಯಿ ಮರುಭೂಮಿಯನ್ನು ನೋಡಿರಲಿಲ್ಲ. ಅಲ್ಲಿ

ಜಿಪಿಎಸ್ ಸಿಗ್ನಲ್ ಕಡಿತ | ಅಲೆದು ಸುಸ್ತಾಗಿ ಸಾವು

ಸೌದಿ ಮರುಭೂಮೀಲಿ ದಿಕ್ಕು ತಪ್ಪಿ ಭಾರತದ ವ್ಯಕ್ತಿ ಸಾವು

ರಿಯಾದ್: ಸೌದಿ ಅರೇಬಿಯಾದ ರಬ್ ಅಲ್ ಖಲಿ ಮರುಭೂಮಿಯಲ್ಲಿ ಜಿಪಿಎಸ್ ಸಿಗ್ನಲ್ ಸಿಗದೆ, ಅಲೆದು ಸುಸ್ತಾಗಿ ನಿರ್ಜಲೀಕರಣ ದಿಂದಾಗಿ ತೆಲಂಗಾಣ ವ್ಯಕ್ತಿ ಹಾಗೂ ಆತನ ಸೂಡಾನ್‌ನ ಸಹಚರ ಮೃತಪಟ್ಟ ಘಟನೆ ನಡೆದಿದೆ.

ಮೃತ ವ್ಯಕ್ತಿ 27 ವರ್ಷದ ಮೊಹಮ್ಮದ್ ಶೆಹಜಾದ ತೆಲಂಗಾಣದ ಕರೀಮ್‌ನಗರದವರು. 3 ವರ್ಷಗಳಿಂದ ಸೌದಿ ಅರೇಬಿಯಾದ ಟೆಲಿಕಮ್ಯುನಿಕೇಷನ್ ಕಂಪನಿಯಲ್ಲಿ ಕೆಲಸ ಮಾಡುತ್ತಿದ್ದರು. ತನ್ನ ಸೂಡಾನ್ ಸಹೋದ್ಯೋಗಿ ಜತೆ ಶೆಹಜಾದ ಮರುಭೂಮಿಯಲ್ಲಿ ಹಾದು ಬರುವಾಗ ಜಿಪಿಎಸ್ ಸಿಗ್ನಲ್ ಕಡಿತವಾಗಿದೆ. ಜತೆಗೆ ಅವರ ಫೋನ್ ಬ್ಯಾಟರಿ ಖಾಲಿಯಾಗಿದೆ. ಹಾಗಾಗಿ, ಯಾರಿಂದಲೂ ಸಹಾಯ ಪಡೆಯಲು ಅವರಿಗೆ ಸಾಧ್ಯವಾಗಿಲ್ಲ. ಅವರ ವಾಹನದ ಇಂಧನ ಖಾಲಿಯಾಗಿದ್ದು ಮಾತ್ರವಲ್ಲದೇ, ಆಹಾರ ಹಾಗೂ ನೀರು ಕೂಡ ಇಲ್ಲದೇ ಬಳಲಿದ್ದಾರೆ. ಕೊನೆಗೆ ಯಾವ ಕಡೆಗೆ ಹೋಗಬೇಕು ಎಂಬುದೂ ಕೂಡ ಗೊತ್ತಾಗದೇ ಅಲೆದಿದ್ದಾರೆ. ಅಂತಿಮವಾಗಿ ಕುಡಿಯಲು ನೀರಿಲ್ಲದೇ ನಿರ್ಜಲೀಕರಣದಿಂದ ಮೃತಪಟ್ಟಿದ್ದಾರೆ.

650 ಕಿ.ಮೀ. ವಿಸ್ತಾರದ ಬೃಹತ್ ಮರುಭೂಮಿ: ಸೌದಿ ಅರೇಬಿಯಾ ದಕ್ಷಿಣ ಭಾಗದಲ್ಲಿ ಹರಡಿರುವ ರಬ್ ಅಲ್ ಖಲಿ ಮರುಭೂಮಿಯ ಸುಮಾರು 650 ಕಿ.ಮೀ. ವಿಸ್ತಾರವಾಗಿದೆ. ಇಲ್ಲಿನ ಕೆಟ್ಟ ಹವಾಮಾನ ಪರಿಸ್ಥಿತಿಯಿಂದಾಗಿ ಅಗತ್ಯ ವ್ಯವಸ್ಥೆಗಳು ಇಲ್ಲದಿದ್ದರೆ ಬದುಕುಳಿಯುವುದು ಕಷ್ಟ ಎನ್ನಲಾಗುತ್ತದೆ.

ನಿಂತು ನಮ್ಮ ಊರು, ಕುಟುಂಬ, ಸ್ನೇಹಿತರು ಸಹ ಕಣ್ಣ ಮುಂದೆ ಬರುತ್ತಿರಲಿಲ್ಲ. ಅಸಲಿಗೆ ನಾನು ಎಂಬ ಪ್ರಾಣಿ ಇರುವುದಾದರೂ ನಿಜವಾ ಎಂದು ಅನಿಸಲಾರಂಭಿಸಿಬಿಟ್ಟಿತು. ನನ್ನ ಮೈ ಚಿವುಟಿಕೊಂಡೆ. ನನ್ನ ಇರುವಿಕೆಗೆ ಆ ಸಣ್ಣ ನೋವು ಸಾಂತ್ವನ ನೀಡಿತಷ್ಟೇ. ಜತೆಯಲ್ಲಿ ಕಿರಣ್ ಇದ್ದುದರಿಂದ ನನ್ನ ಭಯವನ್ನು ತೋರಿಸಿಕೊಳ್ಳದೇ ಅದನ್ನೇ ಹಾಸ್ಯಮಯ ಪ್ರಸಂಗವಾಗಿ ಪರಿವರ್ತಿಸಿಕೊಂಡು ಹಗುರವಾಗಲು ಹರಸಾಹಸಪಡುತ್ತಿದ್ದೆ.

ಈ ಮಧ್ಯೆ, ಮರುಭೂಮಿಯಲ್ಲಿ ಹಾದಿ ತಪ್ಪಿಸಿಕೊಂಡು, ಐದಾರು ತಾಸು ನಡೆದು ನಡೆದು ನಿತ್ರಾಣನಾಗಿ, ಕೊನೆಗೆ ಇಡೀ ರಾತ್ರಿಯನ್ನು ಮರಳಹಾಸಿನ ಮಲಗಿ ಕಳೆದ ಸುಡಾನ್ ದೇಶದ ಪ್ರವಾಸಿಗನ ರೋಚಕ ಅನುಭವ ನೆನಪಾಯಿತು. ಎಂಥ ಅನುಭವಿಗೂ ಮರುಭೂಮಿ ಹೇಗೆ ತನ್ನ ಹಾದಿಯನ್ನು ಕತ್ತಲುಗೊಳಿಸಿ ಗಲಿಬಿಲಿಗೊಳಿಸಿಬಿಡುತ್ತದೆ ಎಂಬುದನ್ನು ಕಟ್ಟಿಕೊಟ್ಟ ಮೊರೊಕ್ಕೋ ದೇಶದ ಅಲೆಮಾರಿಯೊಬ್ಬನ ಕಥನ ಹಾದುಹೋಯಿತು. ಕಡಲು ಚಲನಶೀಲ, ಮರುಭೂಮಿ ಸ್ಥಾವರ ಮತ್ತು ನಿಗೂಢ. ಜನ ಮತ್ತು ಜೀವ ಇರುವೆಡೆ ಜೀವನ ಮಾಡಬಹುದು. ಆದರೆ ಮರುಭೂಮಿ ಶುದ್ಧ ಮಣ್ಣಂಗಟ್ಟಿ! ಅದು ನಿರ್ಭಾವುಕ.

ಆ ಕತ್ತಲೆಯನ್ನು ಸೀಳಿಕೊಂಡು ನಮ್ಮ ಕಾರು ಒಂದೇ ಸಮನೆ ಚಲಿಸುತ್ತಿತ್ತು. ಆದರೆ ಎತ್ತ ಸಾಗುತ್ತಿದ್ದೇವೆ ಎಂಬ ಸಣ್ಣ ಕಲ್ಪನೆಯೂ ನಮಗಿರಲಿಲ್ಲ. ಒಂದು ವೇಳೆ ನಾವಿಬ್ಬರೂ ಆ ಮರುಭೂಮಿಗೆ ಎಷ್ಟೇ ಪರಿಚಿತರಾಗಿದ್ದರೂ ಆ ಕತ್ತಲೆಯಲ್ಲಿ ನಾವು ಅಬ್ಬೇಪಾರಿಗಳೇ.

ಸುಮಾರು 25-30 ಕಿ.ಮೀ. ದೂರ ಕಣ್ಣಿಗೆ ಬಟ್ಟೆ ಕಟ್ಟಿಕೊಂಡವರಂತೆ ಕಾರನ್ನು ಓಡಿಸಿದ ಬಳಿಕ, ಅನತಿ ದೂರದಲ್ಲೆಲ್ಲೋ ಮಿಣುಕು ಹುಳದಂತೆ ಬೆಳಕಿನ ಸೆಲೆ ಕಾಣಿಸಿಕೊಂಡಿತು. ಬದುಕಿದೆಯಾ ಬಡಜೀವವೇ ಎಂದುಕೊಂಡೆವು. ಮತ್ತಷ್ಟು ದೂರ ಕ್ರಮಿಸಿದ ಬಳಿಕ ಮೊಬೈಲ್‌ಗೂ ಜೀವ ಬಂದಿತು. ಜಿಪಿಎಸ್ ಉಸಿರು ಬಿಡಲಾರಂಭಿಸಿತು. ನಾವಿಲ್ಲಿದ್ದೇವೆ ಎಂಬುದು ಮೊಬೈಲ್ ಪರದೆಯಲ್ಲಿ ಕಾಣಿಸಲಾರಂಭಿಸಿತು. ಆ ಎರಡು ಗಂಟೆ ಆ ಮರುಭೂಮಿಯಲ್ಲಿ ಶುದ್ಧ ತಬ್ಬಲಿಗಳಂತೆ, 'ದಾರಿ ತಪ್ಪಿದ ಮಗ'ನಾಗಿ ಕಂಗಾಲಾಗಿದ್ದೆವು. ಕೊನೆಗೆ, ನಿತ್ರಾಣವಾಗಿ ಕಿನಾರೆಯಲ್ಲಿ ಬಿದ್ದ ಮೀನು ತೆವಳುತ್ತಾ, ತೆವಳುತ್ತಾ ಕಡಲು ಸೇರುವಂತೆ, ಹೇಗೇಗೋ ಮುಖ್ಯ ರಸ್ತೆ ಸೇರಿಕೊಳ್ಳುವ ಹೊತ್ತಿಗೆ ಏಳೋ-ಹನ್ನೊಂದೋ ಆಗಿತ್ತು. ಇಂದಿಗೂ ಆ ಕ್ಷಣಗಳನ್ನು ನೆನಪಿಸಿಕೊಂಡರೆ ಮೈಮೇಲೆ ಚಳಿಗುಳ್ಳೆಗಳು ಮೂಡುತ್ತವೆ.

ಈ ಘಟನೆಯನ್ನು ಇಂದು ಹಠಾತ್ ನೆನಪಿಸಿಕೊಳ್ಳಲು ಕಾರಣವೇನು ಎಂದು ನಿಮಗನಿಸಬಹುದು. ಇದಕ್ಕೂ ಕಾರಣವಿದೆ. ಇತ್ತೀಚೆಗೆ 'ಉದಯವಾಣಿ' ಪತ್ರಿಕೆಯಲ್ಲಿ ಒಂದು ಸುದ್ದಿ ಪ್ರಕಟವಾಗಿತ್ತು. 'ಜಿಪಿಎಸ್ ಸಿಗ್ನಲ್ ಕಡಿತ, ಅಲೆದು ಅಲೆದು ಸುಸ್ತಾಗಿ ಸಾವು. ಸೌದಿ ಮರುಭೂಮಿಯಲ್ಲಿ ದಿಕ್ಕು ತಪ್ಪಿ ಭಾರತದ ವ್ಯಕ್ತಿ ಸಾವು' ಎಂಬ ಶೀರ್ಷಿಕೆ. ಅಂದು ಸೌದಿ ಅರೇಬಿಯಾದ ರಬ್ ಅಲ್ ಖಲಿ ಮರುಭೂಮಿಯಲ್ಲಿ ತೆಲಂಗಾಣದ ಕರೀಂ ನಗರದ 27 ವರ್ಷ ವಯಸ್ಸಿನ ಮೊಹಮ್ಮದ್ ಶೆಹಜಾದ ಮತ್ತು ಸೂಡಾನಿನ ಆತನ ಸ್ನೇಹಿತ ದಾರಿ ತಪ್ಪಿಸಿಕೊಂಡಿದ್ದಾರೆ. ಅವರ ಮೊಬೈಲ್ ಜಿಪಿಎಸ್ ಸಿಗ್ನಲ್ ಏಕಾಏಕಿ ಕಡಿತವಾಗಿದೆ. ತುಸು ಹೊತ್ತಿನ ಬಳಿಕ ಅವರ ಮೊಬೈಲ್ ಬ್ಯಾಟರಿ ಸಹ ಖಾಲಿಯಾಗಿದೆ. ಯಾವ ಕಡೆ ಹೋಗಬೇಕು ಎಂಬುದು ಗೊತ್ತಾಗದೇ ಸುಮಾರು ನೂರಾರು ಕಿ.ಮೀ. ಅಲೆದಿದ್ದಾರೆ. ನಂತರ ಕಾರಿನ ಇಂಧನ ಸಹ ಮುಗಿದುಹೋಗಿದೆ. ಅಷ್ಟೊತ್ತಿಗೆ ಇಬ್ಬರಿಗೂ ಹಸಿವಾಗಿ ಕಾರಿನಲ್ಲಿದ್ದ ಕುಡಿಯುವ ನೀರು, ಡ್ರೈ ಫ್ರೂಟ್ಸ್, ಬಿಸ್ಕತ್ ಅನ್ನು ಖಾಲಿ ಮಾಡಿದ್ದಾರೆ. ಸೌದಿ ಅರೇಬಿಯಾದ ದಕ್ಷಿಣ ಭಾಗದಲ್ಲಿ ಹರಡಿರುವ ಸುಮಾರು ಸಾವಿರ ಕಿ.ಮೀ. ಉದ್ದ, ಐನೂರು ಕಿ.ಮೀ. ಅಗಲದ ರಬ್ ಅಲ್ ಖಲಿ ಮರುಭೂಮಿಯಲ್ಲಿ ಎಷ್ಟು ಅಲೆದರೂ ಅವರಿಗೆ ತಾವು ಎಲ್ಲಿದ್ದೇವೆ ಎಂಬುದು ಗೊತ್ತಾಗಿಲ್ಲ ಮತ್ತು ಮುಖ್ಯರಸ್ತೆ ಸಿಕ್ಕಿಲ್ಲ. ಅಲೆದು ಅಲೆದು ಸುಸ್ತಾಗಿ, ಕೊನೆಗೆ ಇಬ್ಬರೂ ಬಾಯಾರಿಕೆಯಿಂದ ದಯನೀಯವಾಗಿ ಸತ್ತಿದ್ದಾರೆ.

ಈ ಸುದ್ದಿ ಓದುತ್ತಿದ್ದಂತೆ ನನಗೆ ಹಿಂದಕ್ಕೆ ಬರಲಾಗದ, ಮುಂದಕ್ಕೆ ಹೋಗಲಾಗದ, ಇದ್ದಲ್ಲಿ ಇರಲಾಗದ Edge of the World ತುತ್ತತುದಿಯಲ್ಲಿ ನಿಂತ ಅನುಭವವಾಯಿತು. ಅಂದು ನಾವು ಸಹ ಅದೇ ಸ್ಥಿತಿಯಲ್ಲಿದ್ದೆವು. ಬಚಾವ್ ಆಗಿ ಬಂದಿದ್ದೇ ದೊಡ್ಡದು!

ಮಹಾತ್ಮ ಗಾಂಧೀಜಿ ಈಗ ನಮ್ಮೊಂದಿಗೆ ಇದ್ದಿದ್ದರೆ!

ಇನ್ನು 2-3 ಶತಮಾನಗಳ ಬಳಿಕ ಜನರು ಖಂಡಿತ ಗಾಂಧೀಜಿಯನ್ನು ದೇವರೆಂದು ಪೂಜಿಸುತ್ತಾರೆ. ಇಂದು ನಮಗೆ ಗಾಂಧೀಜಿ ಆದರ್ಶ ವ್ಯಕ್ತಿಯಾಗಿದ್ದರೆ, ಮುಂದಿನ ಶತಮಾನಗಳಲ್ಲಿ ಅವರು ದೇವರಾಗುತ್ತಾರೆ. ಜಗತ್ತಿನ ಶ್ರೇಷ್ಠ ವಿಜ್ಞಾನಿಗಳಲ್ಲಿ ಒಬ್ಬರಾದ ಆಲ್ಬರ್ಟ್ ಐನ್‌ಸ್ಟೀನ್ 'ಮಾಂಸ ಹಾಗೂ ರಕ್ತದಿಂದ ಕೂಡಿದ ಇಂಥ ವ್ಯಕ್ತಿಯೊಬ್ಬರು ಈ ಭೂಮಿಯ ಮೇಲೆ ಓಡಾಡಿದ್ದರು ಎಂಬುದನ್ನು ಮುಂದಿನ ತಲೆಮಾರಿನವರು ನಂಬುವುದೂ ಕಷ್ಟವಾಗುತ್ತದೆ' ಎಂದಿದ್ದರು.

ಸಂಗತ

ಡಾ.ವಿಜಯ್ ದರಡಾ

vveditoped@gmail.com

ನೀವು ಯಾವತ್ತೂ ಗಾಂಧೀಜಿಯನ್ನು ಭೇಟಿ ಮಾಡಿಲ್ಲ. ನಾನೂ ಭೇಟಿಯಾಗಿಲ್ಲ ಬಿಡಿ. ಆದರೆ ನಾನು ಅವರ ಬಗ್ಗೆ ನನ್ನ ತಂದೆಯವರಿಂದ ಸಾಕಷ್ಟು ಕೇಳಿ ತಿಳಿದುಕೊಂಡಿದ್ದೇನೆ. ನನ್ನ ತಂದೆ ಜವಾಹರಲಾಲ್ ದರಡಾ ಹಿರಿಯ ಸ್ವಾತಂತ್ರ್ಯ ಹೋರಾಟಗಾರರಾಗಿದ್ದರು. ನೀವು ಗಾಂಧೀಜಿಯನ್ನು ನಿಜವಾಗಿಯೂ ತಿಳಿದುಕೊಳ್ಳಬೇಕು ಅಂದರೆ ಸೇವಾಶ್ರಮಕ್ಕೆ ಭೇಟಿ ನೀಡಬೇಕು. ಇವತ್ತಿಗೂ ಗಾಂಧೀಜಿ ಅಲ್ಲಿ ಜೀವಂತವಾಗಿದ್ದಾರೆ! ಇಂದು ಜಗತ್ತು ಯಾವ್ಯಾವ ಮೌಲ್ಯಗಳನ್ನು ಅಳವಡಿಸಿಕೊಳ್ಳಬೇಕು ಎಂದು ಬಯಸುತ್ತಿದೆಯೋ ಅಂಥ ಎಲ್ಲಾ ಸಂಗತಿಗಳ ಬಗ್ಗೆ ಗಾಂಧೀಜಿ ಆ ಸೇವಾಶ್ರಮದಲ್ಲೇ ಸಾಕಷ್ಟು ಪ್ರಯೋಗಗಳನ್ನು ಮಾಡಿದ್ದರು. ನಿಜಕ್ಕೂ ಅವರೊಬ್ಬ ಅಸಾಮಾನ್ಯ ಹಾಗೂ ಅದ್ಭುತ ವ್ಯಕ್ತಿ.

ಇನ್ನು ಎರಡು ಅಥವಾ ಮೂರು ಶತಮಾನಗಳ ಬಳಿಕ ಜನರು ಖಂಡಿತ ಗಾಂಧೀಜಿಯನ್ನು ದೇವರೆಂದು ಪೂಜಿಸುತ್ತಾರೆ. ಇಂದು ನಮಗೆ ಗಾಂಧೀಜಿ ಆದರ್ಶ ವ್ಯಕ್ತಿಯಾಗಿದ್ದರೆ, ಮುಂದಿನ ಶತಮಾನಗಳಲ್ಲಿ ಅವರು ದೇವರಾಗುತ್ತಾರೆ. ಜಗತ್ತಿನ ಅತ್ಯಂತ ಶ್ರೇಷ್ಠ ವಿಜ್ಞಾನಿಗಳಲ್ಲಿ ಒಬ್ಬರಾದ ಆಲ್ಬರ್ಟ್ ಐನ್‌ಸ್ಟೀನ್ ಅವರು 'ಮಾಂಸ ಹಾಗೂ ರಕ್ತದಿಂದ ಕೂಡಿದ ಇಂಥ ವ್ಯಕ್ತಿಯೊಬ್ಬರು ಈ ಭೂಮಿಯ ಮೇಲೆ ಓಡಾಡಿದ್ದರು ಎಂಬುದನ್ನು ಮುಂದಿನ ತಲೆಮಾರಿನವರು ನಂಬುವುದು ಕೂಡ ಕಷ್ಟವಾಗುತ್ತದೆ' ಎಂದು ಹೇಳಿದ್ದರು. ಒಮ್ಮೆ ಊಹಿಸಿಕೊಳ್ಳಿ. ಅತ್ಯುನ್ನತ ಶಿಕ್ಷಣ ಪಡೆದ ವ್ಯಕ್ತಿಯೊಬ್ಬ ಆ ಕಾಲದಲ್ಲಿ ಜಗತ್ತಿನ ಅತ್ಯಂತ ಪ್ರಬಲ ಸಾಮ್ರಾಜ್ಯ ಎಂದು ಹೆಸರು ಪಡೆದ ಬ್ರಿಟಿಷ್ ಸಾಮ್ರಾಜ್ಯದ ವಿರುದ್ಧ ಕೇವಲ ಅಹಿಂಸೆಯನ್ನೇ ಶಸ್ತ್ರವಾಗಿಸಿಕೊಂಡು ಹೋರಾಡುವುದು ಅಂದರೆ ಸಾಮಾನ್ಯ ಸಂಗತಿಯೇ? ಬ್ರಿಟಿಷ್ ಸಾಮ್ರಾಜ್ಯ ಬಹಳ ವಿಸ್ತಾರವಾಗಿತ್ತು, ಅಗಾಧ ಶ್ರೀಮಂತವಾಗಿತ್ತು ಹಾಗೂ ಆ ಸಾಮ್ರಾಜ್ಯದಲ್ಲಿ ಸೂರ್ಯ ಮುಳುಗುವುದೇ ಇಲ್ಲ ಎಂದು ಜಗತ್ತು ನಂಬಿತ್ತು. ಅಂಥ ಅಸಾಮಾನ್ಯ ಶಕ್ತಿಶಾಲಿ ರಾಷ್ಟ್ರವನ್ನು ಎದುರುಹಾಕಿಕೊಳ್ಳುವುದು ಹುಡುಗಾಟವಲ್ಲ. ಒಂದು ಕಾಲದಲ್ಲಿ ಸೂಟು ಬೂಟು ಧರಿಸಿ ಓಡಾಡುತ್ತಿದ್ದ ವ್ಯಕ್ತಿ ಇದ್ದಕ್ಕಿದ್ದಂತೆ ಅದನ್ನು ತ್ಯಜಿಸಿ ತನ್ನ ಜೀವಮಾನಪೂರ್ತಿ ಸರಳಾತಿಸರಳ ಕಚ್ಚೆಪಂಚೆ ಉಟ್ಟು ಸ್ವಾತಂತ್ರ್ಯ ಹೋರಾಟ ನಡೆಸಲು ತೀರ್ಮಾನಿಸುವುದು ಸಣ್ಣ ಸಂಗತಿಯೇ? ಗಾಂಧೀಜಿ ಇದನ್ನು ಮಾಡಿದರು. ತನ್ನ ದೇಶದ ಜನರು ತನ್ನನ್ನೂ ತಮ್ಮೊಳಗೊಬ್ಬ ಸಾಮಾನ್ಯ ವ್ಯಕ್ತಿಯೆಂದು ಪರಿಗಣಿಸಲಿ, ಅವರಿಗೆ ಸ್ವಾತಂತ್ರ್ಯದ ಸುಖವೆಂದರೆ ಏನು ಎಂಬುದು ಅನುಭವಿಸುವುದಕ್ಕೆ ಸಿಗಲಿ ಎಂಬ ಕಾರಣದಿಂದ ಹೀಗೆ ಮಾಡಿದರು. ಚರಕದಂಥ ಅತ್ಯಂತ ಸರಳ ಹಾಗೂ ಸೋವಿ ಯಂತ್ರದ ಮೂಲಕ ನೂಲು ತೆಗೆದು ಬ್ರಿಟಿಷ್ ಸರಕಾರದ ಆರ್ಥಿಕ ಧಿಮಾಕಿನ ಮೇಲೆ ದಾಳಿ ನಡೆಸಿದರು. ಅದಕ್ಕೂ ಮೊದಲು ಬ್ರಿಟಿಷರು ನಮ್ಮ ದೇಶದ ಜವಳಿ ಕೈಮಗ್ಗಗಳನ್ನು ನಾಶಪಡಿಸಿದ್ದರು. ತಮ್ಮ ಬಟ್ಟೆಯನ್ನು ತಾವೇ ನೇಯ್ದುಕೊಳ್ಳುತ್ತಿದ್ದ ಭಾರತೀಯರು, ನಮ್ಮದೇ ದೇಶದ ಹತ್ತಿಯನ್ನು ಬಳಸಿಕೊಂಡು ಬ್ರಿಟಿಷರು ಬ್ರಿಟನ್ನಿನಲ್ಲಿ ಉತ್ಪಾದಿಸಿದ ಬಟ್ಟೆಯನ್ನು ದುಡ್ಡು ಕೊಟ್ಟು ಕೊಂಡುಕೊಳ್ಳುವಂತೆ ಮಾಡಿದ್ದರು. ನಾನು ಗಾಂಧಿಯವರ ಬದುಕಿನ ಪ್ರತಿಯೊಂದು ಮಜಲನ್ನೂ ಅಧ್ಯಯನ ಮಾಡಿದ್ದೇನೆ. ಅವರಂಥ ನಾಯಕ ಇನ್ನೊಮ್ಮೆ ಹುಟ್ಟಿಬರಲು ಸಾಧ್ಯವೇ ಇಲ್ಲ ಎಂದು ನನಗೆ ಅನ್ನಿಸಿದೆ. ಆದರೂ ಗಾಂಧೀಜಿ ಇನ್ನೊಮ್ಮೆ ಹುಟ್ಟಿಬಂದು ನಮ್ಮೊಂದಿಗೆ ಬದುಕಲಿ ಎಂದು ಬಯಸುತ್ತೇನೆ!

ಈ ಕಾಲದ ಕೆಲ ನಾಯಕರು ಹಾಗೂ ಹೊಸ ತಲೆಮಾರಿನ ಹುಡುಗರು ಹಿಂದೆಮುಂದೆ ಯೋಚಿಸದೆ ಗಾಂಧೀಜಿಯನ್ನು ಟೀಕಿಸುತ್ತಾರೆ. ಕೆಲವೊಮ್ಮೆ ಗಾಂಧೀಜಿಯನ್ನು ಅರ್ಥವೇ ಮಾಡಿಕೊಳ್ಳದೆ ಅವರ ಬಗ್ಗೆ ಅಸಂಬದ್ಧ ಮಾತನಾಡುತ್ತಾರೆ. ನನ್ನ ಪ್ರಕಾರ ಅಂಥವರಿಗೆ ಗಾಂಧೀಜಿಯೆಂದರೆ ಏನು ಎಂಬುದು ಗೊತ್ತಿಲ್ಲ. ಅವರಿಗೆ ನಾನು ಕೇಳುವುದು ಇಷ್ಟೆ: ನಮ್ಮ ದೇಶದ ಜನಸಾಮಾನ್ಯರು ಸ್ವಾತಂತ್ರ್ಯ ಹೋರಾಟದಲ್ಲಿ ಪೂರ್ಣ ಪ್ರಮಾಣದಲ್ಲಿ ತಮ್ಮನ್ನು ತೊಡಗಿಸಿಕೊಳ್ಳದೆ ಇದ್ದಿದ್ದರೆ ಬ್ರಿಟಿಷರು ಈ ದೇಶವನ್ನು ಬಿಟ್ಟು ಹೋಗುತ್ತಿದ್ದರೇ? ಇಲ್ಲ. ಪ್ರತಿಯೊಬ್ಬ ಸಾಮಾನ್ಯ ಭಾರತೀಯ ಪ್ರಜೆಯೂ ಸ್ವಾತಂತ್ರ್ಯದ ಬಗ್ಗೆ ಜಾಗೃತಿ ಮೂಡಿಸಿಕೊಂಡು ಹೋರಾಟಕ್ಕೆ ಇಳಿದಿದ್ದರಿಂದ ಬ್ರಿಟಿಷರು ಬ್ರಿಟನ್ನಿಗೆ ಮರಳಿ ಹೋಗಬೇಕಾಯಿತು. ಆ ಜಾಗೃತಿ ಮೂಡಿಸಿದವರು ಯಾರು? ಅನುಮಾನವೇ ಬೇಡ, ಅವರು ಮಹಾತ್ಮ ಗಾಂಧೀಜಿ. ಅವರು ದೇಶದ ಮೂಲೆಮೂಲೆಗಳನ್ನು ಸುತ್ತಿ ಸ್ವಾತಂತ್ರ್ಯ ಹೋರಾಟದ ಬಗ್ಗೆ ಜನರಲ್ಲಿ ಜಾಗೃತಿ ಮೂಡಿಸಿದರು. ದೇಶದ ಪ್ರತಿಯೊಬ್ಬ ಪ್ರಜೆಯ ಮನಸ್ಸಿನಲ್ಲೂ ಬ್ರಿಟಿಷರ ನಿಜವಾದ ಉದ್ದೇಶವೇನೆಂಬುದನ್ನು ಅಚ್ಚೊತ್ತುವಂತೆ ಮಾಡಿದರು. ಅವರ ಮಾತು, ಬರಹ ಹಾಗೂ ನಡೆಗಳು ಎಷ್ಟು ಸರಳ ಮತ್ತು ಮನವರಿಕೆಯಾಗುವಂತೆ ಇದ್ದವು ಅಂದರೆ, ಆ ಕಾಲದ ಮಕ್ಕಳು ಕೂಡ ಸ್ವಾತಂತ್ರ್ಯ ಚಳವಳಿಗೆ ಧುಮುಕಿದ್ದರು. ಸ್ವಾತಂತ್ರ್ಯ ಹೋರಾಟದ ಅನೇಕ ಕತೆಗಳನ್ನು ಹಿರಿಯ ಸ್ವಾತಂತ್ರ್ಯ ಹೋರಾಟಗಾರರಾದ ನನ್ನ ತಂದೆ ಜವಾಹರಲಾಲ್ ದರಡಾ ಅವರಿಂದ ನಾನು ಕೇಳಿದ್ದೇನೆ. ನನಗೆ ಇವತ್ತಿಗೂ ಹಚ್ಚಹಸಿರಾಗಿ ನೆನಪಿರುವುದೆಂದರೆ ಗಾಂಧೀಜಿ ಇಂಗ್ಲೆಂಡ್‌ನಲ್ಲಿ 5ನೇ ಕಿಂಗ್ ಜಾರ್ಜ್‌ನನ್ನು ಭೇಟಿಯಾದ ಕತೆ. ಅದು ನನ್ನ ಮನಸ್ಸಿನ ಮೇಲೆ ಗಾಢ ಪ್ರಭಾವ ಉಂಟುಮಾಡಿದೆ. ರಾಜನನ್ನು ಭೇಟಿಯಾಗಲು ಗಾಂಧೀಜಿ ಹೋದಾಗ ಇವರ ವೇಷಭೂಷಣ ನೋಡಿ ಅರಮನೆಯ ಅಧಿಕಾರಿಗಳು ಇರಿಸುಮುರಿಸುಗೊಂಡಿದ್ದರು. ಆದರೂ ಅದಕ್ಕೆ ಸೊಪ್ಪು ಹಾಕದೆ ಕೇವಲ ಕಚ್ಚೆಪಂಚೆ ಹಾಗೂ ಶಲ್ಯದಲ್ಲೇ ಹೋಗಿ ಗಾಂಧೀಜಿ ರಾಜನನ್ನು ಭೇಟಿಯಾಗಿದ್ದರು. ಮರಳಿ ಬಂದ ಮೇಲೆ ಅವರ ಬಳಿ ಪತ್ರಕರ್ತರೊಬ್ಬರು, 'ನೀವು ಪಂಚೆ ಉಟ್ಟುಕೊಂಡು ಹೋಗಿ ರಾಜನನ್ನು ಭೇಟಿಯಾಗಿದ್ದು ಸರಿಯೇ?' ಎಂದು ಕೇಳಿದ್ದರು. ಅದಕ್ಕೆ ಗಾಂಧೀಜಿ ಹೇಳಿದ್ದೇನು ಗೊತ್ತಾ? 'ರಾಜನೇ ನಮಗಿಬ್ಬರಿಗೂ ಸಾಕಾಗುವಷ್ಟು ಬಟ್ಟೆ ಧರಿಸಿದ್ದ!' ಸೂಕ್ಷ್ಮವಾಗಿ ಯೋಚಿಸಿ ನೋಡಿ. ಇದು ತಮಾಷೆಯ ಉತ್ತರವಲ್ಲ. ಇದು ಬಹಳ ಶಕ್ತಿಶಾಲಿಯಾದ ಹೇಳಿಕೆ. ಇದರಲ್ಲಿ ಗಾಢ ಅರ್ಥ ಅಡಗಿದೆ.

ಗಾಂಧೀಜಿಯ ಜೀವನಶೈಲಿಯೇ ಹಾಗಿತ್ತು. ಅವರ ಚಿಂತನೆಗಳು ಬಹಳ ಸರಳವೂ, ಉದಾತ್ತವೂ ಆಗಿದ್ದವು. ಅವರು ನುಡಿದಂತೆ ನಡೆದರು ಮತ್ತು ನಡೆದಂತೆ ಉಪದೇಶ ಮಾಡಿದರು. ಆದ್ದರಿಂದಲೇ ದೇಶದ ಜನರು ಪ್ರೀತಿಯಿಂದ ಅವರನ್ನು 'ಮಹಾತ್ಮ' ಎಂದು ಕರೆಯಲು ಆರಂಭಿಸಿದರು. ಮಹಾತ್ಮ ಅಂದರೆ ಏನು ಅರ್ಥ? ಇದನ್ನು ಸಂತ ಎಂದು ವಿಶ್ಲೇಷಣೆ ಮಾಡಬಾರದು. ಆ ಕಾಲದಲ್ಲೇ ಕೆಲವರು 'ಗಾಂಧೀಜಿಯೆಂದರೆ ರಾಜಕಾರಣಿಯಾಗಲು ಹೊರಟಿರುವ ಒಬ್ಬ ಸಂತ' ಎಂದು ಟೀಕಿಸಿದ್ದರು. ಅದಕ್ಕೆ ಗಾಂಧೀಜಿ, 'ತಪ್ಪು ತಪ್ಪು. ನನ್ನನ್ನು ಬೇಕಾದರೆ ನೀವು ಸಂತನಾಗಲು ಹೊರಟ ರಾಜಕಾರಣಿ ಎಂದು ಕರೆಯಿರಿ' ಎಂದು ಹೇಳಿದ್ದರು. ತಾವು ಅನುಸರಿಸುತ್ತಿರುವ ಸತ್ಯ ಮತ್ತು ಅಹಿಂಸೆಯ ಹಾದಿ ಹೊಸತಲ್ಲ, ಅದು ಈ ಭೂಮಿಯಲ್ಲಿರುವ ಪುರಾತನ



ಪರ್ವತಗಳಷ್ಟೇ ಹಳೆಯದು ಎಂದು ಹೇಳಿದ್ದರು. ಹಿಂಸೆಯು ಯಾವುದೇ ರೂಪದಲ್ಲಿದ್ದರೂ ಅದರಿಂದ ಯಾವುದೇ ಸಮಸ್ಯೆಯನ್ನು ಬಗೆಹರಿಸಲು ಸಾಧ್ಯವಿಲ್ಲ ಎಂಬುದು ಅವರಿಗೆ ಗೊತ್ತಿತ್ತು. ಇದನ್ನು ಅವರು ಜನರಿಗೂ ಮನವರಿಕೆ ಮಾಡಿಕೊಟ್ಟಿದ್ದರು. ಹೀಗಾಗಿಯೇ ಜಗತ್ತಿನಾದ್ಯಂತ ನಾನಾ ದೇಶಗಳ ಜನರು ಅವರ ಚಿಂತನೆಗಳಿಂದ ಪ್ರಭಾವಿತರಾಗಿದ್ದರು. ಅಮೆರಿಕದಲ್ಲಿ ಕರಿಯರ ಹಕ್ಕುಗಳಿಗಾಗಿ ಹೋರಾಡಿದ ಕ್ರಾಂತಿಕಾರಿ ಮಾರ್ಟಿನ್ ಲೂಥರ್ ಕಿಂಗ್ ಅವರು ಗಾಂಧೀಜಿಯ ಸಿದ್ಧಾಂತವನ್ನೇ ಅಳವಡಿಸಿಕೊಂಡಿದ್ದರು. ಗಾಂಧೀಜಿಯವರ ಮಾರ್ಗವನ್ನು ಅನುಸರಿಸಿ ಡಜನ್‌ಗಟ್ಟಲೆ ದೇಶಗಳು ಸ್ವಾತಂತ್ರ್ಯ ಗಳಿಸಿದವು.

ಗಾಂಧೀಜಿ ನಮ್ಮ ದೇಶದ ಸ್ವಾತಂತ್ರ್ಯಕ್ಕಾಗಿ ಮಾತ್ರ ಹೋರಾಡಿದರು ಎಂದು ಈ ತಲೆಮಾರಿನ ತರುಣರು ಭಾವಿಸಬಾರದು. ಅವರು ಸ್ವಾತಂತ್ರ್ಯಾನಂತರ ಈ ದೇಶ ಹೇಗೆ ಅಭಿವೃದ್ಧಿ ಹೊಂದಬೇಕು ಎಂಬುದರ ಬಗ್ಗೆಯೂ ಸಾಕಷ್ಟು ಯೋಚಿಸಿದ್ದರು ಮತ್ತು ಆ ಚಿಂತನೆಗಳನ್ನು ಜನಮಾನಸದಲ್ಲಿ ಬಿತ್ತಿದ್ದರು. ಹಳ್ಳಿಗಳು ಉದ್ಧಾರವಾಗದ ಹೊರತು ಭಾರತ ಉದ್ಧಾರವಾಗುವುದಿಲ್ಲ, ಹೀಗಾಗಿ ಮೊದಲು ಭಾರತದ ಹಳ್ಳಿಗಳನ್ನು ಅಭಿವೃದ್ಧಿಪಡಿಸಬೇಕು ಎಂದು ಅವರು ಹೇಳಿದ್ದರು. ಗ್ರಾಮೀಣಾಭಿವೃದ್ಧಿ ಎಂಬ ಪರಿಕಲ್ಪನೆ ನಮಗೆ ದೊರೆತಿದ್ದೇ ಗಾಂಧೀಜಿಯಿಂದ. ಅವರು ನಮ್ಮನ್ನು ಬಿಟ್ಟು ಹೋಗಿ ಮುಕ್ಕಾಲು ಶತಮಾನವೇ ಕಳೆದಿದ್ದರೂ ನಾವು ಗ್ರಾಮೀಣಾಭಿವೃದ್ಧಿಯ ಸಿದ್ಧಾಂತವನ್ನು ಆಡಳಿತದ ನೀತಿಯಲ್ಲಿ ಅಳವಡಿಸಿಕೊಂಡು ದೇಶದ ಅಭಿವೃದ್ಧಿಗೆ ಪ್ರಯತ್ನಿಸುತ್ತಿದ್ದೇವೆ. ಈ ದೇಶದಲ್ಲಿ ಮೊದಲ ಬಾರಿಗೆ ಸ್ವಚ್ಛತೆಯ ಮಹತ್ವದ ಬಗ್ಗೆ ಮಾತನಾಡಿದವರು ಗಾಂಧೀಜಿ. ಪ್ರತಿಯೊಬ್ಬ ಪ್ರಜೆಗೂ ಸ್ವಚ್ಛತೆ ಹಾಗೂ ನೈರ್ಮಲ್ಯದ ಪರಿಕಲ್ಪನೆ ತಲುಪಬೇಕು ಎಂದು ಅವರು ಬಯಸಿದ್ದರು. ಮಹಿಳೆಯರು ಶೈಕ್ಷಣಿಕವಾಗಿ ಮುಂದೆ ಬಂದು ಸ್ವಾವಲಂಬಿಯಾಗುವುದಕ್ಕೂ ಅವರು ದಾರಿ ತೋರಿಸಿದರು. ಬದುಕಿನ ನಾನಾ ಕ್ಷೇತ್ರಗಳಿಗೆ ಅನ್ವಯಿಸುವ ಅದೆಷ್ಟೋ ಸಿದ್ಧಾಂತಗಳನ್ನು ಗಾಂಧೀಜಿ ನೀಡಿದರು. ತನ್ಮೂಲಕ ಯುವಕರಿಗೆ ಸ್ಫೂರ್ತಿದಾಯಕವಾದ ಅಸಂಖ್ಯ ಸಂಗತಿಗಳನ್ನು ಬಿಟ್ಟುಹೋದರು. ಇಂದಿನ ಹೊಸ ತಲೆಮಾರಿನ ಮಕ್ಕಳು ಕೂಡ ಅವರಿಂದ ಕಲಿಯಬೇಕಾದುದು ಸಾಕಷ್ಟಿದೆ.

ಆದರೆ, ಸಮಸ್ಯೆಯೇನೆಂದರೆ ಈ ಕಾಲದ ಮಕ್ಕಳಿಗೆ ಗಾಂಧೀಜಿಯ ಬಗ್ಗೆ ಹೆಚ್ಚು ಮಾಹಿತಿಯೇ ಇಲ್ಲ. ಅವರು ಗಾಂಧೀಜಿಯ ಬದುಕು ಹಾಗೂ ಬೋಧನೆಗಳ ಬಗ್ಗೆ ಬಹಳ ಕಡಿಮೆ ತಿಳಿದುಕೊಂಡಿದ್ದಾರೆ. ಏಕೆ ಹೀಗಾಯಿತು? ಅವರಿಗೆ ಗಾಂಧೀಜಿಯ ಬಗ್ಗೆ ತಿಳಿಸಿಕೊಡುವುದು ನಮ್ಮ ಕರ್ತವ್ಯವಾಗಿತ್ತು. ಈ ಕರ್ತವ್ಯದಲ್ಲಿ ನಾವೇಕೆ ಸೋತೆವು? ನಮ್ಮ ಶಿಕ್ಷಣ ಸಂಸ್ಥೆಗಳು ಕೂಡ ಗಾಂಧೀಜಿ ಬಗ್ಗೆ ಮಕ್ಕಳಿಗೆ ತಿಳಿಸಬೇಕಿತ್ತು. ಅವೂ ತಮ್ಮ ಕಾರ್ಯದಲ್ಲಿ ವಿಫಲವಾಗಿವೆ. ಈ ದೇಶದ ಮಣ್ಣಿನಲ್ಲಿ ಜನಿಸಿದ, ಜಗತ್ತೇ ಬೆರಗಿನಿಂದ ಗೌರವಿಸುವ ಅಸಾಮಾನ್ಯ ವ್ಯಕ್ತಿಯನ್ನೇ ನಮ್ಮ ಮುಂದಿನ ತಲೆಮಾರುಗಳು ಮರೆತರೆ ಹೇಗೆ? ಜಗತ್ತಿನ 80ಕ್ಕೂ ಹೆಚ್ಚು ದೇಶಗಳಲ್ಲಿ ಗಾಂಧೀಜಿಯ 110ಕ್ಕೂ ಹೆಚ್ಚು ಪುತ್ಥಳಿಗಳಿವೆ. ಈ ಗೌರವ ಪಡೆದ ಭಾರತದ ಏಕೈಕ ವ್ಯಕ್ತಿ ಗಾಂಧೀಜಿ. ಅವರ ಬಗ್ಗೆ ವಿದೇಶಿ ವಿಶ್ವವಿದ್ಯಾಲಯಗಳಲ್ಲೂ ಪಾಠ ಮಾಡಲಾಗುತ್ತದೆ. ಆದರೆ, ನಾವು ನಮ್ಮದೇ ದೇಶದಲ್ಲಿರುವ ಸೇವಾಗ್ರಾಮವನ್ನು ಮರೆತಿದ್ದೇವೆ. ಗಾಂಧೀಜಿಯನ್ನು ನಾವು ನಮ್ಮ ಶಿಕ್ಷಣ ವ್ಯವಸ್ಥೆಯಲ್ಲಿ ನಿರ್ಲಕ್ಷಿಸುತ್ತಿದ್ದೇವೆ. ಜಾತಿ, ಧರ್ಮ, ಪಂಥ ಹಾಗೂ ಬಣ್ಣವನ್ನು ಆಧರಿಸಿ ಕ್ಷುಲ್ಲಕ ಹಾಗೂ ಅಸಂಬದ್ಧ ಸಿದ್ಧಾಂತಗಳಿಗೆ ಸಮಾಜದಲ್ಲಿ ಮಹತ್ವ ದೊರೆಯುವಂತೆ ಮಾಡಿದ್ದೇವೆ. ಗೊತ್ತಿದ್ದೋ ಗೊತ್ತಿಲ್ಲದೆಯೋ ಈ ಕೆಲಸ ಮಾಡುತ್ತಿರುವವರು ಗಾಂಧೀಜಿಯನ್ನು ಇನ್ನೊಮ್ಮೆ ಓದಬೇಕು. ಆಗ ತಾವು ಸಮಾಜಕ್ಕೆ ಹೇಗೆ ವಿಷ ಉಣಿಸುತ್ತಿದ್ದೇವೆ ಎಂಬುದು ಅವರಿಗೆ ಮನವರಿಕೆಯಾಗುತ್ತದೆ. ನಾವಿಂದು ಗಾಂಧೀಜಿಯ ಸ್ಮಾರಕವಾದ ಸೇವಾಗ್ರಾಮವನ್ನು ಇಡೀ ದೇಶ ತಿರುಗಿ ನೋಡುವಂತೆ ಅಭಿವೃದ್ಧಿ ಪಡಿಸಬೇಕಿದೆ. ಭಾರತದ ಜನರಷ್ಟೇ ಅಲ್ಲ, ವಿದೇಶಗಳಿಂದಲೂ ಅಲ್ಲಿಗೆ ಪ್ರವಾಸಿಗರು ಬರುವಂತೆ ಅದನ್ನು ಅಂತಾರಾಷ್ಟ್ರೀಯ ಮಟ್ಟದ ಪ್ರವಾಸಿ ಕೇಂದ್ರವಾಗಿ ರೂಪಿಸಬೇಕಿದೆ. ಗಾಂಧೀಜಿ ಕುರಿತಾದ ಸಿನಿಮಾವನ್ನು ನಮ್ಮ ಶಾಲೆ, ಕಾಲೇಜುಗಳಲ್ಲಿ ಮಕ್ಕಳಿಗೆ ತೋರಿಸಬೇಕಿದೆ. ನಮ್ಮ ರಾಜಕಾರಣಿಗಳಿಗೂ, ಅಧಿಕಾರಿಗಳಿಗೂ ಗಾಂಧೀಜಿಯನ್ನು ಇನ್ನೊಮ್ಮೆ ಅರ್ಥ ಮಾಡಿಸಬೇಕಿದೆ. ಏಕೆಂದರೆ, ನಮ್ಮ ದೇಶದ ಸಮಸ್ಯೆಗಳಿಗೆ ಗಾಂಧಿ ಮಾರ್ಗವೇ ನಿಜವಾದ ಪರಿಹಾರ.

(ಲೇಖಕರು ಹಿರಿಯ ಪತ್ರಿಕೋದ್ಯಮಿ)

ಭಟ್ಟರ್ ಸ್ಕಾಚ್

● **ವಿನೋದ ತಾಳವೆ**, ಶಿರಾ

ಭಟ್ರೇ, ಎಲ್ಲರ ಹಗರಣಗಳನ್ನು ಬಿಚ್ಚಿಡುತ್ತೇನೆ ಎಂದು ಕುಮಾರಣ್ಣ ಹೇಳಿದ್ದಾರಲ್ಲ?

-ಹಾಗೆ ಹೇಳುವ ಬದಲು 'ನಾನೇ ಸತ್ಯ ಹರಿಶ್ಚಂದ್ರ' ಎಂದು ಅವರು ಘೋಷಿಸಿಕೊಳ್ಳಬಹುದಿತ್ತು!

● **ರೇಖಾ ವಸಂತ**, ಬೆಂಗಳೂರು

ಭಟ್ರೇ, 'ಬಿಗ್ ಬಾಸ್' ಬಗ್ಗೆ ನಿಮ್ಮ ಅಭಿಪ್ರಾಯವನ್ನೇ ಹೇಳಲಿಲ್ಲವಲ್ಲ?

- ಬಿಗ್ ಬಾಸ್ ಅಂದ್ರೆ ಏನು ? ಹಲ್ಲುಪುಡಿಯಾ, ಊದಿನಕಡ್ಡಿಯಾ?!

● **ಸುಮಾ ಚಂದ್ರು**, (ಇಮೇಲ್ ಮೂಲಕ)

ಭಟ್ರೇ, ಹೆಂಡತಿಗೆ ಮೋಸ ಮಾಡುವ ಗಂಡನನ್ನು ಹಿಡಿಯುವುದು ಹೇಗೆ?

- ಹಿಡಿಯಬೇಕಿಲ್ಲ, ಹೆಂಡತಿಗೆ ಸಿಕ್ಕಿಬೀಳದ ಗಂಡಂದಿರೇ ಇಲ್ಲ!

● **ವಿನಾಯಕ ಮಠದ**, ಚಿಕ್ಕಮಗಳೂರು

ಭಟ್ರೇ, ಹೆಂಡತಿಯನ್ನು ಸುಲಭವಾಗಿ ಪಳಗಿಸುವುದು ಹೇಗೆ ?

- ಉತ್ತರವಿಲ್ಲದ ಪ್ರಶ್ನೆಗಳನ್ನು ಕೇಳಬಾರದು ಅಂತ ಎಷ್ಟು ಸಲ ಹೇಳಬೇಕು?!

● **ಗೀತಾ ಕೆ.ಕುಲಕರ್ಣಿ**, ಧಾರವಾಡ

ಭಟ್ರೇ, ಕುಡಿಯದವರೂ 'ಕುಡಿಯೋಣು ಬಾರಾ' ಓದಬಹುದಾ?

- ಅನುಭವವಿಲ್ಲದವರೇ ಮದುವೆಯಾಗುವುದಿಲ್ಲವೇ?!

● **ಸಂದೇಶ ಸಿ.ಪಿ.**, ನಾಪೋಕ್ಲು

ಭಟ್ರೇ, ಸಾರ್ವಜನಿಕ ಗ್ರಂಥಾಲಯ ದಲ್ಲಿ ಆತ್ಮಹತ್ಯೆಯ ಕುರಿತ ಪುಸ್ತಕ ಸಿಗಬಹುದಾ?

-ಹೌದು, ಆ ಪುಸ್ತಕ ತೆಗೆದುಕೊಂಡು ಹೋದ ಯಾರೂ ವಾಪಸ್ ತಂದುಕೊಟ್ಟಿಲ್ಲವಂತೆ!

● **ಕೆ.ರಾಮಸ್ವಾಮಿ**, ಸಿದ್ದಾಪುರ

ಭಟ್ರೇ, ತಿನ್ನುವುದಾ ಅಥವಾ ಕುಡಿಯುವುದಾ ಎಂಬ ಸಂದೇಹ ಬರುತ್ತಿದೆಯಲ್ಲ?

- ಭಟ್ಟರ್ ಸ್ಕಾಚ್ ವಿಷಯದಲ್ಲೂ ಹಾಗೇ, ಅದನ್ನು ತಿನ್ನಬೇಕಾ, ಕುಡಿಯಬೇಕಾ ಅಂತ ಅನೇಕರು ಕೇಳ್ತಾರೆ!

● **ವೀರೇಶ ಹಂದಿಗವಾಡ**, ಹುಬ್ಬಳ್ಳಿ

ಭಟ್ರೇ, ಡ್ರೋನ್ ಹಾರಿಸೋಣ ಅಂತಿದೀನಿ, ಅದಕ್ಕೆ ಮುಖ್ಯವಾಗಿ ಏನು ಬೇಕು?

- ಡ್ರೋನ್!

● **ರಶ್ಮಿ ಬೇಕಲ್**, ಬೆಂಗಳೂರು

ಭಟ್ರೇ, ಯಾರು ಬೇಕಾದರೂ ಪತ್ರಕರ್ತರಾಗಬಹುದಾ?

- ಬರೆಯಲು ಬರಬೇಕು ಎಂಬ ನಿಯಮ ಹಾಕಿ ಸಮಸ್ಯೆ ತಂದಿಟ್ಟಿದ್ದಾರೆ!

● **ಗಣಪತಿ ಸಾಗರ**, ಸಾಗರ

ಭಟ್ರೇ, ನೀವು ಹೇಳದೇ, ಕೇಳದೇ ವಿದೇಶಕ್ಕೆ ಹೋಗಿ ಬರ್ತೀರಲ್ಲ?

- ಪತ್ರಿಕೆಗಳಲ್ಲಿ ಜಾಹೀರಾತು ನೀಡಿ ಹೋಗುವುದು ಹಳೆಯ ವರಸೆ ಆಯ್ತು!

ತೋಳಗಳ ನರಬಲಿ ಮತ್ತು ಹರಿವಂಶದ ಒಂದು ಕತೆ

ಕಾಡುದಾರಿ
ಹರೀಶ್ ಕೇರ
vveditoped@gmail.com

ಮಾರ್ಚ್ ತಿಂಗಳ ಧಗೆಯ ದಿನಗಳು. ಉತ್ತರ ಪ್ರದೇಶದ ಬಹ್ರೈಚ್ ಜಿಲ್ಲೆಯ ಮಿಶ್ರನ್ ಪೂರ್ವ ಗ್ರಾಮದಲ್ಲಿ ಸೆಕೆಯಿಂದ ಪಾರಾಗಲು ತಾಯಿ ಮತ್ತು ಮಗು ಮನೆಯ ಹೊರಗೆ ಮಲಗಿದ್ದರು. ರಾತ್ರಿ ಯಾವುದೋ ಹೊತ್ತಿನಲ್ಲಿ ಎದ್ದು ನೋಡಿದಾಗ ಮಗು ಪಕ್ಕದಲ್ಲಿರಲಿಲ್ಲ, ಗಾಬರಿಯಿಂದ ತಾಯಿ ಕೂಗಿದಾಗ ಅಕ್ಕಪಕ್ಕದವರು ಬಂದು ನೆರೆದರು. ಮೂರು ವರ್ಷದ ಮಗು ತಾನಾಗಿಯೇ ಎದ್ದು ಕತ್ತಲಲ್ಲಿ ಎಲ್ಲೂ ಹೋಗುವ ಸಾಧ್ಯತೆ ಇರಲಿಲ್ಲ. ಎಷ್ಟು ಹುಡುಕಿದರೂ ಮಗು ಸಿಗಲಿಲ್ಲ. ಹುಡುಕುತ್ತಾ ಬೆಳಗು ಮಾಡಿದವರಿಗೆ, ಮನೆಯ ಸುತ್ತಮುತ್ತ ತೋಳದ ಹೆಜ್ಜೆ ಗುರುತುಗಳು ಕಾಣಿಸಿದವು. ಮಗುವನ್ನು ಅದು ಹೊತ್ತೊಯ್ದುದು ಖಚಿತವಾಯಿತು. 'ಬಹ್ರೈಚ್ ತೋಳಗಳ ನರಬಲಿ' ಎಂಬ ದುಸ್ವಪ್ನಮಯ ಎಪಿಸೋಡ್ ಹೀಗೆ ಆರಂಭವಾಯಿತು.

ಮಾರ್ಚ್ 10ರಂದು ಮೊದಲ ಮಗುವಿನ ಬಲಿ. ಆ ಮಗುವಿನ ದೇಹ ಸಿಗಲೇ ಇಲ್ಲ. 28ರಂದು ಪಕ್ಕದ ಗ್ರಾಮದಿಂದ ಒಂದು ವರ್ಷದ ಮತ್ತೊಂದು ಮಗು. ಏಪ್ರಿಲ್-ಮೇನಲ್ಲಿ ತೋಳಗಳು ಸುಮ್ಮನಿದ್ದವು. ಜುಲೈ-ಆಗಸ್ಟ್‌ನಲ್ಲಿ ಮತ್ತೆ ಸಾಲುಸಾಲಾಗಿ ಮಕ್ಕಳನ್ನು ಕಚ್ಚಿಕೊಂಡು ಹೋದವು. ಇಲ್ಲವೇ ಸಾಯಿಸಿದವು. ಕತ್ತಲಲ್ಲಿ ಗೊತ್ತೇ ಆಗದಂತೆ ಹೊತ್ತುಕೊಂಡು ಹೋದ ದೇಹಗಳನ್ನು ತಿಂದವು. ಇನ್ನು ಕೆಲವು ಮಕ್ಕಳನ್ನು ಸಾಯಿಸಿ, ಜನರ ಹುಯ್ಲಿನಿಂದ ಅಲ್ಲೇ ಬಿಟ್ಟು ಓಡಿದವು. 24 ತೋಳಗಳ ಹಿಂಡೇ ಜನರನ್ನು ಸಾಯಿಸುತ್ತಿದೆ ಎಂದು ಜನ ಹುಯಿಲೆಬ್ಬಿಸಿದರು. ಅರಣ್ಯ ಇಲಾಖೆ ಗಡಿಬಿಡಿಯಿಂದ ರಂಗಕ್ಕಿಳಿಯಿತು. ನರಬಲಿ ನಡೆದ ಜಾಗದ ಸುತ್ತಮುತ್ತ ಕೂಂಬಿಂಗ್, ಪಂಜರ ಇರಿಸುವಿಕೆ ಎಲ್ಲಾ ನಡೆದವು. ಆಗಸ್ಟ್ 29ರಂದು ಮೊದಲ ತೋಳವನ್ನು ಹಿಡಿದರು.

ಇದುವರೆಗಿನ ಲೆಕ್ಕಾಚಾರದ ಪ್ರಕಾರ ಈ ತೋಳಗಳು ಕೊಂದ ಮನುಷ್ಯರ ಸಂಖ್ಯೆ 10. ಇವರಲ್ಲಿ ಒಬ್ಬರು ವೃದ್ಧೆ. ಉಳಿದವರೆಲ್ಲಾ 8 ವರ್ಷದೊಳಗಿನ ಮಕ್ಕಳು. ಅರಣ್ಯ ಇಲಾಖೆಯ ಪ್ರಕಾರ ಈ ದಾಳಿಗಳನ್ನು ನಡೆಸುತ್ತಾ ಇದ್ದುದು 6 ತೋಳಗಳ ಒಂದು ಪ್ಯಾಕ್. ಅದರಲ್ಲಿ ಐದನ್ನು ಹಿಡಿದು ಗೋರಖ್‌ಪುರ ಮೃಗಾಲಯಕ್ಕೆ ಒಯ್ಯಲಾಗಿದೆ. ಇನ್ನೊಂದು ಕಣ್ಮರೆಯಾಗಿದೆ. ಬಹುಶಃ ಅದನ್ನು ಸ್ಥಳೀಯರೇ ಕೊಂದಿರಬಹುದು ಅಥವಾ ತಾನೇ ಸತ್ತಿರಬಹುದು. ಯಾಕೆಂದರೆ ಸದ್ಯ ಅದು ಯಾವುದೇ ದಾಳಿ ನಡೆಸಿಲ್ಲ. ಆದರೆ ಜನರ ಭಯ ಹೋಗಿಲ್ಲ. ಹೊಸ ಸುದ್ದಿಯ ಪ್ರಕಾರ ತೋಳಗಳ ಇನ್ನೊಂದು ಗುಂಪು ಈ ಪ್ರದೇಶದಲ್ಲಿ ಕಾಣಿಸಿಕೊಂಡಿದೆ. ಇವು ಮನುಷ್ಯರ ಮೇಲೆ ದಾಳಿ ಮಾಡಿಲ್ಲ. ಆದರೆ ಜನ ಯಾವ ಪರಿ ಗಾಬರಿ ಬಿದ್ದಿದ್ದಾರೆ ಎಂದರೆ, ಇವುಗಳನ್ನೂ ಕೊಲ್ಲಲು ಮುಂದಾಗಿದ್ದಾರೆ.

ಮನುಷ್ಯರನ್ನು ಕಂಡರೆ ದೂರದಿಂದಲೇ ನಾಚಿಕೆಯಿಂದ ಪರಾರಿಯಾಗುವ ಈ ತೋಳಗಳು ಯಾಕೆ ನರರ ಮೇಲೆ ದಾಳಿ ಮಾಡಲು ಆರಂಭಿಸಿದವು? ಇದು ಕುತೂಹಲಕಾರಿ. ವನ್ಯಜೀವಿ ತಜ್ಞರ ಪ್ರಕಾರ ಇದಕ್ಕೆ ಹಲವು ಕಾರಣಗಳಿರಬಹುದು. ಮುಖ್ಯವಾಗಿ, ಇವು ತಮ್ಮ ಮೂಲ ನೆಲೆಯನ್ನೂ ಬಲಿಪ್ರಾಣಿಗಳನ್ನೂ ಕಳೆದುಕೊಂಡಿವೆ. ಇರುವ ಆಹಾರವನ್ನೆಲ್ಲ ಕಳೆದುಕೊಂಡ ಬಳಿಕ ಮಕ್ಕಳನ್ನು ಕಬಳಿಸಲು ಶುರು ಮಾಡಿವೆ. ಇನ್ನೊಂದು ಅಂಶವೆಂದರೆ ಈ ತೋಳಗಳು ಬಹುಶಃ ಕಾಡಿನ ತೋಳ ಹಾಗೂ ಬೀದಿ ನಾಯಿಗಳ ಕ್ರಾಸ್ ಬ್ರೀಡ್ ಇರಬಹುದು. ಇವುಗಳಿಗೆ ಮನುಷ್ಯನ ಕುರಿತ ಭಯ-ಅಂಜಿಕೆ ಕಡಿಮೆ ಇರುತ್ತದೆ.

ತೋಳಗಳಾಗಲೀ ಚಿರತೆಗಳಾಗಲೀ ಹುಲಿಯಾಗಲೀ, ನರಭಕ್ಷಕಗಳಾದರೆ ಆ ಪರಿಸರ ಬೀಭತ್ಸವಾಗಿಬಿಡುತ್ತದೆ. ಒಟ್ಟಾರೆ ಮನುಷ್ಯನ ಬದುಕು ಅಂಜಿಕೆ-ಆತಂಕಗಳ ಗೂಡಾಗುತ್ತದೆ. ಜನ ಹೊರಗೆ ಹೋಗಲು ಅಂಜುತ್ತಾರೆ. ಬ್ರಿಟಿಷ್ ಕಾಲದ ಭಾರತದಲ್ಲಿ ಇಂಥ ನರಭಕ್ಷಕಗಳನ್ನು ನೂರಾರು ಸಂಖ್ಯೆಯಲ್ಲಿ ಹೊಡೆದುಹಾಕಿದ ಜಿಮ್ ಕಾರ್ಬೆಟ್, ಕೆನೆತ್ ಆಂಡರ್ಸನ್ ಮುಂತಾದವರು ದಾಖಲಿಸಿರುವ ಅನುಭವ ಕಥನಗಳು ಇಂಥ ಸನ್ನಿವೇಶವನ್ನು ಕಣ್ಣಿಗೆ ಕಟ್ಟುವಂತೆ ಬಣ್ಣಿಸುತ್ತವೆ. ಮೇಲಾಗಿ ಈಗ ದಾಳಿಗಳು ನಡೆದಿರುವ ಬಹ್ರೈಚ್ ಪ್ರಾಂತ್ಯ ತುಂಬಾ ಬಡ ಪ್ರದೇಶ. ಇಲ್ಲಿನ ಬಡವರ ಮನೆಗಳಿಗೆ ಬಾಗಿಲುಗಳೇ ಇಲ್ಲ. ಗರ್ಭಿಣಿ-ಬಾಣಂತಿ ಕೂಡ ಹೊಲಗೆಲಸಕ್ಕೆ ಹೋಗದಿದ್ದರೆ ಬದುಕು ಸಾಗದು. ಬಡತನದ ಜತೆಗೆ ಅನಕ್ಷರತೆ, ಅಜ್ಞಾನ ಮತ್ತು ಮೂಢನಂಬಿಕೆಗಳು ತುಂಬಿ ತುಳುಕಲು ಇದು ಹುಲುಸಾದ ನೆಲ ಹಾಗೂ ಸನ್ನಿವೇಶ.

ಹೀಗಾಗಿಯೇ ತೋಳಗಳ ದಾಳಿ ಯಾವುದೋ ಅತಿಮಾನುಷ ಶಕ್ತಿಗಳ ಕಾಟದಂತೆ ಸ್ಥಳೀಯರಿಗೆ ಕಾಣಿಸುತ್ತದೆ. ಇದೊಂದು ಪರಿಸರ-ಮನುಷ್ಯ ಸಂಬಂಧದ ಸಂಕೀರ್ಣ ಸಂಗತಿ ಎಂಬುದನ್ನು ಅವರು ತಿಳಿಯುವುದೇ ಇಲ್ಲ. ಇದಕ್ಕೆ ಉದಾಹರಣೆ, ಈ ನರಹತ್ಯೆಯ ಸುದ್ದಿಗಳ ಜತೆಗೇ ಕಾಣಿಸಿಕೊಂಡ ಇನ್ನೊಂದು ಸುದ್ದಿ. ''ಈ ದಾಳಿಗಳು ಶುರುವಾಗುವ ಕೆಲವು ದಿನಗಳ ಮೊದಲು ತೋಳದ ಮರಿಗಳನ್ನು ಮನುಷ್ಯರು ಕೊಂದಿದ್ದರು. ಅದಕ್ಕೆ ಸೇಡು ತೀರಿಸಿಕೊಳ್ಳಲು ತೋಳಗಳು ಮುಂದಾಗಿವೆ'' ಎಂದು ಯಾರೋ ಹೇಳಿದರು. ಹೇಳಿದವನು ಅರಣ್ಯಾಧಿಕಾರಿಯೇ. ಮೀಡಿಯಾಗಳು ಇದನ್ನು ದೊಡ್ಡದಾಗಿ ಬಿತ್ತರಿಸಿದವು. ಪರಿಸರದ ಸೂಕ್ಷ್ಮ ಸಂಗತಿಗಳ ಬಗ್ಗೆ ತಲೆಕೆಡಿಸಿಕೊಳ್ಳದವರು ಈ ಸುದ್ದಿಗೆ ಮಾತ್ರ ಬೆಚ್ಚಿದಂತೆ ಸ್ಪಂದಿಸಿದರು. ಸತ್ಯ ಹತ್ತು ಹೆಜ್ಜೆ ಹಾಕುವಷ್ಟರಲ್ಲಿ ಅರ್ಧಸತ್ಯ ಅಥವಾ ಸುಳ್ಳು ಬಹುವೇಗವಾಗಿ ಜಗತ್ತನ್ನೆಲ್ಲ ಸುತ್ತಿ ಬಂದಿರುತ್ತದೆ.

ತೋಳಗಳಿಗೆ ಸೇಡು ತೀರಿಸಿಕೊಳ್ಳುವ ಸ್ವಭಾವ ಉಂಟೇ ಎಂದು ಯಾರೂ ಯೋಚಿಸಲು ಹೋಗಲಿಲ್ಲ. ನೆನಪಿನ ವಿಷಯದಲ್ಲಿ ನಾಯಿಗಳು ಹಾಗೂ ಆನೆಗಳು ಹೆಸರುವಾಸಿ. ಆನೆ ತಾನು ಒಮ್ಮೆ ನಡೆದ ದಾರಿಯನ್ನು ಯಾವತ್ತೂ ಮರೆಯುವುದಿಲ್ಲ. ನಾಯಿ ಒಮ್ಮೆ ತುತ್ತು ತಿನ್ನಿಸಿದವರನ್ನು ನೆನಪಿನಿಂದ ಆಚೆಗಿಡುವುದಿಲ್ಲ. ಡಾಲ್ಫಿನ್‌ಗಳಿಗೆ ಸಾಕಷ್ಟು ನೆನಪಿನ ಶಕ್ತಿ ಇದೆ. ಆದರೆ ತೋಳಗಳಲ್ಲಿ ಸೇಡು ಇರಬಹುದು ಎಂದು ವಿಜ್ಞಾನ ಸಮರ್ಥಿಸುವುದಿಲ್ಲ.

ತೋಳಗಳ ಬಗ್ಗೆ ನಮ್ಮಲ್ಲಿ ವಿನಾಕಾರಣ ಭೀತಿ ಇದೆ. ಆದರೆ ಇದು 'ವಿದ್ಯಾವಂತ'ರಲ್ಲಿ ಮಾತ್ರ. ಇದಕ್ಕೆ ಕಾರಣ ಪಾಶ್ಚಾತ್ಯರು ಸಾಹಿತ್ಯ, ಸಿನಿಮಾಗಳಲ್ಲಿ ಚಿತ್ರಿಸಿದ ತೋಳಗಳ ಚಿತ್ರಣ. ಇಂಗ್ಲೆಂಡ್‌ನ ಜನಪದ ಸಾಹಿತ್ಯದಲ್ಲಿ ವೇರ್‌ವೂಲ್ಫ್ ಎಂಬ ಅರ್ಧ ತೋಳ, ಅರ್ಧ ಮನುಷ್ಯನಿದ್ದಾನೆ. ಇದು ಹಗಲು ಮನುಷ್ಯನಾಗಿ ಎಲ್ಲರಂತಿದ್ದರೆ, ರಾತ್ರಿ ತೋಳವಾಗಿ ಮನುಷ್ಯರನ್ನು ಮುರಿದು ತಿನ್ನುತ್ತದೆ. ಯುರೋಪಿಯನ್ನರಿಗೂ ಅಮೆರಿಕನ್ನರಿಗೂ ತೋಳಗಳೆಂದರೆ ವಿನಾಕಾರಣ ಭಯ. ಅದು ಮತ್ತಗೆ ಎಲ್ಲ ಕಡೆಗೆ ಹರಿದಿದೆ.

ಈ ದೃಷ್ಟಿಯಿಂದ ಕರ್ನಾಟಕದ ಪಾವಗಡದಲ್ಲಿ ಒಂದು ಕಾಲದಲ್ಲಿ ಸೃಷ್ಟಿಯಾಗಿದ್ದ ಟೆರರ್ ಅನ್ನು ನೆನಪಿಸಿಕೊಳ್ಳಲೇಬೇಕು. ಪಾವಗಡದಲ್ಲಿ 1983ರಲ್ಲಿ ಒಂದಾದ ಮೇಲೊಂದರಂತೆ 7 ಮಕ್ಕಳು ಕಾಣೆಯಾದವು. ಕೆಲವು ಮಕ್ಕಳ ಯಾವ ಕುರುಹೂ ಸಿಗಲಿಲ್ಲ. ಕೆಲವು ಮಕ್ಕಳ ಬಟ್ಟೆ, ಕೈ ತುಣುಕುಗಳು ಸಿಕ್ಕವು. ಮೊದಲಿಗೆ ಗುಮಾನಿ ಮೂಡಿದ್ದು ತೋಳಗಳ ಮೇಲೆ. ನಾಯಿಗಳ ಜತೆಗೆ ಹಿಂಬಾಲಿಸಿ ಹೋದವರ ಹುಡುಕಾಟ ಗುಹೆಯೊಂದರ ಬಾಗಿಲಲ್ಲಿ ಕೊನೆಯಾಯಿತು. ಆದರೆ ಅಲ್ಲೇನೂ ಸಿಗಲಿಲ್ಲ. ಅಷ್ಟರಲ್ಲಿ ಇದು ನಿಧಿಗಾಗಿ ಮಂತ್ರವಾದಿಗಳು ನೀಡುತ್ತಿರುವ ನರಬಲಿ ಎಂಬ ಸುದ್ದಿ ಹಬ್ಬಿತು. ಪಾವಗಡ ಕೂಡ ಹಿಂದುಳಿದ ಪ್ರಾಂತ್ಯ ಎಂಬುದು ನಿಮಗೆ ಗೊತ್ತು. ಇನ್ನೊಂದು ವಿಚಿತ್ರ ಎಂದರೆ ಸತ್ತವರೆಲ್ಲಾ ಹೆಣ್ಣುಮಕ್ಕಳು! ಬಡತನ, ಮೌಢ್ಯ ಮತ್ತು ಹೆಣ್ಣುಮಗು ಜನನ ಇಂಥ ವಿಷಯಗಳಲ್ಲಿ ಡೆಡ್ಲಿ ಕಾಂಬಿನೇಶನ್.

ಈ ನಡುವೆ ಬಂಡೀಪುರ-ನಾಗರಹೊಳೆಯ ಕೆನ್ನಾಯಿಗಳ ಬಗ್ಗೆ ದಶಕಗಳ ಕಾಲ ಅಧ್ಯಯನ ನಡೆಸಿ 'ದಿ ಪ್ಯಾಕ್' ಎಂಬ ಸಾಕ್ಷ್ಯಚಿತ್ರ ರೂಪಿಸಿದ ಕೃಪಾಕರ-ಸೇನಾನಿ ಹೇಳಿದ ಒಂದು ಸಂಗತಿ ನೆನಪಾಗುತ್ತದೆ. ಅವರು ಉತ್ತರ ಕರ್ನಾಟಕದಲ್ಲಿ ತೋಳಗಳನ್ನು ಹುಡುಕುತ್ತಾ ಅವುಗಳ ಸುತ್ತಲಿನ ಜನಜೀವನವನ್ನು ಅಧ್ಯಯನ ಮಾಡುತ್ತಿದ್ದಾಗ ಒಬ್ಬ ಕುರುಬ ಹಿರಿಯರು ಸಿಕ್ಕಿದರು. ಕುರಿಗಳನ್ನು ಹೊತ್ತೊಯ್ಯುವ ಈ ತೋಳಗಳ ಬಗ್ಗೆ ಇವರಿಗೆ ಸಿಟ್ಟಿರಬಹುದು ಎಂದು ಮಾತಾಡಿಸಿದಾಗ, ಅವರ ವರ್ಷನ್ನೇ ಬೇರೆ ಇತ್ತಂತೆ. ತೋಳಗಳನ್ನು ಅವರೆಲ್ಲಾ 'ಸಹೋದರ'ನಂತೆಯೇ ಪರಿಗಣಿಸುತ್ತಾರಂತೆ. ಯಾಕೆಂದರೆ ಹಿಂದಿನ ಜನ್ಮದಲ್ಲಿ ತೋಳ ಕುರುಬರ ಸಹೋದರನಾಗಿತ್ತಂತೆ. ಆಸ್ತಿ ಪಾಲು ವಿಷಯದಲ್ಲಿ ತಗಾದೆ ಬಂತು, ಈ ಕಿರಿಯ ಸಹೋದರನಿಗೆ ಎಲ್ಲರೂ ಸೇರಿ ಅನ್ಯಾಯ ಮಾಡಿದರು. ಅದನ್ನು ತೀರಿಸಿಕೊಳ್ಳಲು ಆತ ತೋಳನ ಜನ್ಮದಲ್ಲಿ ಬಂದು ಹಟ್ಟಿಯಿಂದ ಕುರಿಗಳನ್ನು ಹೊತ್ತೊಯ್ಯುತ್ತಾನೆ. ಅದು ಆತನ ಪಾಲಿನ ಭಾಗವೇ ಆಗಿದೆ. ಹೀಗಾಗಿ ಕುರುಬರು ತೋಳಗಳ ಮೇಲೆ ಕೋಪಿಸಿಕೊಳ್ಳುವುದಿಲ್ಲ.

ಕುರಿಗಳ ಪಾಲಿಗೆ ಇದು ಸರಿ. ಆದರೆ ಮಕ್ಕಳನ್ನು ಕೊಂಡೊಯ್ದರೆ ಮನುಷ್ಯ ಕ್ಷಮಿಸುವುದಾದರೂ ಹೇಗೆ? ಅದೇ ಈಗಿನ ಸಂಘರ್ಷದ ತಿರುಳು. ಆದರೆ ತೋಳಗಳನ್ನು ಈ ಸ್ಥಿತಿಗೆ ಒಯ್ದದ್ದಾದರೂ ಏನು ಎಂದು ಚಿಂತಿಸುವವರು ಕಡಿಮೆ. ಮನುಷ್ಯ ಮತ್ತು ಕಾಡಿನ, ಕಾಡಿನ ಜೀವಿಗಳ ಸಂಬಂಧದ ಬಗ್ಗೆ ಚಿಂತಿಸಿದವರಲ್ಲಿ ನಾವೇ ಮೊದಲಿಗರೇನೂ ಅಲ್ಲ. ಇದಕ್ಕೆ ವೇದವ್ಯಾಸರು ಬರೆದಿರುವ 'ಹರಿವಂಶ'ದಲ್ಲಿರುವ ಒಂದು ಭಾಗವೇ ಉದಾಹರಣೆ. ಹರಿವಂಶ ಎಂದರೆ ಕೃಷ್ಣನ ಕಥೆ. ಇದರ ವಿಷ್ಣುಪರ್ವದಲ್ಲಿ ಒಂದು ಕುತೂಹಲಭರಿತ ಭಾಗವಿದೆ-

ವ್ರಜಭೂಮಿಯಲ್ಲಿ ಕೃಷ್ಣ-ಬಲರಾಮರು ಬೆಳೆಯುತ್ತಿದ್ದಾರೆ. ಆದರೆ ಅಲ್ಲಿನ ಗೋಪಾಲಕರು ಮತ್ತಿತರರು ವ್ರಜಭೂಮಿಯ ಸುತ್ತಮುತ್ತಲಿನ ಕಾಡನ್ನು ಈಗಾಗಲೇ ಸಾಕಷ್ಟು ಹಾನಿಯೆಬ್ಬಿಸಿದ್ದಾರೆ. ಕೃಷ್ಣ ಅಣ್ಣನಿಗೆ ಹೀಗೆ ಹೇಳುತ್ತಾನೆ: ''ಈ ಪ್ರದೇಶದ ಕುರಿತು ನಾವು ಎಲ್ಲವನ್ನೂ ತಿಳಿದುಕೊಂಡಿದ್ದಾಗಿದೆ ಮತ್ತು ಈ ಕಾನನವನ್ನು ಸಂಪೂರ್ಣವಾಗಿ ಭೋಗಿಸಿಯಾಗಿದೆ. ಗೋಪರು ಮರಗಳನ್ನು ಕಡಿದುದರಿಂದ ಇಲ್ಲಿ ಹುಲ್ಲು-ಕಟ್ಟಿಗೆಗಳೂ ಕಡಿಮೆಯಾಗುತ್ತಿವೆ. ಹಸುವಿನ ಕೊಟ್ಟಿಗೆಯ ಸುತ್ತಮುತ್ತಲೂ ಅಕ್ಷಯವೋ ಎಂಬಂತಿದ್ದ ಮರಗಳೆಲ್ಲವನ್ನೂ ಗೋಪರು ಕಟ್ಟಿಗೆಯಾಗಿ ಸುಟ್ಟುಹಾಕಿರುವುದರಿಂದ ಅವೂ ಕ್ಷಯವಾಗಿಬಿಟ್ಟಿವೆ. ಈ ಅರಣ್ಯದಲ್ಲಿ ಸ್ವಲ್ಪವೇ ನೀರು ಮತ್ತು ಕಟ್ಟಿಗೆ ಉಳಿದುಕೊಂಡಿವೆ. ಇದರ ಮೂಲವೇ ನಾಶವಾದಂತಿದೆ. ಮರಗಳಲ್ಲಿ ವಾಸಿಸುತ್ತಿದ್ದ ಪಕ್ಷಿಗಳು ಬಿಟ್ಟು ಹೊರಟುಹೋಗಿವೆ. ಈ ವಿಶಾಲ ಪ್ರದೇಶದಲ್ಲಿ ವಾಸಿಸುತ್ತಿರುವ ಜನರು ಮರಗಳನ್ನು ಕಡಿದುಹಾಕಿಬಿಟ್ಟಿದ್ದಾರೆ. ಇಲ್ಲಿ ಆನಂದವಿಲ್ಲ. ಸ್ವಾದವಿಲ್ಲ. ಇಲ್ಲಿಯ ಗಾಳಿಯೂ ನಿಷ್ಪ್ರಯೋಜಕವಾಗಿದೆ. ಪಕ್ಷಿಗಳೇ ಇಲ್ಲದ ಈ ವನವು ವ್ಯಂಜನಪದಾರ್ಥಗಳಿಲ್ಲದ ಊಟದಂತೆ ಶೂನ್ಯವೆನಿಸುತ್ತಿದೆ. ಸುಂದರ ವನರಾಜಿಗಳು ಈಗ ಬಯಲಾಗಿಬಿಟ್ಟಿವೆ. ಬೇಗನೇ ಗೋವುಗಳ ಸಹಿತ ಹೋಗಿ ಇನ್ನೊಂದು ಕಡೆ ವ್ರಜದಲ್ಲಿ ನೆಲೆಸೋಣ''.

ಸರಿ. ಆದರೆ ಇಲ್ಲಿಂದ ಹೊರಡುವಂತೆ ವ್ರಜವಾಸಿಗಳನ್ನು ಪ್ರೇರೇಪಿಸುವುದು ಹೇಗೆ? ಈಗ ಕೃಷ್ಣ ಒಂದು ಮಾಯಕ ಮಾಡುತ್ತಾನೆ. ''ಯಾವುದಾದರೂ ಕಾರಣವನ್ನು ಹುಟ್ಟಿಸಿ ಈ ವ್ರಜವಾಸಿಗಳನ್ನು ಹೆದರಿಸೋಣ'' ಎಂದು ಆತ ಚಿಂತಿಸುತ್ತಿರುವಾಗಲೇ ''ರಕ್ತ-ಮಾಂಸ-ಮಜ್ಜೆಗಳನ್ನು ತಿನ್ನುವ ನೂರಾರು ತೋಳಗಳು ಕಾಣಿಸಿಕೊಂಡವು. ಅವುಗಳ ಕುರಿತು ಯೋಚಿಸುತ್ತಿದ್ದಂತೆಯೇ ಅವನದೇ ಶರೀರದ ರೋಮರೋಮಗಳಿಂದ ನೂರಾರು ಘೋರ, ಭಯಂಕರ ತೋಳಗಳು ಹೊರಬಿದ್ದು ಎಲ್ಲ ಕಡೆ ಕಾಣಿಸಿಕೊಂಡವು. ಆ ತೋಳಗಳನ್ನು ನೋಡಿ ವ್ರಜದಲ್ಲಿ ಸುಖವಾಗಿದ್ದ ಗೋವುಗಳು, ಕರುಗಳು, ಗಂಡಸರು ಮತ್ತು ಗೋಪಿಯರಲ್ಲಿ ಮಹಾ ಭಯ ಹುಟ್ಟಿಕೊಂಡಿತು. ಕೃಷ್ಣನಿಂದ ಪ್ರಕಟಗೊಂಡ ಆ ಕಪ್ಪುಮುಖದ ತೋಳಗಳು ಗೋಪರ ಭಯವನ್ನು ಹೆಚ್ಚಿಸಿದವು. ಅವು ಕರುಗಳನ್ನು ತಿನ್ನುತ್ತಿದ್ದವು. ಗೋವ್ರಜರನ್ನು ಬೆದರಿಸುತ್ತಿದ್ದವು. ರಾತ್ರಿಯಲ್ಲಿ ಬಾಲಕರನ್ನು ಅಪಹರಿಸುತ್ತಿದ್ದವು. ಹೀಗೆ ತೋಳಗಳು ಅವರು ವ್ರಜವನ್ನು ಬಿಟ್ಟುಹೋಗುವಂತೆ ಮಾಡಿದವು''.

ಬಹುಶಃ ಆ ತೋಳಗಳೇ ಈಗ ''ನಮ್ಮ ಜಾಗ ನಮಗೆ ಬಿಟ್ಟುಕೊಡಿ'' ಎಂಬ ಸಂದೇಶ ನೀಡಲು ಸೃಷ್ಟಿಯಾಗಿರಬಹುದೆ?



ನಾರದ ಸಂಚಾರ
ಕಲಹಪ್ರಿಯ
naadigru@gmail.com

ಮತ್ತೊಬ್ಬರು 'ಕನೆಕ್ಷನ್ ಕಾಳಪ್ಪ'!

ಕೇಂದ್ರದ ಕೃಷಿ ಸಚಿವ ಶಿವರಾಜ್ ಸಿಂಗ್ ಚೌಹಾಣ್ ಅವರು ಈಚೀಚೆಗೆ ತಮ್ಮ ಖಾತೆಯ ಚಟುವಟಿಕೆಗಳನ್ನು ಶಾನೆ ಗಂಭೀರವಾಗಿ ಪರಿಗಣಿಸಿದಂತೆ ಕಾಣುತ್ತೆ ಕಣ್ರೀ! ಹೊಲ-ಗದ್ದೆ-ಕೃಷಿತೋಟಗಳಿಗೆ ಭೇಟಿ ನೀಡುವ ಮೂಲಕ ಕೃಷಿಕರ ಜತೆಗಿನ ತಮ್ಮ ಒಡನಾಟವನ್ನು ಅವರು ಹೆಚ್ಚಿಸಿಕೊಳ್ಳುತ್ತಿರುವುದೇ ಈ ಅಭಿಪ್ರಾಯಕ್ಕೆ ಕಾರಣ. ಇಷ್ಟು ಮಾತ್ರವಲ್ಲದೆ ಅವರು ಕೃಷಿ ಭವನದಲ್ಲಿ ಪ್ರತಿ ಮಂಗಳವಾರ 'ಮುಕ್ತ ಕಚೇರಿ ಅವಧಿ'ಯನ್ನೂ ಘೋಷಿಸಿರುವುದು ಈ ಅಭಿಪ್ರಾಯಕ್ಕೆ ಮತ್ತಷ್ಟು ಪುಷ್ಟಿ ನೀಡುತ್ತದೆ. ಬಹುತೇಕರಿಗೆ ಗೊತ್ತಿರುವಂತೆ ಶಿವರಾಜ್ ಮಹಾಶಯರು ಮಧ್ಯಪ್ರದೇಶದಲ್ಲಿ ಸುದೀರ್ಘ ಅವಧಿಗೆ ದರ್ಬಾರು ಮಾಡಿದ ಹೆಮ್ಮೆಯ ಗರಿಯನ್ನು ತಮ್ಮ ಕಿರೀಟಕ್ಕೆ ಸಿಕ್ಕಿಸಿಕೊಂಡಿರುವ ರಾಜಕಾರಣಿ; ಹೀಗಾಗಿ ಜನರೊಂದಿಗೆ ಹೆಚ್ಚು ಆಪ್ತತೆ ಬೆಳೆಸಿಕೊಳ್ಳಲು ಅವರಿಗೆ ಸಾಧ್ಯವಾಗಿದೆ. ಈ 'ಕನೆಕ್ಷನ್ ಫ್ಯಾಕ್ಟರ್' ಪರಿಣಾಮವೋ ಏನೋ ಮಧ್ಯಪ್ರದೇಶದಲ್ಲಿ ಮಹಿಳೆಯರು ಶಿವರಾಜ್‌ರನ್ನು 'ಮಾಮಾ' ಅಥವಾ 'ಭಯ್ಯಾ' ಎಂದು ಕರೆಯುವುದು ವಾಡಿಕೆಯಂತೆ. ನರೇಂದ್ರ ಮೋದಿಯವರ ಸರಕಾರದ ಕುರಿತಾಗಿ ಕೃಷಿಕರು ಅಸಮಾಧಾನಗೊಂಡಿದ್ದರೂ, ತಾವು ಬೆಳೆಸಿಕೊಂಡಿರುವ ಈ ಆಪ್ತತೆಯಿಂದಾಗಿ ಅವರೊಂದಿಗೆ ಸಲೀಸಾಗಿ ಬೆರೆಯಲು ಶಿವರಾಜ್‌ರಿಗೆ ಸಾಧ್ಯವಾಗಿದೆಯಂತೆ. ವಾರಕ್ಕೊಮ್ಮೆ ರೈತರೊಂದಿಗೆ ಸಭೆ ನಡೆಸುವ ಪರಿಪಾಠವು ರೈತರ ತಲ್ಲಣಗಳನ್ನು ತಿಳಿಗೊಳಿಸುವುದರ ಜತೆಗೆ ಕೇಂದ್ರದ ಜತೆಗಿನ ಅವರ ಬಾಂಧವ್ಯಕ್ಕೆ ಮತ್ತಷ್ಟು 'ಫೆವಿಕಾಲ್' ಮೆತ್ತಲು ಅನುವುಮಾಡಿಕೊಟ್ಟಿದೆ ಎಂದು ರಾಜಕೀಯ ವಿಶ್ಲೇಷಕರು ಶಿವರಾಜರ ಬೆನ್ನುತಟ್ಟುತ್ತಿರುವುದು ಸುಳ್ಳಲ್ಲ.

'ಪಡುವಾರಳ್ಳಿ ಪಾಂಡವರು' ಎಂಬ ಚಲನಚಿತ್ರದಲ್ಲಿ 'ಕನೆಕ್ಷನ್ ಕಾಳಪ್ಪ' ಎಂಬುದೊಂದು ಪಾತ್ರವಿದೆ; ಹಾಸ್ಯನಟ ಮುಸುರಿ ಕೃಷ್ಣಮೂರ್ತಿಯವರು ಇದನ್ನು ನಿರ್ವಹಿಸಿ ಜನಮನವನ್ನು ಸೂರೆಗೊಂಡಿದ್ದರು. ಪ್ರಸ್ತುತ, ಶಿವರಾಜ್ ಸಿಂಗ್ ಚೌಹಾಣರು ಕೂಡ ರೈತರು ಮತ್ತು ಕೇಂದ್ರ ಸರಕಾರದ ನಡುವಿನ 'ಕನೆಕ್ಷನ್' ಅನ್ನು ಮತ್ತಷ್ಟು ಗಟ್ಟಿಗೊಳಿಸಲು ಬೆವರು ಸುರಿಸುತ್ತಿರುವುದರಿಂದ ಅವರನ್ನೂ 'ರಾಜಕಾರಣದ ಕನೆಕ್ಷನ್ ಕಾಳಪ್ಪ' ಎಂದು ತ್ರಿಲೋಕ ಸಂಚಾರಿ ನಾರದರು ಕರೆದರೆ, ಅದನ್ನು ನೀವು ಗಂಭೀರವಾಗಿ ತೆಗೆದುಕೊಳ್ಳದೆ ಲಘುವಾಗಿ ಪರಿಗಣಿಸಬೇಕು ಎಂದು ಕೋರಿಕೆ!!

ನಾರಾಯಣ ನಾರಾಯಣ!

'ಕಸದಿಂದ ರಸ ತೆಗೆಯುವಿಕೆ' ಎಂಬ ಗ್ರಹಿಕೆ/ಪರಿಕಲ್ಪನೆ ಬಹಳ ಕಾಲದಿಂದಲೂ ಜನಮಾನಸದಲ್ಲಿ ಚಾಲ್ತಿಯಲ್ಲಿದೆ. ಇದನ್ನು ಸಾಕಾರಗೊಳಿಸುವುದಕ್ಕೆ ಬಿಬಿಎಂಪಿ ಮತ್ತು ಕೆಪಿಸಿಎಲ್ ಟೊಂಕ ಕಟ್ಟಿರುವುದು ಶ್ಲಾಘನೀಯ. ಬೆಂಗಳೂರಿನಲ್ಲಿ ಸಂಗ್ರಹವಾಗುವ ಘನತ್ಯಾಜ್ಯವನ್ನು 'ಹಿಂಡಿ ಹಿಪ್ಪೆಮಾಡಿ' ವಿದ್ಯುತ್ತನ್ನು ಉತ್ಪಾದಿಸಿ ಸರಬರಾಜು ಮಾಡುವುದು ಇವು ಜಂಟಿಯಾಗಿ ಕಟ್ಟಿಕೊಂಡಿರುವ ಮಹತ್ವಾಕಾಂಕ್ಷೆ. ಈ ಯೋಜನೆ ಯಶಸ್ವಿಯಾಗಿ ನೆರವೇರಲಿ ಎಂಬುದು ನಾರದರ ಹಾರೈಕೆ ಮತ್ತು ನಿರೀಕ್ಷೆ. ವಿದ್ಯುತ್ ಉತ್ಪಾದನೆ/ಸರಬರಾಜು ಎನ್ನುತ್ತಿದ್ದಂತೆ ಒಂದು ಸಂಗತಿ ನೆನಪಾಯಿತು. ಹಿಂದೆ 'ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿ' ಎಂಬ ವ್ಯವಸ್ಥೆ ಅಸ್ತಿತ್ವದಲ್ಲಿತ್ತು ಮತ್ತು ಅದನ್ನು 'ಷಾರ್ಟ್ ಆ್ಯಂಡ್ ಸ್ವೀಟ್' ಆಗಿ 'ಕವಿಮಂ' ಎಂದು ಕರೆಯಲಾಗುತ್ತಿತ್ತು. ಈಗ ಕಸವನ್ನು ಹಿಂಡಿ ಹಿಪ್ಪೆಮಾಡಿ ವಿದ್ಯುತ್ ತಯಾರಿಗೆ ಬಳಸಲು ಮುಂದಾಗಿರುವುದರಿಂದ ಈ 'ಕವಿಮಂ' ಎಂಬ ಪ್ರಥಮಾಕ್ಷರಿಯನ್ನು 'ಕಸ ವಿಮೋಚನಾ ಮಂಡಳಿ' ಎಂಬುದಕ್ಕೆ ಪರ್ಯಾಯವಾಗಿ ಬಳಸಬಹುದೇ? ಎಂಬುದು ನಾರದರ ತರಲೆ ಪ್ರಶ್ನೆ!

ಸಂಕಷ್ಟದಲ್ಲಿರುವ ರೈತರಿಗೆ ಬೆಳೆ ವಿಮೆ ಸಂಗಾತಿಯಾಗಲಿ

ಗಂಟಾಘೋಷ
ಗುರುರಾಜ್ ಗಂಟಿಹೊಳೆ
vveditoped@gmail.com

ಕೃಷಿ ಚಟುವಟಿಕೆಗಳನ್ನೇ ಪ್ರಮುಖವಾಗಿಸಿಕೊಂಡು ಬೆಳೆದು ನಾಗರಿಕತೆ ಹೊಂದಿರುವ ಹಳ್ಳಿಗಳ ದೇಶ ಭಾರತ. ಕೃಷಿ, ತೋಟಗಾರಿಕೆ ಬೆಳೆಗಳು ದೇಶದ ಆರ್ಥಿಕ ಅಭಿವೃದ್ಧಿಯಲ್ಲಿ ಪ್ರಮುಖ ಪಾತ್ರವಹಿಸುತ್ತಿವೆ. ಇಷ್ಟಾದರೂ ಹವಾಮಾನ ವೈಪರೀತ್ಯ, ಪ್ರಾಕೃತಿಕ ವಿಕೋಪದ ಹತ್ತಾರು ಘಟನೆಗಳು ರೈತರಿಗೆ ನೇರ ಹೊಡೆತ ನೀಡುತ್ತವೆ. ಇಂಥ ಸಂದರ್ಭ ದಲ್ಲಿ ರೈತರಿಗೆ ಬೆಳೆ ವಿಮೆಯೇ ದೊಡ್ಡ ಆಶ್ರಯವಾಗಿರುತ್ತದೆ. ಇತ್ತೀಚಿನ ವರ್ಷಗಳಲ್ಲಿ ಬೆಳೆ ವಿಮೆ ಸಾಕಷ್ಟು ಪರಿವರ್ತನೆಯಾಗಿರುವುದರ ಜತೆಗೆ ಅದರ ಸರಳೀಕರಣವೂ ಆಗಿದೆ. ಆದರ ನಡುವೆಯೂ ಒಂದಿಷ್ಟು ಕ್ಲಿಷ್ಟತೆ ಇದೆ. ಇದನ್ನು ಸರಿಪಡಿಸಿ ಬೆಳೆ ಸಮೀಕ್ಷೆ ಹಾಗೂ ಬೆಳೆ ವಿಮೆ ರೈತರಿಗೆ ಸುಲಭದಲ್ಲಿ ಸಿಗುವಂತೆ ಮಾಡಿದಲ್ಲಿ ರೈತರು ಇನ್ನಷ್ಟು ನೆಮ್ಮದಿಯ ಬದುಕು ನಡೆಸಲು ಸಾಧ್ಯ. ಪ್ರಾಕೃತಿಕ ವಿಷಮ ಪರಿಸ್ಥಿತಿಯನ್ನು ಎದುರಿಸುವ ಧೈರ್ಯ, ಸ್ಥೈರ್ಯ ಅವರಲ್ಲಿ ಇನ್ನಷ್ಟು ಹೆಚ್ಚಲಿದೆ.

ದೇಶದ 'ಫುಡ್ ಬಾಸ್ಕೆಟ್' ಎಂದೇ ಖ್ಯಾತವಾಗಿರುವ ಉತ್ತರ ಪ್ರದೇಶವು ಗೋಧಿ, ಅಕ್ಕಿ, ಕಬ್ಬು, ಆಲೂಗಡ್ಡೆ, ಹಾಲು ಮತ್ತು ದಿನನಿತ್ಯದ ತರಕಾರಿ ಬೆಳೆಗೆ ಪ್ರಸಿದ್ಧವಾಗಿದ್ದರೆ, ಹರಿಯಾಣವು ತನ್ನ ಶೇ.80ರಷ್ಟು ಭೂಮಿಯನ್ನು ಇಂಥ ವಿವಿಧ ಬೆಳೆಗಳಿಗೆ ಉಪಯೋಗಿಸುತ್ತಿದೆ. ಮಧ್ಯಪ್ರದೇಶವು ದೇಶದ ಜಿಡಿಪಿಗೆ ಶೇ.47ರಷ್ಟು ಕೃಷಿ ಪ್ರಯೋಜನ ನೀಡುವ ಮೂಲಕ ಕೃಷಿ ಸಮ್ಮಾನ ಪ್ರಶಸ್ತಿಯನ್ನು 7 ಬಾರಿ ತನ್ನದಾಗಿಸಿಕೊಂಡಿದೆ. ಇನ್ನು ಗುಜರಾತ್ ತನ್ನ ಅರ್ಧದಷ್ಟು ಪ್ರದೇಶವನ್ನು ಕೃಷಿಗಾಗಿಯೇ ಬಳಸುತ್ತಿದೆ.

ಅಸ್ಸಾಂ ರಾಜ್ಯವು ಚಹಾ ಸೇರಿದಂತೆ ಅತ್ಯುಪಯುಕ್ತ ಬೆಳೆಗಳನ್ನು ಬೆಳೆಯುತ್ತಿದ್ದರೆ, ಕರ್ನಾಟಕವು ಭತ್ತ, ಅಡಕೆ, ತೆಂಗು, ಕಾಫಿ ಸಹಿತ ಹಲವು ತೋಟಗಾರಿಕೆ ಬೆಳೆಗಳ ಮೂಲಕ ದೇಶದಲ್ಲೇ ಮನ್ನಣೆ ಪಡೆದಿದೆ. ಇಲ್ಲಿನ ಒಂದೊಂದು ಜಿಲ್ಲೆಯಲ್ಲೂ ಒಂದೊಂ ದು ವಿಶೇಷ ಬೆಳೆಗಳಿವೆ. ಕರಾವಳಿ ಜಿಲ್ಲೆಗಳಲ್ಲಿ ಭತ್ತ, ಅಡಕೆ, ತೆಂಗು, ಕೋಕ್ ಇತ್ಯಾದಿ ಪ್ರಮುಖ ಬೆಳೆಯಾದರೆ ಮಲೆನಾಡಿನಲ್ಲಿ ಭತ್ತ, ಅಡಕೆಯೇ ಪ್ರಧಾನ. ಬಯಲುಸೀಮೆ ಪ್ರದೇಶದಲ್ಲಿ ದ್ವಿದಳ ಧಾನ್ಯಗಳ ಉತ್ಪಾದನೆಗೆ ಆದ್ಯತೆ ನೀಡಲಾಗುತ್ತದೆ. ಉತ್ತರ ಕರ್ನಾಟಕ ಭಾಗದಲ್ಲಿ ಪ್ರಮುಖವಾಗಿ ಕಬ್ಬು ಬೆಳೆಯಲಾಗುತ್ತದೆ. ಹೀಗೆ ಎಲ್ಲ ಕಡೆಗಳಲ್ಲೂ ಬೆಳೆಯ ಭಿನ್ನತೆಯಿದೆ.

ಸುಮಾರು 17,85,280 ಚ.ಕಿ.ಮೀ.ನಷ್ಟು ಭೂಮಿಯನ್ನು ದೇಶದ ಕೃಷಿ ಕಾರ್ಯಗಳಿಗೆ ಬಳಸಲಾಗುತ್ತಿದೆ. ಇದರಲ್ಲಿ ಶೇ.40ರಷ್ಟು ನೀರಾವರಿಯದಾಗಿದ್ದರೆ, 40 ದಶಲಕ್ಷ ಹೆಕ್ಟೇರ್ ಅಂತರ್ಜಲದಿಂದ ಮತ್ತು 22 ದಶಲಕ್ಷ ಹೆಕ್ಟೇರ್ ಕಾಲುವೆಗಳಿಂದ ನಡೆಯುತ್ತಿವೆ. ಮೂರನೇ ಎರಡು ಭಾಗದಷ್ಟು ಕೃಷಿಯು ಮಳೆಗಾಲದ ಮೇಲೆ ಅವಲಂಬಿತವಾಗಿದ್ದು, ಅಮೆರಿಕ, ರಷ್ಯಾ, ಚೀನಾ, ಬ್ರೆಜಿಲ್ ನಂತರದಲ್ಲಿ ಭಾರತವು ಅತಿಹೆಚ್ಚು ಕೃಷಿಯೋಗ್ಯ ಭೂಮಿಯನ್ನು ಹೊಂದಿದೆ. ತಾಪಮಾನ ಏರಿಕೆಯಿಂದಾಗಿ ಮಳೆ ವಿಧಾನದಲ್ಲಿ ಬದಲಾವಣೆಯಾಗಿ ಇದು ಕೃಷಿಯ ಮೇಲೆ ನೇರ ಪ್ರಭಾವ ಬೀರುತ್ತಿದೆ. ಮಳೆ ಆಶ್ರಿತ ಕೃಷಿಗೆ ಸಕಾಲದಲ್ಲಿ ಮಳೆಯ ಕೃಪೆ ಸಿಗುತ್ತಿಲ್ಲ. ಕಟಾವು ಅಥವಾ ಇಳುವರಿ ಪಡೆಯುವ ಸಂದರ್ಭದಲ್ಲಿ ಮಳೆ ಜಾಸ್ತಿ ಬರುತ್ತಿದೆ. ಇದೆಲ್ಲದರಿಂದಲೂ ರೈತರಿಗೆ ಸಮಸ್ಯೆ ಆಗುತ್ತಿದ್ದು, ಇದರ ನಿವಾರಣೆಗೆ ಬೆಳೆ ವಿಮೆ ಅತಿ ಅವಶ್ಯಕವಾಗಿದೆ. 150 ವರ್ಷಗಳ ಅಂಕಿ-ಅಂಶ ಪರಿಗಣಿಸಿದರೆ, ತಾಪಮಾನವು ಸರಾಸರಿ ಶೇ.2 ಡಿಗ್ರಿ ಸೆಲ್ಸಿಯಸ್‌ನಷ್ಟು ಜಾಸ್ತಿ ಆಗಿದೆ. ಇದು ಪಶುಗಳು, ಬೆಳೆಗಳು ಹಾಗೂ ಜನಜೀವನದ ಮೇಲೆ ಪರಿಣಾಮ ಬೀರುತ್ತಿದೆ.

ಮಾವು ಬೇಗ ಹೂ ಬಿಡುತ್ತಿದೆ. ಹೀಗಾದರೆ ಕಾಯಿ ಕಚ್ಚುವ ಪ್ರಮಾಣ ಕಡಿಮೆ ಆಗುತ್ತದೆ. ಸೇಬು ಬೆಳೆಯುವುದಕ್ಕೆ ಬೇಕಾದ ಕನಿಷ್ಠ ಎತ್ತರ ಹೆಚ್ಚುತ್ತಿರುವುದರಿಂದ ಸೇಬಿನ ಇಳುವರಿ ಕಡಿಮೆ ಆಗುತ್ತಿದೆ. ಹವಾಮಾನ ವೈಪರೀತ್ಯ ಎದುರಿಸಲು ಸೂಕ್ತ ಕ್ರಮ ಕೈಗೊಳ್ಳದಿದ್ದರೆ ಆಹಾರ ಉತ್ಪಾದನೆ ಇಳಿಕೆಯಾಗುವುದರ ಜತೆಗೆ ಗುಣಮಟ್ಟವೂ ಕಡಿಮೆಯಾಗಲಿದೆ. ಮಣ್ಣು-ಸಸ್ಯ, ಪ್ರಾಣಿಗಳ ನಡುವಿನ ಸಂಬಂಧ ಹಾಗೂ ಸಮತೋಲನ ಕಳೆದುಹೋಗಲಿದೆ.

ಕರ್ನಾಟಕದಲ್ಲಿ ನೀರಿನ ಬರ ವಿಪರೀತವಿದ್ದು, ರಾಜ್ಯದಾದ್ಯಂತ ಕೃಷಿಹೊಂಡಗಳನ್ನು ನಿರ್ಮಿಸುವ ಕಾರ್ಯ ನಡೆಯುತ್ತಿದೆ. ಇದರೊಂದಿಗೆ, ಹನಿ ನೀರಾವರಿ, ಸ್ಪ್ರಿಂಕ್ಲರ್ ಬಳಸುವ ಮೂಲಕ ನೀರು ಪೋಲಾಗುವುದನ್ನು ತಡೆಯಬೇಕು. ನಿಯಂತ್ರಿತ ನೀರಾವರಿ ಪದ್ಧತಿಯ ಬಳಕೆ ಈ ನಿಟ್ಟಿನಲ್ಲಿ ಹೆಚ್ಚು ಸೂಕ್ತ. ಸೆನ್ಸರ್‌ಗಳನ್ನು ಬಳಸಿ ಸಸಿಗಳಿಗೆ ಎಷ್ಟು ನೀರು ಅಗತ್ಯವಿದೆ ಎಂದು ಕಂಡುಕೊಂಡು ಅಷ್ಟೇ ಪ್ರಮಾಣದ ನೀರುಣಿಸುವ ವ್ಯವಸ್ಥೆಯನ್ನು ಜಾರಿಗೆ ತರುವುದು ಒಳಿತು. ಭತ್ತ ಹಾಗೂ ಕಬ್ಬಿಗೂ ಚತುರ ನೀರಾವರಿ ಬಳಸಿ ಎರಡರಿಂದ ಮೂರು ಪಟ್ಟು ಹೆಚ್ಚು ಇಳುವರಿ ಪಡೆಯಬಹುದು.

ಕೃಷಿ ಉತ್ಪನ್ನಗಳಿಗೆ ಮಾರುಕಟ್ಟೆ ಕಂಡುಕೊಳ್ಳುವುದು ದೊಡ್ಡ ಸವಾಲು. ದೇಶದಲ್ಲಿ ರೈತರ ಆದಾಯ ದ್ವಿಗುಣವಾಗಲು 14 ವರ್ಷ ಕಾಯಬೇಕಾಯಿತು. ಇಂಥ ಸ್ಥಿತಿಯು ಆತ್ಮಹತ್ಯೆಯಂಥ ಸಮಸ್ಯೆಗಳಿಗೂ ಕಾರಣವಾಗುತ್ತಿದೆ.

ಹವಾಮಾನ ಬದಲಾವಣೆಯನ್ನು ಸಮರ್ಥವಾಗಿ ಎದುರಿಸು ವುದರ ಜತೆಯಲ್ಲೇ ರೈತರ ಆದಾಯ ದ್ವಿಗುಣಗೊಳಿಸುವ ಬಗ್ಗೆ ಇತ್ತೀಚೆಗೆ ವ್ಯಾಪಕವಾಗಿ ಮಾತುಕತೆ ನಡೆಯುತ್ತಿದೆ. ಬೆಳೆ ಬೆಳೆಯುವುದರ ಜತೆಗೆ ಪಶುಸಂಗೋಪನೆ, ಕೋಳಿ ಸಾಕಣೆ, ಜೇನು ಕೃಷಿ, ಅಣಬೆ ಕೃಷಿ, ಒಂದು ಬೆಳೆಯ ಬದಲು ಎರಡು ಬೆಳೆ ತೆಗೆಯುವುದು, ಎರಡು ಪ್ರಮುಖ ಬೆಳೆಗಳ ನಡುವೆ ದ್ವಿದಳ ಧಾನ್ಯ ಬೆಳೆಯುವುದು ಇತ್ಯಾದಿ ಪರಿಪಾಠಗಳಿಂದ ಕೃಷಿ ಉತ್ಪಾದಕತೆ ಹೆಚ್ಚಿಸುವ ನಿಟ್ಟಿನಲ್ಲಿ ಪ್ರಯತ್ನ ನಡೆದಿದೆ. ಬಹುತೇಕ ಕೃಷಿ ಉತ್ಪನ್ನಗಳು ಬೇಗ ಹಾಳಾಗುವಂಥವು. ಇವುಗಳ ಶೇಖರಣೆಗೆ ಸರಣಿ ಶೀತಲ ಗೃಹಗಳನ್ನು ನಿರ್ಮಿಸುವ, ಸಾಗಣೆ ಹಾಗೂ ಮೌಲ್ಯವರ್ಧನೆಗೆ ವ್ಯವಸ್ಥೆ ಕಲ್ಪಿಸುವ ಕೆಲಸಗಳಾಗಬೇಕು.

ಇಂಥ ಕಠಿಣ ಸಂದರ್ಭಗಳಲ್ಲಿ ರೈತರ ಸಹಾಯಕ್ಕೆ ಬರುವ ಕೆಲ ಯೋಜನೆಗಳಲ್ಲಿ ಈ ಬೆಳೆ ವಿಮೆ ಕೂಡ ಒಂದೆನ್ನಬಹುದು. ಭಾರತದಲ್ಲಿ ಬೆಳೆ ವಿಮೆಯನ್ನು ಸಾಮಾನ್ಯವಾಗಿ ವಿವಿಧ ಸರಕಾರಿ ಯೋಜನೆಗಳ ಮೂಲಕ ಜಾರಿಗೆ ತರಲಾಗುತ್ತಿದ್ದು, ಇಂಥವುಗಳಲ್ಲಿ ಪ್ರಮುಖವಾಗಿ ಪ್ರಧಾನಮಂತ್ರಿ ಫಸಲ್ ಬಿಮಾ ಯೋಜನೆ (PMFBY) ಕೂಡ ಒಂದಾಗಿದೆ.

ಬೆಳೆ ವಿಮಾ ಪಾಲಿಸಿಗಳನ್ನು ವಿಶಿಷ್ಟವಾಗಿ ಕೃಷಿಯಲ್ಲಿ ತೊಡಗಿರುವ ವ್ಯಕ್ತಿಗಳು ಅಥವಾ ಘಟಕಗಳಿಗೆಂದು ವಿನ್ಯಾಸಗೊಳಿ ಸಲಾಗಿದ್ದು, ದೊಡ್ಡ ಪ್ರಮಾಣದ ವಾಣಿಜ್ಯ ರೈತರು, ಸಣ್ಣ ಪ್ರಮಾಣದ ಜೀವನಾಧಾರ ರೈತರು, ಹಿಡುವಳಿದಾರ ರೈತರು, ಸಾಲ ಪಡೆಯದ ರೈತರು, ಉಪಕರಣ ತಯಾರಕರು ಮತ್ತು ಆಹಾರ ಸಂಸ್ಕಾರಕಗಳು ಸೇರಿದಂತೆ ಕೃಷಿ ವ್ಯವಹಾರಗಳಲ್ಲಿ ತೊಡಗಿಸಿಕೊಂಡ ಕಡ್ಡಾಯ ಮತ್ತು ಸ್ವಯಂಪ್ರೇರಿತ ಘಟಕಗಳೆಲ್ಲವೂ ಈ ವಿಮೆಯನ್ನು ಹೊಂದಬಹುದಾಗಿದೆ.

ಬೆಳೆ ವಿಮಾ ಯೋಜನೆಗಳು 1970ರ ದಶಕದಿಂದಲೂ ದೇಶದ ವಿವಿಧ ಭಾಗಗಳಲ್ಲಿ ಅಸ್ತಿತ್ವದಲ್ಲಿವೆ. ಪೈಲಟ್ ಬೆಳೆ ವಿಮಾ ಯೋಜನೆ, ಸಮಗ್ರ ಬೆಳೆ ವಿಮಾ ಯೋಜನೆ ಮತ್ತು ರಾಷ್ಟ್ರೀಯ ಕೃಷಿ ವಿಮಾ ಯೋಜನೆ (NAIS) ಸೇರಿದಂತೆ ರಾಷ್ಟ್ರೀಯ ಮಟ್ಟದ ವಿವಿಧ ಯೋಜನೆಗಳನ್ನು ಪರಿಚಯಿಸಲಾಗಿದೆ. ಮೋದಿಯವರು ಅಧಿಕಾರಕ್ಕೆ ಬಂದ ಮೇಲೆ ಪ್ರಧಾನ ಮಂತ್ರಿ ಫಸಲ್ ಬಿಮಾ ಯೋಜನೆ (PMFBY) ಮತ್ತು ಮರುರೂಪಿತ ಹವಾಮಾನ ಆಧರಿತ ಬೆಳೆ ವಿಮಾ ಯೋಜನೆ (RWBCIS) ಇತ್ಯಾದಿಗಳನ್ನು ಕೇಂದ್ರ ಸರಕಾರದ ಮೂಲಕ 2016ರಲ್ಲಿ ಪ್ರಾರಂಭಿಸಲಾಯಿತು.

ಬೆಳೆನಾಶದಿಂದಾಗಿ ರೈತರ ಜೀವನೋಪಾಯದ ಮೇಲಾಗುವ ವ್ಯತಿರಿಕ್ತ ಪರಿಣಾಮವನ್ನು ತಗ್ಗಿಸುವುದು ಮತ್ತು ನಷ್ಟದ ಭಯವಿಲ್ಲದೆ ಆಧುನಿಕ ಕೃಷಿ ಪದ್ಧತಿಗಳನ್ನು ಅಳವಡಿಸಿಕೊಳ್ಳಲು ಪ್ರೋತ್ಸಾಹಿಸುವುದು, ಬೆಳೆ ವಿಮೆಯ ಪ್ರಾಥಮಿಕ ಉದ್ದೇಶವಾಗಿದೆ. ಇಷ್ಟೆಲ್ಲ ಸೌಲಭ್ಯ-ಸೌಕರ್ಯಗಳನ್ನು ಸರಕಾರಗಳಿಂದ ಘೋಷಿಸಲಾಗಿದ್ದರೂ, ಪರಿಣತರಲ್ಲದವರಿಗೆ ಆಧುನಿಕತೆ-ತಂತ್ರಜ್ಞಾನದ ಹೆಸರಿನಲ್ಲಿ ತಂತ್ರಾಂಶಗಳನ್ನು ತಯಾರಿಸುವುದಕ್ಕೆ ಗುತ್ತಿಗೆ ನೀಡುವ ಸ್ಥಳೀಯ ಆಡಳಿತವು ರೈತರ ಬದುಕಿನೊಂದಿಗೆ ಚೆಲ್ಲಾಟವಾಡುತ್ತ ತಮಾಷೆ ನೋಡುತ್ತಿದೆ ಎನ್ನಬಹುದು. 'ಭೂಮಿ' ಎನ್ನುವ ತಂತ್ರಾಂಶವು ಅರೆಬರೆ ಕಾಲಮ್ಮುಗಳನ್ನು ಪಹಣಿಗಳಲ್ಲಿ ತೋರುವ ಮೂಲಕ, ಬಹುತೇಕ ರೈತರು ವಿಮೆ ಪಾವತಿಸದಂತೆ ಎಡವಟ್ಟು ಮಾಡಿಕೊಂಡು ಕುಳಿತಿದೆ. ಅಂತಿಮ ಗಡುವು ಮುಗಿದರೂ ವಿಮೆ ತುಂಬಲು ಸಾಧ್ಯವಾಗದೆ ರೈತರು ಹಣೆ ಚಚ್ಚಿಕೊಳ್ಳುತ್ತಿದ್ದಾರೆ. ಇತ್ತ ಬೆಳೆನಷ್ಟಕ್ಕೆ ಪರಿಹಾರದ ಹಣವೂ ಸರಿಯಾಗಿ ರೈತರಿಗೆ ತಲುಪುತ್ತಿಲ್ಲ.

ಇನ್ನು ಅಡಕೆ ಬೆಳೆಯ ವಿಚಾರಕ್ಕೆ ಬಂದರೆ, ರಾಜ್ಯ ಸರಕಾರದ ಮತ್ತು ಸ್ಥಳೀಯ ಆಡಳಿತದ ಅಧಿಕಾರಿಗಳ ಉಡಾಫೆ, ದಿವ್ಯ ನಿರ್ಲಕ್ಷ್ಯ ಎದ್ದು ಕಾಣುತ್ತವೆ. ಈಗಷ್ಟೇ ನೈಋತ್ಯ ಮುಂಗಾರು ಹಂಗಾಮು ಆರಂಭವಾಗಿದ್ದು, ರೈತರಿಗೆ ಹವಾಮಾನ ಆಧರಿತ ಬೆಳೆ ಯೋಜನೆಯ ವಿಮಾ ಮಾಹಿತಿಯನ್ನು ತಡವಾಗಿ ನೀಡಲಾಗಿದೆ ಮತ್ತು ರೈತರು ಬೆಳೆ ವಿಮೆ ನೋಂದಣಿ ಮಾಡಿಕೊಳ್ಳಲು ಜುಲೈ 31ನ್ನು ಕೊನೆಯ ದಿನವನ್ನಾಗಿ ತಿಳಿಸಲಾಗಿತ್ತು. ಈ ಕಾರಣದಿಂದಾಗಿ ಬಹುತೇಕ ರೈತರಿಗೆ ಈ ಮಾಹಿತಿ ತಲುಪಿಲ್ಲ. ಆದ್ದರಿಂದ ನೋಂದಣಿಯ ಕಾಲಾವಕಾಶ ವನ್ನು ವಿಸ್ತರಿಸಬೇಕೆಂಬುದು ಸ್ಥಳೀಯ ಜನಪ್ರತಿನಿಧಿಗಳ, ರೈತರ ಆಗ್ರಹವಾಗಿದೆ ಕೂಡ.

ಹವಾಮಾನ ಆಧರಿತ ಬೆಳೆ ವಿಮೆ ಯೋಜನೆಯಡಿ, ಮಾವು ಬೆಳೆಗೆ ಪ್ರತಿ ಹೆಕ್ಟೇರ್‌ಗೆ 80 ಸಾವಿರ ರು., ದಾಳಿಂಬೆ ಬೆಳೆಗೆ ಪ್ರತಿ ಹೆಕ್ಟೇರ್‌ಗೆ 1,27,000 ರು. ನೀಡಲಾಗುತ್ತಿದೆ. ಇದರಂತೆಯೇ, ಪ್ರತಿ ಹೆಕ್ಟೇರ್ ಅಡಕೆ ಬೆಳೆಗೆ 6,400 ರು. ವಿಮೆ ಕಂತು ವಿಧಿಸಲಾ ಗಿದ್ದು, ಅಡಕೆ ಬೆಳೆಗಾರರಿಗೆ ಪ್ರತಿ ಹೆಕ್ಟೇರ್‌ಗೆ 1,28,000 ರು. ವಿಮೆ ಮೊತ್ತ ನೀಡಲಾಗುತ್ತದೆ. ರೈತರು 5 ಕಂತುಗಳಲ್ಲಿ 6,400 ರು. ಪಾವತಿಸಬೇಕು ಎಂದೇನೋ ತಿಳಿಸಲಾಗಿದೆ. ಆದರೆ, ಕೊಟ್ಟಿರುವ ಕಾಲಮಿತಿ ಅತ್ಯಲ್ಪವಾಗಿದ್ದು, ತಮ್ಮ ವಿಮೆ ಕಂತು ಪಾವತಿ ಸಲು ಅನುಕೂ ಲವಾಗುವಂತೆ ಕಾಲಾವಕಾಶವನ್ನು ಇನ್ನಷ್ಟು ವಿಸ್ತರಿಸಬೇಕೆಂಬುದು ವಿವಿಧೆಡೆಯ ಅಡಕೆ ಬೆಳೆಗಾರರ ಆಗ್ರಹವಾಗಿದೆ.

ಬೆಳೆ ಸಮೀಕ್ಷೆಯನ್ನು ವೈಜ್ಞಾನಿಕವಾಗಿ ಮಾಡಲಾಗುತ್ತದೆ. 'ಫಾರ್ಮರ್ ರಿಜಿಸ್ಟ್ರೇಷನ್ ಆ್ಯಂಡ್ ಯುನಿಫೈಡ್ ಬೆನಿಫಿಶಿಯರಿ ಇನ್ಫರ್ಮೇಷನ್ ಸಿಸ್ಟಮ್' (FRUITS) ತಂತ್ರಾಂಶದಲ್ಲಿ ರೈತರು ತಮ್ಮ ಬೆಳೆ ಸಂಬಂಧಿತ ಮಾಹಿತಿಯನ್ನು ಅಪ್‌ಲೋಡ್ ಮಾಡಲು ಅವಕಾಶವಿದೆ. ಆ್ಯಪ್ ಆಧಾರದಲ್ಲಿ ರೈತರೇ ಬೆಳೆ ಸಮೀಕ್ಷೆಯನ್ನು ಆನ್‌ಲೈನ್ ವ್ಯವಸ್ಥೆಯಲ್ಲಿ ಮಾಡುವ ಅವಕಾಶವೂ ಇದೆ. ಇದೆಲ್ಲದರ ಹೊರತಾಗಿ ಕೆಲವು ತಾಂತ್ರಿಕ ಸಮಸ್ಯೆಗಳೂ ರೈತರನ್ನು ಕಾಡುತ್ತಿವೆ. ಈ ಸಮಸ್ಯೆಗಳನ್ನು ಸರಕಾರಗಳು ಆರಂಭದಲ್ಲಿಯೇ ಸರಿಪಡಿಸಬೇಕು. ದೇಶದಲ್ಲಿ ಒಂದೊಂದು ಬೆಳೆಯ ಸ್ವರೂಪವೂ ಭಿನ್ನವಾಗಿರುವುದರಿಂದ ಇಳುವರಿ ಬರಲು ಅದರದ್ದೇ ಕಾಲಮಿತಿ ಇರುತ್ತದೆ. ಅಡಕೆ, ತೆಂಗು ಇತ್ಯಾದಿ ಒಂದು ರೀತಿಯದ್ದಾದರೆ ಬಾಳೆ ಸಹಿತ ವಿವಿಧ ಹಣ್ಣಿನ ಬೆಳೆಗಳು ಇನ್ನೊಂದು ರೀತಿಯದ್ದಾಗಿವೆ. ಇದರ ನಿಖರತೆ ರೈತರಿಗೆ, ಬೆಳೆಗಾರರಿಗೆ ಸ್ಪಷ್ಟವಾಗಿರುತ್ತದೆ. ಹೀಗಾಗಿ ಬೆಳೆ ಸಮೀಕ್ಷೆ ಅಥವಾ ನೋಂದಣಿಗೆ ಕೊನೆಯ ದಿನ ನಿಗದಿ ಮಾಡುವ ಸಂದರ್ಭದಲ್ಲಿ ಇಲಾಖೆಯ ಅಧಿಕಾರಿಗಳು ಅಥವಾ ವಿಮಾ ಸಂಸ್ಥೆಯ ಅಧಿಕಾರಿಗಳು ಏಕಪಕ್ಷೀಯ ನಿರ್ಧಾರ ಮಾಡುವುದು ಸರಿಯಲ್ಲ. ರೈತರಿಂದಲೂ ಮಾಹಿತಿ ಪಡೆದು ಯಾವ ಸಮಯ ಸೂಕ್ತ ಎಂಬುದನ್ನು ಅವರಿಂದಲೂ ತಿಳಿಯಬೇಕು. ರೈತರಿಗೆ ಸೌಲಭ್ಯ ನೀಡುವಾಗ ಅಥವಾ ಸೌಲಭ್ಯಕ್ಕಾಗಿ ನೋಂದಣಿ, ಅರ್ಜಿ ಆಹ್ವಾನ ಇತ್ಯಾದಿ ಸಂದರ್ಭದಲ್ಲಿ ತರಾತುರಿ ಮಾಡುವುದು ಸರಿಯಲ್ಲ. ಹಾಗೆಯೇ ಪರಿಹಾರ ನೀಡುವಾಗ ವಿಳಂಬ ಧೋರಣೆಯೂ ಸರಿಯಲ್ಲ. ಬೆಳೆ ವಿಮೆ ಕಂತುಗಳ ಬಗ್ಗೆ ಜಾಗೃತಿ ಮೂಡಿಸುವುದು ಮತ್ತು ನಿಗದಿತ ಕಾಲಮಿತಿಯಲ್ಲಿ ಪರಿಹಾರ ಒದಗಿಸುವುದು ಆದಲ್ಲಿ, ನಷ್ಟ ಹೊಂದಿದ ರೈತ ಅಥವಾ ಬೆಳೆಗಾರ ತಕ್ಷಣವೇ ಪರ್ಯಾಯ ಬೆಳೆಯನ್ನು ಅಥವಾ ಪರಿಷ್ಕೃತ ಮಾದರಿಯಲ್ಲಿ ಅದೇ ಬೆಳೆಯನ್ನು ಬೆಳೆಯಲು ಸಾಧ್ಯವಾಗುತ್ತದೆ. ಹೀಗಾಗಿ ಬೆಳೆ ಸಮೀಕ್ಷೆ ಮತ್ತು ಬೆಳೆ ವಿಮೆಯು ಮೂಲ ಆಶಯದಂತೆ ರೈತ ಸ್ನೇಹಿಯಾಗಿರಬೇಕು. ತಾಂತ್ರಿಕ ಸಮಸ್ಯೆಗಳಿಂದ ರೈತರಿಗೆ ಅನಾನುಕೂಲ ಆಗಕೂ ಡದು. ಸಂಕಷ್ಟದಲ್ಲಿರುವ ರೈತರಿಗೆ ಬೆಳೆ ವಿಮೆಯು ಸಂಗಾತಿ ಯಾಗಿರಬೇಕೇ ವಿನಾ, ಅದನ್ನು ಪಡೆಯಲು ಪರಿತಪಿಸುವಂತೆ ಆಗಬಾರದು. ಈ ನಿಟ್ಟಿನಲ್ಲಿ ಸರಕಾರ, ಇಲಾಖೆಯ ಅಧಿಕಾರಿಗಳು ಗಂಭೀರ ಚಿಂತನೆ ನಡೆಸಬೇಕು, ರೈತರಲ್ಲಿ ಜಾಗೃತಿಯನ್ನು ಮೂಡಿಸಬೇಕು. ಬೆಳೆ ವಿಮೆಯ ಪರಿಹಾರ ಮೊತ್ತ ಹೆಚ್ಚಬೇಕು ಹಾಗೂ ನೋಂದಣಿಗೆ ಕಾಲಮಿತಿಯನ್ನು ಅವೈಜ್ಞಾನಿಕವಾಗಿ ರೂಪಿಸುವುದು ತಪ್ಪಬೇಕು.

ಕಳಕಳಿ
ಬಸವರಾಜ ಶಿವಪ್ಪ ಗಿರಗಾಂವಿ

ಇದು ಸ್ವಾಗತಾರ್ಹ ಚಿಂತನೆ

ಭಾರತವು ವಿಶ್ವದಲ್ಲಿಯೇ ಅತಿಹೆಚ್ಚು ಬಿಳಿ ಸಕ್ಕರೆಯನ್ನು ಉತ್ಪಾದಿಸುವ ಹಾಗೂ ಉಪಯೋಗಿಸುವ ರಾಷ್ಟ್ರವಾಗಿದೆ. ಈ ಬಳಕೆಯನ್ನು 'ಆರೋಗ್ಯಕರ'ಗೊಳಿಸಲು ಕೇಂದ್ರ ಸರಕಾರವು ಚಿಂತನೆ ನಡೆಸುತ್ತಿರುವುದು ಸ್ವಾಗತಾರ್ಹ. ಇದರ ಭಾಗವಾಗಿ, ಬಿಳಿ ಸಕ್ಕರೆಯ ಬದಲಾಗಿ ಮೂಲ ಮತ್ತು ನೈಸರ್ಗಿಕ ಸ್ವರೂಪವಾದ ಕಚ್ಚಾ ಸಕ್ಕರೆಯ ಗೃಹಬಳಕೆಗೆ ಸಂಬಂಧಿಸಿದಂತೆ ಅದು ಸಾರ್ವಜನಿಕರ ಅಭಿಪ್ರಾಯವನ್ನು ಸಂಗ್ರಹಿಸುತ್ತಿದೆ. ಕಳೆದ ಆಗಸ್ಟ್ 29ರಂದು ನಡೆದ ಸಭೆಯಲ್ಲಿ ಕೇಂದ್ರ ಆಹಾರ ಮತ್ತು ನಾಗರಿಕ ಪೂರೈಕೆ ಸಚಿವಾಲಯವು ಈ ಪ್ರಸ್ತಾವನೆಯನ್ನು ಸರಕಾರದ ಮುಂದೆ ಮಂಡಿಸಿದೆ.

ಸಕ್ಕರೆ ಕಾರ್ಖಾನೆಗಳು ಮಾರುಕಟ್ಟೆಯ ಅನಿವಾರ್ಯತೆ, ಗ್ರಾಹಕರ ಆಕರ್ಷಣೆ ಮತ್ತು ಹೊಳಪಿಗಾಗಿ ಸಕ್ಕರೆಯನ್ನು ಸಂಸ್ಕರಿಸುವುದುಂಟು. ಅಂದರೆ, ಕಚ್ಚಾ ಸಕ್ಕರೆಯನ್ನು ಸಂಸ್ಕರಣೆಗೆ ಒಳಪಡಿಸಿ, ಈ ಹಂತದಲ್ಲಿ ಗಂಧಕ ಮತ್ತು ಇತರ ರಾಸಾ ಯನಿಕಗಳನ್ನು ಸೇರಿಸಿ, ಅದನ್ನು ಬಿಳಿಯ ಸಕ್ಕರೆಯಾಗಿ ಮಾರ್ಪಡಿಸಲಾಗುತ್ತದೆ. ಭಾರತವು ಅತಿಹೆಚ್ಚು ಪ್ರಮಾಣದಲ್ಲಿ ಸಕ್ಕರೆಯನ್ನು ಬಳಸುವುದರಿಂದ, ಸ್ವದೇಶ ದಲ್ಲಿಯೇ ಉತ್ಪಾದನೆಯಾದ ಆಕರ್ಷಕ ಬಿಳಿಸಕ್ಕರೆಯನ್ನು ಗೃಹಬಳಕೆಗೆ ಪರಿಗಣಿಸ ಲಾಗುತ್ತಿದೆ. ವಿದೇಶಗಳಲ್ಲಾದರೆ ಕಚ್ಚಾಸಕ್ಕರೆಯ ಬಳಕೆಯಿದೆ, ಜತೆಗೆ ಆಹಾರದಲ್ಲಿ ರಾಸಾಯನಿಕಗಳ ಬಳಕೆಯೂ ಕಮ್ಮಿ; ಹೀಗಾಗಿ, ಭಾರತದಲ್ಲಿರುವಷ್ಟು ಪ್ರಮಾಣದಲ್ಲಿ ವಿದೇಶಗಳಲ್ಲಿ ಸ್ಥೂಲಕಾಯದ ಜನರಿಲ್ಲ ಎಂಬುದು ಗಮನಾರ್ಹ (ಭಾರತದಲ್ಲಿ ಅತಿಯಾದ ರಾಸಾಯನಿಕಯುಕ್ತ ಆಹಾರ ಪದಾರ್ಥಗಳನ್ನು ಸೇವಿಸುತ್ತಿರುವುದರಿಂದ, ಕ್ಯಾನ್ಸರ್ ರೋಗಿಗಳ ಸಂಖ್ಯೆಯೂ ಹೆಚ್ಚಾಗುತ್ತಿದೆ). ಈ ಬೆಳವಣಿಗೆಗಳಿಂದಾಗಿ ಭಾರತವು 'ವಿಶ್ವದ ಮಧುಮೇಹಿಗಳ ರಾಜಧಾನಿ'ಯಾಗಿ ಹೊರಹೊಮ್ಮಿರುವುದು ಸುಳ್ಳಲ್ಲ.

ವಿದೇಶಗಳಲ್ಲಿ ಗೃಹಬಳಕೆಗೆ ಪರಿಗಣಿಸಲಾಗುವ ಕಚ್ಚಾಸಕ್ಕರೆಯಲ್ಲಿ ಗಂಧಕವು ಕಡಿಮೆ ಪ್ರಮಾಣದಲ್ಲಿರುವುದರಿಂದ ಆರೋಗ್ಯಕ್ಕೆ ಪೂರಕವಾಗಿದೆ. ಅಂದರೆ, ಸಕ್ಕರೆಯ ಕಚ್ಚಾವಸ್ತುಗಳಾದ ಕಬ್ಬು ಮತ್ತು ಸಕ್ಕರೆಗಡ್ಡೆಯ ಬೆಳವಣಿಗೆಯ ಹಂತದಲ್ಲಿ, ಮಣ್ಣಿನಿಂದ ನೈಸರ್ಗಿಕವಾಗಿ ಬಂದಷ್ಟು ಮಾತ್ರ ಗಂಧಕವು ಕಚ್ಚಾ ಸಕ್ಕರೆಯಲ್ಲಿ ಲಭ್ಯವಿರುತ್ತದೆ. ಮದ್ದು-ಗುಂಡುಗಳ ಉತ್ಪಾದನೆಯಲ್ಲಿ ಬಳಸಲಾಗುವ ಗಂಧಕವನ್ನು ಆಹಾರದಲ್ಲಿ ಅತಿರೇಕದ ಪ್ರಮಾಣದಲ್ಲಿ ಬಳಸಿದಲ್ಲಿ ಅದು ಆರೋಗ್ಯಕ್ಕೆ ಹಾನಿಕಾರಕವೆಂದು ಹಲವು ಸಂಶೋಧನೆಗಳು ತಿಳಿಸಿವೆ. ಇಷ್ಟಾಗಿಯೂ ಭಾರತದಲ್ಲಿ ಗೃಹಬಳಕೆಗೆ ಗಂಧಕಯುಕ್ತ ಬಿಳಿಸಕ್ಕರೆಯನ್ನೇ ಪರಿಗಣಿಸುತ್ತಿರುವುದು ವಿಪರ್ಯಾಸ!

ಕಚ್ಚಾಸಕ್ಕರೆಯ ಉತ್ಪಾದನೆಯಿಂದಾಗಿ ಕಾರ್ಖಾನೆಗಳ ಕಬ್ಬು ಅರೆಯುವಿಕೆ ಪ್ರಮಾಣವು ಹೆಚ್ಚಾಗುತ್ತದೆ. ಸಂಸ್ಕರಣೆಯ ಹಂತದಲ್ಲಿ ಸಮಯ, ಬಿಸಿಹಬೆ (ಸ್ಟೀಮ್) ಮತ್ತು ಇಂಧನದ ಬಳಕೆಯು ಕಡಿಮೆಯಾಗುವುದರಿಂದ, ವಾತಾವರಣದಲ್ಲಿ ಇಂಗಾಲದ ಡೈಯಾಕ್ಸೈಡ್‌ನ ಹೊರಸೂಸುವಿಕೆ ಕಡಿಮೆಯಾಗಿ, ಪರಿಸರ ಮಾಲಿನ್ಯ ಹತೋಟಿಗೆ ಬರುತ್ತದೆ. ಕಾರ್ಖಾನೆಯ ಯಂತ್ರೋಪಕರಣಗಳಿಗೆ ಹೆಚ್ಚಿನ ಒತ್ತಡ ಬೀಳದಿರುವುದರಿಂದ ಯಂತ್ರಗಳ ಸವಕಳಿ ತಪ್ಪುತ್ತದೆ. ಕಚ್ಚಾ ಸಕ್ಕರೆಯಲ್ಲಿ ರಾಸಾಯನಿಕಗಳ ಮಿಶ್ರಣ ಕಡಿಮೆಯಾಗಿ ಕೇವಲ ಸುಣ್ಣವು ಮಿಶ್ರಣವಾಗುವುದರಿಂದ ಕ್ಯಾಲ್ಸಿಯಂ ಅಂಶವು ಹೆಚ್ಚಾಗಿರುತ್ತದೆ. ಸಾವಯವ ಬೆಲ್ಲದಂತೆ ನೈಸರ್ಗಿಕವಾದ ಕಂದು ಬಣ್ಣದಲ್ಲಿರುವ ಈ ಕಚ್ಚಾಸಕ್ಕರೆ ವಿವಿಧ ಖನಿಜಗಳು, ಜೀವಸತ್ವಗಳು, ಪೋಷಕಾಂಶಗಳನ್ನು ಮಾತ್ರವಲ್ಲದೆ ರೋಗನಿರೋಧಕ ಶಕ್ತಿಯನ್ನು ಒಳಗೊಂಡಿರುತ್ತದೆಯಾದ್ದರಿಂದ ಆರೋಗ್ಯಕರವಾಗಿ ರುತ್ತದೆ ಮತ್ತು ಗೃಹಬಳಕೆಗೆ ಸೂಕ್ತವಾಗಿರುತ್ತದೆ. ಕಚ್ಚಾಸಕ್ಕರೆಯು ಬಿಳಿಸಕ್ಕರೆಗಿಂತ ಹೆಚ್ಚು ಬಾಳಿಕೆ ಬರುತ್ತದೆ ಮತ್ತು ಅದರ ಉತ್ಪಾದನಾ ವೆಚ್ಚವೂ ಕಮ್ಮಿ. ಮಹತ್ವಾಕಾಂಕ್ಷೆಯ ಎಥೆನಾಲ್ ಉತ್ಪಾದನೆಯಿಂದ ಈಗಾಗಲೇ ಸಶಕ್ತಗೊಳ್ಳುತ್ತಿರುವ ಸಕ್ಕರೆ ಉದ್ಯಮ ಮತ್ತು ರೈತವಲಯಗಳು ಕಚ್ಚಾಸಕ್ಕರೆಯ ಉತ್ಪಾದನೆಯಿಂದ ಮತ್ತಷ್ಟು ಬಲಗೊಳ್ಳುವುದರೊಂದಿಗೆ ಜನಸಮುದಾಯದ ಆರೋಗ್ಯವೂ ಸುಧಾರಣೆಯಾಗಬಲ್ಲದು. ವಿದೇಶಗಳಲ್ಲಿ ಸಕ್ಕರೆಯ ಹೊಳಪು ಮತ್ತು ಬಣ್ಣದ ಬಗ್ಗೆ ತಲೆ ಕೆಡಿಸಿಕೊಳ್ಳುವುದಿಲ್ಲ; ಆರೋಗ್ಯಕ್ಕೆ ಹಿತಕರವಾದ ಮತ್ತು ರಾಸಾಯನಿಕ ರಹಿತವಾದ ಸಕ್ಕರೆಯ ಬಳಕೆಗೆ ಮಾತ್ರವೇ ಅಲ್ಲಿ ಮಹತ್ವ. ಕಲಬೆರಕೆ ಆಹಾರಗಳು ಮತ್ತು ರೋಗಗಳು ಹೆಚ್ಚಾಗುತ್ತಿರುವ ಪ್ರಸಕ್ತ ದಿನಮಾನಗಳಲ್ಲಿ ಕೇಂದ್ರ ಸರಕಾರವು ಆಹಾರ ಸುರಕ್ಷತೆಯ ದೃಷ್ಟಿಯಿಂದ ಕಚ್ಚಾಸಕ್ಕರೆಯ ಗೃಹಬಳಕೆಗೆ ಅನುಮತಿಸಿದಲ್ಲಿ ಅದೊಂದು ಐತಿಹಾಸಿಕ ಕ್ರಮವಾಗುವುದರಲ್ಲಿ ಎರಡು ಮಾತಿಲ್ಲ.

(ಲೇಖಕರು ಕೃಷಿ ತಜ್ಞರು ಹಾಗೂ ಸಹಾಯಕ ಮಹಾಪ್ರಬಂಧಕರು)

ಅಚ್ಚುಕಟ್ಟು ಪ್ರದೇಶ
RNI: KARKAN/2016/67914
VISHVAVANI, Printed & Published by: VISHWESHWAR BHAT, On behalf of Vishwakshara Media Private Ltd., No.1687, Nisarga Serenity, Complex Road, Near Raghavendra Swamy Temple, BEML Layout, 5th Stage, Rajarajeshwarinagar, Bangalore.560098. PH: 6362393959/6362393942
Printed MNS Printers PVT.Ltd,345/4,Bhatrahalli,Near KR Puram RTO, Old Madras Road,Bengalore 560049
Editor-in Chief : Vishweshwar Bhat. ಪ್ರಧಾನ ಸಂಪಾದಕ: ವಿಶ್ವೇಶ್ವರ ಭಟ್
CopyRight: Vishwakshara Media Private Ltd. All rights reserved. Reproduction in any manner electronic or otherwise, in whole or in part, without prior written permission is prohibited.
ನಮ್ಮ ಆವೃತ್ತಿಗಳು: ಬೆಂಗಳೂರು, ಹುಬ್ಬಳ್ಳಿ ಮಂಗಳೂರು, ಬೆಳಗಾವಿ ಕಲಬುರಗಿ, ದಾವಣಗೆರೆ
Vol:9, Issue: 283

ಸಮಾಚಾರ ಸಣ್ಣದಲ್ಲ

ಪ್ರವಾಹ: ವಾಯುಪಡೆ ಕಾಪ್ಟರ್ ತುರ್ತು ಭೂಸ್ಪರ್ಶ

ಪಟನಾ: ಪ್ರವಾಹಪೀಡಿತ ಬಿಹಾರ ರಾಜ್ಯಕ್ಕೆ ಪರಿಹಾರ ಸಾಮಗ್ರಿ ವಿತರಿಸಲು ತೆರಳಿದ್ದ ಭಾರತೀಯ ವಾಯುಪಡೆ ಹೆಲಿಕಾಪ್ಟರ್ ಎಂಜಿನ್ ಸಮಸ್ಯೆಯಿಂದ ಪ್ರವಾಹದ ನೀರಿನಲ್ಲಿ ತುರ್ತು ಭೂಸ್ಪರ್ಶ ಮಾಡಬೇಕಾಯಿತು. ಹೆಲಿಕಾಪ್ಟರ್‌ನಲ್ಲಿ ಇಬ್ಬರು ಅಧಿಕಾರಿಗಳು ಸೇರಿ ವಾಯುಪಡೆಯ ನಾಲ್ವರು ಸಿಬ್ಬಂದಿಗಳಿದ್ದು, ಎಲ್ಲರನ್ನೂ ರಕ್ಷಿಸಲಾಗಿದೆ. ಬುಧವಾರ ಮಧ್ಯಾಹ್ನ ಮುಜಾಫರ್‌ಪುರದ ನಯಾ ಗ್ರಾಮದಲ್ಲಿ ಹೆಲಿಕಾಪ್ಟರ್ ತುರ್ತು ಭೂಸ್ಪರ್ಶ ಮಾಡಿದೆ. ದರ್ಭಾಂಗಾ ವಾಯುನೆಲೆಯಿಂದ ಟೇಕಾಫ್ ಆಗಿತ್ತು. ಲ್ಯಾಂಡಿಂಗ್ ನಂತರ, ಹೆಲಿಕಾ ಪ್ಟರ್ ಒಂದು ಭಾಗ ಪ್ರವಾಹದ ನೀರಿನಲ್ಲಿ ಮುಳುಗಿದೆ. ಪೈಲಟ್‌ನ ಜಾಣ್ಮೆಯಿಂದ ಭಾರಿ ಅನಾಹುತ ತಪ್ಪಿದೆ.

ಪ್ರವಾಹ ಪೀಡಿತ ರಾಜ್ಯಗಳಿಗೆ 5858 ಕೋಟಿ ರು. ಬಿಡುಗಡೆ

ದೆಹಲಿ: ಪ್ರವಾಹ ಪೀಡಿತ ರಾಜ್ಯಗಳಿಗೆ ಕೇಂದ್ರ ಗೃಹ ಇಲಾಖೆ ಬುಧವಾರ ಪರಿಹಾರ ಮೊತ್ತ 5858.60 ಕೋಟಿ ರು.ಗಳನ್ನು ಬಿಡುಗಡೆ ಮಾಡಿದೆ. ಪ್ರಧಾನಿ ನರೇಂದ್ರ ಮೋದಿ ನೇತೃತ್ವದಲ್ಲಿ ಸಂಪುಟ ಸಭೆ ನಡೆಸಿದ ಬಳಿಕ ರಾಜ್ಯ ವಿಪತ್ತು ಪರಿಹಾರ ನಿಧಿಯಿಂದ ಕೇಂದ್ರದ ಪಾಲು ಮತ್ತು ರಾಷ್ಟ್ರೀಯ ವಿಪತ್ತು ಪರಿಹಾರ ನಿಧಿಯಿಂದ ಮುಂಗಡವಾಗಿ ಬಿಡುಗಡೆ ಮಾಡಲಾಗಿದೆ. ಮಹಾರಾಷ್ಟ್ರಕ್ಕೆ 1,492 ಕೋಟಿ ರು., ಆಂಧ್ರಪ್ರದೇಶಕ್ಕೆ 1,036 ಕೋಟಿ, ಅಸ್ಸಾಂಗೆ 716 ಕೋಟಿ, ಬಿಹಾರಕ್ಕೆ 655.60 ಕೋಟಿ, ಗುಜರಾತ್‌ಗೆ 600 ಕೋಟಿ, ಹಿಮಾಚಲಪ್ರದೇಶಕ್ಕೆ 189.20 ಕೋಟಿ, ಕೇರಳಕ್ಕೆ 145.60 ಕೋಟಿ, ಮಣಿಪುರಕ್ಕೆ 50 ಕೋಟಿ, ಮಿಜೋರಾಂಗೆ 21.60 ಕೋಟಿ, ನಾಗಾಲ್ಯಾಂಡ್‌ಗೆ 19.20 ಕೋಟಿ, ಸಿಕ್ಕಿಂಗೆ 23.60 ಕೋಟಿ, ತೆಲಂಗಾಣಕ್ಕೆ 416.80 ಕೋಟಿ, ತ್ರಿಪುರಾಕ್ಕೆ 25 ಕೋಟಿ ಮತ್ತು ಪಶ್ಚಿಮ ಬಂಗಾಳಕ್ಕೆ 468 ಕೋಟಿ ರು. ಬಿಡುಗಡೆ ಮಾಡಲಾಗಿದೆ.

ಜನ್ ಸುರಾಜ್ ಪಕ್ಷಕ್ಕೆ ಪ್ರಶಾಂತ್ ಕಿಶೋರ್ ಚಾಲನೆ

ಪಟನಾ: ಚುನಾವಣಾ ರಾಜಕೀಯ ತಂತ್ರಗಾರ ಪ್ರಶಾಂತ್ ಕಿಶೋರ್ ಬುಧವಾರ ಅಧಿಕೃತವಾಗಿ ತಮ್ಮ ಪಕ್ಷ ರಾಜಕೀಯ ಪಕ್ಷ ಸ್ಥಾಪನೆಯನ್ನು ಘೋಷಿಸಿದರು. ನೂತನ ಪಕ್ಷಕ್ಕೆ ಜನ್ ಸುರಾಜ್ ಪಕ್ಷ ಎಂದು ನಾಮಕರಣ ಮಾಡಿದರು. ಮಾಜಿ ಕೇಂದ್ರ ಸಚಿವ ದೇವೇಂದ್ರ ಪ್ರಸಾದ್ ಯಾದವ್, ರಾಜತಾಂತ್ರಿಕ-ರಾಜಕಾರಣಿ ಪವನ್ ವರ್ಮಾ ಮತ್ತು ಮಾಜಿ ಸಂಸದ ಮೊನಜೀರ್ ಹಾಸನ್ ಮತ್ತಿತರ ಹೆಸರಾಂತ ವ್ಯಕ್ತಿಗಳ ಹಾಜರಿಯಲ್ಲಿ ರಾಜ್ಯ ರಾಜಧಾನಿಯಲ್ಲಿ ನೂತನ ಪಕ್ಷ ಆರಂಭವನ್ನು ಪ್ರಶಾಂತ್ ಘೋಷಿಸಿದರು.

ರಾಜಸ್ಥಾನ, ಮ.ಪ್ರ. ಬಾಂಬ್ ಬೆದರಿಕೆ

ಜೈಪುರ: ರಾಜಸ್ಥಾನ, ಮಧ್ಯಪ್ರದೇಶದ ರೈಲು ನಿಲ್ದಾಣ ಹಾಗೂ ಧಾರ್ಮಿಕ ಸ್ಥಳಗಳಲ್ಲಿ ಬಾಂಬ್ ಸ್ಫೋಟಿಸುವುದಾಗಿ ಬೆದರಿಕೆ ಪತ್ರ ಬಂದಿದೆ. ಹನುಮಾನ್‌ಗಢ ರೈಲುನಿಲ್ದಾಣಕ್ಕೆ ಪತ್ರ ಅಂಚೆ ಮೂಲಕ ಮಂಗಳವಾರ ಬಂದಿದೆ. ಸಂಜೆ ಸ್ಥಳೀಯ ಪೊಲೀಸರಿಗೆ ಮಾಹಿತಿ ನೀಡಲಾಗಿದೆ ಎಂದು ಹನುಮಾನ್‌ಗಢದ ಎಎಸ್ ಪಿ ಪ್ಯಾರೇಲಾಲ್ ಮೀನಾ ಸುದ್ದಿಗಾರರೊಂದಿಗೆ ಹೇಳಿದ್ದಾರೆ. ಗಂಗಾನಗರ, ಹನುಮಾನ್‌ಗಢ, ಜೋಧ್ಪುರ, ಬಿಕಾನೇರ್, ಕೋಟಾ, ಬುಂಡಿ, ಉದಯಪುರ, ಜೈಪುರದ ರೈಲ್ವೆ ನಿಲ್ದಾಣ ಮತ್ತು ಇತರ ಸ್ಥಳಗಳಲ್ಲಿ ಬಾಂಬ್ ಸ್ಫೋಟಿಸಲಾಗುವುದು ಎಂದು ಜೈಶ್-ಎ-ಮೊಹಮ್ಮದ್ ಹೆಸರಿನಲ್ಲಿ ಪತ್ರ ಬರೆದು ಬೆದರಿಕೆ ಹಾಕಲಾಗಿದೆ. ಅಕ್ಟೋಬರ್, ನವೆಂಬರ್‌ನಲ್ಲಿ ರಾಜಸ್ಥಾನ ಮತ್ತು ಮಧ್ಯಪ್ರದೇಶದ ಧಾರ್ಮಿಕ ಸ್ಥಳಗಳಲ್ಲಿ ಬಾಂಬ್ ಸ್ಫೋಟಿಸುವ ಬೆದರಿಕೆ ಹಾಕಲಾಗಿದೆ. ಜೈಶ್-ಎ-ಮೊಹಮ್ಮದ್ ಪಾಕ್ ಉಗ್ರ ಸಂಘಟನೆಯಾಗಿದೆ.

ಗಾಂಧೀಜಿ, ಶಾಸ್ತ್ರಿ ಜನ್ಮದಿನ: ಮುರ್ಮು, ಮೋದಿ ನಮನ

ದೆಹಲಿ: ಮೋಹನದಾಸ ಕರಮಚಂದ ಗಾಂಧಿ ಮತ್ತು ಲಾಲ್ ಬಹಾದ್ದೂರ್ ಶಾಸ್ತ್ರಿ ಜನ್ಮದಿನವಾದ ಬುಧವಾರ (ಅ.2), ರಾಷ್ಟ್ರಪತಿ ದ್ರೌಪತಿ ಮುರ್ಮು, ಪ್ರಧಾನಿ ನರೇಂದ್ರ ಮೋದಿ ಸೇರಿದಂತೆ ಬಿಜೆಪಿ, ಕಾಂಗ್ರೆಸ್ ಮತ್ತಿತರ ಪಕ್ಷಗಳ ಪ್ರಮುಖರು, ಸಮಾಧಿ ಸ್ಥಳಗಳಾದ ರಾಜ್‌ಘಾಟ್ ಮತ್ತು ವಿಜಯ್ ಘಾಟ್‌ಗೆ ತೆರಳಿ ಪುಷ್ಪ ನಮನ ಸಲ್ಲಿಸಿದರು. ಬಾಪು ಅವರ ಜೀವನ ಮತ್ತು ಸತ್ಯ, ಸಾಮರಸ್ಯ ಮತ್ತು ಸಮಾನತೆಯ ಆಧಾರದ ಮೇಲೆ ಆದರ್ಶಗಳು ಯಾವಾಗಲೂ ದೇಶದ ಜನರಿಗೆ ಸ್ಫೂರ್ತಿ ಎಂದು ಪ್ರಧಾನಿ ಮೋದಿ ಎಕ್ಸ್ ಖಾತೆಯಲ್ಲಿ ಬರೆದಿದ್ದಾರೆ. ಭಾರತದ ಎರಡನೇ ಪ್ರಧಾನಿ ಲಾಲ್ ಬಹದ್ದೂರ್ ಶಾಸ್ತ್ರಿ, ಜೈ ಜವಾನ್, ಜೈ ಕಿಸಾನ್ ಘೋಷಣೆ ಮೂಲಕ ತಮ್ಮ ಜೀವನವನ್ನು ದೇಶದ ಸೈನಿಕರು, ರೈತರು ಮತ್ತು ಹೆಮ್ಮೆಗಾಗಿ ಮುಡಿಪಾಗಿಟ್ಟರು. ಅವರ ಸರಳತೆ ಮತ್ತು ಪ್ರಾಮಾಣಿಕತೆ ಅವರಿಗೆ ವ್ಯಾಪಕ ಗೌರವವನ್ನು ತಂದುಕೊಟ್ಟಿತು' ಎಂದು ಮೋದಿ ಎಕ್ಸ್ ಖಾತೆಯಲ್ಲಿ ಬರೆದಿದ್ದಾರೆ.

{ **ನರೇಂದ್ರ ಮೋದಿ** } ಪ್ರಧಾನಿ

ಸತತ ಪ್ರಯತ್ನದಿಂದಷ್ಟೇ ಭಾರತ ಸ್ವಚ್ಛಗೊಳಿಸಲು ಸಾಧ್ಯ. ಅದಕ್ಕಾಗಿ ಸ್ವಚ್ಛ ಭಾರತ್ ಮಿಷನ್ ಬಲಪಡಿಸುವುದನ್ನು ಮುಂದುವರಿಸಿ ಎಂದು ದೇಶದ ಜನರಿಗೆ ಕರೆ ನೀಡುವೆ. 2014ರಲ್ಲಿ ಪ್ರಾರಂಭಿಸಿದ ರಾಷ್ಟ್ರೀಯ ಸ್ವಚ್ಛತಾ ಅಭಿಯಾನ (ಸ್ವಚ್ಛ ಭಾರತ್ ಮಿಷನ್) 10 ವರ್ಷ ಪೂರೈಸಿದೆ. ಈ ಮಹತ್ವದ ದಿನ ಆಚರಿಸಲು ಶಾಲಾ ಮಕ್ಕಳೊಂದಿಗೆ ಸ್ವಚ್ಛತಾ ಅಭಿಯಾನದಲ್ಲಿ ಭಾಗವಹಿಸಿದ್ದೇನೆ

ಭೂಮಿ ಮೇಲೆ ನಾವಿರಬೇಕು, ಇಲ್ಲ ನೀವಿರಬೇಕು | ಇಸ್ರೇಲ್ ರಕ್ಷಣಾ ಸಚಿವ ಯೋವ್ ಗ್ಯಾಲಂಟ್ ಗುಡುಗು

ಇರಾನ್ ಸರ್ವನಾಶ: ಇಸ್ರೇಲ್ ಶಪಥ

ಟೆಲ್ ಅವಿಲ್: ಇರಾನ್ ದೇಶವನ್ನು ಸರ್ವನಾಶ ಮಾಡುವುದಾಗಿ ಇಸ್ರೇಲ್ ಶಪಥ ಮಾಡಿದೆ. ಈಗ ನಡೆಯುತ್ತಿರುವ ಯುದ್ಧದಲ್ಲಿ ಒಂದೋ ಇಸ್ರೇಲ್ ಇರಬೇಕು, ಇಲ್ಲವೇ ಇರಾನ್ ಉಳಿಯಬೇಕು ಅಷ್ಟೇ ಎಂದು ಇಸ್ರೇಲ್ ರಕ್ಷಣಾ ಸಚಿವ ಯೋವ್ ಗ್ಯಾಲಂಟ್ ಹೇಳಿದ್ದಾರೆ. ಇರಾನ್ ದೇಶವನ್ನು ಸರ್ವನಾಶ ಮಾಡುವುದಾಗಿ ಪ್ರತಿಜ್ಞೆ ಮಾಡಿದ್ದಾರೆ. ಆ ಮೂಲಕ 3ನೇ ವಿಶ್ವ ಮಹಾಯುದ್ಧದ ಮುನ್ಸೂಚನೆ ನೀಡಿದ್ದಾರೆ ಎಂದು ಮಾಧ್ಯಮಗಳು ವರದಿ ಮಾಡಿವೆ.

ಇಸ್ರೇಲ್ ಸೇನೆ ಈಗಾಗಲೇ ಯುದ್ಧ ಆರಂಭಿಸಿದೆ. ಇರಾನ್‌ಗೆ ಇನ್ನು ಯಾವುದೇ ಆಯ್ಕೆಗಳಿಲ್ಲ ಎಂದು ಇಸ್ರೇಲ್ ಪ್ರಧಾನಿ ಬೆಂಜಮಿನ್ ನೆತನ್ಯಾಹು ಕೂಡಾ ಹೇಳಿದ್ದಾರೆ.

ಇಸ್ರೇಲಿ ಸೇನಾ ನೆಲೆಗಳನ್ನು ಗುರಿಯಾಗಿಸಿಕೊಂಡು ಇರಾನ್ ಕ್ಷಿಪಣಿ ದಾಳಿ ನಡೆಸಿದ್ದು, ಇಸ್ರೇಲ್ ಪ್ರಧಾನ ಮಂತ್ರಿ ಬೆಂಜಮಿನ್ ನೆತನ್ಯಾಹು ಶೀಘ್ರ ಪ್ರತೀಕಾರ ಕೈಗೊಳ್ಳುವುದಾಗಿ ಘೋಷಿಸಿದ್ದಾರೆ. ಹಿಜ್ಬುಲ್ಲಾ ಉಗ್ರ ಸಂಘಟನೆಗೆ ಬೆಂಬಲ ನೀಡುತ್ತಿರುವ ಇರಾನ್ ಮೇಲೆ ಪ್ರತೀಕಾರದ ದಾಳಿ ಮಾಡಿಯೇ ತೀರುತ್ತೇವೆ ಎಂದು ಇಸ್ರೇಲ್ ರಕ್ಷಣಾ ಪಡೆ ವಕ್ತಾರ ರಿಯರ್ ಅಡ್ಮಿರಲ್ ಡೇನಿಯಲ್ ಹಗಾರಿ ಎಚ್ಚರಿಕೆ ನೀಡಿದ್ದಾರೆ. ಈಗಾಗಲೇ ಲೆಬನಾನ್ ಮತ್ತು ಇರಾನ್‌ನ ನಗರಗಳನ್ನು ಗುರಿಯಾಗಿಸಿ ಇಸ್ರೇಲ್ ಸತತವಾಗಿ ಮಿಸೈಲ್, ರಾಕೆಟ್‌ಗಳ ದಾಳಿ ನಡೆಸುತ್ತಿದೆ. ಲೆಬನಾನ್ ಮೂಲದ ಉಗ್ರ ಸಂಘಟನೆ ಹಿಜ್ಬುಲ್ಲಾ ಉಗ್ರ ಸಂಘಟನೆ ಮುಖ್ಯಸ್ಥ ಹಸನ್ ನಸ್ರಲ್ಲಾನನ್ನು ಭಾರಿ ಪ್ರಮಾಣದ ಸ್ಫೋಟಕ ಗಳಿದ್ದ ರಾಕೆಟ್ ಬಳಸಿ ಇಸ್ರೇಲ್ ಸೇನೆ ಕೊಂದು ಹಾಕಿದೆ. ಆ ಬಳಿಕ ಇರಾನ್ ಮೇಲೆ ರಾಕೆಟ್ ಗಳ ಸುರಿಮಳೆಗರೆಯುತ್ತಿದೆ.

ಇಸ್ರೇಲ್ ಮೇಲೆ ಇರಾನ್ ಕ್ಷಿಪಣಿಗಳ ದಾಳಿ: ಇದಕ್ಕೂ ಮುನ್ನ ಇಸ್ರೇಲ್ ಮೇಲೆ ಇರಾನ್ ಮಂಗಳವಾರ ರಾತ್ರಿ ಒಮ್ಮೆಲೇ 180ಕ್ಕೂ ಅಧಿಕ ಖಂಡಾಂತರ ಕ್ಷಿಪಣಿಗಳ ಮೂಲಕ ದಾಳಿ ನಡೆಸಿತು. ನಮ್ಮ ದೇಶದ ಮೇಲೆ ಇರಾನ್ ಒಮ್ಮೆಲೇ 180ಕ್ಕೂ ಅಧಿಕ ಬ್ಯಾಲಿಸ್ಟಿಕ್ ಮಿಸೈಲ್ ಗಳಿಂದ ದಾಳಿ ನಡೆಸಿದೆ. ಇರಾನ್ ನ ಈ ದಾಳಿ ಇಸ್ರೇಲ್ ಗೆ ಯಾವುದೇ ಗಂಭೀರವಾದ ಪರಿಣಾಮ ಬೀರಿಲ್ಲ. ಬಹುತೇಕ ಮಿಸೈಲ್‌ಗಳನ್ನು ಇಸ್ರೇಲ್ ನ ರಾಕೆಟ್ ನಿರೋಧಕ ಐರನ್ ಡೋಮ್ ವ್ಯವಸ್ಥೆ ಹೊಡೆದುರುಳಿಸಿದೆ. ನಮ್ಮನ್ನು ಹೇಗೆ ರಕ್ಷಣೆ ಮಾಡಿಕೊಳ್ಳಬೇಕು ಎಂಬುದು ನಮಗೆ ತಿಳಿದಿದೆ ಎಂದು ಇಸ್ರೇಲ್ ರಕ್ಷಣಾ ಪಡೆ ವಕ್ತಾರ ಡೇನಿಯಲ್ ಹಗಾರಿ ಪ್ರತಿಕ್ರಿಯಿಸಿದ್ದಾರೆ. ನಾವು ಇರಾನ್ ಮೇಲೆ ಮರು ದಾಳಿ ನಡೆಸುತ್ತೇವೆ ಎಂದು ಡೇನಿಯಲ್ ಎಚ್ಚರಿಕೆ ನೀಡಿದ್ದಾರೆ.

ಮಧ್ಯಪ್ರಾಚ್ಯ ಭಾಗದಲ್ಲಿ ಯುದ್ಧೋನ್ಮಾದ ತೀವ್ರ ಅಮೆರಿಕ ಎಚ್ಚರಿಕೆ

ಟೆಹರಾನ್: ಮಧ್ಯಪ್ರಾಚ್ಯ ಭಾಗದಲ್ಲಿ ಯುದ್ಧೋನ್ಮಾದ ತೀವ್ರವಾಗಿದೆ. ಇಸ್ರೇಲ್- ಇರಾನ್ ನಡುವಿನ ಸಂಘರ್ಷದಲ್ಲಿ ಅಮೆರಿಕ ಕೂಡಾ ಪ್ರವೇಶ ಮಾಡಿದೆ. ಇಸ್ರೇಲ್ ಮೇಲೆ ಇರಾನ್ ಮಂಗಳವಾರ ರಾತ್ರಿ ನಡೆಸಿದ ಬ್ಯಾಲಿಸ್ಟಿಕ್ ಕ್ಷಿಪಣಿ ದಾಳಿಗೆ ತೀವ್ರ ಪರಿಣಾಮ ಎದುರಿಸಬೇಕಾಗುತ್ತದೆ ಎಂದು ಅಮೆರಿಕ ಎಚ್ಚರಿಕೆ ನೀಡಿದೆ. ಅಮೆರಿಕ ಅಧ್ಯಕ್ಷ ಜೋ ಬೈಡೆನ್ ಇಸ್ರೇಲ್‌ಗೆ ಪೂರ್ಣ ಬೆಂಬಲ ವ್ಯಕ್ತಪಡಿಸಿದ್ದಾರೆ. ಇಸ್ರೇಲ್ ಮೇಲೆ ಇರಾನ್ ಕ್ಷಿಪಣಿ ದಾಳಿ ನಿಷ್ಪರಿಣಾಮಕಾರಿ ಎಂದು ಬೈಡೆನ್ ಬಣ್ಣಿಸಿದ್ದಾರೆ. ಇಸ್ರೇಲ್ ಮೇಲಿನ ಇರಾನ್ ದಾಳಿ ವಿಫಲಗೊಳಿಸಲು ಅಮೆರಿಕ ಸೇನಾಪಡೆ ಸಹಾಯ ಮಾಡಿವೆ. ಬೈಡೆನ್ ಆಡಳಿತ ಇಸ್ರೇಲಿ ಅಧಿಕಾರಿಗಳೊಂದಿಗೆ ಮುಂದಿನ ಕ್ರಮಗಳ ಕುರಿತು ಸಮಾಲೋಚನೆ ನಡೆಸುತ್ತಿದೆ ಎಂದು ಅಮೆರಿಕ ರಾಷ್ಟ್ರೀಯ ಭದ್ರತಾ ಸಲಹೆಗಾರ ಜೇಕ್ ಸುಲ್ಲಿವಾನ್ ಹೇಳಿದ್ದಾರೆ. ಅಮೆರಿಕ ಎಚ್ಚರಿಕೆ ಬಳಿಕ ಇರಾನ್ ತುಸು ಮೆದುವಾಗಿದೆ. ಕ್ಷಿಪಣಿ ದಾಳಿಯನ್ನು ಮತ್ತಷ್ಟು ಹೆಚ್ಚಿಸದೆ ಮುಕ್ತಾಯಗೊಳಿಸಿರುವುದಾಗಿ ಹೇಳಿದೆ.

ಇಸ್ರೇಲ್ ಮೇಲೆ ಇರಾನ್ ಕ್ಷಿಪಣಿ ದಾಳಿ ದೃಶ್ಯ. ದಾಳಿಗೆ ಸಿದ್ಧವಾಗಿರುವ ಕ್ಷಿಪಣಿಗಳ ಸಂಗ್ರಹ. (ಒಳಚಿತ್ರ)

ಮಧ್ಯಪ್ರಾಚ್ಯ ಯುದ್ಧ ಸ್ಥಿತಿ; ಭಾರತ ತೀವ್ರ ಕಳವಳ

ದೆಹಲಿ: ಇಸ್ರೇಲ್ ಮೇಲೆ ಇರಾನ್ ಕ್ಷಿಪಣಿ ದಾಳಿ ನಂತರ ಮಧ್ಯಪ್ರಾಚ್ಯದಲ್ಲಿ ಉಂಟಾಗಿರುವ ಯುದ್ಧ ಪರಿಸ್ಥಿತಿಯ ಬಗ್ಗೆ ಭಾರತ ಬುಧವಾರ ತೀವ್ರ ಕಳವಳ ವ್ಯಕ್ತಪಡಿಸಿದೆ. ಸಂಘರ್ಷ ಮುಂದುವರಿಸಬಾರದು. ಸಂಬಂಧಪಟ್ಟ ಎಲ್ಲರೂ ಸಂಯಮದಿಂದ ವರ್ತಿಸಬೇಕು ಹಾಗೂ ನಾಗರಿಕರ ರಕ್ಷಣೆಗೆ ಮುಂದಾಗಬೇಕು. ಎಲ್ಲಾ ಸಮಸ್ಯೆಗಳನ್ನು ಪರಿಹರಿಸಲು ಮಾತುಕತೆ ಮತ್ತು ರಾಜತಾಂತ್ರಿಕ ವಿಧಾನವೇ ಸೂಕ್ತ ಎಂದು ವಿದೇಶಾಂಗ ಸಚಿವಾಲಯ ಒತ್ತಿಹೇಳಿದೆ.

ಕದನ ವಿರಾಮ: ವಿಶ್ವಸಂಸ್ಥೆ ಆಗ್ರಹ

ಮಧ್ಯಪ್ರಾಚ್ಯದಲ್ಲಿ ಪೂರ್ಣ ಪ್ರಮಾಣದ ಯುದ್ಧ ಆರಂಭವಾದಂತಾಗಿದೆ. ಮೂರನೇ ವಿಶ್ವ ಯುದ್ಧ ಆರಂಭಗೊಳ್ಳುವ ಭೀತಿ ಎದುರಾಗಿದೆ. ಇದರಿಂದ ಆತಂಕಕ್ಕೆ ಒಳಗಾಗಿರುವ ವಿಶ್ವಸಂಸ್ಥೆ, ಇಸ್ರೇಲ್ ಮತ್ತು ಇರಾನ್ ಕೂಡಲೇ ಕದನ ವಿರಾಮ ಘೋಷಿಸಬೇಕೆಂದು ಆಗ್ರಹಿಸಿದೆ. ಆದರೆ ವಿಶ್ವಸಂಸ್ಥೆಯ ಮನವಿಯನ್ನು ಲೆಕ್ಕಿಸದ ಇಸ್ರೇಲ್ ಪಡೆ ಇರಾನ್ ಮೇಲೆ ರಾಕೆಟ್ ದಾಳಿ ಮುಂದುವರಿಸಿರುವುದಾಗಿ ವರದಿ ತಿಳಿಸಿದೆ.

ಲೆಬನಾನ್ ದಾಳಿ ವೇಳೆ ಇಸ್ರೇಲ್ ಸೈನಿಕ ಸಾವು

ಟೆಲ್ ಅವೀವ್: ಲೆಬನಾನ್ ಮೂಲದ ಉಗ್ರ ಸಂಘಟನೆ ಹಿಜ್ಬುಲ್ಲಾ ಮುಖ್ಯಸ್ಥ ಹಸನ್ ನಸ್ರಲ್ಲಾ ಹತ್ಯೆ ಮಾಡಿದ ಬೆನ್ನಲ್ಲೇ ಲೆಬನಾನ್ ಗಡಿ ದಾಟಿ ಹೋಗಿ ಭೂಸೇನಾ ಕಾರ್ಯಾಚರಣೆ ನಡೆಸುತ್ತಿರುವ ಇಸ್ರೇಲ್ ಸೇನಾ ಪಡೆಯ ಒಬ್ಬ ಯೋಧ ಹುತಾತ್ಮರಾಗಿದ್ದಾರೆ.

ಇಸ್ರೇಲ್ ಸೇನೆ ಬುಧವಾರ ಈ ಮಾಹಿತಿ ಪ್ರಕಟಿಸಿದೆ. ಹಿಜ್ಬುಲ್ಲಾ ಉಗ್ರ ಸಂಘಟನೆ ಗುರಿಯಾಗಿಸಿ ನಡೆಸುತ್ತಿರುವ ನೇರ ಸೈನಿಕ ದಾಳಿಯಲ್ಲಿ ಸಂಭವಿಸಿದ ಮೊದಲ ಸಾವು ಎಂದು ಇಸ್ರೇಲ್ ಸೇನಾಪಡೆ ಹೇಳಿದೆ.

22 ವರ್ಷದ ಕ್ಯಾಪ್ಟನ್ ಈಟಾನ್ ಇಟ್ಝಾಕ್ ಓಸ್ಟರ್, ಲೆಬನಾನ್‌ನಲ್ಲಿ ಯುದ್ಧದಲ್ಲಿ ಹುತಾತ್ಮರಾದರು ಎಂದು ಇಸ್ರೇಲ್ ಸೇನಾಪಡೆ ಪ್ರಕಟಣೆಯಲ್ಲಿ ಬುಧವಾರ ತಿಳಿಸಿದೆ. ಉತ್ತರ ಇಸ್ರೇಲ್ ಗಡಿಯ ಹತ್ತಿರ ಇರುವ ಲೆಬನಾನ್ ಗ್ರಾಮಗಳಲ್ಲಿರುವ ಉಗ್ರರ ನೆಲೆಗಳನ್ನು ಗುರಿಯಾಗಿಸಿ ಭೂ ಸೇನಾ ಕಾರ್ಯಾಚರಣೆ ನಡೆಸಲಾಗುತ್ತಿದೆ ಎಂದು ಇಸ್ರೇಲ್ ರಕ್ಷಣಾ ಪಡೆ (ಐಡಿಎಫ್) ತಿಳಿಸಿದೆ. ಮಂಗಳವಾರ ಬೆಳಗ್ಗೆಯಿಂದ ಬೈರೂತ್ ನಗರದ ದಕ್ಷಿಣ ಉಪನಗರ ವ್ಯಾಪ್ತಿಯಲ್ಲಿ ಇಸ್ರೇಲ್ ಸೇನೆ ಬೃಹತ್ ಪ್ರಮಾಣದ ದಾಳಿಗಳನ್ನು ಆರಂಭಿಸಿದೆ ಎಂದು ಸ್ಥಳೀಯ ಮಾಧ್ಯಮ ವರದಿ ಮಾಡಿದೆ.

ಗುಟೆರೆಸ್ ವಿರುದ್ಧ ಇಸ್ರೇಲ್ ಗುಟುರು

ಟೆಲ್ ಅವೀವ್: ವಿಶ್ವಸಂಸ್ಥೆಯ ಮುಖ್ಯಸ್ಥ ಪಕ್ಷಪಾತ ಧೋರಣೆ ಹೊಂದಿದ್ದಾರೆ ಎಂದು ಕಿಡಿಕಾರಿರುವ ಇಸ್ರೇಲ್, ಆಂಟೋನಿಯೊ ಗುಟೆರೆಸ್ ಅವರನ್ನು ಪರ್ಸನಾ ನಾನ್ ಗ್ರಾಟಾ (ಸ್ವೀಕಾರಾರ್ಹವಲ್ಲದ ವ್ಯಕ್ತಿ) ಎಂದು ಘೋಷಿಸಿದೆ. ಗುಟೆರೆಸ್ ಇಸ್ರೇಲ್ ಗೆ ಭೇಟಿ ನೀಡುವುದಕ್ಕೆ ನಿರ್ಬಂಧ ವಿಧಿಸಿದೆ. ಇಸ್ರೇಲ್ ವಿದೇಶಾಂಗ ಸಚಿವ ಇಸ್ರೇಲ್ ಕಾಟ್ಜ್ ಈ ಬಗ್ಗೆ ಮಾತನಾಡಿ, ಇಸ್ರೇಲ್‌ಗೆ ಪ್ರವೇಶಿಸದಂತೆ ವಿಶ್ವಸಂಸ್ಥೆಯ ಪ್ರಧಾನ ಕಾರ್ಯದರ್ಶಿಗೆ ನಿರ್ಬಂಧ ವಿಧಿಸಲಾಗಿದೆ ನಮ್ಮ ದೇಶದ ವಿರುದ್ಧ ಪಕ್ಷಪಾತ ಹೊಂದಿದ್ದಾರೆ ಎಂದು ಆರೋಪಿಸಿದ್ದಾರೆ.

ಇಸ್ರೇಲ್ ಮೇಲೆ ಇರಾನ್ ಘೋರ ದಾಳಿ ಮಾಡಿದ ಬಗ್ಗೆ ಖಂಡಿಸಲು ಸಾಧ್ಯವಾಗದ ಯಾರಾದರೂ, ಇಸ್ರೇಲ್ ನೆಲದಲ್ಲಿ ಕಾಲಿಡಲು ಅರ್ಹರಲ್ಲ ಎಂದು ಇಸ್ರೇಲ್ ಕಾಟ್ಜ್ ತಿಳಿಸಿದ್ದಾರೆ.



ದೆಹಲಿ: ಈಗಾಗಲೇ ಚಂದ್ರ, ಮಂಗಳ ಮತ್ತು ಸೂರ್ಯ ಅಧ್ಯಯನ ನಡೆಸಿರುವ ಭಾರತದ ಬಾಹ್ಯಾಕಾಶ ಸಂಶೋಧನಾ ಸಂಸ್ಥೆ ಇಸ್ರೋ, ಈಗ ಭೂಮಿಯ ಅವಳಿ ಗ್ರಹ ಎಂದೇ ಖ್ಯಾತವಾದ ಶುಕ್ರ ಗ್ರಹದ ಅಧ್ಯಯನಕ್ಕೆ ಸಜ್ಜಾಗುತ್ತಿದೆ. ಅದಕ್ಕಾಗಿ ಆರ್ಬಿಟರ್ ಯೋಜನೆ ಸಿದ್ಧಪಡಿಸಲಾಗುತ್ತಿದೆ. 2028ರ ಮಾ.29ರಂದು ವಿಶೇಷ ಉಪಗ್ರಹವನ್ನು ಉಡಾವಣೆ ಮಾಡಲಾಗುವುದು ಎಂದು ಇಸ್ರೋ ಹೇಳಿದೆ.

ಉಡಾವಣೆ: ಇಸ್ರೋದ ಬಳಿ ಇರುವ ಶಕ್ತಿಶಾಲಿ ರಾಕೆಟ್ ಎಲ್‌ಎಂವಿ ಮಾರ್ಕ್-3 ಮೂಲಕ ಶುಕ್ರ ಗ್ರಹ ಅಧ್ಯಯನ ಉಪಗ್ರಹವನ್ನು ಉಡಾವಣೆ ಮಾಡಲಾಗುತ್ತದೆ. ಗಗನ ನೌಕೆಯನ್ನು ನಿಗದಿತ ಕಕ್ಷೆಗೆ ಮಾರ್ಕ್-3 ತಲುಪಿಸಲಿದೆ. ಬಳಿಕ ಭೂಮಿಯನ್ನು ಸುತ್ತುತ್ತ ಸುತ್ತುತ್ತಲೇ ನೂಕುಬಲವನ್ನು ಹೆಚ್ಚಿಸಿಕೊಳ್ಳುವ ಗಗನ ನೌಕೆಯು ಭೂ ಕಕ್ಷೆಯಿಂದ ಚಿಮ್ಮಿ ದೂರಸರಿದು, ನಂತರ ಶುಕ್ರನತ್ತ ಪ್ರಯಾಣವನ್ನು ಮುಂದುವರಿಸಲಿದೆ. ಅದು 2028ರ ಜು.19ರಂದು ಶುಕ್ರ ಗ್ರಹದ ಕಕ್ಷೆಗೆ ಸೇರಿಕೊಳ್ಳುವ ಸಾಧ್ಯತೆ ಇದೆ ಎನ್ನಲಾಗಿದೆ.

ಶುಕ್ರಯಾನ-1

ಭಾರತದ ಈ ಮಹತ್ವಾಕಾಂಕ್ಷೆಯ ಯೋಜನೆಗೆ ಶುಕ್ರಯಾನ-12 ಎಂದು ಹೆಸರಿಡಲಾಗಿದೆ. ಶುಕ್ರ ಗ್ರಹದ ವಾತಾವರಣ, ಮೇಲ್ಪದರ, ಭೌಗೋಳಿಕ ರಚನೆ, ಸೂರ್ಯನ ಜತೆ ಶುಕ್ರ ಗ್ರಹ ಹೊಂದಿರುವ ಸಂಬಂಧವನ್ನು ಈ ಯೋಜನೆಯಡಿ ಅಧ್ಯಯನ ಮಾಡಲಾಗುತ್ತದೆ ಎಂದು ಇಸ್ರೋ ತಿಳಿಸಿದೆ.

5ನೇ ದೇಶ ಎಂಬ ಖ್ಯಾತಿ

ಅಮೆರಿಕ, ರಷ್ಯಾ, ಐರೋಪ್ಯ ಒಕ್ಕೂಟ ಮತ್ತು ಜಪಾನ್ ಈಗಾಗಲೇ ಶುಕ್ರ ಗ್ರಹದ ಯಾನವನ್ನು ಯಶಸ್ವಿಯಾಗಿ ಕೈಗೊಂಡಿವೆ. ಇದೇ ದಿಕ್ಕಿನಲ್ಲಿ ಭಾರತ ಯಶಸ್ವಿಯಾದರೆ 5ನೇ ದೇಶ ಎಂಬ ಹಿರಿಮೆಗೆ ಪಾತ್ರವಾಗಲಿದೆ.

ಉ.ಪ್ರ.ದಲ್ಲಿ ವಿಧ್ವಂಸಕ ಕೃತ್ಯಕ್ಕೆ ಸಂಚು

ರೈಲು ಹಳಿ ಮೇಲೆ ಮತ್ತೆ ಸಿಲಿಂಡರ್

ಕಾನ್ಪುರ: ರೈಲುಗಳನ್ನು ಹಳಿ ತಪ್ಪಿಸುವ, ರೈಲು ಸೇವೆಯಲ್ಲಿ ವ್ಯತ್ಯಯ ಉಂಟು ಮಾಡಲು ಯತ್ನಿಸುತ್ತಿರುವ ಪ್ರಕರಣಗಳು ಉತ್ತರ ಪ್ರದೇಶದಲ್ಲಿ ಹೆಚ್ಚಾಗುತ್ತಿವೆ. ಈ ವಾರ ಎರಡನೇ ಬಾರಿಗೆ ರೈಲು ಹಳಿ ಮೇಲೆ ಸಿಲಿಂಡರ್ ಪತ್ತೆಯಾಗಿದೆ.

ಕಾನ್ಪುರದ ಅಂಬಿಯಾಪುರ ನಿಲ್ದಾಣ ಬಳಿ ಹಳಿ ಮೇಲೆ ಸಿಲಿಂಡರ್ ಇರುವುದನ್ನು ಬುಧವಾರ ಬೆಳಗ್ಗೆ 6.30ರಲ್ಲಿ ಲೋಕೋ ಪೈಲಟ್ ಗುರುತಿಸಿ ತಕ್ಷಣ ಬ್ರೇಕ್ ಹಾಕಿದ್ದಾರೆ.

ಸೆ.29 ರಂದು ಝೂನ್ಸಿ - ಕಾನ್ಪುರ ಮಾರ್ಗದ ಭೀಮ ಸೇನ್ ಹಾಗೂ ಗೋವಿಂದಪುರಿ ರೈಲು ನಿಲ್ದಾಣಗಳ ನಡುವೆ ಕೂಡಾ ಗ್ಯಾಸ್ ಸಿಲಿಂಡರ್ ಇರಿಸಿ ರೈಲು ಹಳಿತಪ್ಪಿಸುವ ಸಂಚು ನಡೆದಿತ್ತು. ಲೋಕೋ ಪೈಲಟ್ ದೂರದಲ್ಲೇ ಸಿಲಿಂಡರ್ ಗುರುತಿಸಿ ರೈಲಿನ ತುರ್ತು ಬ್ರೇಕ್ ಹಾಕಿದ್ದರಿಂದ ದೊಡ್ಡ ಅನಾಹುತ ತಪ್ಪಿತ್ತು. ಮತ್ತೆ ಇಂತಹ ಘಟನೆ ಬೆಳಕಿಗೆ ಬಂದಿದ್ದು, ತುರ್ತು ಬ್ರೇಕ್ ಹಾಕಿದ ಲೋಕೋ ಪೈಲಟ್, ಕೂಡಲೇ ಈ ವಿಚಾರವನ್ನು ಜಿಆರ್‌ಪಿ ಮತ್ತು ರೈಲ್ವೆ ಪೊಲೀಸರಿಗೆ ತಿಳಿಸಿದರು. ಈವರೆಗೂ ಎಫ್‌ಐಆರ್ ದಾಖಲಾಗಿಲ್ಲ. ಅಗ್ನಿಶಾಮಕ ಸಿಲಿಂಡರ್ ರೈಲಿನಿಂದ ಆಕಸ್ಮಿಕವಾಗಿ ಬಿದ್ದಿರಬಹುದು ಎಂದು ಅಧಿಕಾರಿಗಳು ಹೇಳಿದ್ದಾರೆ.

ಬಿಜೆಪಿ ಅಭ್ಯರ್ಥಿ ಬುಖಾರಿ ನಿಧನ



ಶ್ರೀನಗರ: ಜಮ್ಮು - ಕಾಶ್ಮೀರ ಸುರನ್‌ಕೋಟೆ ಕ್ಷೇತ್ರದಿಂದ ಬಿಜೆಪಿ ಅಭ್ಯರ್ಥಿಯಾಗಿ ವಿಧಾನಸಭೆ ಚುನಾವಣೆಗೆ ಸ್ಪರ್ಧಿಸಿದ್ದ ಮಾಜಿ ಶಾಸಕ ಮುಷ್ತಾಕ್ ಅಹ್ಮದ್ ಶಾ ಬುಖಾರಿ (75) ಬುಧವಾರ ಪೂಂಚ್ ಜಿಲ್ಲೆಯ ತಮ್ಮ ನಿವಾಸದಲ್ಲಿ ಹೃದಯಾಘಾತದಿಂದ ನಿಧನರಾದರು.

ಇದೇ ಕ್ಷೇತ್ರದಿಂದ ಮುಷ್ತಾಕ್ ಅಹ್ಮದ್ ಬುಖಾರಿ ಈ ಮೊದಲು 2 ಬಾರಿ ಶಾಸಕರಾಗಿದ್ದರು. ಬುಖಾರಿ ಅವರಿಗೆ ಪತ್ನಿ, ಇಬ್ಬರು ಪುತ್ರಿಯರು ಹಾಗೂ ಓರ್ವ ಪುತ್ರ ಇದ್ದಾರೆ.

ಬುಖಾರಿ ಫೆಬ್ರವರಿಯಲ್ಲಿ ಬಿಜೆಪಿ ಸೇರಿದ್ದರು. ಸೆ.25ರಂದು ಸುರನ್ ಕೋಟೆ ಸೇರಿದಂತೆ 25 ಕ್ಷೇತ್ರಗಳಿಗೆ ಚುನಾವಣೆ ನಡೆದಿದೆ.

ಕುತೂಹಲ ಮೂಡಿಸಿದ ಅಜಿತ್-ಅಮಿತ್ ಶಾ ಭೇಟಿ

ಮುಂಬೈ: ನ್ಯಾಷನಲಿಸ್ಟ್ ಕಾಂಗ್ರೆಸ್ ಪಾರ್ಟಿ (ಎನ್‌ಸಿಪಿ-ಅಜಿತ್ ಬಣ) ಮುಖಂಡ, ಮಹಾರಾಷ್ಟ್ರ ಉಪ ಮುಖ್ಯಮಂತ್ರಿ ಅಜಿತ್ ಪವಾರ್ ಅವರು ಬುಧವಾರ ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರನ್ನು ಭೇಟಿ ಮಾಡಿರುವುದು ಕುತೂಹಲ ಮೂಡಿಸಿದೆ.

ಮುಂಬೈನಲ್ಲಿ ಈ ಸಭೆ ನಡೆದಿದ್ದು, ಸಭೆಯಲ್ಲಿ ಚರ್ಚೆಯಾದ ವಿಷಯದ ಬಗ್ಗೆ ಮಾಹಿತಿ ಲಭ್ಯವಾಗಿಲ್ಲ. ಮಹಾರಾಷ್ಟ್ರ ವಿಧಾನ ಸಭಾ ಚುನಾವಣೆ ಸಮೀಪಿಸುತ್ತಿದ್ದಂತೆಯೇ ಬಿಜೆಪಿ, ಶಿವಸೇನೆ (ಶಿಂಧೆ ಬಣ) ಮತ್ತು ಎನ್‌ಸಿಪಿ (ಅಜಿತ್ ಬಣ) ಒಳಗೊಂಡ ಮಹಾಯುತಿ ಮೈತ್ರಿ ಕೂಟದಲ್ಲಿ ಭಿನ್ನಮತ ಕಾಣಿಸಿ ಕೊಂಡಿದೆ ಎಂಬ ಮಾತುಗಳು ಕೇಳಿಬರುತ್ತಿವೆ. ಅಜಿತ್ ಪವಾರ್ ನೇತೃತ್ವದ ಎನ್ಸಿಪಿ ಮಹಾಯುತಿ ಮೈತ್ರಿ ಕೂಟದಲ್ಲಿರುವುದು ಮತ್ತು ಕೆಲವು ಬಿಜೆಪಿ ನಾಯಕರ ಮುಸ್ಲಿಂ ವಿರೋಧಿ ನಡೆಗೆ ಎನ್ಸಿಪಿ ವಿರೋಧ ಬಗ್ಗೆ ಆಡಳಿತಾರೂಢ ಮಹಾಯುತಿ ಮೈತ್ರಿಕೂಟದಲ್ಲಿನ ಭಿನ್ನಾಭಿಪ್ರಾಯ ಮೂಡಿದೆ. ಆ ಹಿನ್ನೆಲೆಯಲ್ಲಿ ಈ ಸಭೆ ನಡೆದಿದೆ ಎನ್ನಲಾಗಿದೆ. ಹಾಗಾಗಿ ಈ ಸಭೆ ಮಹತ್ವ ಪಡೆದಿದೆ. ಇನ್ನೊಂದೆಡೆ, ಮುಖ್ಯಮಂತ್ರಿ ಏಕನಾಥ್ ಶಿಂಧೆ ನೇತೃತ್ವದ ಶಿವಸೇನೆ ಪಕ್ಷದ ನಾಯಕರು ಎನ್ಸಿಪಿಯನ್ನು ಟೀಕಿಸಿದ್ದಾರೆ.

ಹೆಲಿಕಾಪ್ಟರ್ ಪತನ, ಮೂವರ ಮರಣ

ಪುಣೆ: ಮಹಾರಾಷ್ಟ್ರ ರಾಜ್ಯದ ಪುಣೆ ಸಮೀಪದ ಬವ್ಧಾನ್‌ನಲ್ಲಿನ ಆಕ್ಸ್‌ಫರ್ಡ್ ಗಾಲ್ಫ್ ಕ್ಲಬ್‌ನ ಹೆಲಿಪ್ಯಾಡ್‌ನಿಂದ ಬುಧವಾರ ಬೆಳಗ್ಗೆ ಹಾರಾಟ ಆರಂಭಿಸಿದ ಹೆಲಿಕಾಪ್ಟರೊಂದು ಕೆಲ ಹೊತ್ತಿನಲ್ಲೇ ಪತನಗೊಂಡಿದೆ. ಹೆಲಿಕಾಪ್ಟರ್‌ನಲ್ಲಿದ್ದ ಇಬ್ಬರು ಪೈಲಟ್‌ಗಳು ಮತ್ತು ಒಬ್ಬರು ಎಂಜಿನಿಯರು ಸ್ಥಳದಲ್ಲೇ ಸಾವನ್ನಪ್ಪಿದರು. ಹೆಲಿಕಾಪ್ಟರು ಸರಕಾರದ ಇಲಾಖೆಯದೋ ಅಥವಾ ಖಾಸಗಿಯದೋ ಎಂದು ತಿಳಿದು ಬಂದಿಲ್ಲ. ಬೆಳಗ್ಗೆ 6.45ರ ಸುಮಾರಿಗೆ ಗುಡ್ಡಗಾಡು ಪ್ರದೇಶದಲ್ಲಿ ಹೆಲಿಕಾಪ್ಟರು ಪತನಗೊಂಡಿದೆ ಎಂದು ಪಿಂಪ್ರಿ ಚಿಂಚ್ವಾಡದ ಪೊಲೀಸರು ತಿಳಿಸಿದ್ದಾರೆ. ಪ್ರದೇಶದಲ್ಲಿ ದಟ್ಟವಾದ ಮಂಜಿನಿಂದಾಗಿ ಅಪಘಾತ ಸಂಭವಿಸಿರಬಹುದು ಎಂದು ಸ್ಥಳೀಯ ಮಾಧ್ಯಮ ವರದಿ ಮಾಡಿವೆ.

ಲಡ್ಡು ತಯಾರಿಕೆಗೆ ಪ್ರಾಣಿಗಳ ಕೊಬ್ಬು ಬಳಕೆ ಪ್ರಕರಣ | ಪುತ್ರಿ ಪಲಿನಾ ಅಂಜನಿ ದೇಗುಲ ಪ್ರವೇಶ

11 ದಿನಗಳ ವ್ರತ: ತಿರುಪತಿ ದೇಗುಲಕ್ಕೆ ಡಿಸಿಎಂ ಪವನ್

ತಿರುಪತಿ: ಲಡ್ಡು ತಯಾರಿಕೆಗೆ ಪ್ರಾಣಿಗಳ ಕೊಬ್ಬು ಬೆರೆತ ತುಪ್ಪ ಬಳಸಿ ತಿಮ್ಮಪ್ಪ ಪ್ರಸಾದ ಅಪವಿತ್ರ ಮಾಡಲಾಗಿದೆ ಎಂದು ತೀವ್ರ ಬೇಸರಗೊಂಡ ಆಂಧ್ರಪ್ರದೇಶ ಉಪ ಮುಖ್ಯಮಂತ್ರಿ ಪವನ್ ಕಲ್ಯಾಣ್, ಬಳಿಕ 11 ದಿನಗಳ ಉಪವಾಸ ವ್ರತ ಆರಂಭಿಸಿದ್ದರು. ವ್ರತ ಸಮಾಪ್ತಿಯಾದ ಹಿನ್ನೆಲೆ ಬುಧವಾರ ತಮ್ಮ ಪುತ್ರಿ ಜತೆ ತಿರುಮಲ ದೇವಸ್ಥಾನಕ್ಕೆ ಭೇಟಿ ನೀಡಿದರು.

ಭೇಟಿ ಸಂದರ್ಭ ಪವನ್ ಕಲ್ಯಾಣ್ ತಮ್ಮೊಂದಿಗೆ 'ವಾರಾಹಿ ಘೋಷಣೆ'ಯನ್ನು ದೇವರ ಪೂಜೆಗೆ ಕೊಂಡೊಯ್ದರು. ಗುರುವಾರ ತಿರುಪತಿಯಲ್ಲಿ ನಡೆಯುವ ಬೃಹತ್ ಸಭೆಯಲ್ಲಿ ಅವರು 'ವಾರಾಹಿ ಘೋಷಣೆ'ಯನ್ನು ಪ್ರಕಟಿಸಲಿದ್ದಾರೆ. ಜನಸೇನಾ ಪಕ್ಷದ ಅಧ್ಯಕ್ಷರೂ ಆದ ಪವನ್ ಕಲ್ಯಾಣ್, ತಿರುಮಲ ಶ್ರೀವಾರಿ ದರ್ಶನ ಪಡೆದರು. ತಿರುಮಲದಲ್ಲಿ ಹಿಂದಿನ ವೈ.ಎಸ್. ಜಗನ್ ರೆಡ್ಡಿ ಸರಕಾರ ಪಾಪ ಮಾಡಿದೆ. ಅವುಗಳಿಗೆ ಪ್ರಾಯಶ್ಚಿತ್ತಕ್ಕಾಗಿ 11 ದಿನಗಳ ವ್ರತ ಕೈಗೊಂಡಿದ್ದಾರೆ ಎನ್ನಲಾಗಿದೆ. ವ್ರತದ ಭಾಗವಾಗಿ ದೇವಾಲಯಕ್ಕೆ 3 ದಿನಗಳ ಭೇಟಿ ನೀಡಿದ್ದಾರೆ.

ತಿಮ್ಮಪ್ಪನ ಮೇಲೆ ನಂಬಿಕೆ ಇದೆ: ಪವನ್ ಪುತ್ರಿ ಘೋಷಣೆ

ತಿರುಪತಿ: ಆಂಧ್ರಪ್ರದೇಶ ಉಪ ಮುಖ್ಯಮಂತ್ರಿ ಪವನ್ ಕಲ್ಯಾಣ್ ಅವರ ಪುತ್ರಿ ಪಲಿನಾ ಅಂಜನಿ ಕೊನಿಡೆಲಾ ಬುಧವಾರ ತಿರುಮಲ ದೇವಸ್ಥಾನ ಪ್ರವೇಶಿಸುವ ಮುನ್ನ ಶ್ರೀ ವೆಂಕಟೇಶ್ವರ ಸ್ವಾಮಿ ದೇವರ ಮೇಲೆ ನನಗೆ ನಂಬಿಕೆ ಇದೆ ಎಂದು ಘೋಷಿಸಿದರು. ತಿರುಪತಿ ವೆಂಕಟೇಶ್ವರ ದೇವಸ್ಥಾನಕ್ಕೆ ಭೇಟಿ ನೀಡುವ ಹಿಂದೂಯೇತರರು ಮೊದಲು ದೇವರಲ್ಲಿ ನಂಬಿಕೆ ಇದೆ ಘೋಷಿಸುವುದು ಕಡ್ಡಾಯವಾಗಿದೆ. ಪವನ್ ಕಲ್ಯಾಣ್ ಕಿರಿಯ ಪುತ್ರಿ ಪಲಿನಾ ಅಂಜನಿ ಕೊನಿಡೆಲಾ ಕ್ರೈಸ್ತ ಧರ್ಮ ಅನುಯಾಯಿ ಆಗಿರುವುದರಿಂದ ದೇಗುಲ ಪ್ರವೇಶ ಮುನ್ನ ಈ ಘೋಷಣೆ ಮಾಡಬೇಕಾಯಿತು. ತಿರುಮಲ ತಿರುಪತಿ ದೇವಸ್ಥಾನಂ (ಟಿಟಿಡಿ) ಸಿಬ್ಬಂದಿ ನೀಡಿದ ದಾಖಲೆಗಳಿಗೆ ಸಹಿ ಹಾಕುವ ಮೂಲಕ ಪಲಿನಾ ವೆಂಕಟೇಶ್ವರನಲ್ಲಿ ಭಕ್ತಿ ಹಾಗೂ ನಂಬಿಕೆ ಇರುವುದಾಗಿ ಘೋಷಿಸಿದರು. ಪಲಿನಾ ಅಪ್ರಾಪ್ತರಾಗಿರುವುದರಿಂದ ತಂದೆ ಪವನ್ ಕಲ್ಯಾಣ್ ಈ ದಾಖಲೆಗಳನ್ನು ಅನುಮೋದಿಸಿದರು ಎಂದು ಜನಸೇನಾ ಪಕ್ಷ ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದೆ.

ದೆಹಲಿ: 2000 ಕೋಟಿ ರು. ಮೌಲ್ಯದ ಕೊಕೇನ್ ವಶ

ದೆಹಲಿ: ರಾಷ್ಟ್ರ ರಾಜಧಾನಿ ದೆಹಲಿಯಲ್ಲಿ ಭಾರೀ ಪ್ರಮಾಣದ ಮಾದಕ ದ್ರವ್ಯ ಪ್ರಕರಣ ಬುಧವಾರ ಪತ್ತೆಯಾಗಿದೆ. 500 ಕೆಜಿಗೂ ಅಧಿಕ ಪ್ರಮಾಣದ ಮಾದಕ ದ್ರವ್ಯವನ್ನು ವಶಪಡಿಸಿಕೊಳ್ಳಲಾಗಿದೆ. ವಶಪಡಿಸಿಕೊಂಡ ಕೊಕೇನ್ ಮೌಲ್ಯ ಅಂತಾರಾಷ್ಟ್ರೀಯ ಮಾರುಕಟ್ಟೆಯಲ್ಲಿ 2,000 ಕೋಟಿ ರು. ಮೀರಲಿದೆ ಎಂದು ಪೊಲೀಸರು ತಿಳಿಸಿದ್ದಾರೆ. ದಕ್ಷಿಣ ದೆಹಲಿಯಲ್ಲಿ ಬೃಹತ್ ಕಾರ್ಯಾಚರಣೆ ನಡೆಸಲಾಗಿದೆ. ಪ್ರಕರಣ ಸಂಬಂಧ ನಾಲ್ವರನ್ನು ಬಂಧಿಸಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ. ಕೊಕೇನ್ ಸಾಗಣೆ ಹಿಂದೆ ಅಂತಾ ರಾಷ್ಟ್ರೀಯ ಮಟ್ಟದ ಡ್ರಗ್ಸ್ ಕಳ್ಳಸಾಗಣೆ ಸಿಂಡಿಕೇಟ್ ಇರುವುದಾಗಿ ಪೊಲೀಸರು ತಿಳಿಸಿದ್ದಾರೆ. ಇತ್ತೀಚೆಗಷ್ಟೇ ದೆಹಲಿಯಲ್ಲಿ ಇಬ್ಬರು ಅಫ್ಘಾನ್ ಪ್ರಜೆಗಳನ್ನು ಬಂಧಿಸಿದಾಗ 400 ಗ್ರಾಂ ಹೆರಾಯಿನ್ ಹಾಗೂ 160 ಗ್ರಾಂ ಕೊಕೇನ್ ವಶವಾಗಿತ್ತು. ಈ ಪ್ರಕರಣದ ನಂತರ ಬುಧವಾರ ಬೃಹತ್ ಕಾರ್ಯಾಚರಣೆ ನಡೆಸಿರುವುದಾಗಿ ಪೊಲೀಸರು ಸುದ್ದಿಗಾರರಿಗೆ ವಿವರಿಸಿದ್ದಾರೆ.

ಸಮಾಚಾರ ಸಣ್ಣದಲ್ಲ

ನ್ಯೂಜಿಲ್ಯಾಂಡ್‌ಗೆ ಟಾಮ್ ಲ್ಯಾಥಮ್ ನಾಯಕ

ವೆಲ್ಲಿಂಗ್ಟನ್: ಭಾರತ ವಿರುದ್ಧದ ಟೆಸ್ಟ್ ಸರಣಿಗೂ ಮುನ್ನ ನ್ಯೂಜಿಲ್ಯಾಂಡ್ ಟೆಸ್ಟ್ ತಂಡದ ನಾಯಕ ಟಿಮ್ ಸೌಥಿ ಈ ತಮ್ಮ ಹುದ್ದೆಯಿಂದ ಕೆಳಗಿಳಿದಿದ್ದಾರೆ. ನೂತನ ನಾಯಕನಾಗಿ ಎಡಗೈ ಬ್ಯಾಟರ್ ಟಾಮ್ ಲ್ಯಾಥಮ್ ಆಯ್ಕೆಯಾಗಿದ್ದಾರೆ. ಭಾರತ ವಿರುದ್ಧದ ಸರಣಿ ಅವರಿಗೆ ಮೊದಲ ಅಗ್ನಿ ಪರೀಕ್ಷೆಯಾಗಿದೆ. ಭಾರತ ಮತ್ತು ಕಿವೀಸ್ ನಡುವಣ ಮೂರು ಪಂದ್ಯಗಳ ಟೆಸ್ಟ್ ಸರಣಿ ಅಕ್ಟೋಬರ್ 16 ರಿಂದ ಆರಂಭಗೊಳ್ಳಲಿದೆ. 2022ರ ಕೊನೆಯಲ್ಲಿ ಕೇನ್ ವಿಲಿಯಮ್ಸನ್ ನಾಯಕತ್ವದಿಂದ ಕೆಳಗಿಳಿದ ನಂತರ ಟಿಮ್ ಸೌಥಿ ಅವರು ನ್ಯೂಜಿಲ್ಯಾಂಡ್ ಟೆಸ್ಟ್ ತಂಡದ ನಾಯಕತ್ವ ವಹಿಸಿಕೊಂಡಿದ್ದರು. ಸೌಥಿ ನಾಯಕತ್ವದಲ್ಲಿ ಕಿವೀಸ್ ತಂಡ 14 ಟೆಸ್ಟ್ ಪಂದ್ಯಗಳನ್ನಾಡಿದೆ. ಈ ಪೈಕಿ ತಲಾ 6 ಪಂದ್ಯಗಳಲ್ಲಿ ಸೋಲು-ಗೆಲುವು ಮತ್ತು 2 ಪಂದ್ಯಗಳು ಡ್ರಾಗೊಂಡಿದೆ.

ಪ್ರಧಾನಿ ಮೋದಿ ಭೇಟಿ ಮಾಡಿದ ಗೇಲ್

ದೆಹಲಿ: ವೆಸ್ಟ್ ಇಂಡೀಸ್ ಸ್ಫೋಟಕ ಬ್ಯಾಟರ್ ಕ್ರಿಸ್ ಗೇಲ್, ಜಮೈಕಾದ ಪ್ರಧಾನಿ ಆಂಡ್ರ್ಯೂ ಹೋಲ್‌ನೆಸ್ ಅವರ ಭಾರತ ಭೇಟಿಯ ಸಂದರ್ಭದಲ್ಲಿ ಪ್ರಧಾನಿ ನರೇಂದ್ರ ಮೋದಿಯವರನ್ನು ಭೇಟಿಯಾಗಿದ್ದಾರೆ. 'ಭಾರತದ ಪ್ರಧಾನಿಯನ್ನು ಭೇಟಿಯಾಗಿರುವುದು ಗೌರವದ ಸಂಗತಿ. ಜಮೈಕಾದಿಂದ ಭಾರತಕ್ಕೆ ಪ್ರೀತಿಯ ಪಯಣ' ಎಂದು ಗೇಲ್ ಟ್ವೀಟ್ ಮಾಡಿದ್ದಾರೆ. ಜಮೈಕಾದ ಪ್ರಧಾನಿ ಸೆಪ್ಟೆಂಬರ್ 30 ರಿಂದ ಅಕ್ಟೋಬರ್ 3 ರವರೆಗೆ ಭಾರತಕ್ಕೆ ಅಧಿಕೃತ ಭೇಟಿ ನೀಡಿದ್ದಾರೆ. ಇದು ಭಾರತಕ್ಕೆ ಅವರ ಮೊದಲ ಭೇಟಿಯಾಗಿದೆ. ಜಮೈಕಾದ ಪ್ರಧಾನಿಯೊಬ್ಬರ ಭಾರತದ ಮೊದಲ ದ್ವಿಪಕ್ಷೀಯ ಭೇಟಿಯೂ ಹೌದು. ಪ್ರಧಾನಿ ಮೋದಿ ಅವರು ಮಂಗಳವಾರ ರಾಷ್ಟ್ರ ರಾಜಧಾನಿಯ ಹೈದರಾಬಾದ್ ಹೌಸ್ ನಲ್ಲಿ ಪ್ರಧಾನಿ ಮೋದಿ ಅವರನ್ನು ಭೇಟಿಯಾಗಿ ದ್ವಿಪಕ್ಷೀಯ ಸಭೆ ನಡೆಸಿದರು. ದ್ವಿಪಕ್ಷೀಯ ಸಭೆಯ ನಂತರ ಉಭಯ ನಾಯಕರ ನಡುವೆ ನಿಯೋಗ ಮಟ್ಟದ ಮಾತುಕತೆ ನಡೆಯಿತು.

ಥಾಣೆಯ ಆಹಾರ ಘಟಕದಲ್ಲಿ ಬೆಂಕಿ ಅವಘಡ

ಥಾಣೆ: ಮಹಾರಾಷ್ಟ್ರದ ಥಾಣೆ ಜಿಲ್ಲೆಯ ವಾಗ್ಲೆ ಎಸ್ಟೇಟ್ ನಲ್ಲಿರುವ ಕೈಗಾರಿಕಾ ಪ್ರದೇಶದಲ್ಲಿನ ಹಲವು ಕಾರ್ಖಾನೆಗಳಲ್ಲಿ ಭಾರಿ ಬೆಂಕಿ ಕಾಣಿಸಿಕೊಂಡಿದೆ. ವಾಗ್ಲೆ ಎಸ್ಟೇಟ್ ವಿವಿಧ ಆಹಾರ ಪದಾರ್ಥಗಳನ್ನು ತಯಾರಿಸುವ ಕಾರ್ಖಾನೆಗಳನ್ನು ಹೊಂದಿದೆ. ಆರಂಭದಲ್ಲಿ ಚಿಪ್ಸ್ ತಯಾರಿಸುವ ಘಟಕದಲ್ಲಿ ಬೆಂಕಿ ಕಾಣಿಸಿಕೊಂಡು ನಂತರ ಇತರ ಕಾರ್ಖಾನೆಗಳಿಗೂ ವ್ಯಾಪಿಸಿದೆ. ಬೆಂಕಿ ಅನಾಹುತಕ್ಕೆ ನಿಖರ ಕಾರಣ ತಿಳಿದುಬಂದಿಲ್ಲ. 12ಕ್ಕೂ ಹೆಚ್ಚು ಅಗ್ನಿಶಾಮಕ ವಾಹನಗಳು ಸ್ಥಳಕ್ಕೆ ಧಾವಿಸಿ ಬೆಂಕಿ ನಂದಿಸಲು ಹಲವು ಗಂಟೆಗಳ ಕಾಲ ಹರಸಾಹಸ ಪಡ ಬೇಕಾಯಿತು. ಸಾವು-ನೋವಿನ ಬಗ್ಗೆ ವರದಿಯಾಗಿಲ್ಲ. ಹಿರಿಯ ಪೊಲೀಸ್ ಅಧಿಕಾರಿಗಳು ಸ್ಥಳಕ್ಕೆ ಭೇಟಿ ನೀಡಿದ್ದರು.

ಅಕ್ಟೋಬರ್ 3 ರಿಂದ 20ರ ವರೆಗೆ ದುಬೈ, ಶಾರ್ಜಾದಲ್ಲಿ ನಡೆಯಲಿರುವ ಪಂದ್ಯ | ಚಾಂಪಿಯನ್ ಪಟ್ಟಕ್ಕೇರುವ ತವಕದಲ್ಲಿ ಹರ್ಮನ್‌ಪ್ರೀತ್ ನಾಯಕತ್ವದ ತಂಡ

ಇಂದಿನಿಂದ ಮಹಿಳಾ ಟಿ20 ವಿಶ್ವಕಪ್

ಬೆಂಗಳೂರು: ಟಿ20 ವಿಶ್ವಕಪ್ ವರ್ಷದಲ್ಲಿ ಐಸಿಸಿಯ ಎರಡನೇ ಮಹತ್ವದ ಪಂದ್ಯಾವಳಿಗೆ ಮಹಿಳೆಯರು ಸಜ್ಜಾಗುತ್ತಿದ್ದಾರೆ. 9ನೇ ಆವೃತ್ತಿಯ ಮಹಿಳಾ ಟಿ20 ವಿಶ್ವಕಪ್ ಕೂಟಕ್ಕೆ ಅರಬರ ನಾಡು ಸಿಂಗರಿಸಿಕೊಂಡು ನಿಂತಿದೆ. ಪ್ರತಿಷ್ಠಿತ ಪಂದ್ಯಾವಳಿ ಅಕ್ಟೋಬರ್ 3 ರಿಂದ 20 ರವರೆಗೆ ದುಬೈ ಮತ್ತು ಶಾರ್ಜಾದಲ್ಲಿ ನಡೆಯಲಿದೆ. ನಾಳೆ ನಡೆಯುವ ಉದ್ಘಾಟನಾ ಪಂದ್ಯದಲ್ಲಿ ಬಾಂಗ್ಲಾದೇಶ ಮತ್ತು ಸ್ಕಾಟ್ಲೆಂಡ್ ಮುಖಾಮುಖಿಯಾಗಲಿದೆ. ದಿನದ ಮತ್ತೊಂದು ಪಂದ್ಯದಲ್ಲಿ ಪಾಕಿಸ್ತಾನ ಮತ್ತು ಶ್ರೀಲಂಕಾ ಸೆಣಸಾಡಲಿದೆ.

ಒಟ್ಟು 10 ತಂಡಗಳು ಪಾಲ್ಗೊಳ್ಳಲಿರುವ ಈ ಪಂದ್ಯಾವಳಿಯಲ್ಲಿ ಮತ್ತೊಮ್ಮೆ 6 ಬಾರಿಯ ಚಾಂಪಿಯನ್ ಆಸ್ಟ್ರೇಲಿಯವೇ ನೆಚ್ಚಿನ ತಂಡವಾಗಿ ಗೋಚರಿಸುತ್ತಿದೆ. ಭಾರತ ಮೊದಲ ಪ್ರಶಸ್ತಿಯ ತವಕದಲ್ಲಿದೆ. ಜೂನ್‌ನಲ್ಲಿ ಬಾರ್ಬಡೋಸ್‌ನಲ್ಲಿ ನಡೆದಿದ್ದ ಪುರುಷರ ಟಿ20 ವಿಶ್ವಕಪ್‌ನಲ್ಲಿ ಭಾರತ ತಂಡ ಚಾಂಪಿಯನ್ ಪಟ್ಟ ಅಲಂಕರಿಸಿತ್ತು. ಪುರುಷರ ಈ ಗೆಲುವು ಹರ್ಮನ್‌ಪ್ರೀತ್ ಕೌರ್ ಪಡೆಗೆ ಸ್ಫೂರ್ತಿಯಾಗಬೇಕಿದೆ.

ಈವರೆಗಿನ 9 ಟಿ20 ವಿಶ್ವಕಪ್ ಕೂಟಗಳಲ್ಲಿ ಆಸ್ಟ್ರೇಲಿಯಾದ ಮಹಿಳೆಯರು 7 ಸಲ ಫೈನಲ್‌ಗೆ ಲಗ್ಗೆಯಿರಿಸಿ ಸರ್ವಾಧಿಕ 6 ಸಲ ಚಾಂಪಿಯನ್ ಆಗಿ ಮೂಡಿಬಂದಿದ್ದಾರೆ. ಹ್ಯಾಟ್ರಿಕ್ ಪ್ರಶಸ್ತಿ ಗೆದ್ದು ಪರಾಕ್ರಮ ಮೆರೆದಿರುವ ಕಾಂಗರೂ ಮಹಿಳೆಯರು ಈ ಸಲವೂ ಗೆದ್ದರೆ ಸತತ ನಾಲ್ಕನೇ ಬಾರಿಗೆ ಪ್ರಶಸ್ತಿಗೆ ಭಾಜನರಾಗಲಿದ್ದಾರೆ.

2009ರ ಚೊಚ್ಚಲ ವಿಶ್ವಕಪ್‌ನಲ್ಲಿ ನ್ಯೂಜಿಲ್ಯಾಂಡ್ ಮಣಿಸಿದ ಇಂಗ್ಲೆಂಡ್ ಚೊಚ್ಚಲ ಪ್ರಶಸ್ತಿ ಎತ್ತಿತ್ತು. ಬಳಿಕ ಆಸ್ಟ್ರೇಲಿಯಾ ಸತತ 3 ಸಲ ಚಾಂಪಿಯನ್ ಆಗಿ ಮೆರೆದಾಡಿತು. 4ನೇ ಪ್ರಶಸ್ತಿ ಹಾದಿಯಲ್ಲಿದ್ದಾಗ ವೆಸ್ಟ್ ಇಂಡೀಸ್ ಅಡ್ಡಗಾಲಿಕ್ಕಿತು. ಕೋಲ್ಕತಾದ ಫೈನಲ್‌ನಲ್ಲಿ ವಿಂಡೀಸ್ 8 ವಿಕೆಟ್‌ಗಳಿಂದ ಆಸೀಸ್‌ಗೆ ಸೋಲಿನ ರುಚಿ ತೋರಿಸಿತ್ತು. ಇದಾದ ಬಳಿಕ 2018, 2020 ಮತ್ತು 2023ರ ಕೂಟಗಳಲ್ಲಿ ಕಾಂಗರೂ ಪ್ರಭುತ್ವ ಮರಳಿ ಸ್ಥಾಪನೆಗೊಂಡಿತು. ತಂಡವನ್ನು 6 ಬಾರಿ ಚಾಂಪಿಯನ್ ಪಟ್ಟಕ್ಕೇರಿಸಿದ ಮೆಗ್ ಲ್ಯಾನಿಂಗ್ ಕ್ರಿಕೆಟ್‌ನಿಂದ ನಿವೃತ್ತಿ ಹೊಂದಿದ್ದಾರೆ. ಹೀಗಾಗಿ ನೂತನ ನಾಯಕತ್ವದಲ್ಲಿ ಆಸೀಸ್ ಹೇಗೆ ಆಡಲಿದೆ ಎನ್ನುವುದು ಕೂಡ ಈ ಬಾರಿಯ ಕುತೂಹಲ.

ದ್ವಿಪಕ್ಷೀಯ ಸರಣಿಯಲ್ಲಿ ಭಾರತದ ಮಹಿಳೆಯರು ಅಮೋಘ ಪ್ರದರ್ಶನ ತೋರಿದರೂ ವಿಶ್ವಕಪ್‌ನಲ್ಲಿ ತೀರಾ ಕಳಪೆ ಸಾಧನೆ. ಆದರೆ ಕಳೆದ 2020ರ ಪಂದ್ಯಾವಳಿ ಮಾತ್ರ ಇದಕ್ಕೆ ಅಪವಾದವಾಗಿತ್ತು. ಆಸ್ಟ್ರೇಲಿಯಾ ಆತಿಥ್ಯದ ಈ ಕೂಟದಲ್ಲಿ ಭಾರತ ಫೈನಲ್ ತನಕ ಸಾಗಿತ್ತು. ಅಲ್ಲಿ ಆಸೀಸ್ ವಿರುದ್ಧ ತೀವ್ರ ಬ್ಯಾಟಿಂಗ್ ಬರಗಾಲಕ್ಕೆ ಸಿಲುಕಿ 99ಕ್ಕೆ ಕುಸಿದು ಟ್ರೋಫಿಯನ್ನು ಕಳೆದುಕೊಳ್ಳಬೇಕಾಯಿತು. ಭಾರತ ಇದುವರೆಗೆ ಒಂದು ಬಾರಿ ಮಾತ್ರ ಫೈನಲ್ ತಲುಪಿದೆ.

ಮೇಲ್ನೋಟಕ್ಕೆ ಭಾರತ ತಂಡ ಬಲಿಷ್ಠವಾಗಿಯೇ ಇದೆ. ಎಡಗೈ ಬ್ಯಾಟರ್ ಸ್ಮೃತಿ ಮಂಧನಾ, ಶಫಾಲಿ ವರ್ಮಾ, ಹರ್ಮನ್‌ಪ್ರೀತ್ ಕೌರ್, ದೀಪ್ತಿ ಶರ್ಮಾ, ರಿಚಾ ಘೋಷ್, ಜೆಮಿಮಾ ರೋಡ್ರಿಗಸ್, ರೇಣುಕಾ, ಯಾಸ್ತಿಕಾ, ಕನ್ನಡತಿ ಶ್ರೇಯಾಂಕಾ ಪಾಟೀಲ್ ಅವರನ್ನೊಳಗೊಂಡ 'ಒಡ ಸಮರ್ಥವಾಗಿದೆ. ಈಗಾಗಲೇ ಆಡಿದ 2 ಅಭ್ಯಾಸ ಪಂದ್ಯದಲ್ಲಿ ಗೆಲುವು ಕೂಡ ಸಾಧಿಸಿ ಆತ್ಮವಿಶ್ವಾಸ ಹೆಚ್ಚಿಸಿಕೊಂಡಿದೆ.

ಭಾರತ ತನ್ನ ಮೊದಲ ಪಂದ್ಯವನ್ನು ಅಕ್ಟೋಬರ್ 4 ರಂದು ನ್ಯೂಜಿಲ್ಯಾಂಡ್ ವಿರುದ್ಧ ಆಡಲಿದೆ. ಯುಎಇಗೆ ತೆರಳುವ ಮುನ್ನವೇ ನಾಯಕಿ ಹರ್ಮನ್‌ಪ್ರೀತ್, ನಮ್ಮ ತಂಡ ಈ ಬಾರಿ ಕಪ್ ಗೆಲ್ಲುವ ನಿಟ್ಟಿನಲ್ಲಿಯೇ ಎಲ್ಲಾ ಸಮಸ್ಯೆಗಳಿಗೆ ಪರಿಹಾರ ಕಂಡುಕೊಂಡು, ಸಂಪೂರ್ಣ ಸಿದ್ಧವಾಗಿದೆ. ನಾವು ಈಗ ಆಸ್ಟ್ರೇಲಿಯಾ ತಂಡವನ್ನು ಸೋಲಿಸಬಲ್ಲೆವು. ಅದು ಅವರಿಗೂ ತಿಳಿದಿದೆ. ವಿಶ್ವಕಪ್‌ನಲ್ಲಿ ಅತ್ಯುತ್ತಮ ಪ್ರದರ್ಶನ ನೀಡುತ್ತೇವೆ ಎಂದು ಆತ್ಮವಿಶ್ವಾಸ ವ್ಯಕ್ತಪಡಿಸಿದ್ದರು.

ಗುಂಪುಗಳು
ಎ: ಆಸ್ಟ್ರೇಲಿಯಾ, ಭಾರತ, ನ್ಯೂಜಿಲ್ಯಾಂಡ್, ಶ್ರೀಲಂಕಾ ಮತ್ತು ಪಾಕಿಸ್ತಾನ
ಬಿ: ಬಾಂಗ್ಲಾದೇಶ, ದಕ್ಷಿಣ ಆಫ್ರಿಕಾ, ಇಂಗ್ಲೆಂಡ್, ವೆಸ್ಟ್ ಇಂಡೀಸ್ ಮತ್ತು ಸ್ಕಾಟ್ಲೆಂಡ್

ರೌಂಡ್ ರಾಬಿನ್ ಲೀಗ್ ಹಂತ

ಟೂರ್ನಿಯಲ್ಲಿ ಭಾಗವಹಿಸುವ 10 ತಂಡಗಳನ್ನು ತಲಾ 5ರಂತೆ 2 ಗುಂಪುಗಳಲ್ಲಿ ವಿಂಗಡಿಸಲಾಗಿದ್ದು, ರೌಂಡ್ ರಾಬಿನ್ ಲೀಗ್ ಹಂತದ ಬಳಿಕ ಪ್ರತಿ ಗುಂಪಿನ ಅಗ್ರ 2 ತಂಡಗಳು ಸೆಮಿಫೈನಲ್‌ಗೇರಲಿವೆ. ಅಕ್ಟೋಬರ್ 17 ಮತ್ತು 18ರಂದು ಕ್ರಮವಾಗಿ ದುಬೈ ಮತ್ತು ಶಾರ್ಜಾದಲ್ಲಿ ಸೆಮಿಫೈನಲ್ ಪಂದ್ಯ ನಡೆಯಲಿವೆ. ಅಕ್ಟೋಬರ್ 20ರಂದು ದುಬೈನಲ್ಲಿ ಫೈನಲ್ ಪಂದ್ಯ ನಿಗದಿಯಾಗಿದೆ.

ಭಾರೀ ಬಹುಮಾನ ಮೊತ್ತ

ಈ ಬಾರಿಯ ಮಹಿಳಾ ಟಿ20 ವಿಶ್ವಕಪ್ ವಿಜೇತರು 2.34 ಮಿಲಿಯನ್ ಡಾಲರ್ ನಿಧಿ (ಸುಮಾರು 19.61 ಕೋಟಿ ರು.) ಯನ್ನು ಪಡೆಯಲಿದ್ದಾರೆ. ಇದು ಕಳೆದ ವಿಶ್ವಕಪ್‌ಗಿಂತ ಶೇಕಡಾ 134ರಷ್ಟು ಹೆಚ್ಚು. 2023ರಲ್ಲಿ ದಕ್ಷಿಣ ಆಫ್ರಿಕಾದಲ್ಲಿ ನಡೆದ ವಿಶ್ವಕಪ್‌ನ ವಿಜೇತರಾದ ಆಸ್ಟ್ರೇಲಿಯಾದ ಮಹಿಳೆಯರಿಗೆ ಒಂದು ಮಿಲಿಯನ್ ಡಾಲರ್ ನಿಧಿ (8.38 ಕೋಟಿ ರು.)ಯನ್ನು ನೀಡಲಾಗಿತ್ತು. ಒಟ್ಟಾರೆ ಬಹುಮಾನ ನಿಧಿಯಲ್ಲಿ ಶೇಕಡಾ 225ರಷ್ಟು ಏರಿಕೆ ಮಾಡಲಾಗಿದೆ. ಸಮಗ್ರವಾಗಿ 7.95 ಮಿಲಿಯನ್ ಡಾಲರ್ ಬಹುಮಾನ ನಿಧಿಯನ್ನು ಈ ವಿಶ್ವಕಪ್ ಒಳಗೊಂಡಿದೆ. ಈ ಹಿಂದಿನ ಮಹಿಳಾ ವಿಶ್ವಕಪ್ 2.45 ಮಿಲಿಯನ್ ಡಾಲರ್ ನಿಧಿಯನ್ನು ಒಳಗೊಂಡಿತ್ತು.

ಭಾರತ ತಂಡದ ಪಂದ್ಯಗಳು

ದಿನಾಂಕ	ಎದುರಾಳಿ
ಅಕ್ಟೋಬರ್-4	ನ್ಯೂಜಿಲ್ಯಾಂಡ್
ಅಕ್ಟೋಬರ್-6	ಪಾಕಿಸ್ತಾನ
ಅಕ್ಟೋಬರ್-9	ಶ್ರೀಲಂಕಾ
ಅಕ್ಟೋಬರ್-13	ಆಸ್ಟ್ರೇಲಿಯಾ

ನಾಕೌಟ್ ಪಂದ್ಯಗಳು

ದಿನಾಂಕ	ತಾಣ ಮತ್ತು ಪಂದ್ಯ
ಅಕ್ಟೋಬರ್ 17	ಮೊದಲ ಸೆಮಿಫೈನಲ್, ದುಬೈ
ಅಕ್ಟೋಬರ್ 18	2ನೇ ಸೆಮಿಫೈನಲ್, ಶಾರ್ಜಾ
ಅಕ್ಟೋಬರ್ 20	ಫೈನಲ್, ದುಬೈ
ಅಕ್ಟೋಬರ್ 21	ಫೈನಲ್ ಮೀಸಲು ದಿನ

ಭಾರತ ತಂಡ

ಹರ್ಮನ್‌ಪ್ರೀತ್ ಕೌರ್ (ನಾ), ಶಫಾಲಿ ವರ್ಮಾ, ದೀಪ್ತಿ ಶರ್ಮಾ, ರಿಚಾ ಘೋಷ್, ಜೆಮಿಮಾ ರೋಡ್ರಿಗಸ್, ರೇಣುಕಾ ಸಿಂಗ್ ಠಾಕೂರ್, ಶ್ರೇಯಾಂಕಾ ಪಾಟೀಲ್, ಪೂಜಾ ವಸ್ತ್ರಾಕರ್, ಅರುಂಧತಿ ರೆಡ್ಡಿ, ದಯಾಲನ್ ಹೇಮಲತಾ, ಆಶಾ ಶೋಭಾನ, ರಾಧಾ ಯಾದವ್, ಸಂಜನಾ ಸಂಜೀವನ್, ಯಾಸ್ತಿಕಾ ಭಾಟಿಯಾ (ವಿಕೆ)

ಕನ್ನಡ ಬಾವುಟ ಹಾರಿಸಿದವರು ನೆನಪಿನ ಮಾಲೆ-18ಯಲ್ಲಿ ಮಾತನಾಡಿದ ಸಾಹಿತಿ

ಸ್ವಾತಂತ್ರ್ಯ ಸಂಗ್ರಾಮದ ತಂದೆ ದಿವಾಕರ್

ಬೆಂಗಳೂರು: ಅಸಹಕಾರ ಚಳವಳಿ, ಕ್ವಿಟ್ ಇಂಡಿಯಾ ಚಳವಳಿಯಲ್ಲಿ ರಂಗನಾಥ್ ರಾಮಚಂದ್ರ ದಿವಾಕರ್ ನೇರ ಭಾಗಿಯಾಗಿ ಎಂಟು ಬಾರಿ ಜೈಲುವಾಸ ಅನುಭವಿಸಿದ್ದರು. 11 ವರ್ಷದ ಬಾಲಕರಿದ್ದಾಗ ಗಾಂಧೀಜಿ ಪ್ರಭಾವಕ್ಕೆ ಒಳಗಾಗಿ ಶಿಷ್ಯರಾದವರು. ತಮ್ಮ ಯೌವನದ ಸುಖ ತ್ಯಾಗಮಾಡಿ, ಭಾರತೀಯರು ಸುಖವಾಗಿ ಬದುಕಲು ಸ್ವಾತಂತ್ರ್ಯ ಸಂಗ್ರಾಮದ ತಂದೆಯಾದರು ಎಂದು ನಾಡೋಜ ಡಾ.ಮನು ಬಳಿಗಾರ್ ಬಣ್ಣಿಸಿದ್ದಾರೆ.

ಬಸವನಗುಡಿ ನ್ಯಾಷನಲ್ ಹೈಸ್ಕೂಲ್ ವೃತ್ತದಲ್ಲಿರುವ ಬಿ.ಎಂ.ಶ್ರೀ. ಪ್ರತಿಮೆ ಎದುರು 'ಕನ್ನಡ ಬಾವುಟ ಹಾರಿಸಿದವರು ನೆನಪಿನ ಮಾಲೆ-18' ಹಮ್ಮಿಕೊಂಡಿದ್ದ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಉಪ್ಪಿನ ಸತ್ಯಾಗ್ರಹದಲ್ಲಿ ಭಾಗವಹಿಸಿದ್ದ ಕರ್ನಾಟಕದ ಏಕೈಕ ವ್ಯಕ್ತಿ ಮೈಲಾರ ಮಹಾದೇವರನ್ನು ಗಾಂಧಿ ಸಬರಮತಿ ಆಶ್ರಮಕ್ಕೆ ಕಳುಹಿಸಿ ಕೊಟ್ಟವರೇ ರಂ.ರಾ.ದಿವಾಕರ್. ಖಾದಿ, ಚರಕದ ಬಗ್ಗೆ ಜನರಲ್ಲಿ ಜಾಗೃತಿ ಮೂಡಿಸಿ ಹೋರಾಟಕ್ಕೆ ಬೇಕಾದ ಸಾಹಿತ್ಯ ಬರೆಯುತ್ತಿದ್ದರು. 95 ವರ್ಷ ಬದುಕಿದ್ದ ಅವರು ಕ್ರಿಯಾಶೀಲವಾಗಿ ನಾಡಿಗೆ ಸೇವೆ ಸಲ್ಲಿಸಿದರು. ಅವರು ಹಾಕಿಕೊಟ್ಟ ಮಾರ್ಗದಲ್ಲಿ ನಡೆಯು ವುದೇ ಅವರಿಗೆ ನಾವು ಸಲ್ಲಿಸುವ ಗೌರವ ಎಂದರು.

ಬಸವನಗುಡಿ ನ್ಯಾಷನಲ್ ಹೈಸ್ಕೂಲ್ ವೃತ್ತದಲ್ಲಿರುವ ಬಿ.ಎಂ.ಶ್ರೀ. ಪ್ರತಿಮೆ ಎದುರು 'ಕನ್ನಡ ಬಾವುಟ ಹಾರಿಸಿದವರು ನೆನಪಿನ ಮಾಲೆ-18' ಹಮ್ಮಿಕೊಂಡಿದ್ದ ಕಾರ್ಯಕ್ರಮದಲ್ಲಿ ಮಾತನಾಡಿದ ನಾಡೋಜ ಡಾ.ಮನು ಬಳಿಗಾರ್. ಲೇಖಕ ರಾ.ನಂ. ಚಂದ್ರಶೇಖರ, ಕರ್ನಾಟಕ ವಿಕಾಸ ರಂಗದ ಅಧ್ಯಕ್ಷ ವ.ಚ. ಚನ್ನೇಗೌಡ ಇದ್ದರು.

ಏಕೀಕರಣ ಹೋರಾಟಕ್ಕೆ ರೂಪ ನೀಡಿದ ದಿವಾಕರ್: ಲೇಖಕ ರಾ.ನಂ.ಚಂದ್ರಶೇಖರ ಮಾತನಾಡಿ, ರಂ.ರಾ. ದಿವಾಕರ್ ನೆಹರೂ ಸಂಪುಟದಲ್ಲಿ ವಾರ್ತಾ ಮತ್ತು ಪ್ರಸಾರ ಖಾತೆ ಸಚಿವರಾಗಿದ್ದರು. ಕರ್ನಾಟಕ ಏಕೀಕರಣಕ್ಕೆ ಪತ್ರಿಕೆಯ ಮೂಲಕ ಹೋರಾಟದ ರೂಪ ನೀಡಿದರು. ಉತ್ತಮ ಬರಹಗಾರರಾಗಿದ್ದ ಇವರನ್ನು ಬಳ್ಳಾರಿಯಲ್ಲಿ ನಡೆದ 23ನೇ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರನ್ನಾಗಿ ಮಾಡಿ ಕನ್ನಡ ಸಾಹಿತ್ಯ ಪರಿಷತ್ತು ಗೌರವಿಸಿತ್ತು ಎಂದರು.

ಕರ್ನಾಟಕ ವಿಕಾಸ ರಂಗದ ಅಧ್ಯಕ್ಷ ವ.ಚ.ಚನ್ನೇಗೌಡ ಮಾತನಾಡಿ, ರಂ.ರಾ. ದಿವಾಕರ್ ತ್ರಿಭಾಷಾ ಪಂಡಿತರಾಗಿದ್ದರು. ಕನ್ನಡ, ಇಂಗ್ಲಿಷ್, ಹಿಂದಿ ಭಾಷೆಗಳಲ್ಲಿ ಸಮೃದ್ಧ ಬರಹಗಳನ್ನು ಬರೆದಿದ್ದಾರೆ. ಹಲವಾರು ಕೃತಿಗಳನ್ನು ಹಿಂದಿಗೆ ಭಾಷಾಂತರಿಸಿದರು. ಇವರು ಬರೆದ ಯುನೈಟೆಡ್ ಕರ್ನಾಟಕ ಇಂಗ್ಲಿಷ್ ಕೃತಿ ಕರ್ನಾಟಕ ಏಕೀಕರಣಕ್ಕೆ ರಾಷ್ಟ್ರಮಟ್ಟದಲ್ಲಿ ಬೆಂಬಲ ದೊರಕಲು ಸಹಾಯವಾಯಿತು. ಭಾರತದ ಸ್ವಾತಂತ್ರ್ಯ ಹಾಗೂ ಕರ್ನಾಟಕ ಏಕೀಕರಣಕ್ಕಾಗಿ ಶ್ರಮಿಸಿದ ಮಹಾನ್ ತ್ಯಾಗಿ ಎಂದು ಸ್ಮರಿಸಿದರು.

ಬ್ಯಾಟಿಂಗ್‌ನ ಟಾಪ್ 10 ನಲ್ಲಿ ಬಂದ ಕೊಹ್ಲಿ | 15 ಕ್ಕಿಳಿದ ರೋಹಿತ್ ಶರ್ಮಾ

ಬೌಲಿಂಗ್‌ನಲ್ಲಿ ಬುಮ್ರಾ ಬ್ಲೂಮಿಂಗ್

ದುಬೈ: ಬಾಂಗ್ಲಾದೇಶ ವಿರುದ್ಧದ ದ್ವಿತೀಯ ಟೆಸ್ಟ್‌ನಲ್ಲಿ ನಿರೀಕ್ಷಿತ ಬ್ಯಾಟಿಂಗ್ ಪ್ರದರ್ಶನ ತೋರಿದ್ದ ವಿರಾಟ್ ಕೊಹ್ಲಿ ನೂತನ ಟೆಸ್ಟ್ ಬ್ಯಾಟಿಂಗ್ ರ್‍ಯಾಂಕಿಂಗ್ ಯಾದಿಯಲ್ಲಿ ಮರಳಿ ಟಾಪ್-10 ಯಾದಿಯನ್ನು ಅಲಂಕರಿಸಿದ್ದಾರೆ. ಕಳೆದ ವಾರ 5 ಸ್ಥಾನಗಳ ಕುಸಿತದೊಂದಿಗೆ 12ನೇ ಸ್ಥಾನಿಯಾಗಿದ್ದ ಕೊಹ್ಲಿ, ನೂತನ ಶ್ರೇಯಾಂಕದಲ್ಲಿ 6 ಸ್ಥಾನಗಳ ಜಿಗಿತ ಕಂಡಿದ್ದಾರೆ. ಅವರಿಗ 724 ಅಂಕಗಳೊಂದಿಗೆ 6ನೇ ಸ್ಥಾನಿಯಾಗಿದ್ದಾರೆ. ಬೌಲಿಂಗ್ ಶ್ರೇಯಾಂಕದಲ್ಲಿ ಜಸ್ಪ್ರೀತ್ ಬುಮ್ರಾ ಅವರು ಆರ್. ಅಶ್ವಿನ್ ಹಿಂದಿಕ್ಕಿ ನಂ.1 ಟೆಸ್ಟ್ ಬೌಲರ್ ಎನಿಸಿಕೊಂಡಿದ್ದಾರೆ.

ಕಾನ್ಪುರ ಟೆಸ್ಟ್‌ನ ಎರಡೂ ಇನ್ನಿಂಗ್ಸ್‌ನಲ್ಲಿ ಅರ್ಧ ಶತಕ ಹೊಡೆದ ಯಶಸ್ವಿ ಜೈಸ್ವಾಲ್ (792) 3ನೇ ಸ್ಥಾನಕ್ಕೆ ಏರಿದ್ದಾರೆ. ಚೆನ್ನೈ ಟೆಸ್ಟ್‌ನಲ್ಲಿ ಅಮೋಘ ಶತಕ ಬಾರಿಸಿ 6ನೇ ಸ್ಥಾನಕ್ಕೇರಿದ್ದ ರಿಷಭ್ ಪಂತ್(718) ಮೂರು ಸ್ಥಾನಗಳ ಕುಸಿತ ಕಂಡು 9ನೇ ಸ್ಥಾನ ಪಡೆದಿದ್ದಾರೆ. ಎರಡೂ ಟೆಸ್ಟ್‌ನಲ್ಲಿ ಬ್ಯಾಟಿಂಗ್ ವೈಫಲ್ಯ ಕಂಡಿರುವ ನಾಯಕ ರೋಹಿತ್ ಶರ್ಮಾ(693) 5 ಸ್ಥಾನ ಕುಸಿತ ಕಂಡು 15ನೇ ಸ್ಥಾನದಲ್ಲಿ ಕಾಣಿಸಿಕೊಂಡಿದ್ದಾರೆ. ಶುಭಮನ್ ಗಿಲ್(684) 2 ಸ್ಥಾನಗಳ ನಷ್ಟದದೊಂದಿಗೆ 16ನೇ ಸ್ಥಾನ ಪಡೆದಿದ್ದಾರೆ.

ಬುಮ್ರಾ ನಂ.1 ಬೌಲರ್

ಬೌಲಿಂಗ್ ಶ್ರೇಯಾಂಕದಲ್ಲಿ ಜಸ್ಪ್ರೀತ್ ಬುಮ್ರಾ ಅವರು 870 ಅಂಕದೊಂದಿಗೆ ಅಗ್ರಸ್ಥಾನಕ್ಕೇರಿದ್ದಾರೆ. ಈ ಹಿಂದೆ ಅಗ್ರಸ್ಥಾನಿಯಾಗಿದ್ದ ಆರ್.ಅಶ್ವಿನ್(869) ಒಂದು ಸ್ಥಾನ ಕುಸಿತ ಕಂಡು ದ್ವಿತೀಯ ಸ್ಥಾನ ಪಡೆದಿದ್ದಾರೆ. ಬುಮ್ರಾ 2 ಟೆಸ್ಟ್‌ಗಳಲ್ಲಿ 49 ಓವರ್‌ಗಳನ್ನು ಬೌಲ್ ಮಾಡಿ. ಒಟ್ಟು 11 ವಿಕೆಟ್‌ಗಳನ್ನು ಕಿತ್ತಿದ್ದರು. ಅಶ್ವಿನ್ ಕೂಡ 12 ವಿಕೆಟ್ ಪಡೆದಿದ್ದರು. ಆದರೆ, ಬೌಲಿಂಗ್ ಸರಾಸರಿಯಲ್ಲಿ ಅಶ್ವಿನ್‌ಗಿಂತ ಬುಮ್ರಾ ದಾಖಲೆ ಉತ್ತಮವಾಗಿದ್ದ ಕಾರಣ ಅವರಿಗೆ ಅಗ್ರಸ್ಥಾನ ಲಭಿಸಿತು. ಉಭಯ ಆಟಗಾರರ ಮಧ್ಯೆ ಕೇವಲ ಒಂದು ಅಂಕದ ವ್ಯತ್ಯಾಸವಿದೆ.

ಟಾಪ್-10 ಟೆಸ್ಟ್ ಬೌಲರ್

ಜಸ್ಪ್ರೀತ್ ಬುಮ್ರಾ	870
ಆರ್. ಅಶ್ವಿನ್	869
ಜೋಶ್ ಹೇಝಲ್‌ವುಡ್	847
ಪ್ಯಾಟ್ ಕಮಿನ್ಸ್	820
ಕಾಗಿಸೊ ರಬಾಡ	820
ರವೀಂದ್ರ ಜಡೇಜ	809
ನಥನ್ ಲಿಯಾನ್	801
ಪ್ರಭಾತ್ ಜಯಸೂರ್ಯ	801
ಕೈಲ್ ಜೇಮಿಸನ್	714
ಶಾಹೀನ್ ಶಾ ಅಫ್ರಿದಿ	709

ಟಾಪ್-10 ಟೆಸ್ಟ್ ಬ್ಯಾಟರ್

ಜೋ ರೂಟ್	899
ಕೇನ್ ವಿಲಿಯಮ್ಸನ್	829
ಯಶಸ್ವಿ ಜೈಸ್ವಾಲ್	792
ಸ್ಟೀವನ್ ಸ್ಮಿತ್	757
ಉಸ್ಮಾನ್ ಖ್ವಾಜಾ	728
ವಿರಾಟ್ ಕೊಹ್ಲಿ	724
ಮೊಹಮ್ಮದ್ ರಿಜ್ವಾನ್	720
ಮಾರ್ನಸ್ ಲಬುಶೇನ್	720
ರಿಷಭ್ ಪಂತ್	718
ಡ್ಯಾರಿಲ್ ಮಿಚೆಲ್	718

ಪ್ರಾಣಿಗಳ ಮೇಲೆ ದೌರ್ಜನ್ಯ ಖಂಡಿಸಿ ಅಭಿಯಾನ

ಬೆಂಗಳೂರು: ಬ್ರಿಗೇಡ್ ಫಾರ್ ಅನಿಮಲ್ ಲಿಬರೇಶನ್ (ಬಿಬಿಎಲ್) ಹಾಗೂ ವೀಗನ್ ಇಂಡಿಯಾ ಮೂವ್ಮೆಂಟ್ (ವಿಐಎಂ) ಸಹಯೋಗದಲ್ಲಿ ಸತ್ಯಾಗ್ರಹ 2.0 ಗುಲಾಬಿ ಕ್ರಾಂತಿಯ ವಿರುದ್ಧ ಸತ್ಯಾಗ್ರಹ ನಡೆಸಲಾಯಿತು.

ಗಾಂಧಿ ಜಯಂತಿ ಅಂಗವಾಗಿ ಪ್ರಾಣಿ ಹಕ್ಕುಗಳ ಕಾರ್ಯಕರ್ತರು ಬ್ರೂಕ್‌ಫೀಲ್ಡ್‌ನಿಂದ ಸ್ವಾಪರ್ ವಾರ್ ಮೆಮೋರಿಯಲ್ ವರೆಗೆ ಸತ್ಯಾಗ್ರಹ ನಡೆಸಿದರು. ಮತ್ತು ಪ್ರಾಣಿಗಳ ಅನ್ಯಾಯದ ಬಳಕೆ (ನಿಂದನೆ) ಬಗ್ಗೆ ಗಮನ ಹರಿಸಲು ಮತ್ತು ವೀಗನ್ ಜೀವಂ ಶೈಲಿ ಉತ್ತೇಜಿಸಲು ಕಾರ್ಯಕ್ರಮ ನಡೆಸಿದರು.

ಹೈನುಗಾರಿಕೆಯಲ್ಲಿ ಹಸು ಮತ್ತು ಎಮ್ಮೆಗಳ ಮೇಲೆ ನಡೆಯುತ್ತಿರುವ ದೌರ್ಜನ್ಯ ಪ್ರತಿಭಟಿಸಿ ಉಪವಾಸ ಸತ್ಯಾಗ್ರಹ, ಮೊಟ್ಟೆ ಉದ್ಯಮದಲ್ಲಿ ಗಂಡು ಮರಿಗಳ ಅಮಾನುಷ ಹತ್ಯೆ ವಿರುದ್ಧ ಉಪವಾಸ ಸತ್ಯಾಗ್ರಹ ಎಂಬ ಸಂದೇಶ ಹೊತ್ತ ಭಿತ್ತಿಪತ್ರ ಹಿಡಿದ ಕಾರ್ಯಕರ್ತರು ಮಾನವರು ಪ್ರಾಣಿಗಳ ಮೇಲೆ ನಡೆಸುತ್ತಿರುವ ಕ್ರೌರ್ಯ ಎತ್ತಿ ತೋರಿಸಿದರು.

ಸಂಶೋಧಕ ಡಾ.ಮಹೇಶ್ ಮಾತನಾಡಿ, ಹಾಲು, ಮಾಂಸ, ಮೊಟ್ಟೆ ಮತ್ತು ಇತರ ಪ್ರಾಣಿ ಉತ್ಪನ್ನಗಳ ಹಿಂದಿನ ಕ್ರೌರ್ಯ ಅಥವಾ ವಿವಿಧ ಉದ್ದೇಶಗಳಿಗೆ ಪ್ರಾಣಿಗಳ ಬಳಕೆಯ ಹಿಂದಿನ ಕ್ರೌರ್ಯ ನಾವು ಗುರುತಿಸದ ಮಟ್ಟಿಗೆ ನಾವು ಪ್ರಾಣಿಗಳನ್ನು ಮಾರಾಟ ಮಾಡಿದ್ದೇವೆ. ಕೋಳಿಗಳು 1.5 ವರ್ಷಗಳ ಕಾಲ ಪಂಜರದಲ್ಲಿ ಸಿಕ್ಕಿಬಿದ್ದ ವರ್ಷಕ್ಕೆ 300 ಮೊಟ್ಟೆ ಇಡಲು ಒತ್ತಾಯಿಸಲಾಗುತ್ತದೆ. ಆದರೆ ಮೊಟ್ಟೆಯ ಉದ್ಯಮದ ವ್ಯರ್ಥವಾಗಿ ಗಂಡು ಮರಿಗಳನ್ನು ಕೊಲ್ಲಲಾಗುತ್ತದೆ ಮತ್ತು ಹೆಣ್ಣು ಮೊಟ್ಟೆಗಳನ್ನು ಇಡುವ ಯಂತ್ರಗಳಾಗಿ ಪರಿವರ್ತಿಸಲಾಗುತ್ತದೆ ಎಂದರು.

ಬ್ರಿಗೇಡ್ ಫಾರ್ ಅನಿಮಲ್ ಲಿಬರೇಶನ್ ಹಾಗೂ ವೀಗನ್ ಇಂಡಿಯಾ ಮೂವ್‌ಮೆಂಟ್ ಸಹಯೋಗದಲ್ಲಿ ಪ್ರಾಣಿಗಳ ಮೇಲೆ ದೌರ್ಜನ್ಯ ಖಂಡಿಸಿ ಅಭಿಯಾನ ನಡೆಸಿದರು.

ಇರಾನಿ ಟೂರ್ನಿ: ಸರ್ಫರಾಜ್ ದ್ವಿಶತಕ

ಲಖನೌ: ಇರಾನಿ ಕಪ್ ಕ್ರಿಕೆಟ್ ಟೂರ್ನಿಯಲ್ಲಿ ಮುಂಬೈ ಬ್ಯಾಟರ್ ಸರ್ಫರಾಜ್ ಖಾನ್ ಅಮೋಘ ದ್ವಿಶತಕ ಸಾಧನೆ ಮಾಡಿದ್ದಾರೆ.

ಲಖನೌದ ಏಕನಾ ಕ್ರಿಕೆಟ್ ಕ್ರೀಡಾಂಗಣದಲ್ಲಿ ಭಾರತ ಇತರರ ತಂಡದ ವಿರುದ್ಧ ನಡೆಯುತ್ತಿರುವ ಪಂದ್ಯದ ಎರಡನೇ ದಿನದಾಟದಲ್ಲಿ ಸರ್ಫರಾಜ್ ದ್ವಿಶತಕ ಗಳಿಸಿದ್ದಾರೆ.

ಆ ಮೂಲಕ ಇರಾನಿ ಟ್ರೋಫಿಯಲ್ಲಿ ದ್ವಿಶತಕ ಗಳಿಸಿದ ಮುಂಬೈ ತಂಡದ ಮೊದಲ ಆಟಗಾರ ಎನಿಸಿದ್ದಾರೆ.

ಸರ್ಫರಾಜ್ ಅಮೋಘ ಆಟದ ಬಲದಿಂದ ಮುಂಬೈ ಎರಡನೇ ದಿನದಾಟದ ಅಂತ್ಯಕ್ಕೆ ಒಂಬತ್ತು ವಿಕೆಟ್ ನಷ್ಟಕ್ಕೆ 536 ರನ್ ಗಳಿಸಿದೆ.

ಸರ್ಫರಾಜ್ 276 ಎಸೆತಗಳಲ್ಲಿ 221 ರನ್ ಗಳಿಸಿ ಅಜೇಯರಾಗುಳಿದರು. ಅವರ ಇನಿಂಗ್ಸ್ ನಲ್ಲಿ 25 ಬೌಂಡರಿ ಹಾಗೂ ನಾಲ್ಕು ಸಿಕ್ಸರ್‌ಗಳು ಸೇರಿವೆ. ನಾಯಕ ಅಜಿಂಕ್ಯ ರಹಾನೆ (97), ಶ್ರೇಯಸ್ ಅಯ್ಯರ್ (57), ತನುಷ್ ಕೋಟ್ಯಾನ್ (64) ಹಾಗೂ ಶಾರ್ದೂಲ್ ಠಾಕೂರ್ (36) ಉಪಯುಕ್ತ ಕಾಣಿಕೆ ನೀಡಿದರು.

ಭಾರತ ಇತರರ ತಂಡದ ಪರ ಮುಕೇಶ್ ಕುಮಾರ್ ನಾಲ್ಕು ಮತ್ತು ಯಶ್ ದಯಾಳ್ ಮತ್ತು ಪ್ರಸಿದ್ಧ ಕೃಷ್ಣ ತಲಾ ಎರಡು ವಿಕೆಟ್ ಗಳಿಸಿದರು. ಬಾಂಗ್ಲಾದೇಶ ವಿರುದ್ಧ ನಡೆದ ಟೆಸ್ಟ್ ಸರಣಿಯಲ್ಲಿ ಟೀಮ್ ಇಂಡಿಯಾದಲ್ಲಿದ್ದ ಸರ್ಫರಾಜ್ ಅವರನ್ನು ಕೊನೆಯ ಕ್ಷಣದಲ್ಲಿ ಇರಾನಿ ಟ್ರೋಫಿಯಲ್ಲಿ ಆಡಲು ಬಿಸಿಸಿಐ ಬಿಡುಗಡೆಗೊಳಿಸಿತ್ತು. ಈಗ ಅಮೋಘ ಬ್ಯಾಟಿಂಗ್ ಮೂಲಕ ತಮ್ಮ ಸಾಮರ್ಥ್ಯವನ್ನು ಸಾಬೀತು ಮಾಡಿದ್ದಾರೆ.

ವಿರಾಮ
ಪ್ರತಿ ಭಾನುವಾರ

{ಪ್ರಹ್ಲಾದ ಜೋಶಿ} ಕೇಂದ್ರ ಸಚಿವ

ನರೇಂದ್ರ ಮೋದಿ ದೇಶದ ಪ್ರಧಾನಿಯಾಗಿ ಅಧಿಕಾರ ವಹಿಸಿಕೊಂಡ ಮೇಲೆ ಭಾರತದ ಆರ್ಥಿಕ ಸ್ಥಿತಿ ಗತಿ, ವಿದೇಶೀಯರು ಭಾರತ ನೋಡುವ ರೀತಿ, ಗೌರವಿಸುವ ಪರಿ ಭಿನ್ನವಾಗಿದೆ. ಭಾರತ ವಿಶ್ವದ ಅತಿದೊಡ್ಡ ಆರ್ಥಿಕತೆ ಹೊಂದಿರುವ ದೇಶಗಳ ಸಾಲಿನಲ್ಲಿ ಮುನ್ನುಗ್ಗುತ್ತಿದೆ.

ನೂರು ದಿನ ಕಳೆದರೂ ಮುಗಿಯದ ಕಾಮಗಾರಿ | ಭಾರೀ ಸಮಸ್ಯೆ ಎದುರಿಸುತ್ತಿರುವ ವ್ಯಾಪಾರಿಗಳು

ಚಿಕ್ಕಪೇಟೆ ವೈಟ್ ಟ್ಯಾಪಿಂಗ್ ಕಾಮಗಾರಿಯೇ ದೊಡ್ಡ ಸಮಸ್ಯೆ

ಬೆಂಗಳೂರು: ರಾಜಧಾನಿ ಬೆಂಗಳೂರಿನ ಪ್ರಮುಖ ವ್ಯಾಪಾರ ಕೇಂದ್ರವಾಗಿರುವ ಚಿಕ್ಕಪೇಟೆಯಲ್ಲಿ ಬಿಬಿಎಂಪಿ ಆರಂಭಿಸಿರುವ ವೈಟ್ ಟಾಪಿಂಗ್ ಕಾಮಗಾರಿ ನೂರು ದಿನ ಕಳೆಯುತ್ತಾ ಬಂದರೂ, ಪೂರ್ಣವಾಗದ ಹಿನ್ನೆಲೆ ವ್ಯಾಪಾರಿಗಳಿಗೆ ಹಾಗೂ ನಿವಾಸಿಗಳಿಗೆ ಭಾರೀ ಸಮಸ್ಯೆಯಾಗುತ್ತಿದೆ ಎನ್ನುವ ಆರೋಪ ಕೇಳಿಬಂದಿದೆ.

ಕಾಮಗಾರಿಯಿಂದಾಗಿ ಮಾರುಕಟ್ಟೆಗಳು ಅಸ್ತವ್ಯಸ್ತವಾಗಿದ್ದು, ಸಾರ್ವಜನಿಕರು ಅಂಗಡಿಗೆ ಆಗಮಿಸುವುದೇ ದೊಡ್ಡ ಸಮಸ್ಯೆಯಾಗಿ ಪರಿಣಮಿಸಿದೆ. ಇದರಿಂದ ಅನೇಕರು ಚಿಕ್ಕಪೇಟೆಯ ಅಂಗಡಿಗಳಿಗೆ ಬರುತ್ತಿಲ್ಲವಾದ್ದರಿಂದ ಭಾರಿ ನಷ್ಟವಾಗುತ್ತಿದೆ ಎನ್ನುವ ಮಾತುಗಳು ಕೇಳಿಬಂದಿದೆ. ಚಿಕ್ಕಪೇಟೆ ಮಾರುಕಟ್ಟೆಯಲ್ಲಿ ನೂರಾರು ಬಟ್ಟೆ ಅಂಗಡಿಗಳು, ಹೋಟೆಲ್, ಸಾಮಾನುಗಳ ಅಂಗಡಿಗಳು, ಎಲೆಕ್ಟ್ರಾನಿಕ್ಸ್ ಮಳಿಗೆಗಳು ಹಾಗೂ ತಿಂಡಿ -ತಿನಿಸುಗಳ ಅಂಗಡಿಗಳು ಸಾವಿರಾರು ಗ್ರಾಹಕರಿಗೆ ಅನುಕೂಲಕರವಾಗಿದ್ದು, ಕಾಮಗಾರಿಯಿಂದಾಗಿ ಈಗ ಜನರು ಇಲ್ಲಿ ನಡೆದು ಹೋಗಲು ಸಾಧ್ಯವಾಗದ ಪರಿಸ್ಥಿತಿ ನಿರ್ಮಾಣವಾಗಿದೆ.

ಸಮನ್ವಯ ಕೊರತೆ: ಸಂಸ್ಥೆಗಳ ನಡುವಿನ ಸಮನ್ವಯ ಕೊರತೆಯಿಂದಾಗಿ ಕಾಮಗಾರಿ ವಿಳಂಬವಾಗಿದೆ. ಮೇ ತಿಂಗಳಲ್ಲಿ ಈ ರಸ್ತೆಗಳಲ್ಲಿ ವೈಟ್ -ಟಾಪಿಂಗ್ ಕಾಮಗಾರಿಯನ್ನು ಆರಂಭಿಸಲಾಗಿದ್ದು, ಗಡುವು ಪೂರ್ಣಗೊಂಡಿದ್ದರೂ ಇನ್ನೂ ಪೂರ್ಣವಾಗಿಲ್ಲ. ಹಬ್ಬಗಳ ಸಂದರ್ಭದಲ್ಲಿ ಲಾಭಗಳಿಕೆಯ ನಿರೀಕ್ಷೆಯಲ್ಲಿದ್ದ ವ್ಯಾಪಾರಸ್ಥರಿಗೆ ಈ ಕಾಮಗಾರಿಯಿಂದಾಗಿ ಭಾರೀ ಹೊಡೆತ ಬಿದ್ದಿದೆ. ಅಗೆದಿರುವ ರಸ್ತೆಗಳಲ್ಲಿ ಸಂಚರಿಸಲು ಮಾರಾಟಗಾರರು ಮತ್ತು ಗ್ರಾಹಕರು ಹೆಣಗಾಡುವಂತಾಗಿದೆ. ಇದರಿಂದ ಬಿವಿಕೆ ಅಯ್ಯಂಗಾರ್ ರಸ್ತೆ ಮತ್ತು ಚಿಕ್ಕಪೇಟೆ ಮೆಟ್ರೋ ನಿಲ್ದಾಣದವರೆಗಿನ ವ್ಯಾಪಾರಸ್ಥರ ಆದಾಯದಲ್ಲಿ ಶೇ.30-40ರಷ್ಟು ಕುಸಿತವಾಗಿದೆ ಎಂದು ತಿಳಿದುಬಂದಿದೆ.

ಚಿಕ್ಕಪೇಟೆ ವ್ಯಾಪಾರಿಗಳಿಗೆ ಸಮಸ್ಯೆ ತಂದೊಡ್ಡಿರುವ ಅಪೂರ್ಣ ವೈಟ್ ಟಾಪಿಂಗ್ ಕಾಮಗಾರಿ

ಗ್ರಾಹಕರು ವಿಮುಖ: ವ್ಯಾಪಾರಿಗಳು ಕಂಗಾಲು

ಈ ಪ್ರದೇಶದ ಅನೇಕ ಅಂಗಡಿ ಮಾಲೀಕರು ಸರಕುಗಳನ್ನು ಸಾಗಿಸಲು ಕೂಲಿಗಳಿಗೆ ಹೆಚ್ಚುವರಿ ಶುಲ್ಕ ಪಾವತಿಸುವಂತಾಗಿದ್ದು, ನಿರ್ಮಾಣ ಕಾರ್ಯದಿಂದಾಗಿ ಲಾರಿಗಳು ಅಂಗಡಿ -ಮುಂಗಟ್ಟುಗಳ ಬಳಿ ಬರಲು ಸಾಧ್ಯವಾಗುತ್ತಿಲ್ಲ. ಹೀಗಾಗಿ ವ್ಯಾಪಾರಿಗಳು ಕೂಲಿಗಳ ಮೇಲೆ ಅವಲಂಬಿತವಾಗುವಂತಾಗಿದೆ. ಕಾಮಗಾರಿ ನಡೆಯುತ್ತಿರುವ ಹಿನ್ನೆಲೆಯಲ್ಲಿ ಗ್ರಾಹಕರು ಇದೀಗ ಬೇರೆ ಬೇರೆ ಸ್ಥಳಗಳಲ್ಲಿ ಸರಕುಗಳನ್ನು ಖರೀದಿಸಲು ಆರಂಭಿಸಿದ್ದಾರೆ. ಇದು ಅನಾನುಕೂಲಕ್ಕೆ ಕಾರಣವಾಗಿದೆ. ಜನರು ಬೇರೆ ಅಂಗಡಿಗಳ ಕಡೆಗೆ ಆಕರ್ಷಿತರಾದರೆ ಮತ್ತೆ ಅವರನ್ನು ನಮ್ಮ ಬಳಿ ಬರುವಂತೆ ಮಾಡುವುದು ಕಷ್ಟ ಎಂದು ವ್ಯಾಪಾರಿಗಳು ಬೇಸರ ವ್ಯಕ್ತಪಡಿಸಿದ್ದಾರೆ. ಜಲಮಂಡಳಿ, ಬಿಬಿಎಂಪಿ ಸೇರಿದಂತೆ ಇತರ ಇಲಾಖೆಗಳ ನಡುವಿನ ಸಮನ್ವಯ ಕೊರತೆಯಿಂದ ನಗರದಲ್ಲಿ ನಡೆಯುವ ದೈನಂದಿನ ಕಾರ್ಯಾಚರಣೆಗಳ ಮೇಲೆ ಇದು ನೇರವಾಗಿ ಪರಿಣಾಮ ಬೀರುತ್ತಿದೆ. ಕಾಮಗಾರಿಯಿಂದಾಗಿ ತಮ್ಮ ಜೀವನೋಪಾಯಕ್ಕಾಗಿ ಈ ಸ್ಥಳವನ್ನು ಅವಲಂಬಿಸಿರುವವರ ಜೀವನ ಮತ್ತಷ್ಟು ಕಷ್ಟಕರವಾಗುತ್ತಿದೆ. ಅಭಿವೃದ್ಧಿ ಕಾರ್ಯಗಳು ಸಮಯ ತೆಗೆದುಕೊಳ್ಳುತ್ತದೆ ಆದರೆ ಈ ಕಾಮಗಾರಿ ಯಾವಾಗ ಕೊನೆಗೊಳ್ಳುತ್ತದೆ ಎಂಬುದರ ಕುರಿತು ಯಾರೂ ನಮಗೆ ಸ್ಪಷ್ಟ ಉತ್ತರಗಳನ್ನು ನೀಡುತ್ತಿಲ್ಲ ಎಂದು ಹೇಳಿದ್ದಾರೆ.

ವಿಶ್ವವಾಣಿ ಆರಾಮ
@vishwavaninews
ಬೆಂಗಳೂರು
ಗುರುವಾರ
03 | 10 | 2024
ಅನುದಿನವೂ ವಿರಾಮಕ್ಕೆ ಒಂದು ನೆಪ

ಚಿತ್ತ ವಿಹಾರ

ದುಃಖ ಬಂದಾಗ ಧ್ಯಾನಿಸಿ!

ಬದುಕಿನ ಹಾದಿಯಲ್ಲಿ ಆಗಾಗ ನೋವು ಸಂಕಟಗಳು ಬರುವುದು ಸಹಜವೇ. ಸಂತಸದ ಸಂದರ್ಭಗಳನ್ನು ಆದರಿಸುವ ನಮ್ಮ ಮನಸ್ಸು ದುಃಖದ ಘಳಿಗೆಗಳನ್ನು ಎದುರುಗೊಳ್ಳಲು ಸಿದ್ಧವಾಗವುದೇ ಇಲ್ಲ. ಅವುಗಳನ್ನು ನಮ್ಮಿಂದ ಸಾಧ್ಯವಾದಷ್ಟು ದೂರಕ್ಕೆ ಸರಿಸಲು ನಮ್ಮ ಮನಸ್ಸು ಹಠ ಹೂಡುತ್ತದೆ. ಇನ್ನು ಕೆಲವು ಬಾರಿ ನಮಗೆ ಬಂದ ದುಃಖದ ಸನ್ನಿವೇಶಗಳನ್ನು ಮರೆಯಲು ನಾವು ಬೇರೊಂದರಲ್ಲಿ ತೊಡಗಿಸಿಕೊಳ್ಳಲು ಅವಸರಿಸುತ್ತೇವೆ. ಇದರಿಂದ ಪರಿಸ್ಥಿತಿ ಇನ್ನಷ್ಟು ವಿಷಮಿಸುತ್ತದೆ. ವಾಸ್ತವದಲ್ಲಿ ಯಾವುದನ್ನು ಹೆಚ್ಚು ವಿರೋಧಿಸಲು ಪ್ರಯತ್ನಿಸುತ್ತೇವೆಯೋ ಅದು ನಮ್ಮನ್ನು ಹೆಚ್ಚು ಹೆಚ್ಚು ಆವರಿಸಿಕೊಳ್ಳಲು ಹವಣಿಸುತ್ತದೆ. ಇನ್ನಷ್ಟು ಘಾಸಿಗೊಳಿಸುತ್ತದೆ. ನಮ್ಮ ದುಃಖವನ್ನು ಶಮನಗೊಳಿಸಲು ನಾವು ಮೊದಲು ಮಾಡಬೇಕಾದ ಬಹು ಮುಖ್ಯ ಸಂಗತಿಯೆಂದರೆ ಅದನ್ನು ಒಪ್ಪಿಕೊಳ್ಳುವುದು. ನಾವು ಬದುಕುತ್ತಿರುವುದು ಬಹಳಷ್ಟು ದುಃಖವನ್ನುಂಟು ಮಾಡುವ ಸಂಗತಿಗಳ ನಡುವೆಯೇ ಎಂಬ ಅಂತಿಮ ಸತ್ಯವನ್ನು ಅರಿಯವುದು.

ಸಾಸಿವೆಯಷ್ಟು ಸುಖಕ್ಕೆ ಸಾಗರದಷ್ಟು ದುಃಖವೆನ್ನುವ ದಾಸರ ನುಡಿಯು ನಿಜಕ್ಕೂ ಅರ್ಥಪೂರ್ಣ. ಇಂತಹ ಸಾರ್ವತ್ರಿಕ ಸತ್ಯಗಳನ್ನು ನಾವು ಒಪ್ಪಿಕೊಳ್ಳುವ ಮನೋಸ್ಥಿತಿಯನ್ನು ರೂಢಿಸಿಕೊಳ್ಳಬೇಕು. ಸುಖವು ಎನ್ನುವುದು' ಬೆಟ್ಟಗಳ ಅದಿರುಗಳಲ್ಲಿ ಅಡಗಿರುವ ಚಿನ್ನದಂತೆ, ದುಃಖದ ಪದರುಗಳಲ್ಲಿಯೇ ಸುಖ ಬಹುತೇಕ ಬಾರಿ ಪವಡಿಸಿಕೊಂಡಿರುತ್ತದೆ. ಚಿನ್ನದ ಅದಿರನ್ನು ಸ್ವಚ್ಛಗೊಳಿಬೇಕು. ಅದನ್ನು ಕುಲುಮೆಯಲ್ಲಿ ಕಾಯಿಸಿ ಕಲ್ಮಶವನ್ನು ಶ್ರದ್ಧೆಯಿಂದ ಹೊರತೆಗೆದಾಗಲೇ ಚಿನ್ನ ಸಿಗಲು ಸಾಧ್ಯ ವಿನಃ ಅದಿರನ್ನು ಬಿಸಾಕಿ ಬಿಡುವುದರಿಂದ ಅದೆಂತು ಸಾಧ್ಯ? ಗಿರಿಶಿಖರಗಳನ್ನು ಕಷ್ಟಪಟ್ಟು ಏರಿದಾಗಲೇ ಅದರ ಮೇಲಿಂದ ಕಾಣುವ ಅದ್ಭುತ ನೋಟ ನೋಡಲು ಸಾಧ್ಯ. ದುಃಖ ಅಂಗಳದ ಕಸವನ್ನು ಗುಡಿಸುವ ಪೊರಕೆಯಂತೆ. ಸಂತಸವನ್ನು ಹೊತ್ತು ತರಬಲ್ಲ ಸುಬೇದಾರನಿದ್ದಂತೆ. ದುಃಖವನ್ನು ಪ್ರತಿರೋಧಿಸುವ ಬದಲಾಗಿ ಅದನ್ನು ನಮ್ಮ ಜೊತೆ ಸಂಗಡಿಸಿಕೊಳ್ಳುವುದನ್ನು ರೂಢಿಸಿಕೊಳ್ಳಬೇಕು. ಅದು ಕೂಡ ಜೀವನದ ರೀತಿಯೆಂದು, ಬದುಕಿನ ಭಾಗವೆಂದು ಪರಿಗಣಿಸಬೇಕು. ನಾವು ದುಃಖವನ್ನು ಧ್ಯಾನಿಸುವುದರಲ್ಲಿಯೂ ಸುಖದ ಅನುಭೂತಿ ಇದೆ. ಧ್ಯಾನಿಸುವುದು ಎಂದರೆ ಅದರ ಕುರಿತು ಸಾಧ್ಯವಾದಷ್ಟು ಆಳವಾಗಿ ಅರಿಯುವುದು. ನೈಜವಾದ ಸಂಗತಿಯನ್ನು ಅರಿಯುವುದು. ಪೂರ್ವಗ್ರಹಗಳಲ್ಲಿ ಬಂಧಿಯಾಗಿ ಬಂದಿದ್ದನ್ನು ವಿರೋಧಿಸುವುದರಿಂದ ಎಲ್ಲ ಪರಿಹಾರ ಸಾಧ್ಯ ಎಂಬ ಭ್ರಮೆಯಿಂದ ನಾವು ಹೊರಬರಬೇಕು. ಸಂತೆಯಲ್ಲಿ ಮನೆಯೊಂದನ್ನು ಮಾಡಿ ಶಬ್ದಕ್ಕೆ ಹೆದರಿದರೆ ಬದುಕು ಮುನ್ನಡೆಸಲು ಸಾಧ್ಯವಾಗದು. ಘಟಿಸಿದ ಸಂಗತಿಗಳನ್ನು ಸಮಚಿತ್ತದಿಂದ ಸ್ವೀಕರಿಸಬೇಕು. ಇಂತಹ ನಮ್ಮ ಎಡೆಬಿಡದ ಪ್ರಯತ್ನ ನಿಜಕ್ಕೂ ಒಂದೊಮ್ಮೆ ದುಃಖದಲ್ಲಿಯೂ ಒಂದು ಸಂತಸದ ಪ್ರಭೆಯಿರುವ ಸಂಗತಿಯನ್ನು ಅನಾವರಣಗೊಳಿಸುತ್ತದೆ.

● ಮಹಾದೇವ ಬಸರಕೋಡ

ಪ್ರತಿಭೆಗೆ ನೀರೆರೆಯೋಣ

ಮಕ್ಕಳು ಬಗೆ ಬಗೆಯ ಪ್ರತಿಭೆಗಳ ಆಗರ. ಮೇಲಾಗಿ ನಮ್ಮ ಸಮಾಜದ ಬಹುಮುಖ್ಯ ಆಸ್ತಿ. ಪ್ರತಿಭೆ ಇರುವವರಲ್ಲಿಯೇ ಧೈರ್ಯ ಹಾಗೂ ಸೃಜನಶೀಲತೆಗಳು ವಿಪುಲವಾಗಿ ಕಂಡುಬರುತ್ತವೆ. ಮನೆಯಲ್ಲಿ ತಂದೆ ತಾಯಿ, ಶಾಲೆಗಳಲ್ಲಿ ಶಿಕ್ಷಕರು, ಸಮಾಜದಲ್ಲಿ ಗುರು ಹಿರಿಯರು ಮಕ್ಕಳ ಪ್ರತಿಭೆಯನ್ನು ತುಂಬು ಹೃದಯದ ಕರತಾಡನಗಳಿಂದ ಪ್ರೋತ್ಸಾಹಿಸಬೇಕು. ಇಂದಿನ ಎಲ್ಲಾ ಮಕ್ಕಳಲ್ಲಿಯೂ ವಿಶೇಷವಾದ ಪ್ರತಿಭೆಗಳಿವೆ. ಅವುಗಳನ್ನು ಕೂಲಂಕಷವಾಗಿ ಗುರುತಿಸಿ ಆದಷ್ಟರ ಮಟ್ಟಿಗೆ ಅವರನ್ನು ಮುಂದಕ್ಕೆ ತಳ್ಳುವ

ಮಹತ್ವದ ಕೈಂಕರ್ಯ ನಮ್ಮಿಂದ ಆಗಬೇಕಿದೆ. ಮಕ್ಕಳ ಆಸಕ್ತಿ, ಅಭಿರುಚಿಗಳಿಗೆ ತಕ್ಕಂತೆ ಅವರವರಿಗೆ ಇಷ್ಟವಾದ ಕ್ಷೇತ್ರಗಳಲ್ಲಿ ತನ್ಮಯತೆಯಿಂದ ಮುಕ್ತವಾಗಿ ಬೆಳೆಯಲು ಬಿಡಬೇಕು. ಬಲವಂತವಾಗಿ ಎಳೆದು ತಂದು ಎಳ್ಳಷ್ಟು ಇಷ್ಟವಿಲ್ಲದ ನಮ್ಮ ದಾರಿಗೆ ತಂದು ಬಿಟ್ಟರೆ ಅವರ ಪ್ರತಿಭೆಯನ್ನು ಸ್ವತಃ ನಾವೇ ಕತ್ತುಹಿಸುಕಿ ಕೊಂದಂತಾಗುತ್ತೆ. ಮಕ್ಕಳಿಂದ ಸಾಧ್ಯವಾಗುವ ಕೆಲಸ ಮತ್ತು ಸಾಧನೆಗಳನ್ನು ಮಾಡಿಸಬೇಕು.

ಪ್ರಸ್ತುತ ಮಕ್ಕಳು ಪ್ರತಿಭೆಯನ್ನು ಗಳಿಸುವುದು ತುಂಬಾನೇ ಮುಖ್ಯ. ಗಳಿಸದೇ ಇರುವುದಕ್ಕೆ ಪ್ರಮುಖ ಕಾರಣಗಳೆಂದರೆ ಸರಿಯಾದ ಶಿಕ್ಷಣದ ಕೊರತೆ, ಆತ್ಮವಿಶ್ವಾಸದ ಅಭಾವ, ನಿರಾಶಾವಾದ, ಅವಕಾಶಗಳ ಕೈ ಚೆಲ್ಲುವಿಕೆ, ಮಾನಸಿಕ ಸಮಸ್ಯೆಗಳು ಇಂತಹ ಹತ್ತು ಹಲವು ಜ್ವಲಂತ ಸಮಸ್ಯೆಗಳ ಪಟ್ಟಿಯೇ ಬೆಳೆದು ನಿಲ್ಲುತ್ತದೆ. ಪ್ರತಿಭೆಯು ಬೆಳೆಯಬೇಕಾದರೆ ಮೊಟ್ಟಮೊದಲು ನಮ್ಮೊಳಗಿನ ದೌರ್ಬಲ್ಯಗಳನ್ನು ದೂರ ಮಾಡಿ, ಸುಪ್ತವಾದ ಪ್ರತಿಭೆಯನ್ನು ಹೆಕ್ಕಿ ತೆಗೆಯಲು ಸೂಕ್ತ ವೇದಿಕೆಯನ್ನು ಕಲ್ಪಿಸಬೇಕು. ಮಕ್ಕಳಲ್ಲಿನ ಪ್ರತಿಭೆಯನ್ನು ಪೋಷಿಸಿ, ನೀರೆರೆದರೆ ಬೆಳೆಯುವ ಬಳ್ಳಿಗೆ ಕೋಲಿನ ಆಸರೆ ಸಿಕ್ಕಾಗ ಸರಕ್ಕನೆ ಮೇಲೆರುವಂತೆ ಬೆಳೆದು ನಿಲ್ಲುತ್ತಾರೆ. 'ಇದು ನಿನ್ನಿಂದ ಸಾಧ್ಯ,ಹೀಗೊಂದು ದಾರಿ ಇದೆ' ಎನ್ನುವುದನ್ನು ಮಕ್ಕಳಿಗೆ ಸಾಧಿಸುವ ಹಾದಿಯನ್ನು ಸಂಕ್ಷಿಪ್ತವಾಗಿ ಪರಿಚಯಿಸಬೇಕು. ಮಕ್ಕಳಲ್ಲಿ ಮುಂದುವರೆಯುವ ಅವಕಾಶ ಸಿಕ್ಕಿತು ಎಂದರೆ ಖಂಡಿತ ಮುಂದುವರೆಯುತ್ತಾರೆ. ಸಿಗದೇ ಹೋದರೆ ಇದ್ದಲ್ಲೆ ಇರುತ್ತಾರೆ. ಮಕ್ಕಳಿಗೆ ಅವಕಾಶಗಳನ್ನು ನೀಡೋಣ,ಅವರ ಪ್ರತಿಭೆಯನ್ನು ಇಮ್ಮಡಿಸೋಣ.

● ರಂಗನಾಥ್ ಗುಡಿಮನಿ

ನೀವೂ ಬರೆಯಬಹುದು

ನಮ್ಮ ವಿಳಾಸ:
ಪುರವಣಿ ವಿಭಾಗ, ನಂ.1687,
3ನೇ ಮಹಡಿ, ನಿಸರ್ಗ ಸೆರೆನಿಟಿ ಕಾಂಪ್ಲೆಕ್ಸ್, ರಾಘವೇಂದ್ರ ಸ್ವಾಮಿ ಮಠದ ಹತ್ತಿರ, ಬಿಇಎಂಎಲ್ ಬಡಾವಣೆ, ರಾಜರಾಜೇಶ್ವರಿ ನಗರ, ಬೆಂಗಳೂರು-560098
ಇ-ಮೇಲ್: vishwavanimagazine@gmail.com

ಕರಾವಳಿಯ ಈ ಯುವಕ, ಅಂತಾರಾಷ್ಟ್ರೀಯ ಮಟ್ಟದ ವಿಮಾನ ಚಾಲಕನ ಪರವಾನಗಿ ಪಡೆದು, ಈಗ ತಾಂಜೇನಿಯಾದಲ್ಲಿ ಪೈಲಟ್ ವೃತ್ತಿ ನಿರ್ವಹಿಸುತ್ತಿರುವುದು ವಿಶೇಷ. ಆ ಮೂಲಕ, ನಾಡಿನ ಯುವಕರಿಗೆ ಇವರು ಸ್ಫೂರ್ತಿ ಎನಿಸಿದ್ದಾರೆ.

ಕರಾವಳಿಯ ಹುಡುಗ ಆಫ್ರಿಕಾದಲ್ಲಿ ಪೈಲೆಟ್!

● ರಾಜು ಅಡಕಳ್ಳಿ

ವಿಮಾನದಲ್ಲಿ ಸಂಚರಿಸುವುದು ಎಂದರೆ ಅದೇನೋ ಒಂದು ಉತ್ಸಾಹ, ಉದ್ವೇಗ ಎಲ್ಲರಲ್ಲೂ ಇದ್ದದ್ದೇ. ವಿಸ್ಮಯಕಾರಿ ಅನುಭವ ನೀಡುವ ವಿಮಾನವನ್ನು ಚಾಲನೆ ಮಾಡುವ ಇಬ್ಬರು ಗೋಕರ್ಣದವರಾಗಿದ್ದಾರೆ ಎಂಬುದು ವಿಶೇಷ. ಅವರಲ್ಲೊಬ್ಬರು ಅಂತಾರಾಷ್ಟ್ರೀಯ ಮಟ್ಟದಲ್ಲಿ ವಿಮಾನಗಳ ಸಾರಥ್ಯ ವಹಿಸುತ್ತಿರುವವರು ವೆಂಕಟ್ರಮಣ ಪ್ರಸಾದ್. ಈಗ ಪೂರ್ವ ಆಫ್ರಿಕಾದ ತಾಂಜೇನಿಯಾದ ದರ್ ಎ ಸಲಾಮ್ ನಗರದಲ್ಲಿದ್ದಾರೆ.

ತಾಂಜೇನಿಯಾದ ಪ್ರಿಸಿಷನ್ ವಿಮಾನಯಾನ ಸಂಸ್ಥೆಯಲ್ಲಿ ಇವರು ಪ್ರಸ್ತುತ ಪೈಲೆಟ್ ಆಗಿ ಕಾರ್ಯನಿರ್ವಹಿಸುತ್ತಿದ್ದಾರೆ. ಗೋಕರ್ಣದವರ ಪಾಲಿವೆ ಇವರೀಗ ಪ್ರೀತಿಯ ವೆಂಕಟು. ತಮ್ಮ ಮುಂದೆಯೇ ಬೆಳೆದ ಹುಡುಗನೊಬ್ಬ ಈಗ ಆಕಾಶಕ್ಕೇರಿದ್ದಾನೆ ಎಂಬ ಹೆಮ್ಮೆ ಸ್ಥಳೀಯರದ್ದು.

ವೆಂಕಟ್ ಓದಿದ್ದು ಜೈವಿಕ ಶಾಸ್ತ್ರ (ಬಯೋಟೆಕ್ನಾಲಜಿ). ಆದರೆ ಇವರಿಗೆ ಇಷ್ಟವಾಗಿದ್ದು ಲೋಹದ ಹಕ್ಕಿಗೆ ಹಾರಲು ಹೇಳಿಕೊಡುವ ಪೈಲೆಟ್ ವೃತ್ತಿ. ಹೀಗಾಗಿ ಮಾಲ್ಡಿವ್ಸ್ ಮತ್ತು ಅಮೆರಿಕಕ್ಕೆ ತೆರಳಿ ಮೂರು ವರ್ಷಗಳ ಕಾಲ ಪೈಲೆಟ್ ತರಬೇತಿ ಪಡೆದು, ಅಂತರಾಷ್ಟ್ರೀಯ ವಿಮಾನಯಾನದ ಪೈಲೆಟ್ ಲೈಸೆನ್ಸನ್ನೂ ಪಡೆದಿದ್ದಾರೆ.

ಪೈಲೆಟ್ ತರಬೇತಿಯೆಂದರೆ ಅಗ್ನಿ ಪರೀಕ್ಷೆಯಿದ್ದಂತೆ. ಶಾರೀರಿಕವಾಗಿ, ಬೌದ್ಧಿಕವಾಗಿ ಆರೋಗ್ಯವಾಗಿರಬೇಕಲ್ಲದೇ, ಕಾಲಕಾಲಕ್ಕೆ ನಡೆಸುವ ವಿಮಾನ ಚಾಲನೆಯ ಅನೇಕ ಪ್ರಯೋಗ, ತಾಂತ್ರಿಕ ಕೌಶಲ್ಯಗಳ ಪರೀಕ್ಷೆಯಲ್ಲಿ ಗೆದ್ದರೆ ಮಾತ್ರ ಪೈಲೆಟ್ ಆಗಲು ಸಾಧ್ಯ. ರಡಾರ್ ಸಂಕೇತಗಳ ಗ್ರಹಿಸುವಿಕೆ, ವಿಮಾನದಲ್ಲಿರುವ ಎಲೆಕ್ಟ್ರಾನಿಕ್ ಉಪಕರಣಗಳ ನಿರ್ವಹಣೆ, ಹೈಡ್ರಾಲಿಕ್ ಸಿಸ್ಟಮ್‌ಗಳ ಜ್ಞಾನ ಇವೆಲ್ಲವೂ ಕೂಡಾ ಪೈಲೆಟ್‌ಗೆ ಇರಬೇಕಾದ ಪರಿಣತಿ. ಜತೆಗೆ ಏಕಾಗ್ರತೆಯ ಮನಸ್ಸು ಪೈಲೆಟ್‌ಗೆ ಅತ್ಯಂತ ಅಗತ್ಯ.

ನಿಗದಿತ ಎತ್ತರಕ್ಕಿಂತ ತೀರಾ ಮೇಲಕ್ಕೆ ವಿಮಾನ ಹಾರಾಟ ನಡೆಸಿದರೆ ಪ್ರಯಾಣಿಕರಿಗೆ ಉಸಿರುಗಟ್ಟುವ ಅಪಾಯವೂ ಉಂಟು. ಪೈಲೆಟ್‌ಗಳ ಈ ಎಲ್ಲಾ ಸಮಯೋಚಿತ ನಿರ್ಧಾರಗಳಿಗೆ ಜೀವ ಒತ್ತೆ ಇಟ್ಟು ನೂರಾರು ಪ್ರಯಾಣಿಕರು ಶಿವಶಿವಾ ಎನ್ನುತ್ತಾ ಕುಳಿತಿರುತ್ತಾರೆ ಎಂಬುದನ್ನು ಪೈಲೆಟ್ ಮರೆಯದೇ ಮೈಯೆಲ್ಲ ಕಣ್ಣಾಗಿ ಸೂಕ್ತ ಮುನ್ನೆಚ್ಚರಿಕೆಯೊಂದಿಗೆ ಮುಂದೆ ಸಾಗಬೇಕು.

ದುಬಾರಿ ತರಬೇತಿ

ಇನ್ನು ಈ ಪೈಲೆಟ್ ತರಬೇತಿಯೂ ತುಂಬಾ ದುಬಾರಿ. ಸುಮಾರು 90 ಲಕ್ಷ ರೂ. ನಷ್ಟು ಖರ್ಚು ಮಾಡಿ ವೆಂಕಟ್ ವಿಮಾನದ ಸಾರಥಿ- ಮಹಾರಥಿಯಾಗಿದ್ದಾರೆ. ಶ್ರೀಸೂಕ್ತ, ಉಪನಿಷತ್, ರುದ್ರ- ಚಮೆ, ದೇವರ ಪೂಜೆಯ ಮಂತ್ರಗಳನ್ನು ಗೋಕರ್ಣದ ಪುರೋಹಿತರ ಮನೆಯಲ್ಲಿ ಕಲಿತಿರುವ ಇವರು, ಈಗ ಪ್ರತಿನಿತ್ಯವೂ ತಾಂಜೇನಿಯಾದ ತಮ್ಮ ಮನೆಯಲ್ಲಿ ದೇವರ ಪೂಜೆಯೊಂದಿಗೆ ಪಠಿಸಿದ ನಂತರವೇ ಇವರ ದಿನಚರಿ ಪ್ರಾರಂಭವಂತೆ.

ಎಷ್ಟೋ ಬಾರಿ ಬಿರುಗಾಳಿ, ಟರ್ಬ್ಯುಲೆನ್ಸ್, ಹವಾಮಾನ ವೈಪರಿತ್ಯದಲ್ಲೂ ಚಾಕ ಚಕ್ಯತೆಯಿಂದ, ಸುರಕ್ಷಿತವಾಗಿ ವಿಮಾನ ಚಲಾಯಿಸಿ ವಿಮಾನದಲ್ಲಿನ ನೂರಾರು ಪ್ರಯಾಣಿಕರನ್ನು ಈ ಚಿಗುರು ಮೀಸೆಯ, ಪೊದೆ ಗಡ್ಡದ ವೆಂಕಟ್ ಅವರು ಯಾವುದೇ ಆತಂಕವಿಲ್ಲದೇ ಪಾರು ಮಾಡಿದ ಪ್ರಸಂಗಗಳೂ ಉಂಟು. ಗಾಳಿ, ಸುಂಟರಗಾಳಿ ಅತಿಯಾದಾಗ ತಾನು ಸಂಚರಿಸುವ ವಿಮಾನದ ಎತ್ತರವನ್ನು ಹೆಚ್ಚು ಕಡಿಮೆ ಮಾಡಿ, ಹಾರಾಟದ ಸ್ತರಗಳನ್ನು ಬದಲಾಯಿಸಿ ವಿಮಾನಗಳಿಗೆ ಆಗಸದಲ್ಲಿ ಆಘಾತ ತಪ್ಪಿಸುವುದೇ ಪೈಲೆಟ್ ಎದುರಿನ ದೊಡ್ಡ ಸವಾಲು.

ಹಕ್ಕಿಗಳ ಸವಾಲು

ವಿಮಾನ ಟೇಕ್ ಆಫ್ ಆಗುವಾಗ ಹಕ್ಕಿ ಪಕ್ಷಿಗಳು ವಿಮಾನದ ರೆಕ್ಕೆಗೆ ಅಪ್ಪಳಿಸದಂತೆ ಗಮನ ವಹಿಸುವುದು, ವಿಮಾನ ಹಾರಾಟದಲ್ಲಿ ಪಥ ಬದಲಿಸುವಾಗ ಬೇರೆ ವಿಮಾನಗಳ ಪಥಗಳ ಬಗ್ಗೆಯೂ ಎಚ್ಚರ ವಹಿಸುವುದು, ಮಳೆ ಬಂದಾಗ ರನ್ ವೇಯಲ್ಲಿ ಜಾರದಂತೆ ವಿಮಾನವನ್ನು ಸುರಕ್ಷತೆಯಿಂದ ಲ್ಯಾಂಡಿಂಗ್ ಮಾಡುವುದು, ಗುಡುಗು, ಮಳೆ, ಸಿಡಿಲುಗಳ ಸಂದರ್ಭದಲ್ಲಿ ಬಾನು ಭುವಿಗಳಲ್ಲಿ ವಿಮಾನ ಸಂಚಾರದ ಬಗ್ಗೆ ಮುನ್ನೆಚ್ಚರಿಕೆ ವಹಿಸುವ ಕ್ರಮ ಇತ್ಯಾದಿಗಳ ಅರಿವು ಪೈಲೆಟ್ ಗೆ ಇರದಿದ್ದರೆ ಕಂಡಾಪಟ್ಟೆ ಗೋಟಾವಳಿಯಾಗುತ್ತದೆ.

ಈಗಾಗಲೇ ಸುಮಾರು 1,400 ತಾಸುಗಳಷ್ಟು ವಿಮಾನ ಚಾಲನೆ ಮಾಡಿದ ಅನುಭವ ಇವರಿಗಿರುವುದರಿಂದ ಆಯಾ ಸಮಯ, ಸಂದರ್ಭಕ್ಕನುಸಾರವಾಗಿ ಚಾಲನೆಯಲ್ಲಿ ಸೂಕ್ತ ನಿರ್ಧಾರ ಕೈಗೊಳ್ಳುವಲ್ಲಿ ಇವರು ನಿಸ್ಸೀಮರಾಗಿದ್ದಾರೆ.

ವೆಂಕಟ್ರಮಣ ಪ್ರಸಾದ್ ಅವರ ತಂದೆ ಚಂದ್ರ ಶೇಖರ ಪ್ರಸಾದ್, ಆಯಿ ನಾಗರತ್ನ ಪ್ರಸಾದ್ ಇವರಿಬ್ಬರೂ ಮೂಲತಃ ಗೋಕರ್ಣದವರೇ. ಈಗ ಇವರಿಬ್ಬರೂ ತಾಂಜೇನಿಯಾದಲ್ಲಿ ಚಾರ್ಟರ್ಡ್ ಅಕೌಂಟೆಂಟ್ ಆಗಿ ಕೆಲಸ ಮಾಡುತ್ತಿದ್ದಾರೆ. ಅನೇಕ ವರ್ಷಗಳಿಂದ ಈ ಪ್ರಸಾದ್ ಕುಟುಂಬ ಅಲ್ಲಿಯೇ ನೆಲೆಸಿದ್ದರೂ ಪ್ರತಿ ವರ್ಷ ಗೋಕರ್ಣಕ್ಕೆ ಬಂದು ಹೋಗುತ್ತಾರೆ.

ತಮಗಿರುವ ಒಬ್ಬನೇ ಮಗ ವೆಂಕಟ್ ಹೀಗೆ ಪೈಲೆಟ್ ವೃತ್ತಿಗೆ ಹೋಗುವಾಗ ಈ ತಂದೆ ತಾಯಿಗಳಿಗೆ ಎಷ್ಟೊಂದು ಭಯವಾಗಿರಬಹುದು ? ಆದರೆ ಅದನ್ನೆಲ್ಲ ತೋರಿಸಿಕೊಳ್ಳದೇ ಮಗನೇ.. ನಿನ್ನ ಇಚ್ಛೆಯಂತೆ ಮುನ್ನುಗ್ಗು.. ಗೋಕರ್ಣದ ಭದ್ರಕಾಳಿಯ ಆಶೀರ್ವಾದ ನಿನ್ನ ಮೇಲಿದೆ ಎಂದು ಪ್ರೋತ್ಸಾಹಿಸಿ ಕಳಿಸಿರುವುದು ಪ್ರಸಾದ್ ದಂಪತಿಯ ವೈಶಿಷ್ಟ್ಯ.

ವೆಂಕಟ್ ದೊಡ್ಡ ವಿಮಾನದ ಪೈಲೆಟ್ ಆದರೂ ಅತ್ಯಂತ ಸರಳ ಮನುಷ್ಯ. ವಿಮಾನ ಚಾಲನೆಗೆ ಹೋಗುವಾಗ ಆಯಿ (ಅಮ್ಮ) ಮಾಡಿಕೊಡುವ ಚಪಾತಿ, ಪಲ್ಯ, ನುಗ್ಗೆಕಾಯಿ ಸಾಂಬಾರಿನ ಊಟದ ಡಬ್ಬಿಯನ್ನೇ ಒಯ್ಯುತ್ತಾರೆಯೇ ಹೊರತು, ವಿಮಾನದಲ್ಲಿ ದೊರಕುವ ಪಿಜ್ಜಾ, ಬರ್ಗರುಗಳಂಥ ಯಡವಟ್ ನಮೂನಿಯ ತಿಂಡಿಗಿಂಡಿಗಳನ್ನೆಲ್ಲ ದೂರವಿಟ್ಟಿದ್ದಾರೆ. ವರ್ಷಕ್ಕೊಮ್ಮೆ ತಮ್ಮೂರು ಗೋಕರ್ಣಕ್ಕೆ ಬಂದಾಗ ಪುರಾಣಿಕರ ಮನೆಯ ಜಗುಲಿಯಲ್ಲಿ ಆರಾಮಾಗಿ ಕುಳಿತು ಸುಬ್ಬಣ್ಣ ಭಟ್ಟರ ಕವಳದ ಸಂಚಿ ಬಿಚ್ಚಿ ಎಲೆ ಅಡಿಕೆ ಎಂಜಾಯ್ ಮಾಡುತ್ತಾ, ಗಪ್ಪಾ ಹೊಡೆಯುವುದನ್ನು ಇವರು ತಪ್ಪಿಸಿಕೊಳ್ಳುವುದಿಲ್ಲ.

ಸಂಕಟ ಕಳೆಯುವ ಈ ವೆಂಕಟರಮಣ

ಸಂಕಟ ಬಂದಾಗ ವೆಂಕಟರಮಣ ಎನ್ನುವುದು ಸಹಜ. ಆದರೆ ಈ ಪೈಲೆಟ್ ವೆಂಕಟ್ರಮಣನಿಗೆ ಸಂಕಟ ಬಾರದಿದ್ದರೂ ವೆಂಕಟ್ರಮಣ ಎನ್ನಲೇ ಬೇಕು. ಕಾರಣ ವಿಮಾನದ ಕಾಕ್‌ಪಿಟ್‌ನಲ್ಲಿ ಏನೇ ಸಂಕಟ ಬಂದರೂ ಈ ವೆಂಕಟ್ರಮಣ ಅದನ್ನು ಸರಿಪಡಿಸಿಕೊಂಡು ಹೋಗುವಲ್ಲಿ ಅತ್ಯಂತ ಚಲಾಕಿ. ಹಿಂದೊಮ್ಮೆ ಕೀನ್ಯಾದ ಬಳಿ ಇವರು ಚಲಾಯಿಸುತ್ತಿದ್ದ ವಿಮಾನದ ಲ್ಯಾಂಡಿಂಗ್ ಗೇರ್ ಸಮಸ್ಯೆಯಾದಾಗ ಈ ವೆಂಕಟ್ ಆ ಸಂಕಟದಿಂದ ಪಾರು ಮಾಡಿ ವಿಮಾನವನ್ನು ಸುರಕ್ಷಿತವಾಗಿ ಭೂಮಿಗಿಳಿಸಿದ್ದೇ ಇದಕ್ಕೆ ಸೂಕ್ತ ನಿದರ್ಶನ.

ಇಂದಿನ ಯುವಜನತೆಗೆ ಸ್ಫೂರ್ತಿ ನೀಡಬಲ್ಲ ವೆಂಕಟರಮಣ ಅವರದ್ದು ನಿಜಕ್ಕೂ ಒಂದು ಯಶೋಗಾಥೆ. ಗ್ರಾಮೀಣ ಪ್ರದೇಶದಿಂದ ಬಂದ ಇವರು, ಪೈಲಟ್ ವೃತ್ತಿಯನ್ನು ಕೈಗೊಂಡು, ಇತರ ಹಲವು ಯುವಕರಿಗೆ, ಯುವತಿಯರಿಗೆ ಇಂಥದ್ದೊಂದು ವೃತ್ತಿಯನ್ನು ಅನುಸರಿಸಲು ಸ್ಫೂರ್ತಿ ನೀಡುತ್ತಿದ್ದಾರೆ.

ಶಾಸ್ತ್ರಿಯವರ ಕುರಿತು ಟಿಪ್ಪಣಿಗಳು

● ಕರ್ನಲ್ ಮಹೇಶ್ ಹೊಸಮನಿ (ವಿಶ್ರಾಂತ)

- ನಮ್ಮ ದೇಶದ ಎರಡನೆಯ ಪ್ರಧಾನಿ ಶಾಸ್ತ್ರಿಯವರು ದೇಶದ ಸೈನ್ಯದ ಉತ್ಸಾಹವನ್ನು ಹೆಚ್ಚಿಸಿ, 1965ರಲ್ಲಿ ಪಾಕಿಸ್ತಾನದೊಂದಿಗಿನ ಯುದ್ಧದಲ್ಲಿ ಜಯಭೇರಿ ಬಾರಿಸಲು ಕಾರಣವಾದ '' ಜೈ ಜವಾನ್'' ಎಂಬ ಮಂತ್ರವನ್ನು ಕೊಟ್ಟವರು.
- ದೇಶದಲ್ಲಿ ಆಹಾರದ ಅಭಾವ ತಲೆದೋರಿದಾಗ ಅಮೆರಿಕದಿಂದ ಭಿಕ್ಷೆಯ ರೂಪದಲ್ಲಿ ಗೋಧಿ ಆಮದು ಮಾಡಿಕೊಳ್ಳುವಾಗ ಸ್ವಾಭಿಮಾನದಿಂದ ಒಪ್ಪತ್ತಿನ

ಉಪವಾಸಕ್ಕೆ ದೇಶವಾಸಿಗಳನ್ನು ಪ್ರೇರೇಪಿಸಲು ಹಾಗೂ ರೈತರ ಮನೋಬಲವನ್ನು ವೃದ್ಧಿಸಲು ತಮ್ಮ ನಿವಾಸದಲ್ಲೇ ಗೋಧಿ ಬೆಳೆದು ದೇಶದ ಆಹಾರದ ಕೊರತೆಯನ್ನು ನೀಗಿಸಲು ಕಾರಣವಾದ ''ಜೈ ಕಿಸಾನ್'' ಎಂಬ ಮಂತ್ರವನ್ನು ಕೊಟ್ಟವರು
- ಗಾಂಧೀವಾದಿ, ಸರಳ ಸಜ್ಜನಿಕೆಯ ಸರದಾರ, ವಾಮನಮೂರ್ತಿ, ಕೇವಲ 19 ತಿಂಗಳುಗಳ ಕಾಲ ಎರಡನೆಯ ಪ್ರಧಾನಮಂತ್ರಿಯಾಗಿದ್ದರು; ಪ್ರಧಾನಿಯಾಗಿದ್ದಾಗಲೇ ಮೃತಪಟ್ಟರು.
- ವಾರಣಸಿಯಲ್ಲಿ ಓದುತ್ತಿದ್ದ ಲಾಲ್ ಬಹದೂರ್ ಮೆಟ್ರಿಕ್ಯುಲೇಷನ್ ಪರೀಕ್ಷೆಗೆ ಮೂರೇ ತಿಂಗಳು ಬಾಕಿ ಇದ್ದಾಗ, ಗಾಂಧೀಜಿಯ ಕರೆಗೆ ಓ ಗೊಟ್ಟು 1921 ರಲ್ಲಿ ಸ್ವಾತಂತ್ರ್ಯ ಹೋರಾಟಕ್ಕೆ ಧುಮುಕಿ, ಸರಳ ಬದುಕಿನ ಸಿದ್ಧಾಂತಗಳಿಗೆ ತಮ್ಮ ಜೀವನವನ್ನು ಮುಡಿಪಾಗಿಟ್ಟವರು.
- 1928 ರಲ್ಲಿ ಶಾಸ್ತ್ರಿಯವರ ಮದುವೆಯಾದಾಗ, ವರದಕ್ಷಿಣೆ ನಿರಾಕರಿಸಿ, ಮಾವನಿಂದ ಒಂದು ಚರಖಾ ಮತ್ತು ಕೆಲವು ಗಜಗಳ ಖಾದಿ ಬಟ್ಟೆಯನ್ನು ಮಾತ್ರ ಉಡುಗೊರೆಯಾಗಿ ಸ್ವೀಕರಿಸಿದರು.
- ಜೈಲುವಾಸ:- 1930 ರಲ್ಲಿ ಉಪ್ಪಿನ ಸತ್ಯಾಗ್ರಹದಲ್ಲಿ ಭಾಗವಹಿಸಿ, ಬಂಧನಕ್ಕೊಳಗಾಗಿ ಎರಡೂವರೆ ವರ್ಷ ಜೈಲು ಸೇರಿದರು. ನಂತರದ ಹದಿನಾರು ವರ್ಷಗಳಲ್ಲಿ ಬ್ರಿಟಿಷ್ ಸರ್ಕಾರ ಅವರನ್ನು ಏಳು ಬಾರಿ ಜೈಲಿಗೆ ಕಳಸಿತು. ಒಟ್ಟು ಒಂಬತ್ತು ವರ್ಷಗಳನ್ನು ಅವರು ಜೈಲಿನಲ್ಲಿ ಕಳೆದರು.
- ಆದರ್ಶವಾದಿ: ಅವರು ಗೃಹಮಂತ್ರಿಯಾಗಿದ್ದಾಗ ಅವರ ಮಗ ಸರಕಾರಿ ಕಾರನ್ನು ತಂದೆಗೆ ತಿಳಿಯದಂತೆ ಓಡಾಡಿಸಿ ಸಿಕ್ಕಿಬಿದ್ದಾಗ ಕಾರಿನ ಡ್ರೈವರ್ ನನ್ನು ಕರೆಸಿ ಲಾಗ್ ಬುಕ್ಕಿನಲ್ಲಿ ಸ್ವಂತಕ್ಕೆ ಬಳಸಲಾಯಿತೆಂದು ನಮೂದಿಸಿ ಅದಕ್ಕೆ ತಕ್ಕ ಹಣವನ್ನು ಸರಕಾರಿ ಖಜಾನೆಗೆ ಜಮಾ ಮಾಡಿದರು.
- ಅವರು ಗೃಹಮಂತ್ರಿಯಾಗಿದ್ದಾಗ, ಗೃಹಮಂತ್ರಿಗಳಿಗೇ ಒಂದು ಗೃಹ ಇರಲಿಲ್ಲ. ಅವರು ಅಲಹಾಬಾದಿನಲ್ಲಿ ಒಂದು ಸಣ್ಣ ಬಾಡಿಗೆ ಮನೆಯಲ್ಲಿದ್ದರು.
- 1965 ರ ಪಾಕಿಸ್ತಾನದ ವಿರುದ್ಧದ ಯುದ್ಧದಲ್ಲಿ ಜಯಗಳಿಸಿತು; ಭಾರತವು ಶಾಂತಿ ಬಯಸುತ್ತದೆ ಎಂಬ ಸಂದೇಶ ಹೊತ್ತು ರಷ್ಯ ತಾಷ್ಕೆಂಟ್ ನಲ್ಲಿ ಪಾಕಿಸ್ತಾನದ ಪ್ರಧಾನಿಯೊಂದಿಗೆ ಶಾಂತಿ ಸಂಧಾನ ಏರ್ಪಡಿಸಿದಾಗ ಭಾಗವಹಿಸಿ 'ತಾಷ್ಕೆಂಟ್ ಒಪ್ಪಂದ'ಕ್ಕೆ 1966 ಜನವರಿ 10 ರಂದು ಸಹಿ ಹಾಕಿದ ನಂತರ, ರಾತ್ರಿಯ ಔತಣಕೂಟದಲ್ಲಿ ಭಾಗವಹಿಸಿ, ಮಲಗಿದವರು ಸಂಶಯಾಸ್ಪದ ರೀತಿಯಲ್ಲಿ ನಿಧನರಾದರು. ಭಾರತಕ್ಕೆ ಅವರ ದೇಹವನ್ನುತಂದಾಗ, ಅದು ನೀಲಿಯ ಬಣ್ಣ ಹೊಂದಿತ್ತು ಎಂದು ಪ್ರತ್ಯಕ್ಷ ದರ್ಶಿಗಳು ಹೇಳಿದ್ದು, ಅವರ ಮರಣದ ಕಾರಣವು ಇಂದಿಗೂ ಯಕ್ಷಪ್ರಶ್ನೆಯಾಗೇ ಉಳಿದಿದೆ.
- ರಷ್ಯಾದಲ್ಲಿ ನಮ್ಮ ದೇಶದ ಪ್ರಧಾನ ಮಂತ್ರಿ ನಿಧನರಾದರೂ, ಅದರ ಸ್ಪಷ್ಟ ಕಾರಣವನ್ನು ಹುಡುಕುವ ಗಂಭೀರ ಪ್ರಯತ್ನ ನಡೆಯಲಿಲ್ಲ ಎಂದು ಇತಿಹಾಸಕಾರರು ದಾಖಲಿಸಿದ್ದಾರೆ.

ಅಮೆರಿಕದ ಪತ್ರಿಕೆಗಳಲ್ಲಿ ಗಾಂಧೀಜಿ!

● ಅಜಯ್ ಅಂಚೆಪಾಳ್ಯ

ಮಹಾತ್ಮಾ ಗಾಂಧೀಜಿಯವರನ್ನು ಅಮೆರಿಕದವರು ಮೊದಲಿನಿಂದಲೂ ಗುರುತಿಸುತ್ತಾ ಬಂದಿದ್ದು, ಅಲ್ಲಿನ ಪತ್ರಿಕೆಗಳು ಇವರ ಕುರಿತು ವಿಶೇಷ ಗೌರವವನ್ನೂ ತೋರಿವೆ. ಅಮೆರಿಕದ ಪ್ರತಿಷ್ಠಿತ 'ಟೈಮ್' ಪತ್ರಿಕೆಯು, 5.1.1931ರ ಸಂಚಿಕೆಯ ಮುಖಪುಟಕ್ಕೆ ಗಾಂಧೀಜಿಯವರ ಫೋಟೋವನ್ನು ಆಯ್ಕೆ ಮಾಡಿತ್ತು. ಏಕೆಂದರೆ, ಆ ಪತ್ರಿಕೆಯ 1930ರ ವರ್ಷದ ವ್ಯಕ್ತಿಯಾಗಿ ಗಾಂಧೀಜಿಯವರು ಆಯ್ಕೆಯಾಗಿದ್ದರು. 'ಸಂತ ಗಾಂಧಿ' ಎಂದು ವಿಶೇಷಣದೊಂದಿಗೆ ಲೇಖನವನ್ನೂ ಹೊಂದಿದ್ದ ಆ ಸಂಚಿಕೆಯ ಮುಖಪುಟದಲ್ಲಿ ಗಾಂಧೀಜಿಯವರ ಫೋಟೋ ಇದ್ದು, ಆ ಮೂಲಕ ಇಡೀ ಜಗತ್ತಿಗೆ ಗಾಂಧೀಜಿಯವರ ಹೋರಾಟದ ವಿವರಗಳು ಪ್ರಚುರಗೊಂಡವು. ವರ್ಷದ ವ್ಯಕ್ತಿಯಾಗಿ ಗಾಂಧೀಜಿಯವರು ಆಯ್ಕೆಯಾಗಲು ಮುಖ್ಯ ಕಾರಣವೆಂದರೆ, 1930ರಲ್ಲಿ ನಡೆದ ಉಪ್ಪಿನ ಸತ್ಯಾಗ್ರಹ. ಇನ್ನೂ ಎರಡು ಬಾರಿ ಗಾಂಧೀಜಿಯವರು ಟೈಮ್ ಪತ್ರಿಕೆಯ ಮುಖಪುಟದಲ್ಲಿ ರಾರಾಜಿಸಿದರು. 31.3.1930 ಮತ್ತು 30.6.1947ರ ಟೈಮ್ ಪತ್ರಿಕೆಯ ಮುಖಪುಟದಲ್ಲಿ ಗಾಂಧೀಜಿಯವರ ಫೋಟೋ ಮುದ್ರಣಗೊಂಡಿತ್ತು.

27.5.1946ರ 'ಲೈಫ್' ಪತ್ರಿಕೆಯ ಮುಖಪುಟದಲ್ಲಿ ಗಾಂಧೀಜಿಯವರು ಚರಕದ ಮೂಲಕ ನೂಲು ತೆಗೆಯುವ ಫೋಟೋ ಪ್ರಕಟಗೊಂಡಿದ್ದು, ಗಾಂಧೀಜಿಯವರ ಹೋರಾಟದ ವಿವರಗಳ ಲೇಖನವೂ ಆ ಪತ್ರಿಕೆಯಲ್ಲಿತ್ತು. ಆ ಪ್ರಖ್ಯಾತ ಫೋಟೋ



ಚಿತ್ರಿಸಿದವರು ಛಾಯಾಗ್ರಾಹಕಿ ಮಾರ್ಗರೆಟ್ ಬೋರ್ಕ್-ವೈಟ್. ಅಮೆರಿಕದವರು ಗಾಂಧೀಜಿಯವರಿಗೆ ತಮ್ಮ ಪತ್ರಿಕೆಗಳಲ್ಲಿ ನೀಡಿದ ಪ್ರಾಮುಖ್ಯತೆಯನ್ನು ಗಮನಿಸಿದರೆ, ಮೊದಲಿನಿಂದಲೂ ಅಮೆರಿಕದ ಜನರು ಭಾರತದ ಸ್ವಾತಂತ್ರ್ಯ ಹೋರಾಟದ ಕುರಿತು ಆಸಕ್ತಿ ಹೊಂದಿದ್ದರು ಎಂದು ಗುರುತಿಸಬಹುದು.

ಅಧಿಕ ಪ್ರಸಂಗ

● ರಾಜೇಶ್ವರಿ ಕುಮಾರ್ ರಾವ್

ಆ ಮನೆಗೆ ಹೊಸದಾಗಿ ಬಂದಿದ್ದೆವು. ಎರಡುದಿನ ಮನೆಯ ಸರಕುಗಳನ್ನು ಜೋಡಿಸುವುದರಲ್ಲಿ ಸಮಯ ಕಳೆದುಹೋಯಿತು. ಆ ದಿನ ನಮ್ಮ ಯಜಮಾನರು ಕೆಲಸಕ್ಕೆ ಹಾಜರಾಗಬೇಕಿತ್ತು. ಹಾಗಾಗಿ ಬೆಳಿಗ್ಗೆಯೇ ತಿಂಡಿತಿಂದು ಡ್ಯೂಟಿಗೆ ಹೊರಟುಹೋಗಿದ್ದರು. ಟೀವೀ ಕನೆಕ್ಷನ್ ತೆಗೆದುಕೊಂಡಿರಲಿಲ್ಲ. ಮಾಡಲು ಏನೂ ಕೆಲಸವಿಲ್ಲದೆ ಬೋರಾಗುತ್ತಿತ್ತು. ಬೆಡ್ರೂಮ್‌ಗೆ ಹೋಗಿ ವಾರಪತ್ರಿಕೆ ಓದಿಕೊಳ್ಳೋಣಾಂತ ಯೋಚಿಸಿದವಳು ಮಲಗುವ ಮುನ್ನ ಕಿಟಕಿಯ ಪರದೆಸರಿಸಿದೆ.

ಕಂಪೌಂಡ್ ವಾಲ್ ಬದಿಯಲ್ಲಿದ್ದ ಆ ಮನೆಯ ಬೆಡ್ರೂಮಿನ ಕಿಟಕಿಯ ಒಡೆದ ಗಾಜಿನಿಂದ ಕಂಡದೃಶ್ಯ ನನ್ನ ಎದೆ ನಡುಗಿಸಿತು. ಸ್ಪಷ್ಟವಾಗಿ ಕಾಣಿಸುತ್ತಿಲ್ಲ ಎಂದು ಕುರ್ಚಿಯಮೇಲೆ ನಿಂತು ಸಾಧ್ಯವಾದಷ್ಟು ಇಣುಕಿ ನೋಡಿದೆ. ಅಯ್ಯೋ ದೇವರೇ! ಅಲ್ಲೊಬ್ಬಾಕೆ ಹೆಣ್ಣು ಸೀರೆಯನ್ನು ಅಟ್ಟದ ತೊಲೆಗೆ ಎಸೆಯುವ ಪ್ರಯತ್ನದಲ್ಲಿ ಇದ್ದಾಳೆ. ಎಸೆತ ಸರಿಯಾಗಿ ತಲಪದೆ ಸೀರೆ ಕೆಳಗೆ ಬಿದ್ದರೂ ಮತ್ತೆ ಮತ್ತೆ ಪ್ರಯತ್ನಿಸುತ್ತಿದ್ದಳು. ಕೊನೆಗೆ ಕುರ್ಚಿಯೊಂದನ್ನು ಎಳೆತಂದು ಅದರ ಮೇಲೆಹತ್ತಿ ಸೀರೆಎಸೆದಳು. ನಾನು ನೋಡಿಯೂ ಸುಮ್ಮನಿದ್ದರೆ ಒಂದು ಜೀವ ಹೋಗುತ್ತದೆ. ಹೇಗಾದರೂ ಮಾಡಿ ಅವಳ ಆತ್ಮಹತ್ಯೆಯ ಪ್ರಯತ್ನವನ್ನು ನಿಲ್ಲಿಸಬೇಕೆಂದು ನಿರ್ಧರಿಸಿದವಳು ಮನೆಯಿಂದ ಹೊರಗೋಡಿ ಜೋರಾಗಿ 'ಕಾಪಾಡಿ ಕಾಪಾಡಿ' ಎಂದು ಕೂಗಾಡಿದೆ.

ಒಂದೇ ನಿಮಿಷದಲ್ಲಿ ಹತ್ತಾರುಜನ ಸೇರಿದರು. ಆಕೆಯ ಮನೆಯ ಮುಂಬಾಗಿಲು ಒಡೆದು ಒಳನುಗ್ಗಿದರು. ಕೆಲನಿಮಿಷಗಳಲ್ಲಿ ಹೊರಬಂದವರು ನನ್ನನ್ನು ನೋಡಿ 'ಏನೇ ಹುಡುಗಿ ನಿನಗೆ ತಲೆಕೆಟ್ಟಿದೆಯೇ? ಟೀ ವೀ ಸೀರಿಯಲ್ ನೋಡೋದು ಕಡಿಮೆಮಾಡು' ಎಂದು ಉಗಿದುಹೋದರು. ಹಿಂದೆ ಉಳಿದ ತಾತನಿಗೆ ನನ್ನನ್ನು ನೋಡಿ ಅಯ್ಯೋ ಪಾಪ! ಎನಿಸಿರಬೇಕು. 'ಮಗಾ, ಬೇರೆಯವರ ಮನೆಗೆ ಇಣುಕಿ ನೋಡಬಾರದೂಂತ ಇದಕ್ಕೇ ಹೇಳೋದು. ಆಯಮ್ಮ ಮಗೂಗೆ ಮಲಗಲು ಜೋಲಿ ಕಟ್ಟೋದಕ್ಕೆ ಸೀರೇನ ತೊಲೆಗೆ ಎಸೆಯುತ್ತಿದ್ದದ್ದು. ನೀನೇ ಏನೇನೋ ತಪ್ಪು ಕಲ್ಪಿಸಿದೆ. ಇನ್ನೊಮ್ಮೆ ಆ ಹೆಂಗಸಿನ ಕಣ್ಣಿಗೆ ಮಾತ್ರ ಬೀಳಬೇಡ. ಎಚ್ಚರ' ಎಂದು ಹೊರಟುಹೋದ. ಓಡಿಹೋಗಿ ಬೆಡ್ರೂಮ್ ಕಿಟಕಿ ಮುಚ್ಚಿದವಳು ಮುಂಬಾಗಿಲು ಲಾಕ್ ಮಾಡಿದೆ. ಪಕ್ಕದ ಮನೆಯಾಕೆ ಯಾರೊಂದಿಗೋ 'ಆ ಮನೆಗೆ ಯಾವುದೋ ಮೆಂಟಲ್ ಕೇಸ್ ಬಂದಿದೇಂತ ಕಾಣಿಸ್ತದೆ. ಸ್ವಲ್ಪ ಜಾಗ್ರತೆ' ಎಂದು ಹೇಳ್ತಿದ್ದ ಮಾತು ಕೇಳಿಸಿಕೊಂಡವಳಿಗೆ ಅಳುವೇ ಬಂದುಬಿಟ್ಟಿತು.

ಮಾರ್ಟಿನ್‌ಗೆ ಸೆನ್ಸಾರ್ ಅಸ್ತು

ಧ್ರುವ ಸರ್ಜಾ ಅಭಿನಯದ ಮಾರ್ಟಿನ್ ಆರಂಭದಿಂದಲೂ ಸಖತ್ ಸದ್ದು ಮಾಡುತ್ತಿದ್ದೆ. ಮುಂಬೈನಲ್ಲಿ ಟ್ರೇಲರ್ ರಿಲೀಸ್ ಮಾಡುವ ಮೂಲಕ ಚಿತ್ರತಂಡ ಗಮನಸೆಳೆದಿದೆ. ಅದ್ದೂರಿ ವೆಚ್ಚದಲ್ಲಿ ನಿರ್ಮಾಣವಾಗಿರುವ, ಹೈವೋಲ್ಟೇಜ್ ಆ್ಯಕ್ಷನ್ ಚಿತ್ರಕ್ಕೆ ಸೆನ್ಸಾರ್ ಮಂಡಳಿ ಅಸ್ತು ಎಂದಿದ್ದು, ಯು/ಎ ಪ್ರಮಾಣ ಪತ್ರ ನೀಡಿದೆ. ಇದು ಯೂನಿವರ್ಸಲ್ ಕಥೆಯಾಗಿದ್ದು, ಇದೇ 11 ರಂದು ರಿಲೀಸ್ ಆಗಲಿದೆ. ಮಾರ್ಟಿನ್ ಬಿಡುಗಡೆಗೂ ಮುನ್ನವೇ ಸಾಕಷ್ಟು ಕುತೂಹಲ ಮೂಡಿಸಿದೆ. ಅರ್ಜುನ್ ಸರ್ಜಾ ಕಥೆ ಬರೆದಿದ್ದು, ಎ.ಪಿ.ಅರ್ಜುನ್ ನಿರ್ದೇಶನ ಮಾಡಿದ್ದಾರೆ. ಅದ್ದೂರಿ ಬಳಿಕ ಅರ್ಜುನ್, ಧ್ರುವ ಜೋಡಿ ಒಂದಾಗಿದ್ದು, ಮತ್ತೊಂದು ಅದ್ದೂರಿ ಸಿನಿಮಾವನ್ನು ಪ್ರೇಕ್ಷಕರಿಗೆ ನೀಡುತ್ತಿದ್ದಾರೆ. ಉದಯ್.ಕೆ.ಮೆಹ್ತ ಚಿತ್ರ ನಿರ್ಮಾಣ ಮಾಡಿದ್ದಾರೆ. ಇತ್ತೀಚೆಗೆ ಮಾರ್ಟಿನ್‌ನ ಮಧುರಗಾನ ಕೂಡ ರಿಲೀಸ್ ಆಗಿ ಮನಗೆದ್ದಿತ್ತು.

ಇದೇ ಆರರಂದು ಧ್ರುವ ಸರ್ಜಾ ಹುಟ್ಟುಹಬ್ಬ, ಅಂದು ಮಾರ್ಟಿನ್ ಇಂಟ್ರೊ ಡಕ್ಸನ್ ಸಾಂಗ್ ರಿಲೀಸ್ ಆಗುವ ನಿರೀಕ್ಷೆ ಇದೆ.

ಬಲು ಅದ್ದೂರಿಯಾಗಿ ಮೂಡಿಬಂದಿರುವ ಈ ಹಾಡನ್ನು ಬರೋಬ್ಬರಿ ಹತ್ತು ದಿನಗಳ ಕಾಲ ಚಿತ್ರೀಕರಿಸಲಾಗಿದ್ದು, ಖ್ಯಾತ ಡ್ಯಾನ್ಸರ್‌ಗಳು ಕೂಡ ಹಾಡಿನಲ್ಲಿ ಕಾಣಿಸಿಕೊಂಡಿದ್ದಾರೆ. ಈ ಹಾಡಿಗಾಗಿಯೇ ಆರು ಕೋಟಿ ಖರ್ಚು ಮಾಡಲಾಗಿದೆ ಯಂತೆ. ಹಾಗಾಗಿ ಹಾಡಿನ ಬಗ್ಗೆ ಅಪಾರ ನಿರೀಕ್ಷೆಯೂ ಇದೆ. ಹಾಡನ್ನು ಕಣ್ತುಂಬಿಕೊಳ್ಳಲು ಸಿನಿಪ್ರಿಯರು ಕಾದು ಕುಳಿತ್ತಿದ್ದಾರೆ. ಕಾಶ್ಮೀರ ಸೇರಿದಂತೆ ವಿದೇಶದ ಸುಂದರ ತಾಣಗಳಲ್ಲಿ ಚಿತ್ರದ ಚಿತ್ರೀಕರಣ ನಡೆಸಲಾಗಿದೆ. ಧ್ರುವ ಸರ್ಜಾಗೆ ಜತೆಯಾಗಿ ವೈಭವಿ ಶಾಂಡಿಲ್ಯಾ ನಟಿಸಿದ್ದಾರೆ, ಅಚ್ಯುತ್ ಕುಮಾರ್ ಸೇರಿದಂತೆ ದೊಡ್ಡ ತಾರಾಬಳಗವೇ ಚಿತ್ರದಲ್ಲಿದೆ. ಮಾರ್ಟಿನ್ ಪ್ಯಾನ್ ವರ್ಲ್ಡ್ ಸಿನಿಮಾವಾಗಿದ್ದು, ಜಾಪನೀಸ್, ಚೈನೀಸ್, ಇಂಗ್ಲೀಷ್ ಸೇರಿದಂತೆ ಇಪ್ಪತ್ತೊಂದು ಭಾಷೆಗಳಲ್ಲಿ ರಿಲೀಸ್ ಆಗಲಿದೆ.

ಸಂದೇಶ ಸಾರುವ ಪ್ರಾಪ್ತಿ

ಪ್ರಸ್ತುತ ಕಾಲಘಟ್ಟದಲ್ಲಿ ನಮ್ಮ ಜೀವನವನ್ನು ಹೇಗೆ ರೂಪಿಸಿಕೊಳ್ಳಬೇಕು ಎಂಬ ಸಂದೇಶ ಹೊತ್ತ ಪ್ರಾಪ್ತಿ ಚಿತ್ರ ತೆರೆಗೆ ಸಿದ್ಧವಾಗಿದೆ. ಡಾ.ಎಸ್. ಮಹೇಶ್ ಬಾಬು ಸಿನಿಮಾಕ್ಕೆ ಕಥೆ, ಚಿತ್ರಕಥೆ, ಸಂಭಾಷಣೆ ಬರೆದು ನಿರ್ದೇಶನ ಮಾಡಿದ್ದು, ಸಂಗೀತ ಸಂಯೋಜಿಸುವ ಜತೆಗೆ ಸಂಕಲನದ ಜವಾಬ್ದಾರಿಯನ್ನು ನಿರ್ವಹಿಸಿದ್ದಾರೆ. ಸಿಸಿ ಕ್ರಿಯೇಶನ್ಸ್ ಬ್ಯಾನರ್‌ನಲ್ಲಿ ಚಿತ್ರ ನಿರ್ಮಾಣಕ್ಕೂ ಬಂಡವಾಳ ಹೂಡಿದ್ದಾರೆ. ಪ್ರಾಪ್ತಿ ಚಿತ್ರಕ್ಕೆ ವಿಧಿ ನಿಗದಿಯಾಗಿದೆ ಎಂಬ ಅಡಿಬರಹವಿದೆ. ಶೂಟಿಂಗ್ ಮುಗಿಸಿರುವ ಪ್ರಾಪ್ತಿ, ಸೆನ್ಸಾರ್ ಮಂಡಳಿಯಿಂದ ಯು/ಎ ಪ್ರಮಾಣ ಪತ್ರ ಪಡೆದಿದೆ. ಸದ್ಯ ಚಿತ್ರದ ಟ್ರೇಲರ್ ಹಾಗೂ ಹಾಡುಗಳು ಬಿಡುಗಡೆಯಾಗಿವೆ.

> **ನಮ್ಮ ಬದುಕಿನಲ್ಲಿ ಘಟಿಸುವ ಮೂರು ಅಂಶಗಳನ್ನು ಬಳಸಿಕೊಂಡು, ಅದನ್ನು ಸಂದೇಶದ ಮೂಲಕ ತೋರಿಸುವ ಪ್ರಯತ್ನ ಮಾಡಲಾಗಿದೆ. ಪತಿ ಪತ್ನಿಯ ಸಂಬಂಧಗಳು ಹೇಗಿರಬೇಕು. ಯೌವ್ವನದಲ್ಲಿ ಯಾಕೆ ನಿರ್ದಿಷ್ಟ ಗುರಿ ರೂಪಿಸಿಕೊಳ್ಳಬೇಕು, ಮತ್ತು ನಮ್ಮ ನಾಡಿನ ಸಂಸ್ಕೃತಿಯನ್ನು ಹೇಗೆ ಬಿಂಬಿಸಬೇಕು ಎಂಬುದನ್ನು ಚಿತ್ರದಲ್ಲಿ ಹೇಳಲಾಗುತ್ತಿದೆ. ಇವೆಲ್ಲವನ್ನು ಸ್ಪೆಸ್ಪೆನ್ಸ್, ಥ್ರಿಲ್ಲರ್ ಅಂಶಗಳನ್ನು ಬೆರೆಸಿ ಕಟ್ಟಿಕೊಡಲಾಗಿದೆ.**
> **-ಡಾ.ಎಸ್.ಮಹೇಶ್ ಬಾಬು ನಿರ್ದೇಶಕ**

ಹಿರಿಯ ನಿರ್ದೇಶಕ ಸಾಯಿಪ್ರಕಾಶ್ ಟ್ರೇಲರ್ ರಿಲೀಸ್ ಮಾಡಿ ಚಿತ್ರತಂಡಕ್ಕೆ ಶುಭಕೋರಿದರು. ನಿರ್ಮಾಪಕರು ತಮಿಳುನಾಡಿನವರಾದರೂ, ಕನ್ನಡ ಚಿತ್ರವನ್ನು ನಿರ್ಮಿಸಿ, ನಿರ್ದೇಶಿಸಿರುವ ಅವರ ಸಿನಿಮಾ ಪ್ರೀತಿಯನ್ನು ಮೆಚ್ಚಲೇಬೇಕು ಎಂದು ಸಾಯಿಪ್ರಕಾಶ್ ಶ್ಲಾಘಿಸಿದರು.

ನಮ್ಮ ಜೀವನವನ್ನು ಹೇಗೆ ಕಟ್ಟಿಕೊಳ್ಳಬೇಕು ಎಂಬುದನ್ನು ಚಿತ್ರದಲ್ಲಿ ಹೇಳಲಾಗಿದೆ. ಜೀವನದಲ್ಲಿ ಬರುವ ಏರಿಳಿತಗಳ ಸನ್ನಿವೇಶಗಳನ್ನು ಸಸ್ಪೆನ್ಸ್, ಥ್ರಿಲ್ಲರ್ ಅಂಶಗಳನ್ನು ಬೆರೆಸಿ ಎಲ್ಲರಿಗೂ ಇಷ್ಟವಾಗುವಂತೆ ಕಟ್ಟಿಕೊಡಲಾಗಿದೆ. ಈ ಹಿಂದೆ ಸಾಕಷ್ಟು ಸಿನಿಮಾಗಳಲ್ಲಿ ಖಳನಾಗಿ ಕಂಗೊಳಿಸಿದ್ದ ಜಯಸೂರ್ಯ ಈ ಚಿತ್ರದ ನಾಯಕನಾಗಿ ನಟಿಸಿದ್ದು, ಗೌರಿ ಸಾಗರ್ ನಾಯಕಿಯಾಗಿ ಬಣ್ಣಹಚ್ಚಿದ್ದಾರೆ. ನಿಖಿತಾ ರಾಮ್, ಮೋನಿಷಾ ಥಾಮಸ್ ಕಳಸ ಮಂಜುನಾಥ್, ಅಜಿತ್ ಜೈನ್, ಮಂಜುಳಾ ರೆಡ್ಡಿ, ಕಮಲ್ ಜಿಮಿರಾಯ್, ಅಲ್ಲಾನಂದ ಶ್ರೀನಿವಾಸ್, ಪ್ರಕೃತಿ, ಮೇಘರಾಜ ಕುಮಾರ್, ರಾಮಮೂರ್ತಿ, ನಿಹಾರಿಕಾ ಮುಂತಾದವರು ತಾರಾಗಣದಲ್ಲಿದ್ದಾರೆ. ಛಾಯಾಗ್ರಹಣ ಕುಮಾರ್ ಗೌಡ, ನೃತ್ಯ ಗೌರಿ ಅವರದಾಗಿದೆ. ಪ್ರಾಪ್ತಿ ಮುಂದಿನ ತಿಂಗಳು ತೆರೆಗೆ ಬರುವ ನಿರೀಕ್ಷೆ ಇದೆ.

ವೃತ್ತ ಮೆಚ್ಚಿದ ಸತೀಶ

ವಿಭಿನ್ನ ಕಥೆಯ ವೃತ್ತ ಸದ್ದಿಲ್ಲದೆ ಸಿದ್ಧವಾಗಿದೆ. ಈ ಚಿತ್ರದ ಟೀಸರ್ ರಿಲೀಸ್ ಆಗಿದ್ದು, ನಟ ನೀನಾಸಂ ಸತೀಶ್ ಟೀಸರ್ ರಿಲೀಸ್ ಮಾಡಿ ಚಿತ್ರತಂಡಕ್ಕೆ ಶುಭಕೋರಿದ್ದಾರೆ. ಎಸ್.ಲಿಖಿತ್ ಕುಮಾರ್ ನಿರ್ದೇಶನದ ವೃತ್ತ ಥ್ರಿಲ್ಲರ್ ಜಾನರ್‌ನಲ್ಲಿ ಮೂಡಿಬಂದಿದ್ದು, ನಿರೂಪಣೆಯೂ ಹೊಸತಾಗಿದೆ ಎನ್ನುತ್ತಾರೆ ನಿರ್ದೇಶಕ ಲಿಖಿತ್. ಇಂದಿನ ಜನರೇಷನ್‌ಗೆ ತುಂಬಾ ಇಷ್ಟವಾಗುವ ಅನೇಕ ಅಂಶಗಳು ಈ ಚಿತ್ರದಲ್ಲಿವೆಯಂತೆ. ಸಿದಾರ್ಥ ಪಾತ್ರದ ಸುತ್ತಲೂ ಚಿತ್ರದ ಕಥೆ ಸಾಗುತ್ತದೆ. ಆತ ಕೇಳುವ ಶಬ್ದ, ನೋಡುವ ದೃಶ್ಯ

ಎಲ್ಲವೂ ಪ್ರೇಕ್ಷಕರಿಗೆ ಕನೆಕ್ಟ್ ಆಗುತ್ತದೆ. ಅದು ಏನು ಎಂಬುದೇ ಚಿತ್ರದ ಸಸ್ಪೆನ್ಸ್. ಅದಕ್ಕೆ ತಾಂತ್ರಿಕ ಸ್ಪರ್ಶ ನೀಡಿ ಎಲ್ಲರ ಮನಮುಟ್ಟುವಂತೆ ತೆರೆಯಲ್ಲಿ ಕಟ್ಟಿಕೊಡಲಾಗುತ್ತಿದೆ. ಇದು ಒಂದು ಸವಾಲಿನ ಚಿತ್ರವಾಗಿದೆ ಎನ್ನುತ್ತಾರೆ ನಿರ್ದೇಶಕರು.

ಬಹುತೇಕ ವೃತ್ತಿರಂಗಭೂಮಿ ಕಲಾವಿದರೇ ಚಿತ್ರದಲ್ಲಿ ನಟಿಸಿದ್ದಾರೆ. ಮಾಹಿರ್ ಮೊಯಿದ್ದೀನ್ ಪ್ರಮುಖ ಪಾತ್ರದಲ್ಲಿ ನಟಿಸಿದ್ದು, ಸಿದ್ಧಾರ್ಥ್ ಎಂಬ ಪಾತ್ರದಲ್ಲಿ ಕಾಣಿಸಿಕೊಂಡಿದ್ದಾರೆ. ಚೈತ್ರಾ ಆಚಾರ್, ಸುಶ್ಮಿತಾ ಎಂಬ ಪಾತ್ರದಲ್ಲಿ ಬಣ್ಣಹಚ್ಚಿದ್ದು, ಅವರ ಪಾತ್ರ ಬಲು ವಿಶೇಷವಾಗಿದೆಯಂತೆ. ಹರಿಣಿ ಸುಂದರ ರಾಜನ್, ಪ್ರಿಯಾ ಎಂಬ ಪಾತ್ರವನ್ನು ನಿರ್ವಹಿಸಿದ್ದಾರೆ. ಲಕ್ಷ್ಯ ಆರ್ಟ್ಸ್ ಬ್ಯಾನರ್‌ನಲ್ಲಿ ಟಿ. ಶಿವಕುಮಾರ್ ವೃತ್ತ ಚಿತ್ರಕ್ಕೆ ಬಂಡವಾಳ ಹೂಡಿದ್ದಾರೆ. ಆರ್ಮುಗಂ ಸಂಕಲನ, ಗೌತಮ್ ಕೃಷ್ಣ ಛಾಯಾಗ್ರಹಣ, ಎಸ್.ಶಂಕರ್ ರಾಮನ್ ಸಂಭಾಷಣೆ ಈ ಚಿತ್ರಕ್ಕಿದೆ. ಎಂ.ಜಿ.ಆಂಟೋನಿ ಮತ್ತು ಹರಿ ಕೃಷಂತ್ ಸಂಗೀತ ಸಂಯೋಜಿಸಿದ್ದಾರೆ.

ನೈಜ ಘಟನೆಯ ನಿಮಿತ್ತ ಮಾತ್ರ

ಒಂದೂವರೆ ದಶಕದ ಹಿಂದೆ ಮಂಗಳೂರಿನಲ್ಲಿ ನಡೆದ ನೈಜ ಘಟನೆಯನ್ನು ಆಧರಿಸಿ ನಿಮಿತ್ತ ಮಾತ್ರ ಚಿತ್ರ ಸಿದ್ಧವಾಗಿದ್ದು, ಸದ್ದಿಲ್ಲದೆ ಚಿತ್ರೀಕರಣ ಮುಗಿಸಿದೆ. ಶೀರ್ಷಿಕೆಯಲ್ಲಿ ಕಿತೂಹಲ ಮೂಡಿಸಿರುವ ಈ ಚಿತ್ರವನ್ನು ತೆರೆಗೆ ತರಲು ಚಿತ್ರತಂಡ ಯೋಜನೆ ರೂಪಿಸಿದೆ. ತಂದೆಯಿಂದ ದೂರವಾದ ಮಗನ ಕುರಿತ ಕಥೆ ಇಲ್ಲಿದ್ದು, ಬಾಂಧವ್ಯದ ಜತೆಗೆ ಸೈಕಾಲಾಜಿಕಲ್ ಥ್ರಿಲ್ಲರ್ ಅಂಶಗಳನ್ನು ಒಳಗೊಂಡಿದೆ. ಬೆಂಗಳೂರು ಮತ್ತು ಮಂಗಳೂರು ಹಿನ್ನೆಲೆಯಲ್ಲಿ ಚಿತ್ರದ ಕಥೆ ಸಾಗುತ್ತದೆ. ರೋಷನ್ ಡಿಸೋಜಾ ಕಥೆ ಬರೆದು, ನಿರ್ದೇಶಿಸುವುದುರ ಜತೆಗೆ ಚಿತ್ರ ನಿರ್ಮಾಣ ಮಾಡಿದ್ದಾರೆ. ಪೂರ್ಣಚಂದ್ರ ಮೈಸೂರು, ಸಂಗೀತಾ ರಾಜೀವ್ ಮತ್ತು ಅರವಿಂದ ಕುಪ್ಲಿಕರ್ ಪ್ರಮುಖ ಪಾತ್ರಗಳಲ್ಲಿ ಅಭಿನಯಿಸಿದ್ದಾರೆ.

ಸಂಗೀತಾ ರಾಜೀವ್ ಈ ಚಿತ್ರದಲ್ಲಿ ನಟಿಸುವುದರ ಜತೆಗೆ ಚಿತ್ರದ ನಾಲ್ಕು ಹಾಡುಗಳಿಗೆ ಸಂಗೀತ ಸಂಯೋಜಿಸಿದ್ದಾರೆ. ರಷ್ಯಾ ಮತ್ತು ಚೆನ್ನೈನ ಪ್ರತಿಭಾವಂತ ಸಂಗೀತಗಾರರ ತಂಡದ ಜತೆಗೂಡಿ, ವೈವಿಧ್ಯಮಯ ಹಿನ್ನೆಲೆ ಸಂಗೀತವನ್ನು ರೂಪಿಸಿದ್ದಾರೆ. ರೋಷನ್ ಡಿಸೋಜಾ ಹಾಗೂ ಪ್ರದ್ಯುಮ್ನ ನರಹಳ್ಳಿ ಸಂಭಾಷಣೆ ಬರೆದಿದ್ದಾರೆ. ಚಿತ್ರೀಕರಣ ಮುಗಿಸಿರುವ ನಿಮಿತ್ತ ಮಾತ್ರ ಚಿತ್ರವೂ ಶೀಘ್ರದಲ್ಲಿಯೇ ತೆರೆಗೆ ಬರಲಿದೆ.

ಅವೆನ್ಯೂರೋಡ್
ನಿತ್ಯದ ವಿಂಡೋ ಶಾಪಿಂಗ್

ದಿನ ದರ್ಶಿಕೆ

ಭಾದ್ರಪದ ಮಾಸ, ಶುಕ್ಲ ಪಕ್ಷ, ಪ್ರತಿಪದ ತಿಥಿ, ಹಸ್ತಾ ನಕ್ಷತ್ರ, ಇಂದ್ರ ಯೋಗ, ಕಿನ್‌ಸ್ತುಘ್ನ ಕರಣ, 1946 ಕ್ರೋಧಿನಾಮ ಸಂವತ್ಸರ, 2081 ಪಿಂಗಳ ವಿಕ್ರಮನಾಮ ಸಂವತ್ಸರ, ಶರದ್ ದ್ರಿಕ್ ಋತು, ದಕ್ಷಿಣಾಯನ ದ್ರಿಕ್ ಆಯನ

ದಿನದ ಖುಷಿ

ಒಂದೇ ದಿನ ಕೆಲಸದಲ್ಲಿ ಗುರುತರವಾದಂಥದ್ದನ್ನು ಮಾಡಲಿಲ್ಲ ಎಂದು ಕೊರಗಬೇಡಿ, ಪರ್ವತವನ್ನು ಸರಿಸುವ ಕೆಲಸ ಒಂದು ಸಣ್ಣಕಲ್ಲನ್ನು ಎತ್ತಿ ಪಕ್ಕಕ್ಕೆ ಇಡುವುದರಿಂದ ಶುರುವಾಗುತ್ತದೆ.

ದಿನ ಭವಿಷ್ಯ

ಮೇಷ – ಕೋಪವನ್ನು ನಿಯಂತ್ರಿಸಲು ಪ್ರಯತ್ನಿಸಿ. ಯಾವುದೇ ಅಪರಿಚಿತ ವ್ಯಕ್ತಿಯ ಸಲಹೆಯ ಹೂಡಿಕೆಯಿಂದ ಪ್ರಯೋಜನವನ ಬರಬಹುದು.

ವೃಷಭ – ಜ್ಞಾನ ಮತ್ತು ಒಳ್ಳೆಯ ಹಾಸ್ಯ ಜನರನ್ನು ಆಕರ್ಷಿಸಬಹುದು. ನಿಮ್ಮ ಪ್ರಿತಿಪಾತ್ರರು ಸ್ವಲ್ಪ ಕಿರಿಕಿರಿಗೊಂಡಂತೆ ತೋರುತ್ತದೆ.

ಮಿಥುನ – ಆರೋಗ್ಯಕರ ವಾಗಿ ತ್ತೀರಾ, ಯಾವುದೇ ವ್ಯಕ್ತಿಯ ಸಹಾಯ ವಿಲ್ಲದೆ ನೀವು ಹಣವನ್ನು ಗಳಿಸಲು ಸಾಧ್ಯವಾ ಗುತ್ತದೆ.

ಕಟಕ – ವಿಪರೀತ ಶಕ್ತಿ ಮತ್ತು ಪ್ರಚಂಡ ಉತ್ಸಾಹ ಅನುಕೂಲಕರ ಫಲಿತಾಂಶ ಗಳನ್ನು ತರುತ್ತದೆ ಹಾಗೂ ಮನೆಯ ಉದ್ವಿಗ್ನತೆಗಳನ್ನು ಶಮನ ಮಾಡುತ್ತದೆ.

ಸಿಂಹ – ಭಯವೆಂಬ ದೈತ್ಯನ ಜತೆ ಹೋರಾಡಲು ಸಿದ್ಧವಾಗುತ್ತಿದ್ದ ಹಾಗೆ ನಿಮ್ಮ ಆಲೋಚನೆಗಳನ್ನು ಸಕಾರಾತ್ಮಕವಾಗಿ ರೂಪಿಸಿಕೊಳ್ಳಿ.

ಕನ್ಯಾ – ವಯಸ್ಸಾದವರು ಆರೋಗ್ಯವನ್ನು ನೋಡಿ ಕೊಳ್ಳಬೇಕು. ಇಂದು ಹಣದ ನಷ್ಟವು ಸಂಭವಿ ಸಬಹುದು, ಯೋಚಿಸಿ ಖರ್ಚು ಮಾಡಿ.

ತುಲಾ – ಮಕ್ಕಳೊಂದಿಗೆ ಆಟವಾಡುವುದು ಅದ್ಭುತ ಅನುಭವ ನೀಡುತ್ತದೆ. ಇಂದು ಹಣದ ಕೊರತೆ ಇರಬಹುದು.

ವೃಶ್ಚಿಕ – ಒಂದು ಲಾಭಕರ ದಿನ ಮತ್ತು ದೀರ್ಘಕಾಲದ ಅನಾರೋಗ್ಯಕ್ಕೆ ಪರಿಹಾರ ಹುಡುಕಲು ಸಾಧ್ಯವಾಗಬಹುದು.

ಧನು – ಉತ್ತಮ ಜೀವನಕ್ಕಾಗಿ ಆರೋಗ್ಯ ಮತ್ತು ಒಟ್ಟಾರೆ ವ್ಯಕ್ತಿತ್ವವನ್ನು ಸುಧಾರಿಸಲು ಪ್ರಯತ್ನಿಸಿ. ವಾಹನ ಓಡಿಸುವಾಗ ಗಮನವಿರಲಿ.

ಮಕರ – ಪೋಷಕರ ಆರೋಗ್ಯ ಸುಧಾರಿಸುತ್ತದೆ ಮತ್ತು ಅವರು ಪ್ರೀತಿಯನ್ನು ತೋರಿಸುತ್ತಾರೆ. ಸಂಜೆಗೆ ಏನಾದರೂ ವಿಶೇಷ ಕೆಲಸಮಾಡಿ

ಕುಂಭ – ಉದ್ಯಮಿಗಳಿಗೆ ಇಂದು ವ್ಯಾಪಾರಕ್ಕೆ ಸಂಬಂಧಿಸಿದ ಅಪೇಕ್ಷಿಸದ ಪ್ರಯಾಣ ಮಾನಸಿಕ ಒತ್ತಡವನ್ನು ನೀಡಬಹುದು.

ಮೀನ – ಅನಾವಶ್ಯಕ ಉದ್ವೇಗ ಮತ್ತು ಚಿಂತೆ ಖುಷಿಯನ್ನು ಕಸಿಯಬಹುದು ಮತ್ತು ನಿಮ್ಮನ್ನು ಖಾಲಿಯಾಗಿಸಬಹುದು. ಆರಾಮವಾಗಿರಿ.

• ಕೆ.ಬಿ.ಸಂತೋಷ್ ಗುರೂಜಿ

ದಿನಕ್ಕೊಂದು ಪ್ರಶ್ನೆ

• ಎಲ್.ಪಿ.ಕುಲಕರ್ಣಿ, ಬಾದಾಮಿ

• ಕ್ಯಾಪ್ಟನ್ ಫಾತಿಮಾ ವಾಸಿಮ್ ಇಲ್ಲಿ ನಿಯೋಜಿಸಲ್ಪಟ್ಟ ಮೊದಲ ಮಹಿಳಾ ವೈದ್ಯಕೀಯ ಅಧಿಕಾರಿಯಾಗುವ ಮೂಲಕ ಇತಿಹಾಸವನ್ನು ಸೃಷ್ಟಿಸಿದರು?

ಎ. ಸಿಯಾಚಿನ್ ಗ್ಲೇಸಿಯರ್.
ಬಿ. ಅಂಟಾರ್ಕ್ಟಿಕ್ ದಂಡಯಾತ್ರೆಯ ನಿಲ್ದಾಣ.
ಸಿ. ಅಂತಾರಾಷ್ಟ್ರೀಯ ಬಾಹ್ಯಾಕಾಶ ನಿಲ್ದಾಣ.
ಡಿ. ಅಮೆಜಾನ್ ಮಳೆಕಾಡಿನಲ್ಲಿ ವೈದ್ಯಕೀಯ ಸೇವೆ.

ಉತ್ತರ: ಎ. ಸಿಯಾಚಿನ್ ಗ್ಲೇಸಿಯರ್.

ಮಾಹಿತಿ

ಇತ್ತೀಚೆಗೆ ಕ್ಯಾಪ್ಟನ್ ಫಾತಿಮಾ ವಾಸಿಂ ಅವರು ಜಗತ್ತಿನ ಅತಿ ಎತ್ತರದ ಯುದ್ಧಭೂಮಿ ಸಿಯಾಚಿನ್ ಗ್ಲೇಸಿಯರ್‌ನಲ್ಲಿ ಕಾರ್ಯಾಚರಣೆಯ ಪೋಸ್ಟ್‌ನಲ್ಲಿ ನಿಯೋಜಿಸಲ್ಪಟ್ಟ ಮೊದಲ ಮಹಿಳಾ ವೈದ್ಯಕೀಯ ಅಧಿಕಾರಿ ಎಂಬ ಹೆಗ್ಗಳಿಕೆಗೆ ಪಾತ್ರರಾದರು. ಸಿಯಾಚಿನ್ ಬ್ಯಾಟಲ್ ಸ್ಕೂಲ್‌ನಲ್ಲಿ ಕಠಿಣ ತರಬೇತಿಯ ನಂತರ, ಕೇಂದ್ರಾಡಳಿತ ಪ್ರದೇಶವಾದ ಲಡಾಖ್‌ನಲ್ಲಿ 15,200 ಅಡಿ ಎತ್ತರದಲ್ಲಿರುವ ಪರ್ತಾಪುರ್ ಸೆಕ್ಟರ್‌ನಲ್ಲಿ ಹುದ್ದೆಗೆ ಅವರನ್ನು ಸೇರಿಸಲಾಯಿತು. ಅವರ ಪೋಸ್ಟಿಂಗ್, ಸಶಸ್ತ್ರಪಡೆಗಳಲ್ಲಿ ಮಹಿಳಾ ಸಬಲೀಕರಣಕ್ಕೆ ಪ್ರಮುಖ ಮೈಲಿಗಲ್ಲು ಎಂದು ಪರಿಗಣಿಸಲಾಗಿದೆ.

ಈ ದಿನ ಇತಿಹಾಸ

• 1984: ಭಾರತದ ಅತಿದೊಡ್ಡ ದೂರ ಚಲಿಸುವ ರೈಲು ಹಿಮಸಾಗರ್ ಎಕ್ಸ್‌ಪ್ರೆಸ್ ಕೆಲಸ ಶುರುಮಾಡಿತು, ಇದು ಜಮ್ಮುವಿನಿಂದ ಕನ್ಯಾಕುಮಾರಿ ವರೆಗೂ ಚಲಿಸುತ್ತಿತ್ತು.

• 1831: ಮೈಸೂರು ಸಂಸ್ಥಾನವನ್ನು ಬ್ರಿಟೀಷರು ವಶಪಡಿಸಿಕೊಂಡರು.

• 2010: 19ನೇ ಕಾಮನ್‌ವೆಲ್ತ್ ಕ್ರೀಡೆಗಳು ದೆಹಲಿಯಲ್ಲಿ ಶುರುವಾದವು.

• 1977: ಮಾಜಿ ಪ್ರಧಾನಿ ಇಂದಿರಾಗಾಂಧಿ ಅವರು ಭ್ರಷ್ಟಾಚಾರದ ಪ್ರಕರಣದಲ್ಲಿ ಬಂಧನಗೊಳಗಾಗಿದ್ದರು.

ಸದಾ ಧರ್ಮದಲ್ಲಿ ನಡೆದ ಕೌರವಸಹೋದರಿ ದುಶ್ಯಲಾ

ಮಹಾಭಾರತದಲ್ಲಿ ಬರುವ 'ದುಶ್ಯಲಾ' ಧೃತರಾಷ್ಟ್ರ ಗಾಂಧಾರಿಯರ 101 ಜನ ಮಕ್ಕಳಲ್ಲಿ ಏಕೈಕ 101ನೇ ಮುದ್ದಿನ ಕುವರಿ. ಮಹಾಭಾರತದ ತೆರೆಮರೆಗೆ ಸರಿದ ಪಾತ್ರಗಳಲ್ಲಿ ಇವಳ ಪಾತ್ರವೂ ಒಂದು. ಕೌರವ ಪಾಂಡವರಿಬ್ಬರಿಗೂ ಇವಳು ಏಕೈಕ ಸಹೋದರಿ. ಸುಂದರಿ ದುಶ್ಯಲಾ ಪಿತಾಮಹ ಭೀಷ್ಮರಿಂದ ಸಮರ ಕಲೆಯನ್ನು ಕಲಿತಿದ್ದಳು. ರಾಜಕುಮಾರಿಯಾಗಿ ಅರಮನೆಯ ಸುಖ ಸಂಪತ್ತಿನಲ್ಲಿ ಬೆಳೆದವಳು. ವಿವಾಹದ ನಂತರ ಕಷ್ಟಗಳ ಸರಮಾಲೆಯನ್ನೇ ಎದುರಿಸಬೇಕಾಯಿತು.

ಇವಳನ್ನು ಪರಾಕ್ರಮಿ ರಾಜನಾದ ಜಯದ್ರಥನಿಗೆ ಮೂರನೇ ರಾಣಿಯಾಗಿ ವಿವಾಹ ಮಾಡಲಾಯಿತು. ಸಿಂಧುರಾಜ ಗುಣದಲ್ಲಿ ಕಾಮುಕ, ಹುಡುಕು ಸ್ವಭಾವದವನು. ಇಷ್ಟಾಗಿ ಯೂ ದುರ್ಯೋಧನನಿಗೆ ಭಾವನ ಮೇಲೆ ಅತೀವ ಪ್ರೀತಿ ಏಕೆಂದರೆ ಜಯದ್ರಥನಿಗೆ ಪಾಂಡವರ ಮೇಲೆ ದ್ವೇಷವಿದ್ದು ಸೇಡು ತೀರಿಸಿಕೊಳ್ಳಲು ಕಾಯುತ್ತಿದ್ದ.

ಪಾಂಡವರು ದ್ರೌಪತಿ ಜೊತೆ ವನವಾಸದಲ್ಲಿದ್ದಾಗ ಒಮ್ಮೆ ಜಯದ್ರಥ ಪಾಂಡವರು ನೆಲೆಸಿದ್ದ ಕಾಡಿನ ಮಾರ್ಗದಲ್ಲಿ ಬಂದನು. ಅಕಸ್ಮಾತಾಗಿ ಅಲ್ಲಿ ದ್ರೌಪದಿಯನ್ನು ನೋಡಿ ಅವಳ ಸೌಂದರ್ಯಕ್ಕೆ ಮನ ಸೋತು ಅಪಹರಿಸಲು ಪ್ರಯತ್ನಪಟ್ಟಿದ್ದ.

ಆದರೆ ಶಕ್ತಿಶಾಲಿಯಾದ ಪಾಂಡವರಿಂದ ಸೋತು ಶರಣಾದನು. ತಮ್ಮ ಸಹೋದರಿಯ ಗಂಡ ಎಂದು ಕ್ಷಮಿಸಿ ಕೊಲ್ಲುವ ಬದಲು ಅವನ ತಲೆಯನ್ನು ಬೋಳಿಸಿ ಅವಮಾನ ಮಾಡಿದ್ದರು. ಜಯದ್ರಥನು ಈ ಅವಮಾನ ಸಹಿಸಿಕೊಳ್ಳಲಾರದೆ ಪಾಂಡವರ ಮೇಲೆ ಸೇಡು ತೀರಿಸಿಕೊಳ್ಳಲು ಅರಣ್ಯಕ್ಕೆ ಹೋಗಿ ಶಿವನ ಕುರಿತು ತಪಸ್ಸು ಮಾಡಿ ಶಿವನಿಂದ ತಾನು ಮಾಡಿದ ಪಾಪಗಳೆನ್ನೆಲ್ಲ ಪರಿಹಾರ ಮಾಡಿಕೊಂಡು, ಯುದ್ಧದಲ್ಲಿ ಪಾಂಡವರನ್ನು ತಡೆ ಹಿಡಿಯಬಲ್ಲಂಥ ವರ ಪಡೆದುಕೊಂಡಿದ್ದ.

ನಂತರ ಕುರುಕ್ಷೇತ್ರ ಯುದ್ಧ ಪ್ರಾರಂಭವಾದಾಗ ದುರ್ಯೋಧನನ ಪರವಾಗಿ ಯುದ್ಧ ಭೂಮಿಗಿಳಿದನು. ದ್ರೋಣರು ರಚಿಸಿದ ಚಕ್ರವ್ಯೂಹದ ಒಳಗೆ ಹೋಗದಂತೆ ಪಾಂಡವರನ್ನು ತಡೆದು ಅರ್ಜುನನ ಮಗ ಅಭಿಮನ್ಯುವಿನ ಸಾವಿಗೆ ಕಾರಣನಾದವನು ಶಿವನವರ ಪಡೆದ ಇದೇ ಜಯದ್ರಥ. ಇದನ್ನು ತಿಳಿದ ಅರ್ಜುನನು ಕೋಪದಿಂದ ಮರುದಿನ ಸೂರ್ಯಾಸ್ತದೊಳಗೆ ಜಯದ್ರಥನನ್ನು ಕೊಂದುಬಿಡುವುದಾಗಿ ಶಪಥ ಮಾಡಿ ಕೃಷ್ಣನ

ಒಂದೊಳ್ಳೆ ಮಾತು

ರೂಪಾ ಗುರುರಾಜ್
rgururaj628@gmail.com

ಸಹಾಯದಿಂದ ಅವನ ತಲೆಯನ್ನು ಕತ್ತರಿಸಿ ಹಾಕಿದನು. ಈ ಯುದ್ಧದಲ್ಲಿ ಅರ್ಜುನನಿಗೆ ಗೊತ್ತಿಲ್ಲದೆ ದುಶ್ಯಲಾಳ ಮಗ 'ಸುರದ'ನು ಅವನ ಕೈಯಿಂದ ಹತನಾದನು. ಮಗನ ಸಾವಿನ ಸುದ್ದಿ ತಿಳಿದು ದುಶ್ಯಲಾಳಿಗೆ ಬಹಳ ದುಃಖವಾಯಿತು. ಆ ಸಮಯದಲ್ಲಿ ಅವಳಿಗೆ ಸಾಂತ್ವನ ಮಾಡಲು ಕೌರವರು ಪಾಂಡವರು ಇಬ್ಬರೂ ಇರಲಿಲ್ಲ.

ಕುರುಕ್ಷೇತ್ರ ಯುದ್ಧಾ ನಂತರ ಹಸ್ತಿನಾಪುರದಲ್ಲಿ ಯುಧಿಷ್ಠಿರ ರಾಜ್ಯಭಾರ ಮಾಡುತ್ತ ಅಶ್ವಮೇಧಯಾಗ ಕೈಗೊಂಡನು. ಯಾಗದ ಅಶ್ವವನ್ನು ಬಿಟ್ಟಾಗ ಅದರ ಹಿಂದೆ ಅರ್ಜುನನೇ ಹೊರಟನು. ಯಾಗದ ಕುದುರೆ ಸಿಂಧೂ ರಾಜ್ಯ ಪ್ರವೇಶಿಸಿತು. ಅಲ್ಲಿ ದುಶ್ಯಲಾಳ ಮೊಮ್ಮಗ ಅದನ್ನು ಬಂಧಿಸಿದನು. ದುಶ್ಯಲಾ ಅರ್ಜುನನ ಮೇಲಿನ ಸಿಟ್ಟಿನಿಂದ ಮೊಮ್ಮಗನೊಡನೆ ಅರ್ಜುನನನ್ನು ಯುದ್ಧಕ್ಕೆ ಆಹ್ವಾನಿಸಿದಳು.

ಸಹೋದರಿ ದುಶ್ಯಲಾಳನ್ನು ನೋಡಿದ ಅರ್ಜುನನು ನೀನು ನಮ್ಮೆಲ್ಲರ ಒಬ್ಬಳೇ ಪ್ರೀತಿಯ ತಂಗಿ ನಿನ್ನೊಡನೆ ಯುದ್ಧ ಮಾಡಲು ಬಂದಿಲ್ಲ ಸಹೋದರನಾಗಿ ಬಂದಿದ್ದೇನೆ ಎಂದಾಗ ದುಶ್ಯಲಾ ಅವನ ಮಾತಿಗೆ ಸೋಲದೆ ನೀನು ನನ್ನ ಪತಿ ಹಾಗೂ ಮಗನನ್ನು ಕೊಂದಿರುವೆ ನಾನು ನಿನ್ನನ್ನು ಸುಮ್ಮನೆ ಬಿಡುವುದಿಲ್ಲ ಎಂದು ಸಿಡಿದೆದ್ದಳು. ಆಗ ಅರ್ಜುನ ಆಕೆಗೆ ಕುರುಕ್ಷೇತ್ರದಲ್ಲಿ ಮೋಸದಿಂದ ತನ್ನ ಮಗ ಅಭಿಮನ್ಯು ಪ್ರಾಣ ಕಳೆದುಕೊಂಡದ್ದನ್ನೂ, ಜಯದ್ರತನ ಕುತಂತ್ರ ಎಲ್ಲವನ್ನೂ ವಿವರಿಸಿದನು.

ನಿಜಾಂಶವನ್ನು ಅರಿತ ದೃಶ್ಯಲೆ ಅರ್ಜುನನಿಗೆ ಕ್ಷಮಾಪಣೆಯನ್ನು ಕೇಳಿದಳು. ಅರ್ಜುನ ದುಶ್ಯಲೆಯ ಮೊಮ್ಮಗನನ್ನು ಸಿಂಧು ರಾಜ್ಯಕ್ಕೆ ಉತ್ತರಾಧಿಕಾರಿಯನ್ನಾಗಿ ಮಾಡಿದನು.

ಕೌರವ ಸಹೋದರರೆಲ್ಲರೂ ಅಧರ್ಮೀಯರಾಗಿದ್ದರೂ ದುಶ್ಯಲಾ ಎಂದಿಗೂ ಧರ್ಮ ಮಾರ್ಗದಲ್ಲಿ ನಡೆದಳು. ಮಹಾಭಾರತದಲ್ಲಿ ಇವಳ ಪಾತ್ರ ತೆರೆಮರೆಯಲ್ಲಿದ್ದರೂ ಇಂದಿಗೂ ಜನಮನದಲ್ಲಿ ನೆಲೆಸಿದ್ದಾಳೆ. ಭಾರತದಲ್ಲಿ ಇವಳ ಹೆಸರಿನಲ್ಲಿ ದೇವಾಲಯಗಳನ್ನು ನಿರ್ಮಿಸಿದ್ದಾರೆ. ಅವುಗಳಲ್ಲಿ ಕೇರಳದ ಒಂದು ದೇವಾಲಯ ಪ್ರಮುಖವಾಗಿದ್ದು ನಿತ್ಯವೂ ಇಲ್ಲಿ ದುಶ್ಯಲೆಗೆ ಪೂಜೆ ಸಲ್ಲುತ್ತದೆ.

ನಾವು ಧರ್ಮ ಮಾರ್ಗದಲ್ಲಿ ನಡೆಯಬೇಕು ಎಂದು ನಿರ್ಧಾರ ಮಾಡಿದರೆ, ಎಂತಹ ಸಂದರ್ಭದಲ್ಲೂ ಅದನ್ನು ನಿಭಾಯಿಸ ಬಹುದು ಎನ್ನುವುದಕ್ಕೆ ದುಶ್ಯಲೆಯ ಕಥೆ ಒಳ್ಳೆಯ ಉದಾಹರಣೆ.

ಪದಬಂಧ



ಎಡದಿಂದಬಲಕ್ಕೆ:
1. ವಿಶ್ವವಿದ್ಯಾಲಯದ ಮುಖ್ಯಸ್ಥ (4)
3. ವಿನೋದವೂ ಆಗಬಲ್ಲ ಅಣಕ (4)
5. ದಪ್ಪವಾಗಿರುವ ಸೂಜಿಯಂತಹ ಸಾಧನ (3)
6. ಬೆಲ್ಲ, ಸಕ್ಕರೆಯಿಂದ ತಯಾರಿಸಿದ ಪಾನೀಯ (3)
8. ರಕ್ತವನ್ನು ಹೀರುವ ಒಂದು ಕೀಟ (3)
10. ಒಂದು ಇಂಚಿನ ಅಳತೆ (3)
12. ತಾಯಿಯ ಮಮತೆಯ ಉಡಿ (3)
14. ಯಕ್ಷಿಣಿವಿದ್ಯೆಗೆ ಮತ್ತೊಂದು ಹೆಸರು (3)
16. ಮತ್ತೊಂದು ದನದೊಂದಿಗೆ ಬಂದಿರುವ ಎಳೆಯ ಮಗು (4)
17. ಒಂದು ಪೀಳಿಗೆ (4)

ಮೇಲಿನಿಂದಕೆಳಕ್ಕೆ:
1. ವೇಗವಾಗಿ ಓಡುವ ತುರಗ (3)
2. ಎಳ್ಳುನೀರು ಬಿಡುವುದು (4)
3. ವಿಷಯವೊಂದರಲ್ಲಿನ ನೈಪುಣ್ಯತೆ (4)
4. ಏಳು ದಿನಗಳ ಅವಧಿ (3)
7. ಹೆದರು ಅಥವಾ ಅಲುಗಾಡು (3)
9. ಗಡಿಯಲ್ಲಿದೆ ವ್ಯಾಯಾಮಶಾಲೆ (3)
11. ಕೂಡಿಸು ಅಥವಾ ಹೊಡೆ ಎಂದರ್ಥ (4)
12. ಸಂಪ್ರದಾಯವನ್ನು ಕಟ್ಟುನಿಟ್ಟಾಗಿ ಪಾಲಿಸುವವನು (4)
13. ಪ್ರೀತಿ ಪಾತ್ರರನ್ನು ಅಗಲಿದ್ದರಿಂದ ಉಂಟಾದ ನೋವು (3)
15. ನೀರು ಮಿಶ್ರಿತ ರಾಡಿ (3)

ನಿನ್ನೆಯ ಉತ್ತರ

ಎಡದಿಂದ ಬಲಕ್ಕೆ: 1. ವಿನಾಯಕ 3. ಮರುನುಡಿ 5. ಟಗರು 6. ವನಚರ 8. ಕಲಾವಿದ 10. ಮದುಮಗ 12. ಅನುಮಾನ 14. ಅಂತಃಪುರ 16. ಅನಂತರ 18. ಭಗಿನಿ 19. ಗರಗಸ 20. ಲತಾಗೃಹ

ಮೇಲಿನಿಂದ ಕೆಳಕ್ಕೆ: 1. ವಿಪ್ಲವ 2. ಕಟರ 3. ಮರುಕ 4. ಡಿಮದ 7. ನಗದು 9. ಲಾಟೀನು 11. ಮತಾಪು 13. ಮಾರುತ 14. ಅಂಬಿಗ 15. ರಭಸ 16. ಅನಿಲ 17. ರಸ್ಯಹ

• ಸಿ. ರವಿಶಂಕರ ಶಾಸ್ತ್ರಿ, ದಂಬೆ

ಗಾಂಧಿ ಸ್ಮೃತಿ

ನಮ್ಮ ಪ್ರೀತಿಯ ಬಾಪು

ವಿಶ್ವವಾಣಿಯ ಕರೆಗೆ ಓಗೊಟ್ಟು ಗಾಂಧೀಜಿಯವರ ಜನುಮದಿನದಂದು ಬಾಪೂಜಿ ಚಿತ್ರ ಬರೆದು, ಗಾಂಧಿ ತಾತನ ವೇಷ ಧರಿಸಿ ನೂರಾರು ಮಕ್ಕಳು ರಾಷ್ಟ್ರಪಿತನನ್ನು ಸ್ಮರಿಸಿದ್ದಾರೆ. ಆಯ್ದ ಚಿತ್ರಗಳನ್ನು ಇಲ್ಲಿ ಪ್ರಕಟಿಸಿದ್ದೇವೆ. ಭಾಗವಹಿಸಿದ ಮಕ್ಕಳಿಗೆ, ಅವರನ್ನು ಪ್ರೋತ್ಸಾಹಿಸಿದ ಪೋಷಕರಿಗೆ ಅಭಿನಂದನೆಗಳು.

ಕೇಶವ ಎಚ್.ಎಸ್.
ಬಟ್ಸನ್ ಪ್ಲೇ ಸ್ಕೂಲ್, ನೆಲಮಂಗಲ

ಅಥರ್ವ ನಾರಾಯಣ ಪೂಜಾರಿ
ಸಾಯಿ ಗುರುಕುಲ ಶಾಲೆ ಅಮಲಝರಿ, ಬೀಳಗಿ

ಪವನ್ ಪಿ. ಜಾಡರ್
ಸರಕಾರಿ ಹಿರಿಯ ಪ್ರಾಥಮಿಕ ಶಾಲೆ
ಕೋಣನತಲಿ, ರಾಣೆಬೆನ್ನೂರು.

ಜಶ್ವ
ಚೆನ್ನಾವರ ಶಾಲೆ, ಪಾಲ್ತಾಡಿ, ಕಡಬ

ಪ್ರಮೋದ ನಿಂಗಪ್ಪ ಕರಿಕಟ್ಟಿ
ಸರಕಾರಿ ಹಿರಿಯ ಪ್ರಾಥಮಿಕ ಶಾಲೆ,
ಬಾಗಲಕೋಟೆ.

ಋತ ಕೋಟೆ, ಅದಿತಿ
ತತ್ವ ಶಾಲೆ, ದಾವಣಗೆರೆ.

ಶ್ರೀಶೈಲ ಮಲ್ಲಣ್ಣ ಕಲ್ಲದೇವನಹಳ್ಳಿ
ಜಿಎಚ್‌ಪಿಎಸ್ ಸಂಜೀವನಗರ, ಕೆಂಭಾವಿ

ಅದ್ವಿತ್ ಕೆ. ನಾಲ್ಕನೇ ತರಗತಿ, ಸರಕಾರಿ ಕಿರಿಯ ಪ್ರಾಥಮಿಕ ಶಾಲೆ, ಮೂವಾಪೆ, ಸುಳ್ಯ

ಸಿಂಚನ ಭಟ್ ಬೆಂಗಳೂರು
ಶ್ರೀ ಕುಮಾರನ್ಸ್ ಚಿಲ್ಡ್ರನ್ ಹೋಮ್
ಬೆಂಗಳೂರು

ರವಿ ಹುಲ್ಯಾಳ, ಮಲ್ಲಿಕಾರ್ಜುನ ಹೊಸೂರ, ವೆಂಕಟೇಶ ಉಳ್ಳಾಗಡ್ಡಿ, ಪ್ರೀತಮ್ ಮಗದುಮ, ಪ್ರಜ್ವಲ್ ಜಮಖಂಡಿ, ಶ್ರೀಶೈಲ ಶಿರೋಳ, ಜಿಎಚ್‌ಪಿಎಸ್ ಜಗದಾಳ ಶಾಲೆಯ ವಿದ್ಯಾರ್ಥಿಗಳು.

ಸಾತ್ವಿಕ ರಡ್ಡಿ ಸಂತೋಷ ಕರವಿನ
ಜಿಎಚ್‌ಪಿಎಸ್, ಹದನೂರು

ಸುಮೇಧಾ ಎಂ. ಆಚಾರ್ಯ
ಗ್ರ್ಯಾವಿಟಿ ಇಂಗ್ಲೀಷ್ ಮೀಡಿಯಮ್ ಸ್ಕೂಲ್
ಉಡುಪಿ



ಸಮನ್ವಿತ ಎನ್ ಭಟ್
ಜ್ಯೋತಿ ಕೇಂದ್ರೀಯ ವಿದ್ಯಾಲಯ
ಬೆಂಗಳೂರು



ಪ್ರೀತಮ ಕಾಡಪ್ಪಾ ಮಜಲಟ್ಟಿ
ನಮ್ಮೂರ ಸರಕಾರಿ ಹಿರಿಯ ಪ್ರಾಥಮಿಕ ಕನ್ನಡ ಶಾಲೆ
ಜೈನಾಪೂರತೋಟ



ಸಮನ್ವಿತ ಪಿ ಗಾಂವಕರ್
ಸಿಲಿಕಾನ್ ಸಿಟಿ ಅಕಾಡೆಮಿ ಆಫ್ ಸೆಕೆಂಡರಿ
ಎಜುಕೇಷನ್, ಜೆಪಿ ನಗರ ಬೆಂಗಳೂರು.

ಅರುಣ್ ಬೆಳಕೋಡ
ಜಿಎಚ್‌ಪಿಎಸ್ ವಿದ್ಯಾನಗರ, ರಬಕವಿ



ಸಂಸ್ಕೃತಿ ಹರಿಜನ
ಜಿಎಚ್‌ಪಿಎಸ್ ವಿದ್ಯಾನಗರ, ರಬಕವಿ

ಇಬ್ಬನಿ.ಜಿ.ರಾಜ್
2ನೇ ತರಗತಿ, ಚಿನ್ಮಯ ವಿದ್ಯಾಲಯ, ಕೋಲಾರ



ಐಶ್ವರ್ಯಾ. ಆರ್
5ನೇ ತರಗತಿ, ವಿಜಯ ವಿಠಲ ವಿದ್ಯಾಶಾಲೆ,
ಮೈಸೂರು.



ಸಾನ್ವಿ ಯರಗೊಪ್ಪ ವಿ.ಎಸ್. ಪಿಳ್ಳೆ ಇಂಗ್ಲೀಷ್ ಮೀಡಿಯಂ ಸ್ಕೂಲ್ ಹುಬ್ಬಳ್ಳಿ, 6 ನೇ ತರಗತಿ, ಹುಬ್ಬಳ್ಳಿ.



ಆದಿತ್ಯ ನಿಡೋಣಿ
ಜಿಎಚ್‌ಪಿಎಸ್ ವಿದ್ಯಾನಗರ ರಬಕವಿ

ಲಹರಿ ಭಟ್ ಬಾಳಾಪುರ
ವಿಡಿಯಾ ಪೂರ್ಣಪ್ರಜ್ಞ ಶಾಲೆ
ನಾಗಸಂದ್ರ, ಬೆಂಗಳೂರು



ಅನ್ವಿತಾ
ಕೆಪಿಎಸ್ ಬೇಗಾರ್, ಮಂಗದ್ದೆ



ಶ್ರೀಜಿತ್ ಉಪಾಧ್ಯಾಯ ಬೆಳ್ಳೆ
ಕ್ರಿಸಾಲಿಸ್ ಹೈಸ್ಕೂಲ್, ಯಲಹಂಕ

ಲಕ್ಷ್ಮೀ ಉಮೇಶ ನನಜಗಿ
ಕಿತ್ತೂರ ರಾಣಿ ವಸತಿ ನಿಲಯ, ಜಮಖಂಡಿ



ಪಲ್ಲವಿ ಎಸ್.ಎನ್.
ಸರಕಾರಿ ಹಿರಿಯ ಪ್ರಾಥಮಿಕ ಶಾಲೆ, ಬೆಂಗಳೂರು



ಚಿನ್ಮಯ ಜಂಗವಾಡ
ಪಿಇಎಂಎಸ್ ಶಾಲೆ, ರಾಮದುರ್ಗ



ಶಿವಕುಮಾರ್ ಎಸ್.ಎಂ.
ಪರಿಣಿತಿ ವಿದ್ಯಾಮಂದಿರ , ರಾಣೆಬೆನ್ನೂರ

ಲಿಖಿತಾ ಎಸ್.ಯು. ಶ್ಯಾಗಲೆ, ದಾವಣಗೆರೆ

ವೆಂಕಟೇಶ್
ಜಿಎಚ್‌ಪಿಎಸ್, ಜಗದಾಳ

ಅರ್ಜುನ್ ಗೋಟಗುಣಕಿ
ಕಿಡ್‌ಝೀ ಪ್ರೀ ಸ್ಕೂಲ್ ಸಿಂದಗಿ



ಅನುಷಾ ಕಟ್ಟಿಮನಿ
ಬಸವಶ್ರೀ ಶಾಲೆ, ಇಲಕಲ್



ಮನೋಜ್ ಆರ್
ಸರಕಾರಿ ಹಿರಿಯ ಪ್ರಾಥಮಿಕ ಶಾಲೆ, ಎಮ್ಮಿಗನೂರು. ಕಂಪ್ಲಿ



ಎಸ್.ಎನ್. ಯಶಸ್‌ಕುಮಾರ್
ಸರಕಾರಿ ಹಿರಿಯ ಪ್ರಾಥಮಿಕ ಶಾಲೆ, ಬೆಂಗಳೂರು

ಚಿರಂತನ ರಮೇಶ ಹೂಗಾರ
ಬೆಂಗಳೂರು

ಪ್ರಜ್ಞಾ ಬಿ.ಪಿ. ಎಸ್.ಕೆ. ಮೋದಿ ನ್ಯಾಷನಲ್ ಶಾಲೆ, ಬಳ್ಳಾರಿ